— ಶ್ರೀಃ —

ಶ್ರೀ ರಾಮಚಂದ್ರಾಯ ನಮಃ

ಅಡುವಳ್ಳಿ ವೆಂಕಾರ್ಯತನುಜ

ಸುಬ್ರಹ್ಮಣ್ಯಕವಿರಚಿತ

# ಹನೂಮದ್ರಾಮಾಯಣಂ.


ಉಡುಪಿಯ ಮಿಷನ್‌ಹೈಸ್ಕೂಲಿನ ಕರ್ಣಾಟಕಪಂಡಿತರಾದ

ಮುನ್ನೂರು ಶಿವರಾಮಯ್ಯನವರಿಂದ

ಪರಿಶೋಧಿತವಾಗಿ ಪ್ರಕಟೀಕರಿಸಲ್ಪಟ್ಟುದು.



ಪ್ರಥಮ ಮುದ್ರಣ ೧೦೦೦ ಪ್ರತಿಗಳು


, 200711



ಶ್ರೀ "ಸದಾನಂದ" ಮುದ್ರಾಶಾಲೆಯಲ್ಲಿ

ಯು. ನರಸಿಂಹಮಲ್ಯರಿಂದ ಮುದ್ರಿತವಾದುದು.

1914.



(Copy Right Registered.)


*Price Rs. 2 -1---0.*] | ಬೆಲೆ: ರೂ. 1—0.

UNIVERSAL
LIBRARY
OU_200711
UNIVERSAL
LIBRARY

— ಶ್ರೀಃ —

ಶ್ರೀ ರಾಮಚಂದ್ರಾಯ ನಮಃ

ಅಡುವಳ್ಳಿ ವೆಂಕಾರ್ಯತನುಜ

ಸುಬ್ರಹ್ಮಣ್ಯಕವಿರಚಿತ

# ಹನೂಮದ್ರಾಮಾಯಣಂ.

ಉಡುಪಿಯ ಮಿಷನ್ ಹೈಸ್ಕೂಲಿನ ಕರ್ಣಾಟಕಪಂಡಿತರಾದ

ಮುನ್ನೂರು ಶಿವರಾಮಯ್ಯನವರಿಂದ

ಪರಿಶೋಧಿತವಾಗಿ ಪ್ರಕಟೀಕರಿಸಲ್ಪಟ್ಟುದು.

ಉಡುಪಿಯ

ಶ್ರೀ "ಸದಾನಂದ" ಮುದ್ರಾಶಾಲೆಯಲ್ಲಿ

ಯು. ನರಸಿಂಹಮಲ್ಯರಿಂದ ಮುದ್ರಿತವಾದುದು.

1913.

(Rights Reserved)

*Price. Rs. 2 1-0.*] [ಬೆಲೆ ರೂ 2- 1- 0.

# Preface.

# ಪ್ರಸ್ತಾವನೆ.

ಈ ಪದ್ಯಗ್ರಂಥವು ಆಡುವಳ್ಳಿ ವೆಂಕಾರ್ಯತನೂಜನಾದ ಸುಬ್ರಹ್ಮಣ್ಯನೆಂಬ ಕವಿಯಿಂದ ರಚಿಸಲ್ಪಟ್ಟಿತು. ಈ ಗ್ರಂಥಕರ್ತನ ಕಾಲವು ತಿಳಿಯದು. ಗ್ರಂಥಕರ್ತನು ಬ್ರಾಹ್ಮಣನಾಗಿಯೂ, ಶೈವಮತಾವಲಂಬಿಯಾಗಿಯೂ, ಇರುವನೆಂಬುದು ಗ್ರಂಥಪರನದಿಂದ ಅಲ್ಲಲ್ಲಿ ವ್ಯಕ್ತವಾಗುತ್ತಿರುವುದು. ನನಗೆ ದೊರೆದ ಕತ್ತಾಳಿಯೋಲೆಯ ಪ್ರತಿಯಲ್ಲಿರುವ "ಇದು ಮೂಕಾಂಬಾಪಾಂಗಪ್ರಸಾದಸಾಧಿತಸರಸಸಾಹಿತ್ಯಸಾಮ್ರಾಜ್ಯಪ್ರತಿಷ್ಠಿತ ವಿದ್ವಜ್ಜನೋಪಲಾಲನೀಯ ಭೂವಿಬುಧ...... ..ವಿರಚಿತಮಪ್ಪ...... ಮಹಾಪ್ರಬಂಧದೊಳ್..." ಎಂಬ ಆಶ್ವಾಸಸಮಾಪ್ತಿಗದ್ಯದಿಂದಲೂ ಈ ವಿಷಯವು ಪುಷ್ಟೀಕರಿಸಲ್ಪಡುತ್ತಿರುವುದು.

ಅಲೇಖದಲ್ಲಿ ಬರೆಯಲ್ಪಟ್ಟಿದ್ದ ಇದರ ಮೂಲಪ್ರತಿಯು ನನ್ನ ಕಯ್ಗೆ ದೊರೆದಾಗಲೇ, ಆದ್ಯಂತವೂ ಗೆದ್ದಲುಹಿಡಿದು, ಮುಕ್ಕಾಲುಪಾಲು ಗ್ರಂಥವು ಓದುವುದಕ್ಕಾಗದೆ, ಅಸಂಪೂರ್ಣವಾಗಿದ್ದಿತು. ವಿನಷ್ಟವಾದ ಅಂತಹ ಕಂದಪದ್ಯಗಳ ಭಾಗಗಳನ್ನು ಮಾಡಿ ಸೇರಿಸದಿದ್ದರೆ, ಕವಿಯಪ್ರಕ್ರಮಭಂಗವೂ ವಾಚಕರ ಉತ್ಸಾಹಭಂಗವೂ ಏಕಕಾಲದಲ್ಲಿ ಉಂಟಾಗಬಹುದೆಂದು ಯೋಚಿಸಿ, ಮೂಲಕವಿಯ ಆಶಯವನ್ನು ಸಾಧ್ಯಮತವಾಗಿ ಅವಲಂಬನಮಾಡಿ, ಅವುಗಳನ್ನು ಅಲ್ಲಲ್ಲಿ ಪ್ರಕ್ಷೇಪಿಸಿರುವೆನು. ಈ ವಿಷಯದಲ್ಲಿ, ಊದುಗೋಲಿನಂತಾದ ನಾನು ಆ ಮಹಾಕವಿಯ ಕೀರ್ತಿಗೆ, ಎಳ್ಳಷ್ಟಾದರೂ ಭಾಗಿಯಾಗಲಾರೆನು.

ಗ್ರಂಥದ ಅಮೂಲ್ಯವಾದ ಕವಿತಾಪ್ರತಿಭೆಯನ್ನು ನೋಡಿ, ಅದನ್ನು ಹೇಗಾದರೂ ಮುದ್ರಿಸಬೇಕೆಂಬ ಲವಲವಿಕೆಯು ನನ್ನಲ್ಲಿ ಚಿರಕಾಲದಿಂದಲೂ ಉಂಟಾಗಿದ್ದರೂ, ಲಕ್ಷ್ಮೀಕಟಾಕ್ಷವು ಸರಸ್ವತ್ಯಾರಾಧಕರಲ್ಲಿ ಸಂಪೂರ್ಣವಾಗಿ ಇರುವುದಿಲ್ಲವಾದ ಪ್ರಯುಕ್ತ, ಅದು ಸಾಧ್ಯವಾಗಲಿಲ್ಲ. ಈ ವಿಷಯದಲ್ಲಿ, ಸಾಧ್ಯಮತವಾದ ದ್ರವ್ಯಸಹಾಯದಿಂದ ನನ್ನನ್ನು ಪ್ರೋತ್ಸಾಹಿಸಿದ **ಶ್ರೀ ಉಡುಪಿಯ ಅಧಮಾರುಮಠದ ವಿಬುಧಪ್ರಿಯತೀರ್ಥಶ್ರೀಮಚ್ಚರಣರವರ** ದಿವ್ಯಸಹಾಯವು ಚಿರಸ್ಮರಣೀಯವಾಗಿರುವುದು.

ಗ್ರಂಥವನ್ನು ಸುಂದರವಾದ ಮುದ್ರಣದಿಂದ ಅಸುಗೊಳಿಸಿದುದಕ್ಕಾಗಿ **ಶ್ರೀ "ಸದಾನಂದ" ಮುದ್ರಾಶಾಲೆಯ** ಅಧ್ಯಕ್ಷರಿಗೂ, ಮುದ್ರಣಕಾಲದಲ್ಲಿ ತಪ್ಪುಗಳ

ನ್ನು ತಿದ್ದಿ, ಗ್ರಂಥಪರಿಶೋಧನಕಾರ್ಯದಲ್ಲಿ ಸಹಾಯಕರಾದುದಕ್ಕಾಗಿ "ಸೂಕ್ತಿ" ಸಂಪಾದಕರಾದ ಮ| ಎನ್. ರಾಜಗೋಪಾಲಕೃಷ್ಣರಾಯರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇನೆ.

ವಾಚಕರ ಭಾಷಾಭಿರುಚಿಯು ಈಷನ್ಮಾತ್ರವಾದರೂ ಅತಿಶಯಿಸಲ್ಪಟ್ಟರೆ, ಈ ನನ್ನ ಶ್ರಮವು ಸಾರ್ಥಕವಾದುದೆಂದು ಸಂಭಾವಿಸುತ್ತೇನೆ.

ಉಡುಪಿ,
ಡಿಸೆಂಬರು, 1913.

ಸಜ್ಜನವಿಧೇಯ,

ಮು. ಶಿವರಾಮಯ್ಯ.

# ವಿಷಯಸೂಚೀ.


| | | |
|---|---|---|
| | | ಪುಟ. |
| ಪ್ರಥಮಾಶ್ವಾಸ. | ... ... ... ... ... | 1 |
| ದ್ವಿತೀಯಾಶ್ವಾಸ. | ... ... ... ... .. | 20 |
| ತೃತೀಯಾಶ್ವಾಸ. | ... ... ... ... ... | 45 |
| ಚತುರ್ಥಾಶ್ವಾಸ. | ... ... ... ... ... | 63 |
| ಪಂಚಮಾಶ್ವಾಸ. | ... ... ... ... ... | 83 |
| ಷಷ್ಠಾಶ್ವಾಸ. | ... ... ... ... ... | 107 |
| ಸಪ್ತಮಾಶ್ವಾಸ. | ... ... ... ... ... | 126 |
| ಅಷ್ಟಮಾಶ್ವಾಸ. | ... ... ... ... ... | 149 |
| ನವಮಾಶ್ವಾಸ. | ... ... ... ... ... | 176 |
| ದಶಮಾಶ್ವಾಸ. | ... ... ... ... ... | 196 |
| ಏಕಾದಶಾಶ್ವಾಸ. | ... ... ... ... ... | 218 |
| ದ್ವಾದಶಾಶ್ವಾಸ. | ... ... ... ... ... | 232 |
| ತ್ರಯೋದಶಾಶ್ವಾಸ. | ... ... ... ... ... | 249 |
| ಚತುರ್ದಶಾಶ್ವಾಸ. | ... ... ... ... ... | 269 |
| ಪಂಚದಶಾಶ್ವಾಸ. | ... ... ... ... ... | 292 |

# ಹನುಮದ್ರಾಮಾಯಣ.

## ಪ್ರಥಮಾಶ್ವಾಸ.

ವೃತ್ತ || ಶ್ರೀಮದ್ರಾಮಪದಾಬ್ಜಭೃಂಗನತುಲಂ ಸೀತಾಮನೋಲ್ಲಾಸಕಂ |
ಹೇಮಾಗೇಂದ್ರಸಮಾನಗಾತ್ರನನಘಂವಾರಾಸಿ ಪಾರಂಗತಂ ||
ಸೋಮಾರ್ಕಾನಲಸನ್ನಿಭಾಂಗರುಚಿರಂ ಸದ್ಭಕ್ತಕಲ್ಪದ್ರುಮಂ |
ಭೀಮಂಮಾರುತಜಾತನೊಲ್ದು ನಿರತಂಮಾಳ್ಕೆನ್ನ ಚಿತ್ತೇಷ್ಟಮಂ||

ಕಂದ || ಹರಸಣುಗನಾಗಿಮತ್ತಂ | [|| ೧ ||
ಹರನಿಂದಂ ಪೂಜೆಗೊಂಡು ಬಳಿಕಾಹರಗಂ ||
ಪುರಜಯಮಂ ಕೈಗೊಳಿಸಿದ |
ಗಿರಿಜಾತನುಜಾತನಂಘ್ರಿಗಾನತನಪ್ಪೆಂ || ೨ ||

ಸರಸದಿಯ ಪದಕೆ ವಂದಿಸಿ |
ಸರಸಕವೀಶರ್ಗೆ ಮಣಿದುಕುಕವಿಜನಕ್ಕಂ ||
ಕರಮಂಮುಗಿದುಂ ನತಶುಭ |
ಕರಹನುಮದ್ರಾಮವಿಜಯವಂ ವಿರಚಿಸುವೇಂ || ೩ ||

ನಿರುಪಮನೈಮಿಷದೊಳ್ಮುನಿ |
ವರಶೌನಕಮುಖ್ಯರಿಸಿಗಳಿರಲೊಂದುದಿಸಂ ||
ಹರಿಯಂ ನೆನೆವೃತೆಸೂತಂ |
ಬರೆಪೀಠವನಿತ್ತುಮೈದೆಸತ್ಕರಿಯಿಸಿದರ್ || ೪ ||

ಯಿಂದು ಸುದಿನಮಾದುದುಭವ |
ಬಂಧನಗಳ ವಿಮೋಚನಕ್ಕೆ ನೀನೇಕರ್ತಂ ||
ಎಂದಾವಿರ್ಪೆವುಕರುಣಾ |
ಸಿಂಧುವೆ ಕರುಣಿಪುದು ಹನುಮನಾವಿರ್ಭಾವಮಂ || ೫ ||

ಈಶಾವತಾರಮೆಂಬ |
ಕೇಸರಿಸುಕುಮಾರನೆಂಬರದುಮಲ್ಲದೆ ಮತ್ತಾ ||
ಸುಗನಾತ್ಮಜನೆಂಬ |
ವಿರ್ಶಾಸಂದೆಗಮಿಲ್ಲದಂತೆ ವಿವರಿಸವೇಳ್ಕುಂ || ೬ ||

ಷೀರಾಂಗನಾದುದಂಸೀ |
ತಾರಮಣನ ದೂತನಾದಪರಿಯಂ ವಿದ್ಯಾ ||
ವಾರಿಧಿಜೆಸಸೆಂದುಂ ಮುನಿ |
ವಾರಂ ಕೇಳಲ್ಕೆ ಸೂತಮುನಿಪತಿಪೇಳ್ದಂ || ೭ ||

ಕೇಸರಿಯೆಂಬ ಮಹಾಪ್ಲವ |
ಗೇಶನಸತಿ ಮಕ್ಕಳಿಲ್ಲಮೆನುತಂ ಗಿರಿಜಾ ||
ಧೀಶನ ಪದಮಂ ಸುತಿಸೆಮ |
ಹೇಶಂ ಕೃಪೆಯಾದನವಳಮೇಲೇಂ ದಯೆಯೋ || ೮ ||

ಪರನೊಲ್ದಡದೇಂ ಚೋದ್ಯಮೆ |
ತರುಣಿಯ ಕರತಳಕೆ ಬಂದುದಾಗಳೆತೇಜೋ ||
ಭರಿತಫುಟಿಕೆಯೊಂದುಸುಧಾ |
ಕರಬಿಂಬಮಿದೆಂಬ ತೆರದೊಳಸಿಲಸವಶದಿಂ || ೯ ||

ಅಂಜನೆಮುದದಿಂತೇಜಃ |
ಪುಂಜಮುಸುರೆ ಧರಿಸಲೊಡನೆನಿಮಿರ್ದುದುಗರ್ಭಂ ||
ರಂಜಿಸಿದುದು ರಾಕಾಶಶಿ |
ಯಂ ಜೈಸಿದಪರಿಯೊಳವಳ ಚೆಲ್ವೆತ್ತಮೊಗಂ || ೧೦ ||

ಎಳನೇಸರವೊಲ್ಪಿಂಡಂ |
ನೆಲಸಿರೆ ಹೊರಬಿರ್ದುದವಳ ಹೃದ್ಗತಮಲಿನಂ ||
ಮೊಲೆದುದಿಯೊಳ್ಕಿಂದುದೊಯೆನೆ |
ಬಲಭಿನ್ಮಣಿಕಾಂತಿವೆತ್ತಚೂಚಕಮೆಸೆಗುಂ || ೧೧ ||

ಉಡುಪತಿಯಂ ಕಾಣುತೆಪಾ |
ಲ್ಗಡಲುಬ್ಬುವತೆರದೊಳವಳಪೊಡೆಪೆರ್ಚಿತು ಸಂ ||
ಗಡಿಸಿತ್ತಲಸಿಕೆ ಪೂವಂ |
ಮುಡಿವೊಡೆ ತಾಂಬೂಲಚರ್ವಣಂ ಗೈಯ್ಯಲಣಂ || ೧೨ ||

ಮುಡಿಮೊಲೆಗಳ ಭಾರಕ್ಕಂ |
ಪೊಡೆಯುರುಭಾರಕ್ಕೆ ಜಗನಭಾರಕೆ ಬಳಿಕಂ ||
ನಡೆಯಲಸಿನಿಲ್ಲವಳ್ ಜಗ |
ದೊಡೆಯಂ ಪೈದೋರ್ಪುದೆಂದು ನುಡಿವಳ್ ಸತತಂ || ೧೩ ||

ಗರ್ಭಂ ಪೂರ್ಣಮದಾಗಲ್ |
ಸರ್ಬಾತ್ಮಕನಾದಿದೇವನನುಮತಿಯಿಂದಂ ||

ಗಿರ್ವಾಣರ್ಜಯಜಯವೆನ |
ಲರ್ಭಕನಂಪೆತ್ತಳೈದೆ ಸುಮುಹೂರ್ತದೊಳಂ || ೧೪ ||
ಪೂವಳೆಗರೆದರ್ದಿವಿಜ |
ಭೂವಿಭುಧರಿಗಾದುದಮಿತ ಶುಭಸೂಚನೆಗಳ್ ||
ಆವಿಭುಧಾರಿಗಳೆಡೆಯೊ |
ಳ್ತೀವಿದುದವಶಕುನಮನಿಲಸುತನುದಿಸಲಣಂ || ೧೫ ||

ಮಿರುಗುವ ಪಾಟಲವದನದ |
ಸುರಶೈಲಸಮಾನವಿಗ್ರಹದ ಪುಷ್ಕರಮಂ ||
ನೆರೆಸೋಂಕುವವಾಲದ ಶುಭ |
ಕರಮೂರ್ತಿಯನೈದೆಕಂಡು ಹೋಂಪುಳಿಯೋದಳ್ || ೧೬ ||

ಮಿಸುನಿಯಕೋಮಣವಂತಾ |
ಳ್ದಸದೃಶದಾಕಾರದಿಂದೆ ಶೋಭಿಪಸುತನಂ ||
ಸಸಿನೆನಿರೀಕ್ಷಿಸುತಂಜನೆ |
ಬಿಸವಂದಂ ಬಟ್ಟಳಾತನಾಕೃತಿಯೆನಿತೋ || ೧೭ ||

ಅನಿತರೊಳನಿಲಕುಮಾರಂ ||
ಜನನಿಯ ಪದಕೆರಗಿನಿಂದು ತಾಂಪಸಿದಿರ್ಪಂ ||
ತನಗಾಹಾರಮನಿತ್ತಪು |
ದೆನಲಂಜನೆತೋರ್ದಳಿನನಬಿಂಬಮನಾಗಳ್ || ೧೮ ||

ಅಂಜನೆಯನುಮತಿಯಿಂದಂ |
ಕಂಜಾಪ್ತನನೀಕ್ಷಿಸುತ್ತೆ ಕಿಸುವಣ್ಣೆನುತಂ ||
ಭುಂಜಿಸಲೈದಿದ ಲೀಲಾ |
ರಂಜಕಮೇಂ ಶೋಭಿಸಿದುದೊಪವನಾತ್ಮಜನಾ || ೧೯ ||

ರವಿತಾಂ ಭಯಗೊಳೆಶಕ್ರಂ |
ಪವಿಯಿಂದಂ ಪೊಡೆಯೆಕಂಡು ಸುತಮೋಹಕದಿಂ ||
ಪವಮಾನನಡಂಗಲ್ಬಗ |
ದವಸಾನಮಿದೆಂಬೊಲಾದುದೇಸದ್ಭುತಮೋ || ೨೦ ||

ಮಾರುತನೆಲ್ಲಿರ್ಪಂತಾ |
ನಾರತ್ತಣಿನಾದುದಿಂತು ಲೋಕಕ್ಕೆನುತಂ ||
ಮಾರಾಂತಕ ಮಾಧವಸರ |
ಸೀರುಹಭವರೊಲ್ಪುಬಂದರಸಿಲನಪೊರೆಗಂ || ೨೧ ||

ಪವನನೆ ನಿನ್ನಾತ್ಮಜಗಂ ।
ಪವಿಯತ್ತಣಿನಾದ ಘಾತಕವನಶರೀರಂ ॥
ಅವಿರಳ ವಜ್ರಮುಮಪ್ಪುದು ।
ಭುವನಕ್ಕಧಿನಾಥನಪ್ಪನಿದುದಿಟಮೆಂದರ್ ॥ ೨೨ ॥

ಹನುಮಾನೆಂಬಭಿಧಾನಮಿ ।
ದನುಮತತದ್ಭುಜಕರೆಲ್ಲಸುಖಮಿರ್ಪರುಮೆಂ ॥
ದೆನುತಂ ಬಾಲಕನಂ ಕರೆ ।
ದನಿಲನಕೈಗಿತ್ತುಪೋದರಜಹರಿರುದ್ರರ್ ॥ ೨೩ ॥

ತರುಣನ ಮೈದಡವಿ ಮಹಾ ।
ಪುರುಷಂ ನೀನಖಿಲಕಲೆಗೆ ಗುರುವಾಗೆನುತಂ ॥
ಹರಿಸಂಬೆತ್ತೆಲರಣುಗಂ ।
ಗೊರೆದಂ ಪಿತನಾದಕಾರಣದೊಳಾಬಳಿಕಂ ॥ ೨೪ ॥

ತರಣಿಯಸಮ್ಮುಖದೊಳ್ಪ್ರತಿ ।
ತರಣಿಯೊಯೆಂಬಂತೆ ಮುಂದೆನೋಡದೆ ಮಿಗೆಸಾ ॥
ಸಿರವೇದವನೋದಿಶಚೀ ।
ವರನೊಳ್ ಪಂಡಿತನುಮಾದನೇಂ ಸಾಹಸಿಯೋ ॥ ೨೫ ॥

ಧರೆಗವತರಿಪಂ ಲಕ್ಷ್ಮೀ ।
ವರನಾತಗೆ ದೂತನಾಗಿ ಸಾಹಾಯಗಳಂ ॥
ವಿರಚಿಪುದೆಂದವ್ವೆಗೆಮಣಿ ।
ದುರೆಬಂದಂ ತರಣಿ ಮತದೆತತ್ಸುತನೆಡೆಗಂ ॥ ೨೬ ॥

ಬರಲನಿಲನಮಗನವನಂ ।
ಬರಸೆಳದಮರ್ದಪ್ಪಿ ತನ್ನ ಮಂತ್ರಿತ್ವಮನಾ ॥
ದರದಾತಂಗಿತ್ತು ಸಹೋ ।
ದರಭಾವದೆ ಮನ್ನಿಸುತ್ತಮಿರ್ದಂ ರವಿಜಂ ॥ ೨೭ ॥

ಕತಿಪಯದಿನಮಿಂತಿರೆರಘು ।
ಪತಿತನ್ನೊಡಹುಟ್ಟಿದವನನೊಡಗೊಂಡು ಧರಾ ॥
ಸುತೆಯಂಪುಡುಂಕುತಂಬಂ ।
ದತಿಸೌಖ್ಯದೆ ಋಷ್ಯಮೂಕಗಿರಿಯಂಸಾರ್ದಂ ॥ ೨೮ ॥

ಕಡುಬಳಲಿನೀರ್ಗುಡಿದುಮರ ।
ನಡಿಯೋಳ್ಕುಳ್ಳಿರ್ಪರಘುಜರಂ ಕಂಡಿನಜಂ ॥

ಪೊಡವಿಪರಿವರಾರಲ್ಲಿಗೆ |
ನಡೆದೊಯ್ಯನೆ ತಿಳಿವುದೆಂದು ಹನುಮಗೆ ಪೇಳ್ದಂ ‖ ೨೯ ‖

ಧರೆಗಿಳಿದರೊ ರವಿಶಶಿಗಳ್ |
ಸುರಪನ ಸುತನೆನ್ನನೈದೆ ಕೊಲ್ವೊಡೆ ಭಟರಂ ‖
ಕರಸಿರ್ಪನೊ ತನಗೆ ಭಯಂ |
ಭರಿತಮದಾಗುತ್ತಮಿರ್ಪುದೇನೈ ಹನುಮಾ ‖ ೩೦ ‖

ಶರಚಾಪಗಳಿವೆ ಕಯ್ಯೊಳ್ |
ಧರಿಸಿರ್ಪರ್ಜಡೆಯನಿರ್ವರುರೆ ಜವ್ವನಿಗರ್ ‖
ಸರರಲ್ಲಿವರೀ ಭೂಮಿಯ |
ಪೊರೆಯಂ ಕಳೆಯಲ್ಕೆ ಬಂದ ಹರಮಾಧವರೋ ‖ ೩೧ ‖

ತಿಳಿಯದಿದೆನಗನಿಲಾತ್ಮಜ |
ತಿಳಿವೊಡೆ ವಟುರೂಪನಾಂತು ಮೊದಲವರಿರವಂ ‖
ತಿಳಿದುಂ ಮದ್ವೃತ್ತವನುರೆ |
ತಿಳಿಸುಗುಮುವರೊಡನೆ ಮಿತ್ರರಾದೊಡೆ ಭರದಿಂ ‖ ೩೨ ‖

ಇಂತೆನೆ ರವಿಜಂ ಮಾರುತಿ |
ಸಂತಸಮುಂ ತಾಳ್ದು ಮಾನುಷಾಕೃತಿಯಿಂದಂ ‖
ಕಂತುಸಮಾನರ ಪೊರೆಗಂ |
ತಾಂ ತಳುವದೆ ಬಂದು ನಿಂದು ನೋಡಿದನವರಂ ‖ ೩೩ ‖

ರಾಮನೆ ಪರದೈವವಲಾ |
ಸೌಮಿತ್ರಿಯೆ ಶೇಷನಲ್ತೆ ಮನುಜಾಕೃತಿಯಿಂ ‖
ಭೂಮಿಯ ಪೊರೆಯಂ ತಿದ್ದುವೊ |
ಡೀ ಮಹಿಗಂ ಬಂದರೆಂದು ತಿಳಿದಂ ಹನುಮಂ ‖ ೩೪ ‖

ಮಾತೆಯ ನುಡಿ ದಿಟವಾದುದು |
ಪೂತಾತ್ಮಕನಾದೆನಿವರ ದರುಶನದಿಂದಂ ‖
ಧಾತಂ ರಾಮನೆನುತ್ತಂ |
ವಾತಸುತಂ ರಾಮನಂಘ್ರಿಗಾನತನಾದಂ ‖ ೩೫ ‖

ಮುಗುಮುಗುಳೆ ತುಳಿಲ್ಗೆಯ್ದುಂ |
ಜಗದುದರ ಜಗನ್ನಿವಾಸ ಜಗದಧಿನಾಥಾ ‖
ತ್ರಿಗುಣಾತ್ಮಕ ತ್ರಿದಶಾರ್ಚಿತ |
ಖಗವಂಶಲಲಾಮ ರಾಮ ಶರಣಾಗೆಂದಂ ‖ ೩೬ ‖

ಶ್ರುತಿಮಯವಚನಗಳಿಂದಂ |
ನುತಿಯಿಪ ನೀನಾರ್ಫಣೀಶನೋ ಸುರಗುರುವೋ ||
ಮತಿಯುತ ನಿನ್ನಭಿಧಾನವ |
ನತಿಶಯದಿಂದೊರೆವುದೆಂದು ಕೇಳ್ದಂ ರಘುಜಂ || ೩೭ ||

ದೇವರಭಿಧಾನಮೇಂ ನೀ |
ವಾವೂರಿಂ ಬಂದುದಾದುದೆಲ್ಲಿಹ ತಾಣಂ ||
ಈ ವಿವರಮನೊರೆಯಲ್ವಿಡ |
ಭಾವಮನಾಂ ಪೇಳ್ವೆನೆಂದು ಮಾರುತಿ ನುಡಿದಂ || ೩೮ ||

ಮಾಣವಕನಿವಂ ಜಾಣಂ |
ಕ್ಷೋಣಿಯೊಳೀತಂಗೆ ಪಾಂಗೆನಿಪರೋರ್ವರನುಂ ||
ಕಾಣೆನಿವಂಗೆಮ್ಮಯ ನೆಲೆ |
ದಾಣಂ ಪೇಳೆಂದು ರಾಮನನುಜಂಗೆಂದಂ || ೩೯ ||

ರಾಮನನುಮತಿಯಿನಾಗ |
ಸೌಮಿತ್ರಿ ಸರಾಗದಿಂದೆ ಹನುಮಂಗೆಂದಂ ||
ಭೂಮಿಸುರೋತ್ತಮ ಕೇಳೈ |
ಹೇಮಾದ್ರಿಗೆ ತೆಂಕದೆಸೆಗೆ ಪುರಮೊಂದೆಸೆಗುಂ || ೪೦ ||

ಆ ನಗರಮಯೋಧ್ಯಾಖ್ಯಂ |
ಭಾನುಕುಲೋದ್ಭೂತರಧಿಪರಾ ಪುರವರಕಂ ||
ಮಾನಾಥನ ಕೃಪೆಯಿಂ ಸಂ |
ಸ್ಥಾನಗಳಂ ಪಡೆದು ರಾಜ್ಯಮಂ ಪಾಲಿಸಿದರ್ || ೪೧ ||

ರವಿಕುಲಪರಂಪರೆಯೊಳುದು |
ಬವಿಸಿದನಜರಾಯನಾತನ ಕುಮಾರಂ ಭೂ ||
ದಿವಿಜೇಂದ್ರಂ ದಶರಥನೃಪ |
ನವಿರಳ ಸುಖದಿಂದಮಿರ್ದನಾ ಪತ್ತನದೊಳ್ || ೪೨ ||

ದಶರಥನೃಪಂಗೆ ಮೂವರ |
ರಸಿಯರ್ಕೌಸಲೆಸುಮಿತ್ರೆಕೇಕಯಸುತೆಯರ್ ||
ಶಶಿವದನೆಯರೊಪ್ಪಿರೆ ಸಂ |
ತಸದಿಂದರುವತ್ತುಸಾಸಿರಬ್ದಮುಮಾಗಲ್ || ೪೩ ||

ಸುತರಿಲ್ಲಮೆಂದು ಯಜ್ಞಮ |
ನತಿಶಯದಿಂ ಮಾಡೆ ಪುತ್ರರಾದರ್ನಾಲ್ವರ್ ||

ಮತಿಯುತೆ ಕೌಸಲೆಗೀ ರಘು |
ಪತಿಯೊರ್ವಂ ಕೇಕಯಾತ್ಮಭವೆಗಂ ಭರತಂ || ೪೪ ||

ಜನಿಸಿದೆವಾಬಳಿಕಂ ಮಾ |
ನಿನಿ ಮಗಧಾಧಿಪನ ಪುತ್ರಿಗಾಂ ಶತ್ರುಘ್ನಂ ||
ತನಯರ್ತಾವಿರ್ವರ್ಕೇ |
ಳ್ಜನಪಂ ಪಾಲಿಸುತಮಿರ್ದನೆಮ್ಮಂ ಸುಖದಿಂ || ೪೫ ||

ಕ್ರತುರಕ್ಷಣೆಗಂ ಭರದಿಂ |
ಯತಿವಿಶ್ವಾಮಿತ್ರನೈದೆ ಬಂದುಮಯೋಧ್ಯಾ ||
ಕ್ಷಿತಿವರನಂ ಯಾಚಿಸಿ ರಘು |
ಪತಿಯಂ ಕರದುಯ್ಯಲಾತನೊಡನಾಂ ಪೋದಂ || ೪೬ ||

ಬರೆವರೆ ತಾಟಕಿಯೆಂಬಳ್ |
ಮೊರೆವುತೆ ಬಂದಡ್ಡಗಟ್ಟೆ ಮುನಿಯನುಮತಿಯಿಂ ||
ಶರವೊಂದರಿಂದೆ ಭರದಿಂ |
ಧರೆಗಿಳಿಸಿದನವಳ ಶಿರವನೀ ರಘುವೀರಂ || ೪೭ ||

ಸಿದ್ಧಾಶ್ರಮಕಂ ಬಂದುಂ |
ಯುದ್ಧದೆ ರಾಕ್ಷಸಸುಬಾಹುವಂ ಕೊಂದುಂ ಮಾ ||
ಯೋದ್ಧತಮಾರೀಚನನುರೆ |
ಬದ್ಧಿಸಿ ಮರುದಸ್ತ್ರದಬ್ಧಿಗಿಟ್ಟಂ ರಘುಜಂ || ೪೮ ||

ಮುನಿಮಖಮಂ ರಕ್ಷಿಸಲತಿ |
ವಿನಯದೆ ತನ್ಮುನಿಪನೆಮ್ಮನೊಡಗೊಂಡಾಗಳ್ ||
ಜನಕನ ಸುತೆಯ ಸ್ವಯಂವರ |
ಕೆನುತಂ ಕರೆದುಯ್ಯಲಾದುದೊಂದಾಶ್ಚರ್ಯಂ || ೪೯ ||

ಗೌತಮಸತಿ ಶಿಲೆಯಾಗಿರೆ |
ಸೀತಾಪತಿಯಂಘ್ರಿಸೋಂಕಿದಾಗಳೆ ಮೊದಲಂ ||
ತಾ ತರುಣಿ ನಿಂದು ವಂದಿಸಿ |
ಪೂತಳ್ತಾನಾದೆನೆಂದು ಪತಿಯಂ ಸಾರ್ದಳ್ || ೫೦ ||

ಮುಂದೈತರೆ ಜತಿಯೊಡನಾ |
ನಂದದೆ ಮಿಥಿಲೇಶನಾಳ್ವತಿಪಾರ್ ದೇಶಂ ||
ಬಂಧುರಹರಗಿರಿಶಾಲಯ |
ದಿಂದಂ ಸತ್ರಾಗ್ರಹಾರದಿಂ ದೆಸೆಗತುಳಂ || ೫೧ ||

ಕೆರೆತೊರೆಪೂದೋಟಗಳಿಂ |
ಮಿರುಗುವ ಪಾನೀಯಶಾಲೆಯಿಂದಂ ಫಲಸಂ ||
ಭರಿತದ್ರುಮಸುಶ್ರೇಣಿಯಿ |
ನುರೆ ಶೋಭಿಪುದೆಂತೊ ಜನಕನೃಪನಾ ರಾಜ್ಯಂ || ೫೨ ||

ಅಳಿಕುಳಮಿಲ್ಲದ ನಳಿನಂ |
ನಳಿನಾವಳಿಯಿಲ್ಲದಿರ್ಪ ಕೊಳಮಾ ಕೊಳದಿಂ ||
ಚಲಿಸದ ಜಳಮಾ ಜಳಮಂ |
ಬಳಸದ ಜನಮಿಲ್ಲಮಲ್ಲಿಯಾ ಭೂತಳದೊಳ್ || ೫೩ ||

ನಂದನಮೋ ಮಾನಾಥನ |
ನಂದನವಿಹ ಬೀಡೊ ತಂದಲಿಕ್ಕೈಯೊ ಯೆನಲಾ ||
ನಂದಕರವಾಗಿ ಮೆರೆದುದು |
ನಂದಕಧರನೊಲ್ಮೆಯಿಂದೆ ಸುಖದೋದ್ಯಾನಂ || ೫೪ ||

ಇನಿಸಂ ನೋಡುತ್ತಂಬರ |
ಲಿನಿಸಂ ಗಡ ಜನಿಸಿದಾತನಂ ನೋಂಕುತ್ತಂ ||
ಜನಕನರಮನೆಯ ಸೌಧಂ |
ಜನಕತಿ ಮುದವಾಗಿ ಶೋಭಿಸಿತ್ತೀವೇಳ್ವೆಂ || ೫೫ ||

ಸೋಮರವಿವೀಧಿಯೊಳ್ ದ್ವಿಜ |
ಸೋಮರ ವಿಟ್‌ಶೂದ್ರರಾಲಯಂಗಳ ಸೊಬಗಿಂ ||
ಸೋಮನ ನಗರಮೊ ನಿರ್ಜರ |
ಸೋಮನ ಪತ್ತನಮೊ ಎಂಬೊಲಾ ಪುರಮೆಸೆಗುಂ || ೫೬ ||

ಏಸು ಜನಮಿರ್ದೊಡಾ ಪೊಳ |
ಲೈಸಕ್ಕೆಡೆಯಾಗಿ ಮತ್ತಮೆಳ್ತಂದಗರ್ಗ ||
ವಾಸಂಗುಡುತಿರ್ಪುದು ಮಿಥಿ |
ಲೇಶನದೇಂ ಪುಣ್ಯಮಂತನೋ ಭೂತಳದೊಳ್ || ೫೭ ||

ಅನಿತರೊಳಾವೆಳ್ತಂದ ಹ |
ದನಕೇಳ್ದಂ ಬಂದು ಜನಕನತಿಭಕ್ತಿಯೊಳಂ ||
ಮುನಿಯಂಘ್ರಿಗೆ ವಂದಿಸಿ ರಘು |
ಜನನೀಕ್ಷಿಸಿ ತನ್ಮುನೀಶನೊಡನಿಂತೆಂದಂ || ೫೮ ||

ಈ ಸುಕುಮಾರಕರಾರೆನೆ |
ಕೌಶಿಕಮುನಿ ಪೇಳಲೆಮ್ಮ ವೃತ್ತಾಂತಗಳಂ ||

ತೋಷದೆ ಪೊಗಳುತ್ತಂ ಮಿಥಿ |
ಲೇಶಂ ತನ್ಮುನಿಪನೊಡನೆ ಮತ್ತಿಂತೆಂದಂ || ೧೯ ||

ಜನ್ನಮನೆಸಗಲ್ ತಿರೆಯಂ |
ಮುನ್ನಂ ತಾಂ ಶೋಧಿಸಲ್ಕೆ ಕಂಗೆಸೆದಳ್ ಚೆಂ ||
ಬೊನ್ನಿನ ಪೇಟಿಯೊಳೊರ್ವಳ್ |
ಕನ್ಯಾಮಣಿಯಿವಳನ್ನೈದೆ ಪೊರೆದೆಂ ಮುನಿಪಾ || ೨೦ ||

ಈ ತರುಣೀಮಣಿ ಭಾರ್ಗವಿ |
ಭೂತೇಶನ ಧನುವನೆತ್ತಿದಂಗೆ ರಮೇಶಂ ||
ಗಾತಂಗೀ ಸುಕುಮಾರಿಯ |
ನೋತೀವುದೆನುತ್ತೆ ನಾಕಮುನಿವರನೆಂದಂ || ೨೧ ||

ಅಂದುಮೊದಲಾಗಿ ಭೂಮಿಪ |
ರಿಂದುಶಿಖಾಮಣಿಯ ಧನುವನೆತ್ತದೆ ಪೋದರ್ ||
ಇಂದೀ ರಾಘವಗೆನ್ನಯ |
ನಂದನೆಯಂ ಕುಡುವೆನೆಂದು ಜನಕಂ ಪೇಳ್ದಂ || ೨೨ ||

ಮಿಥಿಲೇಶನಿಂತೆನಲ್ದಶ |
ರಥಸುತನೀ ರಘುಜನೆದ್ದು ಚಾಪವನಾಗಳ್ ||
ಶಿಥಿಲಂಗೆಯ್ಯಲ್ಕೆ ಮನೋ |
ರಥಪೂರಿತಮಾದುದೆಂದನಾ ನೃಪವರ್ಯಂ || ೨೩ ||

ಭರದಿಂದಂ ಮತ್ಪ್ರಿತನಂ |
ಕರೆಯಿಸಿ ಸಿಂಗರಿಸಿ ಪುರವನಾಗಳ್ಸೀತಾ |
ತರುಣೀಮಣಿಯಂ ಧಾರೆಯ |
ನೆರೆದಿತ್ತಂ ರಾಮಚಂದ್ರಗಾ ಮಿಥಿಲೇಶಂ || ೨೪ ||

ತನ್ನಣುಗಿಯನೆನಗಿತ್ತುಂ |
ಮನ್ನಿಸಿ ಭರತಂಗೆ ಮದನುಜಗೆ ಸದ್ಗುಣಸಂ ||
ಪನ್ನ ಕುಶಧ್ವಜರಾಯನ |
ಕನ್ನೆಯರಂ ಮದುವೆಗೆಯ್ದುಕೊಟ್ಟಂ ಜನಕಂ || ೨೫ ||

ಪರಿಣಯಮಾಗಲ್ಜನಕನ |
ಪುರಮಂ ಪೊರಮಟ್ಟು ಮುಂದೆ ಬರೆವರೆ ಭರದೊಳ್ ||
ಪರಶುಧರನಡ್ಡವಿಸೆ ರಘು |
ವರನಾತನ ಗರ್ವಪರ್ವತವನುರೆ ಕಿಳ್ತಂ || ೨೬ ||

ಪತ್ತನಕಂ ಬಂದು ಮುದಂ |
ಬೆತ್ತಿರೆ ಕಿರಿದಾಯಿಯಗ್ರಜಾತಂ ನಡೆತಂ ||
ದುತ್ತಮನಿಜಪುಟಭೇದನ |
ದತ್ತಂ ಕರೆದುಯ್ದನೈದೆ ರಘುಜಾನುಜರಂ || ೬೭ ||

ದೊರೆತನದ ಭಾರಮಂ ಭೂ |
ವರನೀ ರಘುನಾಥಗೀಯಲುಜ್ಜುಗಿಸಲ್ಕಂ ||
ದರೆಯತ್ತಣಿಂದೆ ಕೈಕಾ |
ತರುಣಿ ಮನೋನಾಥಗೆಂದಳದನೇವೇಳ್ವೆಂ || ೬೮ ||

ಭರತಗೆ ರಾಜ್ಯದ ಸಿರಿಯಂ |
ಪಿರಿಯಕುಮಾರಗೆ ಚತುರ್ದಶಾಬ್ದಂ ವನಮಂ ||
ಕರುಣಿಪುದೆಂದಳ್ಕನ್ನಂ |
ವರಮಂ ತಾಂ ಕೇಳಿಕೊಂಡ ಸತ್ವದೆ ನೃಪನೊಳ್ || ೬೯ ||

ಆನುಡಿಗೇಳುತೆ ರಘುಜಂ |
ಭೂನಾಥಂಗೆರಗಿ ಸೀತೆಸಹಿತಂ ಪೊರಟಂ ||
ಈ ನರನಾಥಂ ಪಿತಗೆ ಸ |
ಮಾನಂ ತಾನೆಂದು ಭಕ್ತಿಯಿಂದಾಂ ಬಂದೆಂ || ೭೦ ||

ಪುರಮಂ ತಳರ್ದು ರಥದೊಳ್ |
ಭರದಿಂದಂ ಬಂದು ಶೃಂಗಿವೇರಪುರಕ್ಕಂ ||
ಮರಳಿಸಿ ಮಂತ್ರಿಸುಮಂತನ |
ನಿರುಳಲ್ಲಿರೆ ಮಿತ್ರನಾದ ಗುಹನೆಳ್ತಂದಂ || ೭೧ ||

ಮುದದಿಂ ಗುಹನಿಂ ಗಂಗಾ |
ನದಿಯಂ ಮಿಗೆ ದಾಂಟಿವರೆ ಭರದ್ವಾಜತಪೋ ||
ನಿಧಿಯೆಡೆಗಂ ತನ್ಮುನಿವರ |
ನಧಿಕತರ ಪ್ರೇಮದಿಂದೆ ಮನ್ನಿಸಿದನಣಂ || ೭೨ ||

ಆ ಜತಿಯಿಂ ಬೀಳ್ಕೊಂಡು ವಿ |
ರಾಜಿಪ ವಾಲ್ಮೀಕಿಮುನಿಪನೆಡೆಗಂ ಬರಲೀ ||
ರಾಜೀವಾಂಬಕನಂ ಸಲೆ |
ಪೂಜಿಸಿ ಸತ್ಕರಿಸಿ ನುತಿಸಿ ತಾಸಿಂತೆಂದಂ || ೭೩ ||

ಜಾನಕಿಯರಸನೆ ನಿನ್ನಭಿ |
ಧಾನಮಹಾಮಹಿಮೆಯಿಂದೆ ಧನ್ಯನುಮಾದೆಂ ||

ಮಾನಿಸರೂಪಂದಳೆದಿಹ |
ಮಾನಾಯಕನೆಂದು ಬಲ್ಲೆನೈ ರಘುನಾಥಾ || ೭೪ ||

ದೇವರ್ಕಳ ದೂರಿಂದಂ |
ಭೂವಳಯದ ಪೊರೆಯನಿಳುಹವೇಳ್ಕೆಂದುಂ ನೀ ||
ನೀವನಕೆಳ್ತಂದಿಹೆ ಮ |
ದ್ಭಾವದೊಳೀ ಸೀತೆವೆರಸು ನೆಲಸುಗುಮೆಂದಂ || ೭೫ ||

ವರಮುನಿಯನುಮತಿಯಿಂದಂ |
ಧರೆಗುತ್ತಮಮಾದ ಚಿತ್ರಕೂಟಾದ್ರಿಯೊಳಂ ||
ಮಿರುಗುವ ತಳಿರೆಲೆವನೆಯಂ |
ವಿರಚಿಸಿ ಸುಖಮಿರ್ದೆವಲ್ಲಿ ಕೇಳ್ ದ್ವಿಜವರ್ಯಾ || ೭೬ ||

ಉರಗನರದಿವಿಜಲೋಕಗ |
ಳುರುಮಣಿಗಳನ್ನೈದೆ ತಂದು ಕರಗಿಸಿ ವಿಧಿತಾಂ ||
ಕರುವಿಟ್ಟೆರೆದಿಟ್ಟನೊಯೆನೆ |
ಕರಮೆಸೆದುದು ಚಾರುಚಿತ್ರಕೂಟಮಹೀಧ್ರಂ || ೭೭ ||

ಸುರಶೈಲಕೆ ಮಿಗಿಲುಂ ಭಾ |
ಸುರಮಾದ ಹಿಮಾದ್ರಿಗಧಿಕಮಂಜನಗಿರಿಗಂ |
ಕರಮುನ್ನತಮೆಂದು ದಿವಾ |
ಕರನಂ ಸೋಂಕುತ್ತಮಿರ್ಪುದಾ ಭೂಮಿಧರಂ || ೭೮ ||

ಹರನೊಲ್ ಹರಿಯೊಲ್ವಿಧಿಯೊಲ್ |
ಸುರವರನೊಲ್ ಸೋಮಧಾರಿ ವನಮಾಲಿ ಮನೋ ||
ಹರ ಹಂಸಶೋಭಿ ವಜ್ರ |
ಸ್ಫುರಿತಂ ತಾನೆಂದು ರಂಜಿಸಿತ್ತಾ ಶೈಲಂ || ೭೯ ||

ನಾಗಕಟಕವಿಭ್ರಾಜಂ |
ನಾಗಕಟಕಶೈಲಧಿಕ್ಕೃತಂ ನಿರುಪಮವು ||
ನ್ನಾಗಕಟಕಾನ್ವಿತಂ ಪು |
ನ್ನಾಗಕಟಕಭಾಸಮದ್ರಿ ಶೋಭಿಸಿತನಘಂ || ೮೦ ||

ವನದಿಂ ರಸದಿಂ ನಿರ್ಜರ |
ಧುನಿಯಿಂದಂ ಚಾರುಪಕ್ಷಿಮೃಗಸಂಚಯದಿಂ ||
ಅನಿಮಿಷರಿಂ ಯೋಗಿಗಳಿಂ |
ಮುನಿಕುಲದಿಂ ರಂಜಿಸಿತ್ತು ತದ್ಭೂಮಿಧರಂ || || ೮೧ ||

ಈತೆರದ ಶೈಲತಟದೊಳ್ |
ಸಾತಿಶಯದ ಸೌಖ್ಯದಿಂದಮಿರಲನಿತರೊಳಂ ||
ಮಾತೆಯರಂಬೆರಸು ಭರತ |
ನೆಯ್ತಂದಂ ದುಃಖದಿಂದಮಾವಿರ್ಪೆಡೆಗಂ || ೮೨ ||

ಭರತಂ ಶತ್ರುಘ್ನಂ ರಘು |
ವರನಂ ಕಂಡಂಘ್ರಿಗೆರಗಲವರೀರ್ವರನುಂ ||
ಬರಸೆಳೆದಾಲಿಂಗಿಸಿ ಕುಲ |
ಗುರುವಪ್ಪ ವಸಿಷ್ಠಮುನಿಗೆ ಮಣಿದಂ ರಾಮಂ || ೮೩ ||

ಜನನಿಯರೆಲ್ಲರೆ ನಮಿಸಿ ವ |
ದನಮಂ ನಿಟ್ಟಿಸೆ ವಿರಾಗವಾಗಿರಲಾಗಳ್ ||
ಜನಕನ ಕುಶಲಮನವರೊಳ್ |
ವನಜಾಕ್ಷಂ ಬೆಸಗೊಳಲ್ಕೆ ಭರತಂ ಪೇಳ್ದಂ || ೮೪ ||

ದೇವನೆ ನೀವಿತ್ತಲ್ ಬರೆ |
ಮಾವನ ನಗರಕ್ಕೆ ದೂತರತಿಭರದಿಂ ರಾ ||
ಜೀವಭವನಣುಗನತ್ತಣೆ |
ನಾವಿಹ ತಾಣಕ್ಕೆ ಬಂದು ಬರವೇಳ್ಕೆಂದರ್ || ೮೫ ||

ಏನಾದುದೆಂದು ಭರದಿಂ |
ದಾನೀ ಶತ್ರುಘ್ನಸಹಿತೆ ನಿಜಪುರಕಂದುಂ ||
ಮಾನದೆ ಬಂದರಮನೆಯೊಳ್ |
ಭೂನಾಥಂ ಕಾಣದಿರಲುಮವ್ವೆಯೊಳೆಂದೆಂ || ೮೬ ||

ತಾಯೆ ಪಿತನೆಲ್ಲಿಹಂ ರಘು |
ರಾಯಂ ತಾನೆಲ್ಲಿ ಲಕ್ಷ್ಮಣಾಸದೆಲ್ಲಿರ್ಪಂ ||
ಮಾಯಕಮಿಲ್ಲದೆ ಪೇಳೆನೆ |
ತೋಯಜದಳನೇತ್ರೆ ತನ್ನಿನಾದುದನೆಂದಳ್ || ೮೭ ||

ನಿನಗಯ್ಸಿರಿಯಂ ರಾಮುಗೆ |
ವನಮಂ ಸಿರಿಗೆಯ್ಯವೇಳ್ಕುಮೆನೆ ಭೂಪತಿ ತಾಂ ||
ಮನದನುತಾಪದೊಳಿರೆ ಕಂ |
ಡನಘಂ ಶ್ರೀರಾಮನ್ನೈದೆ ಪೊರಟಂ ಪುರಮಂ || ೮೮ ||

ಸತಿಸಹಜಾತರ್ಬರೆ ರಘು |
ಪತಿಯತ್ತಂ ಪೋಗಲಿತ್ತವನೀನಾಥಂ ||

ಕ್ಷಿತಿಯೊಳ್ಬಿಳ್ದಂ ಸ್ವರ್ಗ |
ಸ್ಥಿತಿಯಂ ಕಯ್ಕೊಂಡನೆಂದಳೆನ್ನೊಳ್ಜನನೀ || ೮೯ ||
ಖರತರವಾಣಿಯನಾಲಿಸ |
ಲುರಿ ಮಸಗಿ ಮಹಾತಿದುಃಖದಿಂದಿರಲಾಗಳ್ ||
ಪಿರಿಯಬ್ಬೆ ವಸಿಷ್ಠಮುನೀ |
ಶ್ವರರೆನ್ನಂ ಕಂಡು ಸಂತವಿಸಿದರ್ದೇವಾ || ೯೦ ||
ತೈಲದ್ರೋಣಿಯೊಳವನೀ |
ಪಾಲನ ವಿಗ್ರಹಮನಂದು ತೆಗೆಯಿಸಿ ಸರಯೂ ||
ಕೂಲದೊಳಂ ದೇಶಿಕಶಾ |
ರ್ದೂಲನ ಸಮ್ಮತದೊಳೈದೆ ಸಂಸ್ಕರಿಯಿಸಿದೆಂ || ೯೧ ||

ಅರಸಾಗಿ ಧರಾತಳಮಂ |
ಪೊರೆಯೆಂದುಂ ಗುರುವಸಿಷ್ಠಮುಖ್ಯರುಮೆಸಗಿ ||
ನ್ನೊರೆಯಲ್ಪನ್ನಿಂ ತೀರ್ಚದು |
ಧರೆಗಂ ತಾಂ ಕರ್ತನಲ್ಲಮೆಂದೆಳ್ತಂದೆಂ || ೯೨ ||

ಭವದಂಘ್ರಿಯನೀಕ್ಷಿಪೊಡಂ |
ತವಕದಿನೆಳ್ತಂದು ದೇವನದಿಯಂ ಗುಹನಿಂ ||
ತವೆ ದಾಂಟಿ ಭರದ್ವಾಜ |
ಪ್ರವಿಲಸಿತಾಶ್ರಮಕೆವಂದು ಮುನಿಯಂ ಕಂಡೆಂ || ೯೩ ||

ಆ ಮುನಿವರನಂ ಬೀಳ್ಕೊಂ |
ಡೀ ಮಹಿಗಂ ಬಂದು ನಿಮ್ಮ ಪದಮಂ ಕಂಡೆಂ ||
ಪ್ರೇಮದೆ ಪುರಕೆಳ್ತಂದುಂ |
ಸ್ವಾಮಿತ್ವವನೈದೆ ತಾಳ್ದು ರಕ್ಷಿಪುದೆಂದಂ || ೯೪ ||

ಭರತನ ನುಡಿಯಂ ಕೇಳು |
ತ್ತುರಿ ಸೋಂಕಿದ ಲಾಕ್ಷದಂತೆ ರಘುವರನಂತಃ ||
ಕರಣಮುಮಾದುದು ದುಃಖಂ |
ಪೊರಬೀಳಲ್ಕೆಸರುಮುಕ್ಕಿ ಸೂಸುವ ತೆರದೊಳ್ || ೯೫ ||

ಹಾ ತಾತನೆನುತೆ ಸೀತಾ |
ನೇತಂ ನೆನೆನೆನೆದು ದುಃಖಿಸುತ್ತಿರೆ ಮಾಯಾ ||
ತೀತನೆ ಮನುಷ್ಯರಂದದೊ |
ಳೇತರ್ಕೀ ದುಃಖಮೆಂದನಬ್ಜಜತನಯಂ || ೯೬ ||

ವಿದಿತಪಿತೃಕೃತ್ಯಮಂ ಘುರ ।
ನದಿಯೊಳ್ವಿರಚಿಸಿ ವಸಿಷ್ಠಮುನಿಮತದಿಂದಂ ॥
ಉದರಾಗ್ನಿಯನುರೆ ತಣ್ಪಿಸಿ ।
ಪದುಳದೆ ಭರತಂಗೆ ಪೇಳ್ದನೀ ರಘುವೀರಂ ॥ ೯೭ ॥

ನಡೆ ನೀನಯೋಧ್ಯಕಂ ಪೊರೆ ।
ಪೊಡವಿಯನತಿಸೌಖ್ಯದಿಂದೆ ಮೊದಲಿನೊಲೊಲ್ದುಂ ॥
ತಡೆಯದೆ ಯಾಚಕಜನಕಂ ।
ಕುಡು ಬೇಳ್ಪುದನೆಂದೊಡಾತನಗ್ರಜಗೆಂದಂ ॥ ೯೮ ॥

ತರಣಿಕುಲೋದ್ಭವರೆಲ್ಲರ್ ।
ದೊರೆತನಮಂ ಪಿರಿಯ ಕುವರಗಿತ್ತುಂ ವನದೊಳ್ ॥
ಚರಿಸಿ ಪರಕ್ಕೈಯ್ದಿದುದಂ ।
ಗುರುಮುಖದಿಂ ಕೇಳಿಬಲ್ಲೆನಾಲಿಪುದರಸಾ ॥ ೯೯ ॥

ದೇವನೆ ಬಿಜಯಂಗೆಯ್ದಾ ।
ಭೂವಳಯಕ್ಕಧಿಪನಾಗಿ ಪಾಲಿಪುದನಿಶಂ ॥
ಗೋವಿಪ್ರರನೆಸ್ನುತೆ ಮೃದು ।
ಭಾವದೆ ಚರಣಾಬ್ಜಕೆರಗಿ ನಿಂದಂ ಭರತಂ ॥ ೧೦೦ ॥

ಗುರುವಚನಮಲಂಘ್ಯಂ ಕೇಳ್ ।
ಭರತನೆ ಪದಿನಾಲ್ಕುಬರಿಸಮಾಗಲ್ಬರ್ಪೆಂ ॥
ಭರದಿಂ ನಡೆ ಪುರಕೆಂದುಂ ।
ಕರುಣದೆ ಪಾವುಗೆಯನಿತ್ತನಾತಗೆ ರಘುಜಂ ॥ ೧೦೧ ॥

ಈರೇಳು ಬಚ್ಚರಕ್ಕಂ ।
ಬಾರದಿರಲ್ಪುಗುವೆನಗ್ನಿಯಂ ತಾನೆನುತಂ ॥
ಶ್ರೀರಘುನಾಥನ ಚರಣಾಂ ।
ಭೋರುಹಕಭಿನಮಿಸಿ ಸೀತೆಗಾನತನಾದಂ ॥ ೧೦೨ ॥

ಎನ್ನಂ ಮನ್ನಿಸಿ ಭರತಂ ।
ರನ್ನದ ಪಾವುಗೆಯನ್ನೈದೆ ಶಿರದೊಳ್ತಾಳ್ದುಂ ॥
ಸನ್ನುತಿಗೆಯ್ಯುತೆ ಬೀಳ್ಕೊಳೆ ।
ಖಿನ್ನಳ್ತಾನಾಗಿ ಕೈಕೆ ರಘುಜನೊಳೆಂದಳ್ ॥ ೧೦೩ ॥

ತಾಂ ಗೆಯ್ದಪರಾಧಗಳಂ ।
ನೀಂ ಗಣನೆಗೆ ತಾರದಿಂದು ನಡೆತಂದು ಕೃಪಾ ॥

ಪಾಂಗನೆ ಸಲಹೆನೆ ಸೀಲನಿ ।
ಭಾಂಗಂ ಕಾರುಣ್ಯದಿಂದಮವಳೊಡನೆಂದಂ ॥ ೧೦೪ ॥

ಪುರರೆಸಗಿದ ಕಜ್ಜಕ್ಕಂ ।
ಬರಿದೇ ನೀನೇಕೆ ಮರುಗುತಿಹೆ ಮುನಿಜನಮಂ ॥
ಪೊರೆದೆಯ್ತರ್ಪಂ ನಡೆಯೆಂ ।
ದುರುಕಾರ್ಯಮನ್ನೈದೆ ಪೇಳ್ದು ಕಳುಹಿದನವಳಂ ॥ ೧೦೫ ॥

ಕಂಬನಿದುಂಬಿರ್ಪವ್ವೆಗೆ ।
ಕುಂಬಿಟ್ಟತಿಭಕ್ತಿಯಿಂದೆ ಮನ್ನಿಸಿ ಬಳಿಕೆ ॥
ನ್ನಂಬಿಕೆಗಂ ವಂದಿಸಿ ವಿಧಿ ।
ಸಂಭವನ ಪದಾಬ್ಜಕೆರಗಿದಂ ರಘುವೀರಂ ॥ ೧೦೬ ॥

ಕರುಣದೆ ಶತ್ರುಂಜಯಮು ।
ಖ್ಯರನುಂ ಬೀಳ್ಕೊಟ್ಟೊಡೈದೆ ಭರತನಯೋಧ್ಯಾ ॥
ಪುರಕಂ ಪೋಗದೆ ಪಾವನ ।
ತರ ನಂದಿಗ್ರಾಮಕೆಯ್ದಿದನೆನುತೆ ಕೇಳ್ದಂ ॥ ೧೦೭ ॥

ಪುರದತ್ತಣಿಂದಮೆಯ್ತ ।
ರ್ಪರ ಸಂದಣಿ ಬಹುಳಮಾಗಲಲ್ಲಿಂ ಪೊರಮ ॥
ಟ್ಟುರುತರಮಾದತ್ರಿಮುನೀ ।
ಶ್ವರನಾಶ್ರಮದೆಡೆಗೆವಂದೆವಾವತಿಮುದದಿಂ ॥ ೧೦೮ ॥

ತನ್ಮುನಿಯಂ ಕಂಡೆರಗ ।
ಲ್ಚಿನ್ಮಯನೀಂ ಬಂದ ಕಜ್ಜಮಂ ತಿಳಿದಿರ್ಪಂ ॥
ಮನ್ಮಾನಸದೊಳ್ನೆಲಸು ಜ ।
ಗನ್ಮಯ ನೀನೆಂದು ರಘುಜನಂ ಮನ್ನಿಸಿದಂ ॥ ೧೦೯ ॥

ಯತಿಯನುಮತಿಯಿಂದಂ ಕ್ಷಿತಿ ।
ಸುತೆ ತಾನೊಳವೊಕ್ಕು ಪರಮಪಾವನೆ ಸುಪತಿ ॥
ವ್ರತೆಯನಸೂಯೆಗೆ ವಂದಿಸ ।
ಲತಿಶಯದಿಂ ಪರಸಿ ಸತ್ಕರಿಸಿದಳ್ಮುದದಿಂ ॥ ೧೧೦ ॥

ಆ ರಿಸಿಯಿಂ ಕಳಿಪಿಸಿಕೊಂ ।
ಡೀ ರಘುಪತಿ ಪಿಂದೆಮುಂದೆ ನಾವೆಯ್ತರೆ ಸೀ ॥
ತಾರಮಣಿ ಮಧ್ಯದೊಳ್ಬರೆ ।
ಘೋರಾಕೃತಿಯಿಂ ವಿರಾಧದನುಜಂ ಬಂದಂ ॥ ೧೧೧ ॥

ಶರವೊಂದರಿಂದೆ ದೈತ್ಯನ |
ಶಿರಮಂ ಧರೆಗಿಳಿಪೆ ಶಾಪಮಳಿದುಂ ವಿದ್ಯಾ |
ಧರರೂಪಂ ಧರಿಯಿಸಿ ರಘು |
ವರಸಂಕ್ಷಿಗ್ರೆ ಮಣಿದು ತನ್ನ ಪುರಮಂ ಸಾರ್ದಂ || ೧೧೨ ||

ಮುಂದಾವುಂ ನಡೆತರಲರ |
ವಿಂದಾಪ್ತನ ಬಿಂಬಮೆಂಬಿನಂ ತೋರ್ದುದು ಭೂ ||
ವೃಂದಾರಕಸುತಿಗೋಸಗ |
ಳಿಂದಂ ಶರಭಂಗಮುನಿಪನಾಶ್ರಮಮಾಗಳ್ || ೧೧೩ ||

ಯತಿವರನಂ ಕಾಣುತೆ ಪದ |
ಶತಪತ್ರಕೆ ಮಣಿಯಲಾತನತಿಭಕ್ತಿಯೊಳಂ ||
ಕ್ಷಿತಿಸುತೆಯರಸಗೆ ವಂದಿಸಿ |
ನುತಿಯಿಸಿ ಸತ್ಕರಿಸಿ ರಾಮನೊಡನಿಂತೆಂದಂ || ೧೧೪ ||

ಅವನಿಯ ಪೊರೆಯಂ ಕಳೆಯ |
ಲ್ಕವತರಿಸಿದ ಮನುಜರೂಪಿನಚ್ಯುತ ಲಕ್ಷ್ಮೀ ||
ಧವ ನಿಮಿಷಂ ನಿಲ್ ಮದ್ದೇ |
ಹವನುಳಿದುಂ ಸಾರ್ವೆನತುಲಪದವಿಯನೆಂದಂ || ೧೧೫ ||

ಚಿತೆಯೊಳ್ತನುವಂ ಶಿಖಿಗಾ |
ಹುತಿಯಂ ಕೊಟ್ಟೊಡನೆ ದಿವ್ಯರೂಪಂದಾಳ್ದಂ ||
ನುತಿಯಿಸಿ ಪರಮಾನಂದದೆ|
ಚತುರಾಸ್ಯನ ಲೋಕಕಕೆಯ್ದಿದಂ ಮುನಿವರ್ಯಂ || ೧೧೬ ||

ಮುಂದೆ ಸುತೀಕ್ಷ್ಣನ ಶಾಲೆಗೆ |
ಬಂದಾತನನೈದೆ ಕೂಡಿಕೊಂಡೆಳ್ತರೆ ಬಾ ||
ಲೇಂದುಧರನಾಲಯಮೊಯೆನ |
ಲಂದಂಬಡೆದತ್ತು ಕುಂಭಜನ ಪರ್ಣಗೃಹಂ || ೧೧೭ ||

ಒಂದೆಸೆಯೊಳಗ್ನಿಹೋತ್ರದಿ |
ನೊಂದೆಸೆಯೊಳ್ ಶ್ರುತಿತದರ್ಥಜಿಜ್ಞಾಸಗಳಿಂ ||
ಬಂಧುರರಾಮಾಯಣಕಥೆ |
ಯಿಂದಂ ಸಲೆ ರಂಜಿಸಿತ್ತು ತನ್ಮುನಿಕುಟಜಂ || ೧೧೮ ||

ಆಪೋಜ್ಯೋತಿಸ್ಥಳದೊಳ್ |
ಸಾಪಿಸಿ ಪವಮಾನಪಂಚಕಮನತಿಭರದಿಂ ||

ಮಾಪತಿಯಂಘ್ರಿಯನೀಕ್ಷಿಪ |
ತಾಪಸಸಂದೋಹವಿರ್ದುದಾಶ್ರಮದೆಡೆಯೊಳ್ || ೧೯ ||

ಸಿದ್ಧಾಸನ ಪದ್ಮಾಸನ |
ಬದ್ಧಾಸನ ಕೂರ್ಮಕುಕ್ಕುಟಾಸನದಿಂದಂ ||
ಬದ್ಧಿಸಿ ಮಾರುತನಂ ಮುನಿ |
ವೃದ್ಧಾವಳಿ ಶೋಭಿಸಿತ್ತುಮದನೇವೇಳ್ವೆಂ || ೨೦ ||

ಪೊಡವಿಯಣುಗಿಲಕ್ಷ್ಮಣರನು |
ಮೊಡಗೊಂಡುಂ ರಾಮನ್ಸೈದೆ ಬಂದಿಹನೆನುತಂ ||
ಮೃಡಸನ್ನಿಭ ಕುಂಭೋದ್ಭವ |
ನೊಡನಾತನ ಶಿಷ್ಯನಾಡೆ ಬರಿಸಿದನೆಮ್ಮಂ || ೨೧ ||

ತಾರಾಗಣಮಧ್ಯದೊಳಂ |
ರಾರಾಜಿಪ ಚಂದ್ರನಂತೆ ಮುನಿಮಂಡಲದೊಳ್ ||
ಶ್ರೀರಾಮನಾಮಮಹಿಮೆಯ |
ನಾ ರಿಸಿ ರಿಸಿಕುಳಕೆ ಬೋಧಿಸುತ್ತಿರಲಾಗಳ್ || ೨೨ ||

ರಾಮನತಿಭಕ್ತಿಭಾವದೊ |
ಳಾ ಮುನಿನಾಥಂಗೆ ಮಣಿಯಲಾತಂ ಮುದದಿಂ ||
ಶ್ರೀಮನ್ಮಂಗಲಮಹಿಮ ನಿ |
ರಾಮಯ ಜಯಜಯತುಮೆಂದು ಪೀಠಮನಿತ್ತಂ || ೨೩ ||

ಸೀತೆಸಹಿತವೊಪ್ಪಿರೆ ರಘು |
ನಾಥನನುಪಚರಿಸಿಯರ್ಘ್ಯಪಾದ್ಯಮನಿತ್ತುಂ ||
ಪೂತ ಫಲಂಗಳನೊಪ್ಪಿಸಿ |
ಪ್ರೀತಿಯೊಳಂ ರಾಮನೊಡನೆ ಮುನಿಯಿಂತೆಂದಂ || ೨೪ ||

ರಾವಣನುಪಹತಿಗಂ ದಿವಿ |
ಜಾವಳಿ ನಿಲಲಾರದಬ್ಜಭವಗಂ ದೂರ ||
ಲ್ಕಾ ವಿಧಿ ಯೋಚನೆಗೆಯ್ಯು |
ತ್ತಾ ವಿಬುಧರ್ಸಹಿತೆ ಸಾರ್ದನಿಂಗಡಲನಣಂ || ೨೫ ||

ದೇವ ನಿರಾಮಯ ನಿರುಪಮ |
ಭಾವಜಪಿತ ಭವಹೃದಂಬುಜನಿಕೇತನ ರಾ ||
ಜೀವಾಂಬಕ ಸಚರಾಚರ |
ಜೀವಾಂತರ್ಯಾಮಿ ಪಾಲಿಸೆಂದಂ ಬ್ರಹ್ಮಂ || ೨೬ ||

ಮುನಿನಾಥವಿಶ್ರವಸುಗಂ ।
ಜನಿಸಿದ ಖಳರಾವಣಂಗೆ ತಾನೊಲಿದೀಯ ॥
ಲ್ಕನಿಮಿಷರಾಕ್ಷಸಪನ್ನಗ ।
ಜನರಿಂದಂ ಮರಣಮಿಲ್ಲಮೆಂದುಂ ವರವುಂ ॥ ೧೨೭ ॥

ಒಂದುಳಿದಿರ್ಪುದು ಮಾನವ ।
ರಿಂದವಗಂ ಸಾವು ಬರ್ಪುದೆಂಬುದು ಕರುಣಾ ॥
ಸಿಂಧುವೆ ನೀನಾ ಖಳನಂ ।
ಕೊಂದುಂ ರಕ್ಷಿಪುದು ಕೃಪೆಯೊಳೀ ಸುರಕುಲಮಂ ॥ ೧೨೮ ॥

ಮೊರೆಯಿಡುತಿದೆ ದೇವಗಣಂ ।
ಮೊರೆಯಂ ಕೇಳ್ದೊಲ್ದು ಬಂದು ಮೆಯ್ದೋರೆನುತಂ ॥
ಸರಸಿಜಪೀಠಂ ಕೂಗಿಡೆ ।
ಸರಸೋಕ್ತಿಗಳ್ಕೈದೆ ಕೇಳಿಸಿತ್ತಾಗಸದೊಳ್ ॥ ೧೨೯ ॥

ವನಜಾಸನ ಕೇಳುದಿಸುವೆ ।
ನಿನವಂಶಜಪಂಕ್ತಿರಥನ ಸತಿ ಕೌಸಲೆಯೊಳ್ ॥
ದನುಜಾಧಮನಂ ಕೊಲ್ವೆಂ ।
ಜನಿಸುಗೆಯಮರಾಳಿ ವಾನರಾಕೃತಿಯಿಂದಂ ॥ ೧೩೦ ॥

ನೆರೆ ನಾಲ್ಕು ರೂಪಿನಿಂದವ ।
ತರಿಸುವೆನಾ ಶಂಖಚಕ್ರಶೇಷರ್ಸಹಿತಂ ॥
ಧರೆಯ ಪೊರೆಯನಿಳುಹುವೆನೆಂ ।
ದೊರೆದ ಮಹಾದಿವ್ಯವಾಣಿಯುಂ ಕೇಳ್ದನಜಂ ॥ ೧೩೧ ॥

ಹರಿಯ ಕೃಪೆಯಾದುದಂ ಕೇ ।
ಳ್ದಿರೆ ದಿವಿಜರ್ನೀವು ಪೋಗಿ ಗಿರಿವನದೊಳ್ವಾ ॥
ನರಋಕ್ಷಮುಖ್ಯರೂಪಂ ।
ಧರಿಯಿಸಿ ಹರಿಗಂ ಸಹಾಯಮಂ ಮಾಳ್ಪುದಣಂ ॥ ೧೩೨ ॥

ಎಂದಜನತ್ತಂ ಪೋಗಲ್ ।
ವೃಂದಾರಕರೆಲ್ಲರಿಳೆಯೊಳವತರಿಯಿಸಿ ಕಿ ॥
ಷ್ಕಿಂಧಾದ್ರಿಯೊಳಿರ್ಪಗೀರ್ವಾ ।
ಣಿಂದಂ ತಾನೆಂದಿಗೈದೆ ಬರ್ಪನೆನುತ್ತಂ ॥ ೧೩೩ ॥

ಹರಿ ನೀನೆ ಶೇಷನೀತಂ ।
ಧರಣೀಸುತೆ ಲಕ್ಷ್ಮಿಯೆಂಬುದಂ ತಿಳಿದಿರ್ಪೆಂ ॥

ಧುರದೊಳ್ ದನುಜಾಧಮದಶ |
ಶಿರನಂ ಸಂಹರಿಪುದೆಂದನಾ ಮುನಿನಾಥಂ || ೧೩೪ ||

ಇಂತೆಂದಗಸ್ತ್ಯಮುನಿಪತಿ |
ಸಂತಸದೆ ಮಹೇಂದ್ರಚಾಪಶರಖಡ್ಗಗಳಂ ||
ತಾಂ ತವಕದಿಂದೆ ಕೊಟ್ಟಂ |
ಸ್ವಾಂತಾಂಭೋಜಾತದಲ್ಲಿ ನೆಲಸುಗುಮೆಂದಂ || ೧೩೫ ||

ಆ ಮುನಿಗೆ ಮಗುಳೆ ವಂದಿಸಿ |
ಪ್ರೇಮದೆ ಬೀಳ್ಕೊಂಡು ಬಂದು ಪಂಚವಟಿಯೊಳು ||
ದ್ಧಾಮ ಜಟಾಯುವನೀಕ್ಷಿಸಿ |
ಕ್ಷೇಮಂಗೆಯ್ಯುತ್ತಮಿರ್ಪುದೆಂದಂ ರಾಮಂ || ೧೩೬ ||

ಗೌತಮಿಯ ತೀರದೊಳ್ಪುರು |
ಹೂತನ ನಂದನಕೆ ತೋಡುವಾಗಿಹ ವನದೊಳ್ ||
ನೂತನ ಪರ್ಣಾಲಯಮಂ |
ಸಾತಿಶಯಂಗೆಯ್ದನಗ್ರಜಾತನ ಮತದಿಂ || ೧೩೭ ||

ಪರಮರ್ಷಿಕುಲದ ಮತದಿಂ |
ವಿರಚಿಸಿ ನಿಶೆಯಲ್ಲಿ ವಾಸ್ತುರಕ್ಷೋಘ್ನಗಳಂ ||
ಮರುದೆವಸಂ ಪೊಕ್ಕಂ ರಘು |
ವರನವನೀಜಾತೆವೆರಸು ಪರ್ಣಾಲಯಮಂ || ೧೩೮ ||

ಈತನೆ ತಾತಂ ಮದ್ಗುರು |
ಸೀತೆಯೆ ಮಜ್ಜನನಿಯೆಂದು ತತ್ಪದಪಂಕೇ ||
ಜಾತಮನರ್ಚಿಸುತನುದಿನ |
ಮಾತಳಿರೆಲೆವನೆಯನ್ನೈದೆ ಕಾಯುತಮಿರ್ದೆಂ || ೧೩೯ ||

# ದ್ವಿತೀಯಾಶ್ವಾಸ.

ವೃತ್ತಂ ॥ ರಾಮಂ ಶ್ಯಾಮಲಗಾತ್ರನಾದಿಪುರುಷಂ ರಾಜೀವಪತ್ರಾಂಬಕಂ ।
ಸೋಮಾಬ್ಜಾಸನಸನ್ನುತಂ ಶುಭಕರಂ ಸಾಮಪ್ರಿಯಂ ಶಾಶ್ವತಂ ॥
ಭೀಮೋದ್ದಂಡವಿರಾಧದೈತ್ಯಮಥನಂ ಭಕ್ತಾಳಿ ಸಂರಕ್ಷಕಂ ।
ಪ್ರೇಮಂಬೆತ್ತೆನಗೀಗೆ ಸೌಖ್ಯಚಯಮಂ ಸೀತಾನನಾಬ್ಜಾರ್ಯಮಂ ।

ವಟುರೂಪನಾಂತು ಸೀತಾ ।
ವಿಟನಂಘ್ರಿಸರೋರುಹಕ್ಕೆ ವಂದಿಸಿ ಬಳಿಕಂ ॥
ಪಟುವಾಕ್ಯದೆ ನುತಿಸಿದ ಧೂ ।
ರ್ಜಟಿಯಂಶೀಭೂತನಾದ ಹನುಮಗೆ ಮಣಿವೆಂ ॥ ೧ ॥

ಸುಧೆಯಂ ಸೇವಿಸಿದಂತಾ ।
ದುದು ವನಜಾಂಬಕನ ಚರಿತೆಯಂ ಕೇಳ್ದುದರಿಂ ॥
ಮುದದಿಂ ಮೇಲ್ಗಡೆಯಂ ಪೇ ।
ಳ್ವುದು ಕರುಣದೊಳೆಂದನನಿಲಜಂ ಲಕ್ಷ್ಮಣನೊಳ್ ॥ ೨ ॥

ಆ ನದಿಯ ತೀರದೊಳ್ ಸ ।
ನ್ಮೌನಿಗಣಂಬೆರಸು ಸೌಖ್ಯದಿಂದಿರಲು ಜನ ॥
ಸ್ಥಾನದಿನೇಳ್ತಂದಳ್ಸುರ ।
ಮಾನಿನಿಯೆಂಬಂತೆ ಶೂರ್ಪನಖಿಯೆಂಬಸುರೇ ॥ ೩ ॥

ಕಾಮಿಸಿ ಬಂದೆಂ ಸದ್ಗುಣ ।
ಧಾಮನೆ ಕೃಪೆಯಿಂದೆ ರಮಿಸವೇಳ್ಕೆಂದಾಗಳ್ ॥
ಆ ಮಾಯಾದಾನವಿ ರಘು ।
ರಾಮನೊಳಂ ಪೇಳೆ ಕೇಳ್ದು ನಗುತಿಂತೆಂದಂ ॥ ೪ ॥

ತನಗೋರ್ವಳ್ಸತಿಯಿರ್ಪಳ್ ।
ನಿನಗೊಪ್ಪುವಕಾಂತನಿರ್ಪನೆನುತೆನ್ನೆಡೆಗಂ ॥
ವಿನಯಧಿ ಕಳುಹಲ್ಕಸುರೆಯ ।
ಕೊನೆಮೂಗಂ ಕಿವಿಗಳೆರಡನಿಳುಹಿದೆನಾಗಳ್ ॥ ೫ ॥

ಮೊರೆಯಿಟ್ಟಸುರಾಕೃತಿಯಿಂ ।
ಖರನೆಡೆಗಂ ಪೋಗಿ ದೂರೆ ನಡೆತಂದಂ ಸೋ ॥
ದರದೂಷಣತ್ರಿಶಿರಭಟ ।
ವರರಿಂ ಪದಿನಾಲ್ಕು ಸಾಸಿರಾಸುರಬಲದಿಂ ॥ ೬ ॥

ಕಂಡಾಗಳೆ ರಾಮಂ ಕೋ |
ಯಂಡಕ್ಕಂ ತೊಡಿಸಿ ಬಾಣಮಂ ನಿಮಿಷದೊಳಂ ||
ಖಂಡಿಸಿ ರಾಕ್ಷಸರಂ ಧೃತ |
ಖಂಡೇಂದುವಿನಂತೆ ಮೆರೆದನದನೇವೇಳ್ವೆಂ || ೮ ||

ಪಲವು ದಿನವಾದ ಬಳಿಕಂ |
ಸುಳಿದುದು ಸಮ್ಮುಖದೆ ಕಾಂಚನದ ಮೃಗವೊಂದುಂ ||
ಇಳೆಯಣುಗಿ ಕಂಡು ಬೇಡ |
ಲ್ಕಲಸದೆ ಬೆಂಬಳಿಯೊಳೆಯ್ದಿದಂ ರಘುವೀರಂ || ೯ ||

ಮಾಯದ ಮೃಗವೆಂದರಿತಾ |
ತೋಯಜದಳನೇತ್ರನೆಚ್ಚು ಕೆಡೆಪಲ್ಕಸುರಂ ||
ಸಾಯುವ ಕಾಲದೆ ಲಕ್ಷ್ಮಣ |
ಹಾಯೆನುತಂ ಬೀಳೆ ಕೇಳ್ದುದಸುರನ ದನಿಯುಂ || ೧೦ ||

ಪತಿಯ ರುತಿಯಂದು ಸೀತಾ |
ಸತಿಯೆನ್ನಂ ಕೋಪದಿಂದೆ ಕಳಿಪಲ್ಕಾನುಂ ||
ಪಥವಿಡಿದುಂ ಬರ್ಪನ್ನೆಗ |
ಮತಿಚಿಂತಾಕ್ರಾಂತನಾಗಿ ಬಂದಂ ರಘುಜಂ || ೧೧ ||

ಏನಾಗಿರ್ಪಳೊ ಮಾನಿನಿ |
ದಾನವರುರುಮಾಯೆಯಿಂದಮವಳಂ ಬಿಟ್ಟುಂ ||
ನೀನೇಕೆ ಬಂದೆಯೆನುತಂ |
ಭೂನಾಥಂ ಕೇಳೆ ಪೇಳ್ದೆನೀ ವಿವರಗಳಂ || ೧೨ ||

ವನಿತಾಮಣಿಯಂ ಕಾಣ್ಬುದು |
ತನಗಿನ್ನುಮಸಾಧ್ಯಮೆಂದು ಚಿಂತಿಸುತಂ ಪಾ ||
ವನನೆಲೆವನೆಗಂ ಬರೆ ಮೇ |
ದಿನಿತನುಜೆಯನಲ್ಲಿ ಕಾಣದಿರೆ ದುಃಖಿಸಿದಂ || ೧೩ ||

ಹಾ. ರಮಣಿ ಹಾ ಯುವತಿ ಹಾ |
ಹಾ ರಮೆ ಹಾ ಸುದತಿಯೆಂದುಮತಿದುಃಖವನಾಂ ||
ತೀ ರಾಘವನಿರೆ ಖಗಮೃಗ |
ವಾರಂ ಮೊರೆಯಿಟ್ಟುವಾಗಲದನೇವೇಳ್ವೆಂ || ೧೪ ||

ನರರಂತಿದೇಕೆ ದುಃಖಂ |
ನರನೇ ನೀನಾದಿಪುರುಷನಲ್ಲವೆ ಬಲ್ಲೆಂ ||

ಮರೆಯದೆ ನೀಂ ನಿಜಮಾಯೆಯ ।
ಮರೆಯಂ ಪರಿಹರಿಪುದೆಂದು ತಿಳಿಪಿದೆನಾಗಳ್ || ೧೫ ||

ಲೇಸಂ ನೀನಾಡಿದೆ ಸೀ ।
ತಾಸತಿಯಂ ನೋಡವೇಳ್ಕುಮೆನುತುಂ ಭರದಿಂ ||
ಕ್ಲೇಶಂಗೊಳುತಂ ಬರೆ ಪ ।
ಕ್ಷೀಶಂ ತಾಂ ಗಾಸಿಯಾಗಿ ಬಿಳ್ದಿರಲಾಗಳ್ || ೧೬ ||

ಅಸುಮಾತ್ರಮಿರ್ಪ ಖಗನಂ ।
ಪಸಿನೆ ನಿರೀಕ್ಷಿಸಿ ಜಟಾಯು ನೀನಾರಿಂದಂ ||
ಬಸಗೆಟ್ಟೆಯೆಂದು ಕೇಳಲ್ ।
ಬಿಸುಸುಯ್ಯುತ್ತಾತನೆಂದನೆಮ್ಮೊಡನಾಗಳ್ || ೧೭ ||

ರಾವಣನೆಂಬಧಮಖಳಂ ।
ದೇವಿಯರಂ ಮಾಯೆಯಿಂದಮುಯ್ಯುತ್ತಿರಲಾಂ ||
ತೀವಿದ ರೋಷದೆ ಸೆಣಸ ।
ಲ್ಕಾ ವಿಬುಧಾರಾತಿಯೆನ್ನ ಮೋಸದೆ ಸದೆದಂ || ೧೮ ||

ನಿನ್ನಡಿಯಂ ನೋಳ್ಪನ್ನೆಗ ।
ಮೆನ್ನಸುಮಿರಲೆಂದು ದೇವಿ ನೇಮಿಸಿದುದರಿಂ ||
ದಿನ್ನೆಗಮಿರ್ದೆಂ ಮೋಕ್ಷಮ ।
ನಿನ್ನುಂ ಕರುಣಿಪುದುಮೆಂದು ತನುವಂ ಬಿಸುಟಂ || ೧೯ ||

ಅವನಂ ಸಂಸ್ಕರಿಸಲೊಡಂ ।
ಪ್ರವಿಲಸಿತವಿಮಾನದಲ್ಲಿ ನಿಂದಂಬುಜಸಂ ।
ಭವಲೋಕಕೆ ಪೋಗಲ್ಕುಂ ।
ದವಿರಳಕಾಂತಾರದಲ್ಲಿ ಬರುತಿರಲಾಗಳ್ || ೨೦ ||

ತಲೆಯಿಲ್ಲದೊಂದು ಯೋಜನ ।
ದಳತೆಯ ಬಾಹುಗಳನಾಂತ ರಕ್ಕಸನೊರ್ವಂ ||
ಸೆಳೆದೆಮ್ಮಂ ತಿಂಬೆಡೆಯೊಳ್ ।
ಗಳಿಲನೆ ತದ್ಬಾಹುಯುಗಳಮಂ ಕಡಿದೆವಣಂ || ೨೧ ||

ಅಟ್ಟೆಯ ತುಳಿಯಲ್ಕಸುವಂ ।
ಬಿಟ್ಟುಂ ರಾಕ್ಷಸಕಬಂಧನಂದಂಬರದೊಳ್ ||
ದಿಟ್ಟಿಸಿ ವಿಮಾನಮಂ ನಿಜ ।
ಪಟ್ಟಣಮಂ ಸಾರ್ವೆನೆಂದು ಮತ್ತಿಂತೆಂದಂ || ೨೨ ||

ಹರಿ ನೀನೆಂಬುದ ಬಲ್ಲೆಂ ।
ಧರಣೀಸುತೆ ಲಕ್ಷ್ಮಿಯೆಂಬುದಂ ತಿಳಿದಿರ್ಪೆಂ ॥
ನರರಿಂ ರಾವಣದೈತ್ಯಗೆ ।
ಮರಣಂ ಮಿಗೆ ಬರ್ಪುದೆಂಬುದಂ ಕೇಳ್ದಿರ್ಪೆಂ ॥ ೨೩ ॥

ಮುನಿವೇಷದಿಂದೆ ರಾವಣ ।
ದನುಜಂ ಬಂದವನಿತನುಜೆಯಂ ಕಳ್ದುಯ್ದಂ ॥
ಇನಸುತನ ಸಹಾಯದೆ ನೀಂ ।
ವನನಿಧಿಯಂ ದಾಂಟಿ ದೈತ್ಯನಂ ಕೊಲ್ವೆ ದಿಟಂ ॥ ೨೪ ॥

ಪಾಪವಶದಿಂದೆ ರಾಕ್ಷಸ ।
ರೂಪಂದಾಳ್ದಿರ್ದೆನಿನ್ನೆಗಂ ನಿರ್ಮಲಸೀ ॥
ತಾಪತಿ ನಿನ್ನಯ ಕರುಣದೊ ।
ಳೀ ಪರಿ ತಾನಾದೆನೆಂದು ನುತಿಯಿಸಿ ಪೋದಂ ॥ ೨೫ ॥

ತರಣಿಯ ಸುತನಂ ನೋಳ್ಪೊಡೆ ।
ಭರದಿಂದಂ ಶಬರಿಯೆಂಬಳಾಶ್ರಮದೆಡೆಗಂ ॥
ಬರಲಾಕೆ ಕಂಡು ಲಕ್ಷ್ಮೀ ।
ವರನೆಂಬುದ ಬಲ್ಲೆನೆಂದು ಸತ್ಕರಿಯಿಸಿದಳ್ ॥ ೨೬ ॥

ನಿನ್ನಡಿದಾವರೆಯಂ ಕಾ ।
ಣ್ಬನ್ನೆಗಮೀ ತನುವನಿಟ್ಟುಕೊಂಡಾನಿರ್ದೆಂ ॥
ಇನ್ನೊಂದರೆಗಳಿಗೆಯ ಮಿಾ ।
ದೆನ್ನ ಕಳೇಬರಮನೀಕ್ಷಿಪುದುಮೆಂದಾಗಳ್ ॥ ೨೭ ॥

ನರತನುವಂ ಜಠರಾಗ್ನಿಯೊ ।
ಳುರಿಪಿಸಿ ಭರದಿಂದೆ ದಿವ್ಯರೂಪಂದಳೆದುಂ ॥
ಮಿರುಪ ವಿಮಾನಮನೇರ್ದುಂ ।
ಸರಿದಳ್ಮುನಿಲೋಕದೆಡೆಗೆ ಕೇಳ್ಮಾಣವಕಾ ॥ ೨೮ ॥

ನಡೆತಂದೆವಾ ಬಳಿಯಮಿಾ ।
ಪೊಡವಿಗೆ ವರಋಷ್ಯಮೂಕಸನ್ನಿಧಿಗಿಂದುಂ ॥
ಜಡಜಾಪ್ತಜನೆಲ್ಲಿರ್ಪಂ ।
ನುಡಿ ನೀಂ ತಿಳಿದಿರ್ದೊಡೆಮ್ಮೊಳೆಲೆ ಭೂದೇವಾ ॥ ೨೯ ॥

ಇಂತಾ ಲಕ್ಷ್ಮಣನೊರೆಯ ।
ಲ್ಸಂತೋಷದೊಳನಿಲಪುತ್ರನಾಗಳ್ಸೀತಾ ॥

ಕಾಂತನ ಚರಣಕೆ ವಂದಿಸಿ |
ತಾಂ ತಳ್ವದೆ ಪೇಳ್ದನಬ್ಜಪತ್ರಾಕ್ಷನೊಳಂ || ೩೦ ||
ಶ್ರುತಿಗಂ ಗೋಚರಿಸದ ಪದ |
ಶತಪತ್ರಮನಿಂದು ಕಂಡು ಪಾವನನಾದೆಂ ||
ಕೃತಪುಣ್ಯಮಲ್ಲದೆ ಜಗ |
ತ್ಪತಿ ತವ ದರ್ಶನಮದೆಂತು ಸುಲಭಮೆನಿಕ್ಕುಂ || ೩೧ ||
ಅವನಿಯ ಪೊರೆಯಂ ತಿರ್ದ್ದ |
ಲ್ಕವತರಿಪಂ ಪದ್ಮನಾಭನೆಂಬುದನರಿತೆಂ ||
ತವವಿಗ್ರಹಮನಭೀಕ್ಷಿಸಿ |
ತವೆ ಕಳಿಪಿದನೆನ್ನನಬ್ಜಸಖಸುಕುಮಾರಂ || ೩೨ ||
ಆತನ ಸಚಿವಂ ಮಾರುತ |
ಜಾತಂ ಹನುಮಂತನೆಂದು ಕರೆವರ್ತನ್ನಂ ||
ಮಾತೆಯೆನಗಂಜನಾಹ್ವಯೆ |
ತಾತಂ ಪ್ಲವಗೇಶನಪ್ಪ ಕೇಸರಿಯೆಂದಂ || ೩೩ ||
ವಾನರರವರೆಲ್ಲರ್ನೀಂ |
ಮಾನವನೆಂಬಂತೆ ತೋರ್ಪ ಕಾರಣಮೇನಯ್ ||
ವಾನರನೋ ಮಾನವನೋ |
ದಾನವನೋ ಪೇಳ್ವುದೆಮ್ಮೊಳೆಂದಂ ರಘುಜಂ || ೩೪ ||
ರಾಮನೆ ನೋಡೆಂದೆನುತಂ |
ವ್ಯೋಮುವನುರೆ ಸೋಂಕುವಂತೆ ಬಳೆಯಲ್ಕಾಗಳ್ ||
ರೋಮಾವಳಿಯೊಳ್ತಾರಾ |
ಸ್ತೋಮಂ ಬೆಳಗಿತ್ತು ಪುಷ್ಪಮಾಲೆಯ ತೆರದೊಳ್ || ೩೫ ||
ಪೊಳೆದಂ ಸೂರ್ಯಂ ನಾಭೀ |
ವಳಯದೊಳಂಗಾಂಗದಲ್ಲಿ ಗರರೆಸೆದಿರ್ದರ್ ||
ಪ್ರಳಯದ ರುದ್ರನೊ ಭೂಮಿಯ |
ನಳೆದ ತ್ರಿವಿಕ್ರಮನೊ ಎಂಬೊಲೆಸೆದಂ ಹನುಮಂ || ೩೬ ||
ಪಾಟಲವದನದೆ ನಭಮಂ |
ಮಿಾಟುತ್ತಿಹ ವಿಪುಲಲಂಬವಾಲದೆ ಗಂಗಾ ||
ಜೂಟಂ ತಾನೆಸಗಿದ ಕ |
ಟ್ಯಾಟದ ವಿಗ್ರಹವೊ ಎಂಬೊಲೆಸೆದಂ ಹನುಮಂ || ೩೭ ||

ಕಾಂಚನಗಿರಿನಿಭಕಾಯದ |
ಮಿಂಚುವ ಯಜ್ಞೋಪವೀತದುರುತರವಾಯಾ ||
ವಂಚನೆಗಳ್ಗದ ಚಿತ್ತದ |
ಪಂಚಬ್ರಹ್ಮಾತ್ಮರೂಪನೆಸೆದಂ ಹನುಮಂ || ೩೮ ||

ಕಂಗೊಳಿಸುವ ಕೌಪೀನದ |
ಪಿಂಗಳಲೋಚನದ ಬಾಲಚಂದ್ರೋಪಮದಂ ||
ಷ್ಶ್ರಂಗಳ ಮೇಘನಿನಾದದ |
ತುಂಗಪರಾಕ್ರಮದ ಹನುಮನೊಪ್ಪಿದನಾಗಳ್ || ೩೯ ||

ತಳತಳಿಸಿ ತೊಳತೊಳಗಿ ಬೆಳೆ |
ಬೆಳೆಯುತ್ತಂ ವೀರಶಾಂತ ರುಣಾದ್ಭುತದಿಂ ||
ಕಲಿಹನುಮಂ ಕಣ್ಗೆಸೆಯ |
ಲ್ಕಲಿತಮಹಾತೋಷದಿಂದೆ ಪೇಳ್ದಂ ರಾಮಂ || ೪೦ ||

ಸಾಕಯ್ ನಿನ್ನತ್ಯದ್ಭುತ |
ಮಾಕಾರಂ ನೀನೆ ರುದ್ರನಂಶೀಭೂತಂ ||
ಈ ಕಾಮರೂಪಮಂ ತವೆ |
ಲೋಕತ್ರಯದಲ್ಲಿ ಕಂಡುದಿಲ್ಲಯ್ ಹನುಮಾ || ೪೧ ||

ವಾಯುಕುಮಾರಕ ನಿನ್ನ ಸ |
ಹಾಯದಿನೆಮಗಪ್ಪ ಕಜ್ಜಮತಿ ಸುಲಭಮದಿ ||
ನ್ನಾಯಾಸಂ ತೊರೆದುದು ಕಪಿ |
ರಾಯನ ದರ್ಶನಮುಮಪ್ಪುದೆಂತಯ್ ಹನುಮಾ || ೪೨ ||

ಇಂತೆನೆ ರಾಘವನಾ ಹನು |
ಮಂತಂ ತಲೆವಾಗಿ ಬಿನ್ನವಿಸಿದಂ ಸೀತಾ ||
ಕಾಂತನೆ ಕೇಳಿನತನುಜಂ |
ಚಿಂತಾಪರನಾಗಿ ಶೈಲಗರ್ಭದೊಳಿರ್ಪಂ || ೪೩ ||

ಆ ತರಣಿಜನೆಡೆಗಂ ಬರ |
ಲಾತನ ದೆಸೆಯಿಂದೆ ನಿಮ್ಮ ಕಜ್ಜಮದಕ್ಕುಂ ||
ಆತಂಗೆ ಸೊಗಂ ಸಮನಿಪ |
ರೀತಿಯ ದಯೆಗೆಯ್ಯವೇಳ್ಕುಮೆಂದಂ ಹನುಮಂ || ೪೪ ||

ಲೇಸಂ ಪೇಳಿದೆ ಪರವೋ |
ಲ್ಲಾಸಂ ತಮಗಾಯ್ತು ಹನುಮ ಕೊಂಡುಯ್ಯೆಮ್ಮಂ ||

ಆ ಸುಗ್ರೀವನ ದರ್ಶನ |
ವಿಾ ಶುಭದಿನದಲ್ಲಿ ದೊರೆಗೆಯೆಂದಂ ರಾಮಂ || ೪೫ ||

ರಘುವರನಿಂತೆನೆ ಪವನನ |
ಮಗನತಿಭಯಭಕ್ತಿಯಿಂದಮಿರ್ವರನಾಗಳ್ ||
ಪೆಗಲಂ ಪತ್ತಿಸಿಕೊಂಡಾ |
ನಗಮಂ ತಾನೇರ್ದು ಮರನ ನೆಳಲಂ ಸಾರ್ದಂ || ೪೬ ||

ಮೆಲ್ಲನೆ ಕುಳ್ಳಿರಿಸುತೆ ನವ |
ಪಲ್ಲವಗಳನಾಯ್ದು ತಂದು ಪೀಠಮನಿತ್ತಂ ||
ಫುಲ್ಲಾಬ್ಜನಯನ ವಾನರ |
ವಲ್ಲಭನಿರ್ದೆಡೆಗೆ ಪೋದಪೆಂ ಕರೆತರ್ಪೆಂ || ೪೭ ||

ನೀವಿಲ್ಲಿರ್ಪುದೆನುತೆ ಸು |
ಗ್ರೀವನ ಸನ್ನಿಧಿಗೆ ಬಂದು ಕಯ್ಮುಗಿದೆಂದಂ ||
ಭೂವಲಯದ ಪೊರೆಯಿಳಿಪ |
ಲ್ಕಾ ವಿಷ್ಣುವೆ ಮನುಜನಾಗಿ ಬಂದಿಹನರಸಾ || ೪೮ ||

ನೀನನುಮಾನಂಗೆಯ್ಯದೆ |
ಭಾನುಕುಲೋದ್ಭವರ ಬಳಿಗೆ ಬಂದವರಂ ಸ ||
ನ್ಮಾನಿಪುದೆಂದೆನೆ ಮಾರುತಿ |
ತಾನಲಸದೆ ಬಳಿಗೆ ಬಂದು ಕಂಡಂ ರವಿಜಂ || ೪೯ ||

ದೇವ ನಿರಾಮಯ ನಿರ್ಮಲ |
ಭಾವಜಪಿತ ಭಕ್ತಪೋಷ ಭಾಗ್ಯಪ್ರದ ರಾ ||
ಜೀವಭವಾರ್ಚಿತ ಭಯಹರ |
ಪಾವನವಿಗ್ರಹನೆ ರಕ್ಷಿಸೆಂದೆಳ್ತಂದಂ || ೫೦ ||

ಜಯ ಸುಶ್ಯಾಮಲಗಾತ್ರನೆ |
ಜಯತು ಜಟಾವಲ್ಕಲಾನ್ವಿತನೆ ಶುಭಕರನೇ ||
ಜಯಜಯ ಸೀತಾರಮಣನೆ |
ಜಯಜಯ ರಘುರಾಮನೆಂದು ಮಣಿದಂ ರವಿಜಂ || ೫೧ ||

ಚರಣಾಂಭೋರುಹಕೆರಗಿದ |
ತರಣಿಜನಂ ನೆಗೆಪಿ ತಳ್ಕವಿಸಿ ನೇಹದೊಳಂ ||
ಪೊರೆಯೊಳ್ಕುಳ್ಳಿರಿಸುತೆ ರಘು |
ವರನಾತನ ಮೊಗಮನೀಕ್ಷಿಸುತ್ತಿಂತೆಂದಂ || ೫೨ ||

ಪಿತನಾಜ್ಞೆಯೊಳಂ ರಾಜ್ಯ |
ಚ್ಯುತಿಯಾದುದು ಬಂದೆವೈದೆ ವಿಪಿನಾಂತರಕಂ ||
ಸತಿಯಂ ನೀಗಿದನರ್ಯಮ |
ಸುತ ಕೇಳಾ ಬಟ್ಟೆವಿಡಿದು ಬರೆವರೆ ಬಳಿಕಂ || ೫೩ ||

ಇನಜನಿನಪ್ಪುದು ಕಜ್ಜಂ |
ಮನಗುಂದದೆ ಪೋಪುದಾತನೆಡೆಗೆಂದೆನುತಂ ||
ದನುಜ ಕಬಂಧಂ ಪೇಳ |
ಲ್ಕನುಜಾತಂಬೆರಸು ಬಂದೆನೀ ಗಿರಿತಟಕಂ || ೫೪ ||

ರವಿಸಂಭವ ನಿನ್ನಂ ನೋ |
ಡುವುದೆಂತೆಂದೈದೆ ಯೋಚಿಸುತ್ತಿರ್ಪಾಗಳ್ ||
ಪವನಜನತ್ತಣಿನಾದುದು |
ತವದರ್ಶನಮಿನ್ನುಮಪ್ಪುದಂ ನೀಂ ಬಲ್ಲಯ್ || ೫೫ ||

ಇನಕುಲಭವರಾಂ ನೀನಾ |
ತನಪುತ್ರಂ ನೋಳ್ಪೊಡದುವೆ ಕಾರಣದಿಂದಂ ||
ಅನುಜಾಗ್ರಜಸಂಬಂಧಂ |
ಘನಮಿರ್ಕ್ಕುಂ ನಿನ್ನೊಳೆನ್ನೊಳವನೀತಳದೊಳ್ || ೫೬ ||

ಶ್ರೀರಾಮನೆಂದ ಮೃದುತರ |
ಭಾರತಿಯಂ ಕೇಳ್ದು ಭಕ್ತಿಭಾವದೆ ರವಿಜಂ ||
ವೀರಂ ದೇವರನುಜ್ಞೆಯ |
ನಾರಯ್ದಾಲಿಸುಗುಮೆನ್ನ ವಾಣಿಯನೆಂದಂ || ೫೭ ||

ಅಗ್ರಜವಾಲಿಯ ಭಯದೆ ಸ |
ಮಗ್ರೈಶ್ವರ್ಯಮನದೆಲ್ಲಮಂ ಬಿಟ್ಟೀ ಶೈ ||
ಲಾಗ್ರದೊಳಾನಿರೆ ದೈತ್ಯದ |
ಶಗ್ರೀವಂ ಭೂಮಿಸುತೆಯನುಯ್ವೀಯೆಡೆಯೊಳ್ || ೫೮ ||

ಶ್ರೀರಾಮರಾಮನೆನುತಂ |
ನಾರೀಮಣಿ ಪಲುಬುತ್ತೈದೆ ಭೂಷಂಗಳನುಂ ||
ಸೀರೆಯ ಸೆರಗಿನೊಳಂ |
ಕಟ್ಟೀ ರಸೆಗಂ ಬಿಸುಟು ಪೋದಳದನೇವೇಳ್ವೆಂ || ೫೯ ||

ಕುರುಪಂ ನೋಳ್ಪುದು ನೀವಾ |
ತರುಣಿಯ ಭೂಷಣಮಿದೆಂದು ಮುಂದಿಡೆ ಸೀತಾ ||

ವರನೀಕ್ಷಿಸಿ ದುಖ್ಖಮನಾಂ |
ತಿರೆ ರವಿಜಂ ಸಂತವಿಟ್ಟು ಮತ್ತಿಂತೆಂದಂ || ೬೦ ||

ಇಳೆಯಾತ್ಮಜೆಯೆಂಬುದನಾಂ |
ತಿಳಿದಿರ್ದ್ದೊಡೆ ಕಳ್ಳನಪ್ಪ ಖಳನಂ ಕ್ಷಣದೊಳ್ ||
ಕೊಲುತಿರ್ದ್ದೆನಾದ ಕಜ್ಜ |
ಕ್ಕಳಲುವುದೇಕಿನ್ನು ನೋಡು ಮತ್ಸಾಹಸಮಂ || ೬೧ ||

ಏಸರವನಾ ಖಳಂ ಧರ |
ಣೀಶನೆ ತವ ಕೃಪೆಯೊಳಸುರನಸುವಂ ಸೆಳೆವೆಂ ||
ಭೂಸುತೆ ತಾಂ ಬಂದಪಳೆನು |
ತಾ ಸೂರ್ಯಕುಮಾರನೆಂದೊಡೆಂದಂ ರಾಮಂ || ೬೨ ||

ಇನಸುತ ನೀನತಿಸಾಹಸಿ |
ಯೆನುತಂ ತಾನಿಲ್ಲಿಗೈದೆ ಬಂದಿರ್ಪೆಂ ಮ ||
ದ್ವನಿತೆಯ ಭೂಷಣಗಳನರ |
ಮನೆಯೊಳಗಿಟ್ಟಾಕೆ ಬರ್ಪೊಡಿತ್ತಪುದನಘಾ || ೬೩ ||

ವಾಲಿಯ ಭಯದಿಂದಂ ಘನ |
ಶೈಲದೊಳಾನಿರ್ಪೆನಾತನಗ್ರಜನೆಂದುಂ ||
ಪೇಳಿದೆ ನೀನಾರವನಾ |
ರಾಲಸ್ಯಂಗೆಯ್ಯದೆಮ್ಮೊಳುಸಿರೆನಲೆಂದಂ || ೬೪ ||

ಅವಧರಿಸು ದೇವ ಸರಸಿಜ |
ಭವನಾನಂದಾಶ್ರುಬಿಂದುವಿಂ ಜನಿಸಿದನಯ್ ||
ಪ್ಲವಗಪತಿ ಋಕ್ಷರಾಜಂ |
ಭುವನೈಕಸಮರ್ಥನಾತನವನೀತಳದೊಳ್ || ೬೫ ||

ಚರಿಸುತಮಿರಲೊಂದು ದಿನಂ |
ಕರಮೊಪ್ಪುವ ಕೂಪದಲ್ಲಿ ನೀರ್ಗುಡಿವೆಡೆಯೊಳ್ ||
ಪರಿಶೋಭಿಸೆ ನಿಜಬಿಂಬಂ |
ಹರಿನಾಥಂ ಶತ್ರುವಿರ್ಪನೆಂದಿಳಿದನಣಂ || ೬೬ ||

ನೀರೊಳ್ಮುಳುಂಗಲಾ ಕಪಿ |
ನಾರಿಯ ರೂಪಾಂತು ತಡಿಗೆ ಬಂದಿರೆ ಸುರಪಂ ||
ಮಾರನ ಶರಹತಿಯಿಂದಂ |
ಧಾರಿಣಿಗೆಳ್ತಂದು ರಮಿಸೆವೇಳ್ಕೆಂಬಾಗಳ್ || ೬೭ ||

ಸ್ಖಲಿತಮದಾಗಿರೆ ವೀರ್ಯಂ ।
ಚಲಿಸುತ್ತುಂ ವಾಲದೇಶದೊಳೆ ತತ್ಕ್ಷಣದೊಳ್ ॥
ಪ್ರಳಯದ ರುದ್ರನೊ ಎಂಬಂ ।
ತುಲಿಯುತೆ ಸಂಜಾತನಾದನನುಪಮರೂಪಂ ॥ ೧೮ ॥

ವಾಲಪ್ರದೇಶದೊಳೊಗೆಯೆ ।
ವಾಲಿಯುಮೆಂದೆಂಬ ನಾಮಮಾದುದು ಸುರಪಂ ॥
ಬಾಲನನೀಕ್ಷಿಸಿ ಕಾಂಚನ ।
ಮಾಲೆಯನಿತ್ತೈದೆ ಪೋದನಮರಾವತಿಗಂ ॥ ೧೯ ॥

ತಾವರೆಗೆಳೆಯಂ ಬಂದಾ ।
ಭಾವಕಿಯಂ ಸೋಂಕಲಾಯ್ತು ವೀರ್ಯಸ್ಖಲನಂ ॥
ಗ್ರೀವಾದೇಶದೊಳಂ ಸು ।
ಗ್ರೀವಾಖ್ಯೆಯೊಳುದ್ಭವಿಸಿದೆನರ್ಯಮನಿಂದಂ ॥ ೨೦ ॥

ಕರುಣದೊಳೆನ್ನಂ ಸೂರ್ಯಂ ।
ಕರೆದೆಂದಂ ತಾತನಾದ ಕಾರಣಮೆನಗಂ ॥
ಹರಿ ಕೃಪೆಗೆಯ್ವಂ ಮುಂದೀ ।
ಹರಿಕುಲಕಂ ನಾಥನಾಗಿ ರಂಜಿಪೆ ಧರೆಯೊಳ್ ॥ ೨೧ ॥

ನಿನಗೆ ಸಹಾಯಿ ಸದಾಗತಿ ।
ತನಯಂ ಮತಿವಂತನಮಲನನುಪಮಚರಿತಂ ॥
ಘನಶೌರ್ಯಾನ್ವಿತನೆಂದೀ ।
ಹನುಮನನೆನಗಿತ್ತು ಪೋದನಂಬುಜಮಿತ್ರಂ ॥ ೨೨ ॥

ದಿನವೊಂದಾಗಲ್ಬಳಿಕಂ ।
ವನಿತಾಕೃತಿ ಪೋಗೆ ಋಕ್ಷರಾಜಂ ಭರದಿಂ ॥
ವನಜಾಸನಸನ್ನಿಧಿಗೆ ।
ಮ್ಮನುಮೊಡಗೊಂಡೈದೆ ಪೋಗಿ ವಂದಿಸಿ ನಿಂದಂ ॥ ೨೩ ॥

ಸುತ ನೀನೇತಕೆ ಚಿಂತಿಪೆ ।
ಸುತರಯ್ ನಿನಗಿರ್ವರಿನ್ನು ವರಕಿಷ್ಕಿಂಧಾ ॥
ಕ್ಷಿತಿಧರದೊಳ್ಪುರಮಂ ಗೆ ।
ಯ್ದತುಳಿತ ಕಪಿಗಳ್ಗೆ ನಾಥನಾಗೆಂದನಜಂ ॥ ೨೪ ॥

ವಿಧಿಯಂ ಬೀಳ್ಕೊಂಡಾ ಕ್ಷಣ ।
ಮುದಿತಮಹಾತೋಷದಿಂದೆ ಕಿಷ್ಕಿಂಧಾಭೂ ॥

ಮಿಧರಕ್ಕಂ ನಡೆತಂದಂ ।
ಪದುಳದೊಳಾ ಋಕ್ಷರಾಜನನುಪಮತೇಜಂ ॥ ೭೫ ॥

ಅನಿಮಿಷರೋಜಂ ಮಾಡಿದ ।
ಘನತರಪತ್ತನದೊಳ್ಳೈದೆ ವಾನರಪತಿ ತಾ ॥
ನೆನಿಸಿರ್ದು೯ಂ ಬಳಿಕೆನ್ನ ।
ಣ್ಣನ ವಶಮಂ ಮಾಡಿ ಪೋದನಾತಂ ತಪಕಂ ॥ ೭೬ ॥

ದೊರೆತನಮಗ್ರಜಗಾಗಳ್ ।
ಪರಿತೋಷದೊಳಾತನೊಡನೆ ಸುಖದಿಂದಿರ್ದ್ದೆಂ ॥
ಪರಿಣಯಮಾಯ್ತುರ್ವರ್ಗಂ ।
ಸುರಸಂತತಿ ಮೆಚ್ಚುವಂತೆ ಬಾಳ್ದೆಂ ರಘುಜಾ ॥ ೭೭ ॥

ದುಂದುಭಿಯ ಮಗಂ ತಾಂ ನಡೆ ।
ತಂದುಂ ಯುದ್ಧದೆ ಪಲಾಯನಂಗೆಯ್ಯಲಣಂ ॥
ಇಂದಿರನಣುಗಂ ಕೋಪದೊ ।
ಳಂ ದೈತ್ಯನನಟ್ಟಿ ಕೊಲ್ವೊಡುದ್ಯೋಗಿಸಿದಂ ॥ ೭೮ ॥

ಆ ದೈತ್ಯಂ ಬಿಲಮಂ ಪುಗೆ ।
ಕಾದಿರ್ನೀನೆಂದುಮೆನಗೆ ನೇಮಮನಿತ್ತುಂ ॥
ಕ್ರೋಧದೊಳಗ್ರಜನಾಗಳ ।
ಗಾಧದ ತದ್ಬಿಲಮನಂದು ಪೊಕ್ಕಂ ಬಿಡದೊಲ್ ॥ ೭೯ ॥

ಕೆಲವು ದಿನಮಾಗಲಣ್ಣನ ।
ಪೊಲಬುಂ ಕಾಣಿಸದೆ ರಕ್ತಬಿಂದುವೆ ಸೂಸ ॥
ಲ್ಕಳಿದಂ ಸೋದರನೆನ್ನುವ ।
ನುಳಿಸಂ ಖಳನೆನುತೆ ಮುಚ್ಚಿದೆಂ ತದ್ಬಿಲಮಂ ॥ ೮೦ ॥

ಚಿತ್ತವಿಸು ದೇವ ಬಳಿಕಾಂ ।
ಪತ್ತನಕೆಳ್ತಂದು ಬಂಧುಗಳ್ಗೀ ಹದನಂ ॥
ಬಿತ್ತರಿಸಿ ತನ್ಮತದೊಳಿರ ।
ಲತ್ತಂ ಪೊರಮಟ್ಟನಿಂದ್ರತನುಜಂ ಬಿಲಮಂ ॥ ೮೧ ॥

ಬಿಲಕಂ ಸಾರ್ಚಿದ ಘನತರ ।
ಶಿಲೆಯಂ ನೆಗ್ಗೊತ್ತಿ ದೈತ್ಯನಸುವಂ ಭರದಿಂ ॥
ಸೆಳೆದುಂ ತಾನೆಳ್ತಂದಂ ।
ಪೊಳಲೆಡೆಗಂ ಕೋಪದಿಂದೆ ಪುರುಹೂತಸುತಂ ॥ ೮೨ ॥

ಅಗ್ರಜನಂ ಕಂಡಾನತಿ ।
ಶೀಘ್ರದೆ ತತ್ಪದಕೆ ಮಣಿಯಲಾಕ್ಷಣಮೆನ್ನಂ ॥
ನಿಗ್ರಹಿಸಲ್ಬರೆ ಭಯದಿಂ ।
ವಿಗ್ರಹಮಂ ನಿಲಿಸಿಕೊಂಡೆನೀ ಶೈಲದೊಳಂ ॥ ೮೩ ॥

ಅವನತಿಬಲಿಷ್ಠನವಗಂ ।
ಭುವನಗಳೊಳ್ಪಾಂಗೆನಿಪ್ಪ ಭಟರಂ ಕಾಣೆಂ ॥
ಯುವತಿಯನಪಹರಿಸಿದನೀ ।
ಬವಣೆಯನುರೆ ತೀರ್ಚಲ್ಕದುಂಟೆ ಜಗತೀತಳದೊಳ್ ॥ ೮೪ ॥

ಏವೇಳ್ವೆನರಸ ಮದ್ದುಃ ।
ಖಾವಳಿಯಂ ಹನುಮಮುಖ್ಯವಾನರರಿರೆ ನಾಂ ॥
ಜೀವಿಸಿಹೆನೆಂದು ಸಲೆ ಸು ।
ಗ್ರೀವಂ ಪೇಳಲ್ಕೆ ದಾಶರಥಿಯಿಂತೆಂದಂ ॥ ೮೫ ॥

ಬರಲೇನಸಾಧ್ಯಮಾತಂ ।
ಗಿರಿಗಂ ನೀನಾರ ಬಲದೊಳಿಲ್ಲಿರ್ದಪೆಯಯ್ ॥
ತರಣಿಜ ಬಿತ್ತರಿಸೆನೆ ರಘು ।
ವರಗಂ ಸುಗ್ರೀವನೆಂದನಾ ವಿವರಗಳಂ ॥ ೮೬ ॥

ದುಂದುಭಿಯೆಂಬ ಖಳಂ ತಾ ।
ನೊಂದು ದಿನಂ ಬಂದು ಮಹಿಷರೂಪದೊಳಂ ಕಿ ॥
ಷ್ಕಿಂಧಾದ್ರಿಯೊಳುದ್ಘರ್ಜಿಸೆ ।
ಬಂದವನಾರೆಂದು ಪೊರಟನಿಂದ್ರಾತ್ಮಭವಂ ॥ ೮೭ ॥

ಕೋಣನ ರೂಪಿನ ಖಳನಂ ।
ಕಾಣುತಮತಿರೋಷದಿಂದೆ ಪಿಡಿದೆಳೆದಾಗಳ್ ॥
ಗೋಣಂ ಮುರಿದಿಡಲಸುರನ ।
ಶೋಣಿತಮುರೆ ಸೂಸಿದತ್ತು ಗಿರಿಶಿಖರದೊಳಂ ॥ ೮೮ ॥

ಈ ಗಿರಿ ಮತಂಗನಾಶ್ರಮ ।
ಮಾಗಿರೆ ತತ್ಖಳನ ರುಧಿರಮಾ ಮುನಿಯೆಡೆಯೊಳ್ ॥
ಮೇಘಂ ವರ್ಷಿಸಿತೆಂಬಂ ।
ತಾಗಲ್ಮುನಿ ಕೋಪದಿಂದೆ ಶಾಪಮನಿತ್ತಂ ॥ ೮೯ ॥

ಆರತ್ತಣಿನಾಯಿತ್ತಾ ವಾಲ್ಯ ।
ಪಾರಂ ಬಂದಪ್ಪುದಾತನೀ ಪರ್ವತಮಂ ॥

ಸಾರಲ್ಕೆ ಮರಣವೆಂದೆನು ।
ತಾ ರಿಸಿ ತಾಂ ಪೇಳ್ದ ಕತದೆ ಬರಲಮ್ಮನವಂ ॥ ೯೦ ॥

ಮುನಿನಾಥನ ಕೃಪೆಯಿಂದಂ ।
ತನುಮಾತ್ರಂ ಜೀವಿಸಿರ್ಪೆನೆನ್ನಂ ನೀಂ ಪಾ ॥
ವನವಿಗ್ರಹ ಪಾಲಿಪುದೆಂ ।
ದೆನುತಂ ರವಿಸೂನು ರಾಮನಂಘ್ರಿಗೆ ಮಣಿದಂ ॥ ೯೧ ॥

ಪದಕೆರಗಿದ ಶಾಖಾಮೃಗ ।
ದಧಿಪತಿಯಂ ಸಂತವಿಟ್ಟು ಸೀತಾನಾಥಂ ॥
ಬೆದರದಿರಿಂದ್ರಾತ್ಮಜನಂ ।
ಸದೆವೆಂ ಶರಮೊಂದರಿಂದಮೀಕ್ಷಿಪುದೆಂದಂ ॥ ೯೨ ॥

ತ್ರಿದಶೇಶಾತ್ಮಜನಂ ಕೊ ।
ಲ್ವುದು ನಿಶ್ಚಯಮಾದೊಡೀವುದಭಯಮನೆನಗಂ ॥
ಹೃದಯಂ ಸಂಚಲಿಪುದು ನೀಂ ।
ಸದಮಲ ದಯೆಗೆಯ್ಯುವೇಳ್ಗುಮೆಂದಂ ರವಿಜಂ ॥ ೯೩ ॥

ರವಿಜನ ನುಡಿಗೇಳ್ದುಂ ರಾ ।
ಘವನತಿಸಂತೋಷಚಿತ್ತನಾಗಿ ಪವನಸಂ ॥
ಭವನಂ ನೋಡಲ್ಕಾತಂ ।
ಜವದಿಂದಂ ಶಿಖಿಯನ್ನೈದೆ ಹುತಿಗೊಳಿಯಿಸಿದಂ ॥ ೯೪ ॥

ಹನುಮಂತನದೇಂ ಪ್ರಾಜ್ಞನೊ ।
ಮನದಿಂಗಿತಮಿಂತು ತಿಳಿಯೆ ಚಿತ್ರಮೆನುತ್ತಂ ॥
ಬಿನದದೆ ವಾನರರಿರೆ ರವಿ ।
ತನಯಂಗಿಂತೆಂದನಗ್ನಿಸಾಕ್ಷಿಯೊಳರಸಂ ॥ ೯೫ ॥

ಸುರಪನ ಸುತನಂ ಕೊಂದೀ ।
ಪುರಮಂ ನಿನಗಿತ್ತು ಪೊರೆವೆನಿದಕಾ ವೈಶ್ವಾ ॥
ನರನೇ ಸಾಕ್ಷಿಯೆನುತ್ತಂ ।
ಕರದಿನೆ ನಂಬುಗೆಯನಿತ್ತನಬ್ಜದಳಾಕ್ಷಂ ॥ ೯೬ ॥

ಹರಿಸದೆ ರವಿಪುತ್ರಂ ರಘು ।
ವರಗೆಂದಂ ದೇವ ನಿನಗೆ ಸಾಹಾಯ್ಯಗಳಂ ॥
ವಿರಚಿಸಿ ತವಪದಸೇವಾ ।
ಪರನಾಗುವೆನಿದಕೆ ವಹ್ನಿ ಸಾಕ್ಷಿಕನಪ್ಪಂ ॥ ೯೭ ॥

ಸಂದೆಗಮಿನ್ನೊಂದಿರ್ಪುದು ।
ದುಂದುಭಿಯೆಂಬಸುರನಟ್ಟೆ ಇಲ್ಲಿರ್ಪುದದಂ ॥
ಪೊಂದಿಸಿದಾತಂ ಸುರಪನ ।
ನಂದನನಂ ಕೊಲ್ವನೆಂದು ನಂಬುವೆನಾನುಂ ॥ ೯೮ ॥

ಎನಲಾಗಳ್ನಸುನಗುತಂ ।
ಮನುಜೇಶಂ ಬಂದು ನಿಂದು ತುದಿಯುಂಗುಟದೊಳ್ ॥
ದನುಜನ ಶಿರಮಂ ದಶಯೋ ।
ಜನದತ್ತಲ್ಪಿ ಸುಡೆ ಸೂರ್ಯಸುತನಿಂತೆಂದಂ ॥ ೯೯ ॥

ಪರಿಕಿಸಲಾನೇಸರವಂ ।
ಸುರಪನ ಸುತನತಿಬಲಿಷ್ಟನೆಂಬುರುಭಯದಿಂ ॥
ದೊರೆವೆಂ ಚಿತ್ತದೆ ಕಿನಿಸಂ ।
ತರದಾಲಿಪುದೆನ್ನ ಬಿನ್ನಪಮನಿನ್ನೊಂದಂ ॥ ೧೦೦ ॥

ತಾಲಗಳೇಳನುವೊಂದೇ ।
ಕೋಲಿಂ ಕಡಿದಾತನಣ್ಣನಂ ಕೊಲಲಾರ್ಪಂ ॥
ನೀಲನಿಭಾಂಗನೆ ಸದ್ಗುಣ ।
ಶೀಲನೆ ಕೃಪೆಗೆಯ್ಯೆ ನೋಳ್ಪೆನೆಂದಂ ರವಿಜಂ ॥ ೧೦೧ ॥

ತರಣಿಜನಿಂತೆನಲನುಜನ ।
ಕರದಿಂ ಕಯ್ಕೊಂಡು ದಿವ್ಯಶರಚಾಪಗಳಂ ॥
ಭರದಿಂ ಶರವೊಂದಂ ಬಿಡೆ ।
ತರುಕುಲಮುಂ ತರಿದು ಮರಳಿ ನಿಂದುದು ದೊಣೆಯೊಳ್ ॥೧೦೨॥

ಏನತಿಚಿತ್ರಮೊ ಶರಸಂ ।
ಧಾನಚಮತ್ಕಾರಮೆನಗಗೋಚರಮಾಯ್ತೆಂ ॥
ದಾನಂದಭರಿತನಾಗುತೆ ।
ಭಾನುಸುತಂ ನಮಿಸಲಾತಗೆಂದಂ ರಘುಜಂ ॥ ೧೦೩ ॥

ದೃಢಮಾಗದಿರಲ್ಕಿನಗೆ ।
ನ್ನೊಡಲಂ ತೋರ್ದಪ್ಪೆನೆಂದು ವಿಶ್ವಾಕೃತಿಯಿಂ ॥
ನಡುಕಂಗೊಳ್ಳದಿರೆನುತಂ ।
ಕಡುಸಂತಸದಿಂದೆ ದಿವ್ಯದೃಷ್ಟಿಯನಿತ್ತಂ ॥ ೧೦೪ ॥

ಸುರುಚಿರದಿವ್ಯಾಂಬಕದಿಂ ।
ಸರಸಿಜಭವವಿಷ್ಣುಶಂಕರೇಂದ್ರಾತ್ಮಕನಂ ॥

ಕರುಣಾಸಾಗರನಂ ಭಾ ।
ಸ್ಕರತೇಜೋಮಯನನೀಕ್ಷಿಸಿದನಾ ರವಿಜಂ ॥ ೧೦೫ ॥

ದಶಶತಮಸ್ತಕದಿಂದಂ ।
ದಶಶತಲೋಚನಗಳಿಂದೆ ದಶಶತಮುಖದಿಂ ॥
ದಶಶತಬಾಹುಗಳಿಂ ಮೇಣ್ ।
ದಶಶತಪಾದಂಗಳಿಂದಮೊಪ್ಪಿರೆ ಕಂಡಂ ॥ ೧೦೬ ॥

ಅರಿದರಖೇಟಕಡಮರುಕ ।
ಶರಕಾರ್ಮುಕಖಡ್ಗಪರಶುಮುಸಲಗದಾಮು ॥
ದ್ಗರವಜ್ರಕುಂತಪಟ್ಟಿಶ ।
ಪರಿಘಾದ್ಯಾಯುಧದೆ ರಂಜಿಸುತ್ತಿರೆ ಕಂಡಂ ॥ ೧೦೭ ॥

ಶತಕೋಟಿರುದ್ರಬೊಮ್ಮರ್ ।
ಶತಕೋಟಿರಮೇಶರಿಂದ್ರಮುಖದಿಕ್ಪತಿಗಳ್ ॥
ಪ್ರಥಿತನವಗ್ರಹತಾರಾ ।
ತತಿಯಂಗೋಪಾಂಗದಲ್ಲಿ ಶೋಭಿಸೆ ಕಂಡಂ ॥ ೧೦೮ ॥

ಸುರಸಿದ್ಧಸಾಧ್ಯಮನುಮುನಿ ।
ಗರುಡೋರಗಯಕ್ಷಖಚರಕಿನ್ನರವಿದ್ಯಾ ॥
ಧರಗಂಧರ್ವಾಪ್ಸರಕಿಂ ।
ಪುರುಷಾದ್ಯರ್ ರೋಮಕೂಪಗಳೊಳಿರೆ ಕಂಡಂ ॥ ೧೦೯ ॥

ಸೋಮರವಿದ್ಯುತಿಹೋತ್ರ ।
ಸ್ತೋಮಮೆ ಖನಿಯಾಗಿ ತೋರುತಿರ್ಪುದೊ ಬಳಿಕಂ ॥
ತಾಮಸರಾಜಸಸಾತ್ತ್ವಿಕ ।
ಧಾಮಮೊ ತಾನೆಂಬ ಪರಿಯೊಳೆಸೆಯಲ್ಕಂಡಂ ॥ ೧೧೦ ॥

ರವಿಶಶಿಶಿಖಿಗಳನೇಕಂ ।
ಭುವನಂಗಳನೇಕಮನಿಲವಸುಗಳನೇಕಂ ॥
ದಿವವೃಕ್ಷಂಗಳನೇಕಮು ।
ಮವಿರಳಮೃಗಪಕ್ಷಿನಿಚಯಮೆಸೆದಿರೆ ಕಂಡಂ ॥ ೧೧೧ ॥

ನಾನಾವರ್ಣಗಳಿಂದಂ ।
ನಾನಾಭೂಷಂಗಳಿಂದಮದ್ಭುತಮೆನಿಸಲ್ ॥
ನಾನಾರೂಪಂ ಧರಿಸುತೆ ।
ನಾನಾರೀತಿಯೊಳೆ ರಾಜಿಸುತ್ತಿರೆ ಕಂಡಂ ॥ ೧೧೨ ॥

ನುತಿಸುವ ನಿಗಮಾಗಮಸಂ ।
ತತಿಯಿಂ ಸಲೆ ಪಾಡುತಿರ್ಪ ವಿದ್ಯಾಧರರಿಂ ॥
ನತಿಸುವ ಯತಿಸಂಕುಲದಿಂ ।
ದತುಳಿತವಾದ್ಯಂಗಳಿಂದೆ ಮೆರೆಯಲ್ಕಂಡಂ ॥ ೧೩ ॥

ನದಿಗಳ್ಭರದಿಂ ಪರಿತಂ ।
ದುದಧಿಯನೊಳವುಗುವ ತೆರದೊಳಸುರಾನೀಕಂ ॥
ಕದಕದಿಸುತ್ತುಂ ವೇಗದೆ ।
ವದನಗಳೊಳ್ಪುಗುತಮಿರ್ಪುದಂ ಕಂಡನಣಂ ॥ ೧೪ ॥

ಬಲೆಯೊಳ್ಸಿಲ್ಕಿದ ಮೃಗಸಂ ।
ಕುಲದೊಲ್ದಶಕಂಠಕುಂಭಕರ್ಣಾಸುರಪಜಿ ॥
ತ್ಕಲಿವಾಲಿಗಳುರುರದನಂ ।
ಗಳ ಮಧ್ಯದೊಳೈದೆ ಸಿಲ್ಕಿ ನವೆಯಲ್ಕಂಡಂ ॥ ೧೫ ॥

ವಾನರರೊಂದೆಡೆಯೊಳ್ಸು ।
ಮ್ಮಾನದೆ ನಲಿಯುತ್ತುಮಿರ್ಪುದಂ ಕೆಲಬಲದೊಳ್ ॥
ದಾನವನಿಚಯಂ ಬಾಣವಿ ।
ತಾನದೆ ಮಡಿಯುತ್ತುಮಿರ್ಪುದಂ ಮಿಗೆ ಕಂಡಂ ॥ ೧೬ ॥

ಶ್ರುತ್ಯಾವಳಿಗಂ ಕಾಣದ ।
ನಿತ್ಯಾತ್ಮನನೈದೆ ಕಂಡೆನೆನುತಂ ಮುದದಿಂ ॥
ದತ್ಯದ್ಭುತರೂಪಮನಾ ।
ದಿತ್ಯಾತ್ಮಜನೀಕ್ಷಿಸುತ್ತೆ ವಿಸ್ಮಿತನಾದಂ ॥ ೧೭ ॥

ಬಲವಂದೊಯ್ಯನೆ ತತ್ಪದ ।
ನಳಿನಂಗಳ್ಗೆರಗಿ ನಿಂದು ಕಯ್ಮುಗಿದು ಮಹೋ ॥
ತ್ಪಲರಿಪುವಂ ಕಂಡಂಬುಧಿ ।
ಯೊಲೆ ಸಂತಸದಿಂದೆ ರವಿಸುತಂ ನುತಿಗೆಯ್ದಂ ॥ ೧೮ ॥

ದೇವ ಪರಬ್ರಹ್ಮಾತ್ಮಕ ।
ದೇವ ನಿರಾಕಾರ ಮಹಿಮ ಸಾಕಾರ ಮಹಾ ॥
ದೇವ ನಿರಂಜನ ನಿರುಪಮ ।
ದೇವಾಧಿಪವಂದ್ಯಚರಣ ಶರಣಾಗೆಂದಂ ॥ ೧೯ ॥

ಮೃಡಕಮಲಭವಾದ್ಯರ್ನಿ ।
ನ್ನಡಿಯಂ ಸಲೆ ಕಾಣದಿರಲ್ಕಾನೇಸರವಂ ॥

ಜಡಮತಿ ಮೇಣಾಂ ಪ್ಲವಗಂ ।
ನುಡಿವೆನದೆಂತೆನ್ನ ಪುಣ್ಯದಳತೆಯನೆಂದಂ ॥ ೧೨೦ ॥

ನಿನ್ನಯ ಮಾಯೆಯ ವಶದಿಂ ।
ನಿನ್ನಡಿಯಂ ಕಾಣದೈದೆ ತೊಳಲುತೆ ಲೋಕಂ ॥
ಬನ್ನಂಬಡುತಿರ್ಪುದು ದೇ ।
ವೋನ್ನತ ಕೃಪೆಗೆಯ್ದುದೆನಗೆ ಚಿತ್ರಮಿದೆಂದಂ ॥ ೧೨೧ ॥

ಭರದಿಂದಂ ಮೃತ್ತಿಕೆಯಂ ।
ತರಲೊಂದೆಡೆಯಲ್ಲಿ ನೆಲನನಗೆಯಲ್ಕಾಗಳ್ ॥
ದೊರೆದಾ ದ್ರವ್ಯದೊಲಾದುದು ।
ಕರುಣಾಕರ ನಿನ್ನ ಪಾದದರ್ಶನಮೆಂದಂ ॥ ೧೨೨ ॥

ಸತಿಸುತಸೋದರಮಿತ್ರ ।
ಕ್ಷಿತಿಧನಪಶ್ವಾದಿ ವಸ್ತುವೆಲ್ಲಂ ಮಾಯಾ ॥
ಕೃತಮೆಂದಾಂ ತಿಳಿದೆಂ ಭೂ ।
ಸುತೆಯರಸನೆ ನಿನ್ನ ಕೃಪೆಯೊಳೆಂದಂ ರವಿಜಂ ॥ ೧೨೩ ॥

ಜಡಮತಿಯಿಂದಂ ನಿನ್ನೊಳ್ ।
ಪಡಿಸಣಮಂ ಗೆಯ್ದೆನ್ನೈದೆ ತದ್ದ್ರೋಹಮನಿ ॥
ನ್ನೊಡಲೊಳಗಿಡದೆನ್ನಂ ಕ ।
ಯ್ವಿಡಿದುದ್ಧರಿಸಬ್ಜಲೋಚನನೆ ನೀನೆಂದಂ ॥ ೧೨೪ ॥

ನಿನ್ನದ್ಭುತಮಂ ನೆರೆ ಕಂ ।
ಡೆನ್ನಸು ನಡುಗುತ್ತಲಿರ್ಪುದತಿಭಯದಿಂ ಸಂ ॥
ಪನ್ನನೆ ನತಪರಿಪೋಷನೆ ।
ಮುನ್ನಿನ ಸಿರಿರೂಪನಾಂತು ರಕ್ಷಿಪುದೆಂದಂ ॥ ೧೨೫ ॥

ಜಯಜಯ ಜಗದಾಧಾರಾ ।
ಜಯಜಯಜಯ ನಿರುಪಮಾಂಗ ದೇವೋತ್ತುಂಗಾ ॥
ಜಯಜಯ ಕರುಣಾಸಾಗರ ।
ಜಯಜಯ ಪರವಿಷ್ಣು ಎಂದು ಮಣಿದಂ ರವಿಜಂ ॥ ೧೨೬ ॥

ಬಿಸುಗದಿರನ ಮಗನುಂ ನುತಿ ।
ಯಿಸಿ ಚರಣಾಂಭೋಜದಲ್ಲಿ ಕೆಡೆದಿರೆ ರಾಮಂ ॥
ಪಸರಿಪ ವಿಶ್ವಾಕೃತಿಯಂ ।
ಬಸಿರೊಳ್ತೀವಿಟ್ಟು ಮುನ್ನಿನಂತೆಸೆದೆಂದಂ ॥ ೧೨೭ ॥

ಭಾನುತನುಜ ಕೇಳ್ದಂಭದೆ |
ದಾನತಪೋಯೋಗಯಜ್ಞಮಂ ಮಾಡಿದೊಡಂ ||
ಆನೊಪ್ಪೆಂ ಸಾತ್ವಿಕಸು |
ಜ್ಞಾನದೊಳಿರ್ದೆನ್ನನೈದೆ ನೆನೆವಂಗೊಲಿವೆಂ || ೧೨೮ ||

ನಿಜಭಕ್ತನಾದ ಕಾರಣ |
ಮಜರುದ್ರೇಂದ್ರಾದಿಗಳ್ಗೆ ತೋರದ ರೂಪಂ ||
ಸುಜನೋತ್ತಂಸನೆ ತೋರ್ದೆಂ |
ಭಜಕರ್ಗಂ ಭಜಕನೆಂಬ ನೇಹದೊಳನಘಾ || ೧೨೯ ||

ಇನ್ನೀಂ ಭಯಗೊಳ್ಳದೆ ನಡೆ |
ದೆನ್ನಾಜ್ಞೆಯೊಳಣ್ಣನೊಡನೆ ಯುದ್ಧಂಗೆಯ್ಗುಂ ||
ಬನ್ನಂ ಬಾರದು ಬಂದೊಡ |
ಮುನ್ನತಶರದಿಂದೆ ತರಿವೆನಾ ಕಪಿವರಸಂ || ೧೩೦ ||

ರಾಘವನಿಂತೆನೆ ಮನದನು |
ರಾಗದಿನಿನಜಾತನೆಯ್ದಿ ತತ್ಪುರದೆಡೆಗಂ ||
ಕೂಗಲ್ಕೇಳ್ದಾ ವಾಲಿಯು |
ಮಾಗಳೆ ತಾಮ್ರಾಕ್ಷನಾಗಿ ಪೊರಟಂ ರಣಕಂ || ೧೩೧ ||

ಮೊಲವರಿತಾಂ ಸಿಂಗದೊಳಂ |
ಕಲಹಮನುರೆ ಪೂಡಿ ಜೀವಿಪುದೆ ರವಿಜಾತಂ ||
ತಿಳಿಯದೆ ಮದ್ಬಲಮಂ ಬಂ |
ದುಲಿವುದು ಕಡುಚೋದ್ಯಮಿಂದುಮೆಂದೆಳ್ತಂದಂ || ೧೩೨ ||

ಕಂಡೆಂದನೆಲವೊ ರವಿಸುತ |
ಪೆಂಡಿತಿಯಂ ನೆನೆದು ಬಂದು ಮನ್ಮುಷ್ಟಿಗಳಿಂ ||
ದಂಡಧರನ ಮಂದಿರಮಂ |
ಕಂಡಪೆ ನೀನೆಂದು ಸುರಪಜಂ ಗರ್ಜಿಸಿದಂ || ೧೩೩ ||

ಅನುಜಾತನ ಮಾನಿನಿಯಂ |
ತನುಜಾತೆಗೆ ಸಾಟಿಯೆಂದು ತಿಳಿಯದೆ ಮತ್ತಾ ||
ಮಿನಿಯಂ ಭೋಗಿಪ ಪಾತಕ |
ದನುವಿಂ ಬಲಗುಂದದುಳಿಯೆ ಎಂದಂ ರವಿಜಂ || ೧೩೪ ||

ಎಲವೊ ಮರುಳೆ ತತ್ವಮನಾಂ |
ತಿಳಿದಿರ್ಪೆಂ ಕರೆಯಲೊಲ್ಲೆನೆನುತಿಂದ್ರಸುತಂ ||

ಗಳಿಲನೆ ಕೋಪಾಟೋಪದೊ |
ಳುಲಿಯುತ್ತಂ ತಿವಿದನಬ್ಜಬಾಂಧವಸುತನಂ || ೧೩೫ ||

ತಿವಿದಾಘಾತಕೆ ನೋಯದೆ |
ರವಿಸಂಭವನುಗ್ರಮುಷ್ಟಿ ಕೋಪದಿನಿಂದ್ರೋ ||
ದ್ಭವನಂ ತಿವಿದಂ ಮುಷ್ಟಿಯೊ |
ಳವಿಗಂ ಸಿಡಿಲೆರಗುವಂತೆ ಸಂತತರವದಿಂ || ೧೩೬ ||

ಕಾದಿದರಿರ್ವರ್ಪಟುಭಟ |
ರಾದಿಯೊಳಾ ಜಂಭನಿಂದ್ರರಾಜಗೆ ನಿಂದೊಲ್ ||
ಮಾಧವಮಧುಕೈಟಭರಾ |
ಯೋಧನಮೋ ಎಂಬೊಲಾದುದದನೇವೇಳ್ವೆಂ || ೧೩೭ ||

ಅಳ್ಕದೆ ಮನದೊಳ್ಕಯ್ಗಂ |
ಸಿಲ್ಕದೆ ಕಡುಬಲ್ಪಿಸಿಂದೆ ವೀರಾಗ್ರಣಿಗಳ್ ||
ಬಳ್ಕದೆ ಯುದ್ಧಂಗೆಯ್ಯುತಿ |
ರಲ್ಕೆ ರಘುಜನೀಕ್ಷಿಸುತ್ತಮಿರ್ದ್ದಂ ಮರೆಯೊಳ್ || ೧೩೮ ||

ಅಗ್ರಭವಾನುಜರೊಂದೇ |
ವಿಗ್ರಹಮೋ ಎಂಬೊಲಂದು ನಿಂದಿರೆ ರಣದೊಳ್ ||
ನಿಗ್ರಹಿಸಲ್ಕಾರದೆ ನಾ |
ಸಾಗ್ರದೊಳಂಗುಲಿಯನಿಟ್ಟು ರಾಘವನಿರ್ದ್ದಂ || ೧೩೯ ||

ಅಸಿತರೊಳುದ್ಧತಶೌರ್ಯದಿ |
ನನಿಮಿಷಪತಿಪುತ್ರನೈದೆ ಪೊಡೆಯಲ್ತನ್ನಂ ||
ಮನಗುಂದಿ ಭಯೋದ್ರೇಕದೊ |
ಳಿನಜಾತಂ ಋಷ್ಯಮೂಕಗಿರಿಯಂ ಸಾರ್ದಂ || ೧೪೦ ||

ಶಿವಶಿವ ಕೆಟ್ಟುದು ಕಜ್ಜಂ |
ರವಿಜಾತಂ ತನ್ನ ಮನದೊಳೀಂ ತಿಳಿದಪನೋ ||
ತವಿಪುದದೆಂತಾತನ ಚಿ |
ತ್ತಮನೆನುತಂ ರಾಮನಾತನೆಡೆಗೆಳ್ತಂದಂ || ೧೪೧ ||

ಕಂಡಾ ರಾಘವನಂ ಮಾ |
ರ್ತಾಂಡಸುತಂ ಮೂದಲಿಸಿದನೆನ್ನಗ್ರಜನಂ ||
ದಂಡಿಸಿ ಬಾಳ್ವರನೀ ಭೂ |
ಮಂಡಲದೊಳ್ಕಾಣೆನಿನ್ನ ಸಾಹಸಮುಂಟೇ || ೧೪೨ ||

ಮರಸಂ ಮುರಿಯಲ್ಬಕರ್ಕ್ಕನು ।
ಸುರನಟ್ಟಿಯನೊದೆದು ದೂಂಟೆವಪ್ಪುರ್ದು ನೋಡಲ್ ॥
ಸುರನಾಥನ ಸುತನಿದಿರೊಳ್ ।
ಶರಧನುವಂ ಧರಿಸಿ ನಿಲ್ವನಾವನೊ ಧರೆಯೊಳ್ ॥ ೧೪೩ ॥

ನಿನ್ನ ನುಡಿ ನನ್ನಿಯೆಂದಾಂ ।
ಪನ್ನತಿಕೆಯೊಳ್ಪೆದೆ ವಾಲಿಯಂ ಕೆಣಕುತ್ತಂ ॥
ಬನ್ನಕ್ಕೊಳಗಾದೆಂ ಶಾ ।
ಯೊರ್ಣನ್ನತಿ ನಿನಗಿರ್ದ್ದೊಡೆನ್ನನೀ ಪರಿಗೆಯ್ವಾ ॥ ೧೪೪ ॥

ಇಂತಾ ರವಿಜಂ ಚಿತ್ತ ।
ಭ್ರಾಂತಿಯೊಳಂ ಬರೆದು ನುಡಿಯಲವನೀಜಾತಾ ॥
ಕಾಂತಂ ಮೃದುತರವಾಣಿಗ ।
ಳಿಂ ತಳ್ವದೆ ಪೇಳ್ದನೊಲ್ದು ತತ್ತರಣಿಜನೊಳ್ ॥ ೧೪೫ ॥

ಸೂರಜ ನೀನವನೇಕಾ ।
ಕಾರದೆ ಕರ್ಣ್ಗೆ ಸೆಯಲಂಬನಾಂ ಕಳಿಪಲ್ಕಂ ॥
ಆರಂ ಕೊಲ್ವದೊ ಎನುತಂ ।
ತೋರಾಯುದ ಚಿಂತೆಯಿಂದೆ ನೋಡುತಮಿರ್ದ್ದೆಂ ॥ ೧೪೬ ॥

ಇನಿಸುಂ ಭೇದಂದೋರದೆ ।
ಘನಯುದ್ಧಂಗೆಯ್ಯುತಿರ್ದ್ದ ಕಾರಣಮೆನಗಂ ॥
ಅನುಮಾನಮಾದುದಲ್ಲದೆ ।
ನಿನಗಂದಾನಿತ್ತ ಭಾಷೆಯಂ ತಪ್ಪುವೆನೇ ॥ ೧೪೭ ॥

ಅಂಜದೆ ಮನದೊಳ್ನಡೆ ನಿನ ।
ಗಂ ಜಯಮುರೆ ಸಾರ್ಗ್ಗಮೆಂದು ತಿಳಿ ಇನ್ನೆನುತಂ ॥
ಕಂಜಾಕ್ಷಂ ಕರುಣದೆ ಶ ।
ತ್ರುಂಜಯನಗ್ರಜನನೈದೆ ಕರೆದಿಂತೆಂದಂ ॥ ೧೪೮ ॥

ಈತನ ಕುರಿಪಂ ತಿಳಿವಾ ।
ರೀತಿಯನೆಸಗೆಂದು ಪೇಳೆ ಲಕ್ಷ್ಮಣನಾಗಳ್ ॥
ಪೂತ ಗಜಪುಷ್ಪಮಾಲೆಯ ।
ನಾತನ ಗಳಕಿಟ್ಟು ಶತ್ರುಜಯಿಯಾಗೆಂದಂ ॥ ೧೪೯ ॥

ರವಿಜಂ ಸಂತಸದಿಂ ರಾ ।
ಘವನಂಘ್ರಿಗೆ ಮಣಿದು ಯುದ್ಧಕೆಳ್ತರೆ ಭರದಿಂ ॥

ಪವನಸುತನೀಲಮುಖ್ಯ |
ಪ್ಲವಗರ್ನಡೆತಂದರುರ್ಬ್ಬಿ ಬೊಬ್ಬಿಡುತಾಗಳ್ ॥ ೧೫೦ ॥

ದ್ವಾರಪ್ರದೇಶದೊಳ್ಕಪಿ |
ವೀರಂ ಕೂಗಲ್ಕೆ ಕೇಳ್ದು ಸುರಪಕುಮಾರಂ ॥
ಘೋರೆನೆ ಗರ್ಜಿಸುತೆಳ್ತರೆ |
ತಾರಾವಧು ಬಂದು ನಿಂದು ಪತಿಯೊಡನೆಂದಳ್ ॥ ೧೫೧ ॥

ಬಾಲಕನಂಗದನೆನ್ನೊಳ್ |
ಪೇಳಿದುದಂ ಬಿನ್ನವಿಸುವೆನಾಲಿಸು ವಸುಧಾ ॥
ಪಾಲಕದಶರಥಪುತ್ರ |
ರ್ಕಾಲವಶಂ ಬಂದರಂತೆ ವಿಪಿನಾಂತರಕಂ ॥ ೧೫೨ ॥

ಪಿರಿಯಾತಂ ರಾಮಂ ಗಡ |
ಧರಣೀಸುತೆ ರಾಮಪತ್ನಿ ಗಡ ಲಕ್ಷ್ಮಣನುಂ ॥
ವರಸೋದರಂ ಗಡಾ ದಶ |
ಶಿರನಜೆಯಂ ಕೊಂಡುಪೋದನಂತಯ್ ರಮಣಾ ॥ ೧೫೩ ॥

ಸತಿಯಂ ಪುಡುಂಕಲೇತ |
ತ್ಕ್ಷಿತಿಧರಕಂ ಬಂದೊಡಿನಜನುರುಮಿತ್ರತೆಯಂ ॥
ಹುತಭುಕ್ಸಾಕ್ಷಿಯೊಳಂ ಪಡೆ |
ದತಿಮೋದದೊಳಿರ್ಪನೆಂದು ಕೇಳ್ದೆಂ ರಮಣಾ ॥ ೧೫೪ ॥

ಆತನ ಸತ್ವದೆ ರವಿಜಂ |
ಭೀತಿಯನುಳಿದಿಲ್ಲಿ ಬಂದನಲ್ಲದೆ ನಿನ್ನೊಳ್ ॥
ಸೋತುಂ ಮಗುಳ್ದೆಯ್ತರ್ಪನೆ |
ನೀತಿಯೊಳಾ ರುಮೆಯನಿನಜಗಿತ್ತಪುದೆಂದಳ್ ॥ ೧೫೫ ॥

ಕೇಳಾ ಬಲ್ಲೆಂ ರಾಮಂ |
ವ್ಯಾಳಾಹಿತಗಮನನೆಂಬುದಂ ನಿಜದಿಂ ಶ್ರೀ ॥
ಲೋಲನುಮಾದೊಡೆ ಭಕ್ತಿಯೊ |
ಳಾಲಯಕಂ ಬರಿಸಿ ಪೇಳ್ದ ತೆರನಂ ಮಾಳ್ಪೆಂ ॥ ೧೫೬ ॥

ಎಂದವಳನೊಡಂಬಡಿಸಿ ಪು |
ರಂದರಸುತನಧಿಕಕೋಪದಿಂ ರಣಕಣಕಂ ॥
ಬಂದಾ ರವಿಜನನೀಕ್ಷಿಸಿ |
ನಿಂದಂ ನಿಜಭುಜಮನೊದರುತಾರ್ಭಟಿಸುತ್ತಂ ॥ ೧೫೭ ॥

ಮುತ್ಸಾಹಸಮಂ ತೀಱಿಯದೆ |
ಕುತ್ಸಿತಮತಿಯಿಂದೆ ಬಂದೆ ತೊಲಗೆಂದೆನುತಂ ||
ಮತ್ಸರದಿಂ ರವಿಪುತ್ರನ |
ವತ್ಸಮನುರುಮುಷ್ಟಿಯಿಂದ ಘಾತಂಗೆಯ್ದಂ || ೧೫೮ ||

ತರಣಿಸುತಂ ಕ್ಷಣಮಾತ್ರಂ |
ಮರೆಮೆಯ್ಯಿನಿರ್ದ್ದೆಳ್ದು ರಾಮನಂ ನೋಡುತ್ತಂ ||
ಸುರಪಾತ್ಮಜನಂ ತಿವಿಯ |
ಲ್ಕುರುಕೋಪದೊಳಾತನೀತನಂ ಘಾತಿಸಿದಂ || ೧೫೯ ||

ಮರನಾ ಮರೆಯೊಳ್ರಘುಜಂ |
ಶರಮಂ ಚಾಪಕ್ಕೆ ಪೂಡಿ ಬಿಡಲಾ ಶರಮುಂ ||
ಸುರಪಜನುರವಮಂ ಭೇದಿಸೆ |
ಹರಹರನೆಂದ್ಯೆದೆ ಭೂಮಿತಳದೊಳ್ಬಿಳ್ದಂ || ೧೬೦ ||

ಎಡಗಯ್ಯೊಳ್ಬಿಲ್ಲಲಗ |
ಯ್ಗಡೆಯೊಳ್ಕಣೆ ನಾರ ವಸ್ತ್ರ ವನಮಾಲೆಗಳಂ ||
ಜಡೆಯಂ ಧರಿಸುತೆ ನಿಂದಿರೆ |
ಜಡಜಾಕ್ಷನನಮರನಾಥಸುತನೀಕ್ಷಿಸಿದಂ || ೧೬೧ ||

ಸಜಲಜಲದಾಂಗನಂ ಸರ |
ಸಿಜನೇತ್ರನನಖಿಳಲೋಕವಂದಿತನಂ ಭಾ ||
ನುಜಲಕ್ಷ್ಮಣಸಂಯುತನಂ |
ರಜನೀಚರವಂಶದಾವಶಿಖಿಯಂ ಕಂಡಂ || ೧೬೨ ||

ಆರಯ್ದು ನೋಡಿ ಸುರಪಕು |
ಮಾರಕನಿಂತೆಂದನವನೊಳತಿಸಂಕಟದಿಂ ||
ಆರಯ್ ನೀನೀ ಐದ್ಯಮ |
ನಾರಿಂದಂ ಕಲ್ತೆ ನೋಡೆ ಕಡು ಸಾಹಸಿಯಯ್ || ೧೬೩ ||

ನೀನಲ್ತೆ ದಶರಥಾತ್ಮಜ |
ನೇನುಂ ದೊರೆತನಕೆ ಯೋಗ್ಯನಲ್ಲದೆ ಬಳಿಕಂ ||
ಕಾನನಕೆಳ್ತಂದಾ ನಿಜ |
ಮಾನಿನಿಯಂ ನೀಗಿಕೊಂಡು ದುಃಖಿಪನಲ್ತೆ || ೧೬೪ ||

ನಿನಗೆ ಸಮಾನಂ ದಿನಕರ |
ತನಯಂ ಪ್ರಾಕ್ಕೃತದೆ ದೊರೆದುದಾತನ ಸಖ್ಯಂ ||

ಮನುಜಾಧಮ ನಿನ್ನಿಂ ರಾ |
ವಣನಂ ಕೊಲೆ ಸಾಧ್ಯಮಹುದೆ ಮರುಳಾದೆಯಲಾ || ೧೬೫ ||

ರವಿವಂಶದ ಭೂಪಾಲ |
ರ್ಸುವಿವೇಕಿಗಳನಘರವರ ಗೋತ್ರದೊಳಂ ಸಂ ||
ಭವಿಸಿದೊಡೇಂ ಕಡುಪಾಪದ |
ಭವನಮನುರೆ ಪೊಕ್ಕರುಂಟೆ ನೀನನ್ಯನಲಾ || ೧೬೬ ||

ವಾನರಮಾಂಸಮುಪೂತಂ |
ನೀನೆನ್ನಂ ಕೊಂದು ಪಡೆದೆ ಮಿಗೆ ದುರ್ಯಶಮಂ ||
ಮಾನವ ನಿನಗರಿಪಿದ ಗುರು |
ತಾನಾವನೊ ಎಂದು ತೂಗಿದಂ ಮಸ್ತಕಮಂ || ೧೬೭ ||

ಮರನಂ ಮರೆಗೊಂಡೆನ್ನಂ |
ಬರಿದೇ ನೀನೇತಕೆಚ್ಚು ಕೊಂದಯ್ ದಶಕಂ ||
ಧರನಂ ತತ್ಪುರಸಹಿತಂ |
ತರಲಿರ್ದ್ದೆಂ ತಿಳಿಯದಾದೆ ಮತ್ಸಾಹಸಮಂ || ೧೬೮ ||

ಕಪಿವರ ಕೇಳ್ಸದ್ಧರ್ಮಕೆ |
ವಿಪರೀತಂ ಪಥದೆ ನಡೆದರಂ ಶಿಕ್ಷಿಪುದುಂ ||
ತಪನಾನ್ವಯಸಂಭವಿಭೂ |
ಮಿಪಪದ್ಧತಿಯೆನುತೆ ತಿಳಿವುದೆಂದಂ ರಘುಜಂ || ೧೬೯ ||

ಅನುಜನ ಸತಿಯಂ ರಮಿಸಿದ |
ಘನಪಾತಕಿಯಪ್ಪ ಕಾರಣಂ ಘಾತಿಸಿದೆಂ ||
ಮನಮಂ ಸಂಚಲಿಸದೆ ಮ |
ತ್ತನುವಂ ನೋಡೆಂದು ಪೇಳಲವನೀಕ್ಷಿಸಿದಂ || ೧೭೦ ||

ನೀನಲ್ತೆ ಪರಮಪುರುಷಂ |
ಜ್ಞಾನವಿವರ್ಜಿತನುಮಾಗಿ ನಿಂದಿಸಿದೆಂ ಮ ||
ತ್ಸೂನು ಮಹಾಬಲಿಯಿವನಂ |
ಸಾನಂದಂ ರಕ್ಷಿಸೆಂದನಮರೇಂದ್ರಭವಂ || ೧೭೧ ||

ನೀಲನಿಭಾಂಗನೆ ಕೃಪೆಯಿಂ |
ಕೋಲಂ ಕಳೆದೆನ್ನನುದ್ಧರಿಪುದೆನೆ ಭರದಿಂ ||
ಕೀಳಲ್ಕಂಬಂ ವರಪರ |
ಮಾಲಯಮಂ ಸಾರ್ದನವನ ಸುಕೃತಮದೆನಿತೋ || ೧೭೨ ||

ತಾರಾಭಾಮಿನಿಯಾಲಿಸಿ ।
ಭೋರನೆ ನಡೆತಂದು ಕಂಡಳಾಣ್ಮನ ತನುವಂ ॥
ವೀರಾಗ್ರಣಿ ಹಾ ಹಾ ರಣ ।
ಶೂರ ಮಹಾಧೀರನೆಂದು ಪಲುಬುತೆ ಪೊರಳ್ದಳ್ ॥ ೧೭೩ ॥

ವಕ್ಷಸ್ತಾಡನಗೆಯ್ಯುತ ।
ಲೀಕ್ಷಿಸುತಂ ರಾಮಗೆಂದಳೆನ್ನಿನನಂ ನೀಂ ॥
ಶಿಕ್ಷಿಸಲೇನಪರಾಧಿಯೆ ।
ರಕ್ಷಿಪರಾರಕಟ ಬಾಲಕನನಂಗದನಂ ॥ ೧೭೪ ॥

ನಳಿನಾಂಬಕೆ ನೀನೇತ ।
ಕ್ಕೞಲ್ವುದು ನಿನ್ನಾಳ್ದನೈದೆ ಜೀವಮೊ ತನುವೋ ॥
ತಿಳಿ ತನುವಾದೊಡೆ ಪೋಪುದು ।
ಬಳಿಕಂ ತಾಂ ಜೀವಮಾದೊಡದಕಳಿವಿಲ್ಲಂ ॥ ೧೭೫ ॥

ಪಧಿಕರ್ತಣ್ಗೆಳಲಿಹ ಸು ।
ಕ್ಷಿತಿಯೊಳ್ವಿಶ್ರಮಿಸಿಯೊಡನೆ ಪೋಪಂದದೊಳಂ ॥
ಸತಿಪತಿಸುತಪಿತಮಿತ್ರ ।
ರ್ಕತಿಪಯದಿನಮಿರ್ದ್ದು ಪೋಪರಿವರವರಾರೋ ॥ ೧೭೬ ॥

ಜಲಜಾಕ್ಷನೆಸಲ್ತತ್ವದ ।
ನೆಲೆಯಂ ತಿಳಿದೈದೆ ತಾರೆ ದುಃಖಮನುಳಿದಳ್ ॥
ಬಳಿಕಂ ಸುಗ್ರೀವಂ ಬಸ ।
ವೞಿದಿರೆ ರಘುನಾಥನಾತನಂ ಮನ್ನಿಸಿದಂ ॥ ೧೭೭ ॥

ಭರದಿಂ ಶವಮಂ ತಾಂ ಸಂ ।
ಸ್ಕರಿಸುತಲಾ ರಾಮನಾಜ್ಞೆಯಿಂದಂ ರವಿಜಂ ॥
ಪರಿಜನಪುರಜನನಿಜವಾ ।
ನರಜನಮುಂ ಸಾತಮಿಟ್ಟನತಿವಿನಯದೊಳಂ ॥ ೧೭೮ ॥

ಜಾಂಬವಸುಷೇಣಕೇಸರಿ ।
ಜಂಭಾಹಿತಪೌತ್ರಹನುಮಮುಖ್ಯರನೊಡಗೊಂ ॥
ಡಂಬುಜನೇತ್ರನ ಸನ್ನಿಧಿ ।
ಗಂ ಬಂದುರೆ ನಮಿಸಿ ಪೇಳ್ದನಾ ರವಿಜಾತಂ ॥ ೧೭೯ ॥

ಕರುಣಾಳುಗಳರಸನೆ ಮ ।
ತ್ಪುರಕಂ ನಡೆತಂದು ಕಾಯ್ವುದೆನೆ ಪಟ್ಟಣಕಾಂ ॥

ಬರಲನುಚಿತಮಯ್ ರಾಜ್ಯಕೆ ।
ದೊರೆಯಾಗು ಸರಾಗದಿಂದಮೆಂದಂ ರಾಮಂ ॥ ೧೮೦ ॥

ಬಾ ಲಕ್ಷ್ಮಣ ನಡೆ ನಗರ ।
ಕ್ಕಾಲಸ್ಯಂಗೆಯ್ಯದಿನಜನಭಿಷೇಚನಮಂ ॥
ಲೀಲೆಯೊಳಾಗಿಸಿ ವಾಲಿಯ ।
ಬಾಲಕನಂ ನಿಲಿಸು ಯೌವರಾಜ್ಯಸ್ಥಿತಿಯೊಳ್ ॥ ೧೮೧ ॥

ರಾಘವನಿಂತೆನೆ ಲಕ್ಷ್ಮಣ ।
ನಾಗಳೆ ಸುಗ್ರೀವವಾಲಿಜರನೊಡಗೊಂಡುಂ ॥
ವೇಗದೆ ಕಿಷ್ಕಿಂಧಾದ್ರಿನ್ಯ ।
ಪಾಗಾರಮನಯ್ದೆ ಪೊಕ್ಕನತಿ ವಿಭವದೊಳಂ ॥ ೧೮೨ ॥

ಭೂಸುರಮತದಿಂ ರವಿಜಗೆ ।
ಭಾಸುರಪಟ್ಟಾಭಿಷೇಕಮಂ ವಿರಚಿಸಿ ಸಂ ॥
ತೋಷದೊಳಾ ವಾಲಿಜಗಂ ।
ಲೇಸೆನೆ ಯುವರಾಜಯೋಗ್ಯಪದವಿಯನಿತ್ತಂ ॥ ೧೮೩ ॥

ತರಣಿಜನಂ ಬೀಳ್ಕೊಂಡೆ ।
ಯ್ತರಲಾ ಸೌಮಿತ್ರಿ ರಾಮನೆಡೆಗಂ ಭರದಿಂ ॥
ಹರಿಸದೆ ಮನ್ನಿಸಿಯವನಂ ।
ಕರುಣಾಭರಣಂ ಪ್ರವರ್ಷಣಾದ್ರಿಯೊಳಿರ್ದಂ ॥ ೧೮೪ ॥

ಅನುದಿನಮಗಲದೆ ರಾಮನ ।
ಸನಿಹದೊಳತಿ ಭಕ್ತಿಯಿಂದೆ ಲಕ್ಷ್ಮಣದೇವಂ ॥
ಅನುಚರರಂದದೊಳಿರ್ದಂ ।
ಮುನಿವರ್ಯರೆ ಕೇಳಿಮೆಂದು ಪೇಳ್ದಂ ಸೂತಂ ॥ ೧೮೫ ॥

# ತೃತೀಯಾಶ್ವಾಸ.

ವೃತ್ತ || ಶ್ರೀರಾಮಂ ಭವರೋಗವೈದ್ಯನಮಲಂ ಭಕ್ತೇಷ್ಟಸಂದಾಯಕಂ |
ವೀರಂ ದುಷ್ಟಕಬಂಧದೈತ್ಯಮಥನಂ ಕೈರಾತಿನೀಮೋಕ್ಷದಂ ||
ಸೂರೋದ್ಘಾತವಿಶಾಲಶೈಲಭಿದುರಂ ವಾತಾತ್ಮಜಾನಂದಕಂ |
ಧೀರಂ ಸಾರಸನೇತ್ರನೀಗೆ ಶುಭಮಂ ಕಾರುಣ್ಯದಿಂ ಮಾಧವಂ || ೧ ||

ಕಂದ || ಅಸ್ತೋಕೋಜ್ವಲಕಾಂತಿನಿ |
ರಸ್ತಾರ್ಕಂ ವೇದವೇದ್ಯನನುಪಮರೂಪಂ ||
ಸುಸ್ಥಿತಿತೋಷಂ ವಾನರ |
ಮಸ್ತಕಮಣಿ ಪೊರೆಗೆ ನಿಚ್ಚಮನಿಲಕುಮಾರಂ || ೨ ||

ಸೂತನೆ ತವಮುಖಪಂಕೇ |
ಜಾತೋದಿತಮಾದ ಚಾರುಚರಿತಾಮೃತಮಂ ||
ಪ್ರೀತಿಯೊಳುಂಡುಂ ದ |
ಣಿಯದೆ ಕಾತರಿಪುದು ಚಿತ್ತಮೆಮಗೆ ಪೇಳ್ಮಂಗತೆಯಂ || ೩ ||

ರಾವಣದನುಜಂ ಸೀತಾ |
ದೇವಿಯಸುರೆ ಕೊಂಡುಪೋದನೆಂದಿರಿ ಮೇಣಾ ||
ನಾವಂ ರಾವಣನೆಂಬವ |
ನಾ ವಧು ರಮೆಯಾದೊಡವಗೆ ಸಿಲ್ಕಿದಳೆಂತಯ್ || ೪ ||

ಸಂದೆಗವಿಲ್ಲದ ವೊಲ್ದಯೆ |
ಯಿಂದಂ ಬಿತ್ತರಿಪುದೆಮಗೆ ತದ್ವೃತ್ತಗಳಂ ||
ಎಂದಾ ಶೌನಕಮುಖಮುನಿ |
ವೃಂದಂ ಬೆಸಗೊಂಡೊಡೈದೆ ಸೂತಂ ಪೇಳ್ದಂ || ೫ ||

ಮುನಿಗಳಿರ ಕೇಳಿ ಕಮಲಾ |
ಕ್ಷನ ಸನ್ನಿಧಿಗಾದಿಯುಗದೊಳಂ ಸನಕಸನಂ ||
ದನಮುಖ್ಯಮೌನಿಗಳ್ಬರ |
ಲನಿಬರನಾ ದ್ವಾರಪಾಲಕರ್ತಡೆದಿಟ್ಟರ್ || ೬ ||

ತಡೆಯಿಲ್ಲದರಾದೆಮ್ಮಂ |
ತಡೆದಿರ್ಪುದರಿಂದೆ ದಾನವರ ಯೋನಿಯೊಳಂ ||

ಕೆಡೆದಿಪ್ಪರ್ದೇಳ್ಮೆಯೆಂದುಂ |
ಕಡುಗಿನಿಸಿಂ ಪೇಳ್ದರಂದು ಜಯವಿಜಯರ್ಗಂ || ೭ ||

ಶಾಪಮನೀಯಲ್ಮನದೊ |
ಳ್ತಾಪಂಗೊಂಡಾ ಮುನೀಶರೊಡನೆಳ್ತಂದುಂ ||
ಶ್ರೀಪತಿಗಂ ಬಿನ್ನವಿಸಿದ |
ರಾ ಪಡಿಯರರಧಿಕಚಿಂತೆಯಂ ತಳೆದಾಗಳ್ || ೮ ||

ದನುಜಾಧಮಜನ್ಮದೊಳಂ |
ಜನಿಸುಗುಮೆಂದಿತ್ತರೆಮಗೆ ಶಾಪಮನಿವರಾ ||
ಜನುಮದೊಳೀಂ ಲೇಸಕ್ಕುಮೆ |
ವನಜಾಂಬಕ ರಕ್ಷಿಸೆಂದೊಡಂ ಹರಿ ನುಡಿದಂ || ೯ ||

ರಿಸಿನುಡಿಯಲಂಘ್ಯಮಿನ್ನು |
ಬ್ಬಸಗೊಳಲೇನಕ್ಕುಮೆನ್ನ ವೈರದೊಳಂ ರಾ ||
ಕ್ಷಸರಾಗಿ ಮೂವ್ಮೆರ್ಯುದ್ಧವಿ |
ಯಿಸೆ ರಸೆಗಾಂ ಬಂದು ಶಾಪಮಂ ಪರಿಹರಿಪೆಂ || ೧೦ ||

ಹರಿಯಿಂತೆನೆ ಭಯಮುಳಿದುದು |
ಭರದಿಂ ಕಶ್ಯಪನ ಪತ್ನಿ ದಿತಿಯಿಂದೊಗೆದರ್ ||
ದುರುಳಹಿರಣ್ಯಾಕ್ಷಂ ದನು |
ಜರಧಿಪತಿ ಹಿರಣ್ಯಕಶಿಪುವೆಂಬಾಹ್ವಯದಿಂ || ೧೧ ||

ಮೊದಲಿಗನಂ ಕಿಟಿರೂಪಿಂ |
ದನುಜಹಿರಣ್ಯಕಶಿಪುದೈತ್ಯಾಧಮನಂ ||
ಮಧುಮಥನಂ ನರಹರಿರೂ |
ಪದೊಳಂ ಸಂಹರಿಸಿ ದೇವತತಿಯಂ ಕಾಯ್ದಂ || ೧೨ ||

ಎರಡನೆಯ ಜನ್ಮಮಾದುದು |
ವರಮುನಿಪೌಲಸ್ತ್ಯನನ್ವಾಯದೊಳಂ ಭೀ ||
ಕರರೂಪದೊಳೀ ದಶಕಂ |
ಧರಕುಂಭಶ್ರವಣರೆಂಬ ಪೆಸರಿಂ ಧರೆಯೊಳ್ || ೧೩ ||

ಆ ಮುನಿಯಾರೆಂದೆಸಲಾ |
ತಾಮರಸೋದ್ಭವನ ಪುತ್ರನೆನಿಪಂ ಮೇಣೀ ||
ಹೇಮಾಗಪ್ರಾಂತದೊಳು |
ದ್ದಾಮಮಹಾತಪಮನೈದೆ ಗೆಯ್ಯುತ್ತಿರ್ದರ್ಗಂ || ೧೪ ||

ಸುರಸತಿಯರ್ಮುನಿವಧುಗಳ್ |
ಚರಿಸುತ್ತಿರೆ ಕಂಡು ತನ್ನ ತಪಕಿನ್ನೆಡರಾ ||
ಚರಿಸುವರೆನ್ನೀ ವನಕಂ |
ಬರೆ ಬಸಿರಂ ತಳೆವರೆಂದು ಶಾಪಮನಿತ್ತಂ || ೧೫ ||

ತೃಣಬಿಂದುಮಹಾಮುನಿಪತಿ |
ಯೞುಗಿಯುಮಾ ವನಕೆ ಬಂದೊಡಾದುದು ನಾರೀ ||
ಮಣಿಗಂ ಪಾಂಡುರವರ್ಣಂ |
ಬೞುಗಿ ಭಯಂಗೊಂಡು ಬಂದಳಯ್ಯನ ಪೊರೆಗಂ || ೧೬ ||

ತನುಜೆಯನೀಕ್ಷಿಸಿ ತನ್ನೊ |
ಳ್ನೆನೆದೀ ಕೃತ್ಯಂ ಪುಲಸ್ತ್ಯನಿಂದಾದುದೆನು ||
ತ್ತನುನಯಮೊಳ್ಕನ್ಯಕೆಯಂ |
ಮನವೊಲ್ದುಂ ಕೊಟ್ಟನಂದು ತನ್ಮುನಿಪತಿಗಂ || ೧೭ ||

ಪತಿಶುಶ್ರೂಷಂಗೆಯ್ಯುತ್ತತಿ |
ಭಕ್ತಿಯಿನಿರ್ಪ್ಪ ಕಾಂತೆಯೊಡನೊಂದು ದಿಸಂ ||
ಸತಿ ನಿನಗೊರ್ವಂ ಸ |
ತ್ಸುತನಾವಿರ್ಭವಿಪನೆಂದು ತನ್ಮುನಿ ನುಡಿದಂ || ೧೮ ||

ಆ ಸತಿಯ ಬಸಿರೊಳೊಗೆದಂ |
ಭೂಸುರಮಣಿ ವಿಶ್ರವಸುಮಹಾಮುನಿವರ್ಯಂ ||
ಭಾಸುರನವಂಗೆ ಗುಣವಾ |
ರಾಶಿ ಭರದ್ವಾಜನಿತ್ತನೊಲ್ದುಂ ಸುತೆಯಂ || ೧೯ ||

ಆ ತರುಣಿಯೊಳುದಯಿಸಿದಂ |
ಭೂತೇಶನ ಮಿತ್ರನಖಿಳವಿದ್ಯಾವಿಭವಂ ||
ತಾತನನುಜ್ಞೆಯೊಳಾತನು |
ಮೋತು ತಪಂಗೆಯ್ಯಲಬ್ಜಜಂ ಮೆಯ್ದೋರ್ದಂ || ೨೦ ||

ನಿನ್ನೀ ತಪಕಂ ಮೆಚ್ಚಿದೆ |
ನಿನ್ನು ಧನಾಧೀಶನಪ್ಪೆಯೆಂದುಂ ಮುದದಿಂ ||
ರನ್ನದ ಪುಷ್ಪಕಮುಂ ಕೊ |
ಟ್ಟನ್ನತಕೃಪೆಯಿಂದೆ ಪೋದನಜನಾ ಕ್ಷಣದೊಳ್ || ೨೧ ||

ಕಂದುಗೊರಲನ ಸಖಂ ನಡೆ |
ತಂದುಂ ತುೞಿಲ್ಗೆಯ್ದು ತಂದೆಗಂ ಭಕ್ತಿಯೊಳಂ ||

ಕಂದಗೆ ಧಾತಂ ಕೃಪೆಯಾ |
ದಂದಮನೊರೆಯಲ್ಕೆ ಕೇಳ್ದು ತನ್ಮುನಿ ನುಡಿದಂ || ೨೨ ||

ಸಲೆಲೇಸಾದುದು ಕೃತಯುಗ |
ದೊಳೆ ಮಾಲಿಸುಮಾಲಿಮಾಲ್ಯವಂತಾಖ್ಯಖಳ ||
ರ್ಜಲನಿಧಿಮಧ್ಯದೆ ನೆಲನೊಳ್ |
ಪೊಳಲಂ ಮಿಗೆ ಮಾಡಿಕೊಂಡು ಸೊಗಮೆಸೆದಿರ್ದ್ದರಾ || ೨೩ ||

ಅಸುರರ್ಸುರರಂ ಬಾಧಿಸೆ |
ಬಿಸಜಾಕ್ಷಂ ಕೊಂದೊಡುಳಿದರಿರ್ವರ್ದನುಜರ್ ||
ರಸೆಯೊಳ್ನಿಲ್ಲದೆ ಭಯದು |
ಬ್ಬಸದಿಂ ಬಲಿಸದ್ಮಕೆಯ್ದಿ ಮರೆಗೊಂಡಿರ್ದ್ದರ್ || ೨೪ ||

ಆ ಪುರಮಿರ್ಪ್ಪುದು ನಡೆಯೆನು |
ತಾ ಪೌಲಸ್ತ್ಯಾಖ್ಯ ಮುನಿಪನೆಂದೆನೆ ಲಂಕಾ ||
ದ್ವೀಪಕ್ಕಂ ಬಂದುಂ ವಿಗ |
ತೋಪದ್ರವನಾಗಿ ಸೊಗದೊಳಿರ್ದ್ದಂ ಧನದಂ || ೨೫ ||

ವಿತಳಗಿನೊಂದು ದಿನಂ ನಿಜ |
ಸುತೆಸಹಿತೆ ಸುಮಾಲಿ ಭರದಿನೆಳ್ತಂದುಂ ಭೂ ||
ಪಥದೊಳ್ಬರೆ ಕಂಡಂ ಧನ |
ಪತಿ ಲಂಕಾಪುರದೊಳಿರ್ಪ್ಪ ವಿಭವಮನಾಗಳ್ || ೨೬ ||

ಮುನಿಪತಿ ವಿಶ್ರವಸುಗೆ ನಿಜ |
ತನುಜೆಯನಿತ್ತಿವಳಿನೆಮ್ಮ ಕುಲವೃದ್ಧಿಯನುಂ ||
ಟನಿಸುವೆನೆನುತ್ತುಮಾಲೋ |
ಚನೆಗೆಯ್ದುಂ ಪೇಳ್ದನಂದು ಸುತೆ ಕೈಕಸೆಯೊಳ್ || ೨೭ ||

ಮೊಳೆದೋರುತ್ತಿದೆ ಜವ್ವನ |
ಮುಲಸದೆ ಪೌಲಸ್ತ್ಯಮುನಿಪನಂ ಸಾರ್ದ್ದುಂ ಮ ||
ತ್ಕುಲಮಂ ಪೊರೆಯಲ್ಗೊರವನ |
ಕೆಳೆಯಗೆ ಸಮರಪ್ಪ ಕುವರರಂ ಪಡೆಯೆಂದಂ || ೨೮ ||

ಪಿತನನುಮತಿಯಿಂದಂ ಮುನಿ |
ಪತಿಯೆಡೆಗಂ ಬಂದು ನಿಂದು ಸಸುನಾಣ್ಚುತ್ತಂ ||
ಕ್ಷಿತಿತಳಮನುಂಗುಟದೆ ಬರೆ |
ವುತೆ ಕಡೆಗಣ್ಣಿಂದೆ ನೋಳ್ಪಳಂ ಮುನಿ ಕಂಡಂ || ೨೯ ||

ನೋಟಕರಕ್ಷಿರುಚಿಯೊ ಶುಕ |
ಘೋಟಕನಸಮಾಸ್ತ್ರದಗ್ರದಲಗೊ ಇದೆಂಬೊಲ್ ||
ಮಾಟನಿಸಿ ಮನಂಗೊಳ್ವ ವ |
ಧೂಟಿಯ ಪದನಖರನಿಕರಮೇಂ ಶೋಭಿಸಿತೋ || ೩೦ ||

ಅಲತೆಗೆಯಂ ಪಳಿದುಂ ಕೆಂ |
ದಳಿರಂ ಸಲೆ ಗೆಲ್ದು ಪಂಚವಿಶಿಖನ ಕಿನಿಸಂ ||
ಸೆಳೆದುಂ ಮೆಟ್ಟಿದಳೆನೆ ಪದ |
ತಳಮುಂ ಪರಿಶೋಭಿಸಿತ್ತು ತನ್ಮಾನಿನಿಯಾ || ೩೧ ||

ಶಶಿಕಿರಣಂ ಪಸರಿಸದೊಲ್ |
ಮಿಸುಪದ್ರಿಗಳಿರ್ಪುವಿಲ್ಲಿ ಭಯಮಿಲ್ಲೆನುತಂ ||
ಸಸಿನೆ ನೆಲೆಗೆಯ್ದುಮಿರ್ಪುವೊ |
ಬಿಸಜಗಳೆನೆ ರಂಜಿಸಿದುವು ಚರಣಗಳವಳಾ || ೩೨ ||

ಪೊಡೆಪಾಯ್ದ ಕಳಮವೋ ರತಿ |
ಯೊಡೆಯನ ಮೂಡಿಗೆಯೊ ಪೊನ್ನ ಪೊಸ ಗರಿವೂವೋ ||
ಪಡಿಸಣಕಸಾಧ್ಯವೆಂದೆನೆ |
ಕಡುಸೊಬಗಾಂತೆಸೆದುದವಳ ಜಂಘಾಯುಗಳಂ || ೩೩ ||

ಪೊಂಬಾಳೆಗಂಬಗಳೊ ಮಾ |
ತಂಗಾರ್ಭಕಕರವೊ ಚಾರುಕರಭಮೊಯೆನೆ ಸಾ ||
ರಂಗಾಕ್ಷಿಯ ನುಣ್ದೊಡೆ ಕಡು |
ರಂಗಾಂತೆಸೆದತ್ತು ಪೇಳಲೆಂತಾ ಸೊಬಗಂ || ೩೪ ||

ಕರಿಕುಂಭಂ ಹರಿಯಶನಂ |
ಕರಂಗುವುದು ಜಲಕೆ ಪುಳಿನಮೆಂದುರೆ ಜರೆದುಂ ||
ಸುರಗಿರಿಯಂದಂಬಡೆದಾ |
ತರಳೆಯ ಪೊರವಾರ್ಗೆ ಸಾಟಿಯಹುದಂ ಕಾಣೆಂ || ೩೫ ||

ಹರಿಗಂ ಕ್ರೌರ್ಯಂ ಸಲೆ ಪು |
ಷ್ಕರಮದು ಮತಿಶೂನ್ಯಮೆಂದು ಸರಸತಿಯರಸಂ ||
ಸರಸಿಜನಾಳಮನುಂ ತಂ |
ದಿರಿಸಿರ್ಪನೊ ಎಂಬೊಲವಳ ಕಟಿತಟಮೆಸೆಗುಂ || ೩೬ ||

ತನುಮಧ್ಯಮೆಂತು ನಿಲ್ವುದೊ |
ಎನುತಂ ಪರಮೇಷ್ಠಿಯವಳ ಕಟಿಮಧ್ಯದೊಳಂ ||

ಮಿನುಗುವ ಸೂತ್ರಗಳಂ ತಂ |
ದನುವಿಂ ಬಿಗಿದಿರ್ಪನೆಂಬೊಲೆಸೆಗುಂ ವಳಿಗಳ್ || ೩೭ ||

ಮಿರುಗುವ ಲಾವಣ್ಯಸರೋ |
ವರವೋ ಮೇಣಯ್ದುವೊಗನ ಭಯದಿಂ ಮದನಂ ||
ಮರೆಗೊಂಡ ತಾಣವೋ ಎನೆ |
ಕರಮೊಪ್ಪಿದುದವಳ ನಿಮ್ನನಾಭೀಕುಹರಂ || ೩೮ ||

ಪೊಕ್ಕುಳ ಪುತ್ತಿನಿನೇದ್ದರ್ಗಂ |
ಗಕ್ಕನೆ ಶಶಿಬಿಂಬಸುಧೆಯನುಣ್ಬೊಡೆ ಪೋಗಲ್ ||
ಕಕ್ಕಸವೊಲೆವೆಟ್ಟನೊಳಂ |
ಸಿಕ್ಕಿದ ಕಾಲಾಹಿಯೊ ಎನೆ ಬಾಸೆಯದೆಸೆಗುಂ || ೩೯ ||

ಜಲರುಹಕುಟ್ಮಲಗಳೊ ಶ್ರೀ |
ಫಲಗಳೊ ಗಿರಿಯುಗವೊ ಕೋಕಮಿಥುನವೊ ಮಿಗೆ ಪೊಂ ||
ಗಳಸಂಗಳೊ ಕಡಿದ ಬುಗುರಿ |
ಗಳೊ ಎನೆ ಕಣ್ಗೊಳಿಸಿದತ್ತು ಕುಚಯುಗಮವಳಾ || ೪೦ ||

ಕಂದದ ಶಿರೀಷಮಾಲೆಯೊ |
ಕುಂದದ ಕೋಮಲಿತಕಮಲನಾಳವೊ ನೋಡಲ್ ||
ಬಂಧುರಕನಕಲತೆಯೊ ಎಂ |
ಬಂದದ ನಳಿದೋಳ್ಗಳೆಸೆಗುಮಾ ಭಾಮಿನಿಯಾ || ೪೧ ||

ಕಂಬುಸಮಾನಸುಕಂಠದ |
ಜೆಂಬವಳದ ತುಟಿಯ ಕುಂದರದನದ ಮುಕುರಾ ||
ಡಂಬರಧಿಕ್ಕೃತಗಂಡದ |
ಶಂಬೂಕಶ್ರವಣಯುಗದ ಕೋಮಲೆಯೆಸೆದಳ್ || ೪೨ ||

ದಿವದಂತೆ ತಾರಕಾನ್ವಿತ |
ಮವಿರತವಿಹಗಾಳಿಯಂತೆ ಪಕ್ಷ್ಮಯುತಂ ಮಾ ||
ಧವನಂತೆ ಸಪದ್ಮೋದರ |
ಮವಳಕ್ಷಿದ್ವಿತಯಮೊಪ್ಪುಗುಂ ರಮಣೀಯಂ || ೪೩ ||

ಸೊಗಯಿಪ ಚಂಪಕನಾಸದ |
ಮುಗುಳಂಬನ ಚಾರುಚಾಪದಂತೊಪ್ಪುವ ಪು ||
ರ್ಬುಗಳರೆದಿಂಗಳನೇಡಿಪ |
ಮೃಗಮದಯುತಫಾಲದಬಲೆ ರಾರಾಜಿಸಿದಳ್ || ೪೪ ||

ಬಾಲಾಕಿಸದೃಶಚಿಕುರದ |
ಕಾಲಾಹಿಸಮಾನವೇಣಿಯಮಲರುಚಿರಸ ||
ಚ್ಛೇಲದ ಸರ್ವಾಭರಣದ |
ಲೋಲಾಕ್ಷಿಯನ್ನೆದೆ ನೋಡಿ ಮುನಿಯಿಂತೆಂದಂ || ೪೫ ||

ಆವಳ್ಗೀಂ ಸುರನಾರಿಯೊ |
ಕಾವನ ಕಾದಲೆಯೊ ಕಾಮರೂಪಿನಿಯೋ ರಾ |
ಜೀವಾನನೆ ಮಾಂಜದೆ ಪೇ |
ಳೀ ವನಕೆಳ್ತಂದೆಯೇತಕೆಂಬುದನೆನ್ನೊಳ್ || ೪೬ ||

ದನುಜೇಂದ್ರನ ಸುತೆ ತಾನನು |
ದಿನಮುಂ ಭವದೀಯಚರಣಸೇವೆಯನುರೆ ಮಾ ||
ಳ್ಪನುವಿಂ ಬಂದೆನೆನುತ್ತಾ |
ವನಜಾಂಬಕಿ ಪೇಳೆ ಕೇಳ್ದು ವರಿಸಿದನಾಗಳ್ || ೪೭ ||

ಪತಿಭಕ್ತಿಯೊಳಂ ಮಾನಿನಿ |
ಕತಿಪಯದಿನಮೆಸಗಿ ಸೇವೆಯಂ ರವಿಯಸ್ತಂ ||
ಗತನಾಗುವ ಸಮಯದೊಳಂ |
ಸುತಲಾಭಮನ್ನೆದೆ ಬೇಡಿದಳ್ಮುದದಿಂದಂ || ೪೮ ||

ದಾರುಣಕಾಲದೊಳೆನ್ನೋ |
ರ್ಮಾರನ ಕೇಳಿಯನಪೇಕ್ಷಿಸಿದ ಕತದಿಂದಂ ||
ಘೋರಾಕೃತಿಯಿಂದಂ ಸುಕು |
ಮಾರರ್ಸಂಜನಿಪರೆಂದು ನುಡಿದಂ ಮುನಿಪಂ || ೪೯ ||

ಖಲಸುತರಿಂದೇಂ ಲಾಭಂ |
ಕುಲಮುಂ ತಾಂ ವೃದ್ಧಿಗೆಯ್ವ ಸುತನಂ ಕೃಪೆಯಿಂ ||
ದೊಲಿದೀಯೆವೇಳ್ಕುಮೆಂದಾ |
ಲಲನಾಮಣಿ ಬೇಡಿಕೊಂಡೊಡೆಂದಂ ಮುನಿಪಂ || ೫೦ ||

ಕಡೆಯೊಳ್ಪುಟ್ಟುವನೊರ್ವಂ |
ಜಡಜಾಕ್ಷನ ಭಕ್ತನಿದಕೆ ಸಂದೇಗಮಿಲ್ಲಂ ||
ಪೊಡವಿಯ ಸುರರಂ ಪೊರೆವಂ |
ನಡುವಂ ಸದ್ಯಶಮನೆಂದು ಮನ್ನಿಸಿದನಣಂ || ೫೧ ||

ಉದಿಸಿದನಾ ಸುದತಿಗೆ ದಶ |
ವದನಂ ತತ್ಕ್ಷಣದೊಳಾದುದದ್ಭುತಮಂಭೋ ||

ನಿಧಿ ಕುದಿದುದು ಧರೆ ಕುಸಿದುದು |
ಕುಧರಂಗಳ್ಸಿಡಿದುವವನ ಭೀಕರರವದಿಂ || ೫೨ ||

ಉಡುಗಣಮುದಿರ್ದುದು ದಿವಿಜರ |
ಗಡಣಂ ಮಿಗೆ ಭೀತಿಗೊಂಡುದಂಬುಜಪೀಠಂ ||
ನಡುಗಿದನಗರಾಟ್ಸಂಭವೆ |
ಮೃಡನಂ ಬಿಗಿದಪ್ಪುಗೊಂಡಳದನೇವೇಳ್ವೆಂ || ೫೩ ||

ಬಳಿಕಂ ಸಂಭವಿಸಿದನಾ |
ಲಲನೆಯೊಳಂ ಕುಂಭಕರ್ಣನೆಂಬಸುರಂ ದಿ ||
ಗ್ವಳಯಕ್ಕಂತ್ಯಪ್ರಳಯಂ |
ತಲೆದೋರ್ದ್ದುದೊಯೆಂಬೊಲಾಗೆ ಭೀಕರರಾವಂ || ೫೪ ||

ಅವರೆ ಜಯವಿಜಯರೆಂದೆ |
ನ್ನುವರಾ ಕೈಕಸೆಗೆ ಪುತ್ರರಾಗಲ್ಬಳಿಕಂ ||
ಜವನಂ ಪಡೆದವಳೋ ಜಗ |
ದವಸಾದದ ಮೃತ್ಯುವೋ ಎನಲ್ಸುತೆಯಾದಳ್ || ೫೫ ||

ಜನಿಸಲ್ಶೂರ್ಪನಖಾಭಿಧೆ |
ಯನಂತರಂ ರಾಮಭಕ್ತನಗಗಿರಿಕುಲಿಶಂ ||
ವನಧಿಗಭೀರಂ ಸಲೆ ಸ |
ದ್ವಿನಯಂ ಗುಣನಿಧಿ ವಿಭೀಷಣಂ ಸುತನಾದಂ || ೫೬ ||

ದಶವದನಂ ಮಾತೆಗೆ ಮಣಿ |
ದೊಸೆದು ನಿಲಲ್ನಲ್ಮೆಯಿಂದೆ ಮುದ್ದಿಸಿ ಭೂತೇ ||
ಶಸಖನೊಳಂ ನಿರ್ವೈರದೆ |
ರಸೆಯಂ ಸೊಗಮಾಳ್ಗೆಯೆಂದು ಪರಿಸಿದಳವನಂ || ೫೭ ||

ಅನುಜರನೊಡಗೊಂಡುಂ ಪಾ |
ವನಮೆನೆ ಗೋಕರ್ಣಕ್ಕೈದೆ ಬಂದುಂ ತಪಮಂ ||
ದನುಜಾಧಿಪನೆಸಗುತ್ತಿರೆ |
ವನಜಾಸನನೊಲ್ದುಮಾತನೊಳ್ ಮೆಯ್ವೋರ್ದ್ದಂ || ೫೮ ||

ನಿನ್ನಯೆ ತಪಕಾಂ ಮೆಚ್ಚಿದೆ |
ನೆನ್ನಂ ಬೇಡಲ್ಕೆ ಕುಡುವೆನಣುಗನೆ ವರಮಂ ||
ನನ್ನಿಯಿದೆನಲಬ್ಜಜಗಂ |
ಬಿನ್ನವಿಸಿದನಧಿಕಭಕ್ತಿಯಿಂ ದಶಕಂಠಂ || ೫೯ ||

ನರರೆಂಬರ್ತೃಣರವರಂ ।
ತಿರಲಿ ಸುರಾಸುರಸುಪರ್ಣಪನ್ನಗವಿದ್ಯಾ ॥
ಧರಮುಖ್ಯರಿಂದೆ ತನಗಂ ।
ಮರಣಂ ನೆರೆ ಬಾರದಂತೆ ಕರುಣಿಪುದೆಂದಂ ॥ ೬೦ ॥

ಅಂತಾಗಲೆಂದು ಖಳನಂ ।
ಸಂತಯ್ಸುತೆ ಬಂದು ಕುಂಭಕರ್ಣನ ಪೊರೆಯೊಳ್ ॥
ನಿಂತಿರಲತ್ತಂ ದಿವಿಜ ।
ರ್ಚಿಂತಿಸುತಂ ಬಂದು ವಾಣಿಯಂ ಮರೆಗೊಂಡರ್ ॥ ೬೧ ॥

ದಶಗಳಗಿತ್ತಂ ಕಮಲಜ ।
ನಸಮಾನಂ ವರಮನಿನ್ನು ತಮ್ಮಂ ತಾನೇಂ ॥
ಬೆಸಗೊಂಬನೊ ನೀನಾತನ ।
ರಸನೆಯೊಳಂ ನಿಂದು ರಕ್ಷಿಸೆಂದರ್ದಿವಿಜರ್ ॥ ೬೨ ॥

ಲೇಸೆನುತೆ ವಾಣಿ ಘಟಕ ।
ರ್ಣಾಸುರನುರುಜಿಹ್ವೆಯಲ್ಲಿ ನಿಲಲಾತಂ ಪ ॥
ದ್ಮಾಸನನಂ ಕಾಣುತೆ ಸಂ ।
ತೋಷದೆ ತತ್ಪದಕೆ ಮಣಿದು ಕಯ್ಮುಗಿದೆಂದಂ ॥ ೬೩ ॥

ಮೂರಿತು ನಿದ್ರೆಯ ಮೇಣಾ ।
ಹಾರಮದೇಕದಿನಮಾಗೆ ಪುನರಪಿ ನಿದ್ರಾ ॥
ಭಾರಮನಿನ್ನೆನಗೀಯೆನೆ ।
ಭೋರನೆ ತದ್ವರಮನಬ್ಜಜಂ ದಯೆಗೆಯ್ದಂ ॥ ೬೪ ॥

ಬಳಿಕೆ ವಿಭೀಷಣನೆಡೆಗಂ ।
ಜಲಜಾಸನನೆಯ್ದೆ ಬಂದು ಮೆಯ್ದೋರಲ್ಕಾ ॥
ಗಳೆ ಹರಿಭಕ್ತಶಿರೋಮಣಿ ।
ನಲವಿಂದಂ ನಮಿಸಿ ಬೇಡಿದಂ ವರಮೊಂದಂ ॥ ೬೫ ॥

ನಿರತಂ ಸದ್ಧರ್ಮೋಚಿತ ।
ಹರಿಭಕ್ತಿಯೊಳೆನ್ನ ಚಿತ್ತಮಿರ್ಪಂದದೊಳಂ ॥
ವರಮಂ ಕರುಣಿಪುದೆಂದೆನೆ ।
ಪರಿತೋಷದೊಳೆಂದನಾತನೊಡನಬ್ಜಭವಂ ॥ ೬೬ ॥

ಭಾಗವತಶಿರೋಮಣಿ ನಿನ ।
ಗಾಗುಗೆ ನೀನೆಂದುದೆಲ್ಲಮದುಮಲ್ಲದೆ ಶ್ರೀ ॥

ರಾಘವನತ್ತಣಿನಾಗುಗೆ ।
ಭೋಗೈಶ್ವರ್ಯಾಯುವೃದ್ಧಿಯೆಂದುಂ ಪೋದಂ ॥ ೧೭ ॥

ಬಿಸಜಜನಿಂ ವರಮಂ ಪಡೆ ।
ದಸುರೇಂದ್ರಂ ಬಂದನೆಂಬುದಂ ಕೇಳ್ದಂ ರಾ ॥
ಕ್ಷಸನಿವಹಂ ಪಾತಾಳದಿ ।
ನೊಸೆದೆಳ್ತಂದುದು ಸುಮಾಲಿಯೊಡನವನೆಡೆಗಂ ॥ ೧೮ ॥

ದುರುಳರ ಬೋಧೆಗಳಿಂ ದಶ ।
ಶಿರನುರುತರಗರ್ವದೊಡನೆ ಧನನಾಯಕನಂ ॥
ಪೊರಡಿಸಿ ಲಂಕಾಪುರವರ ।
ಕರಸಾದಂ ಪಿರಿಯನೆಂಬ ಪಾವೆಯನುಳಿದುಂ ॥ ೧೯ ॥

ಚಿಂತಿಸಿ ಧನಪತಿ ದುರ್ಗಾ ।
ಕಾಂತನ ಸನ್ನಿಧಿಗೆ ಬಂದೊಡಾತಂ ಕೃಪೆಯಿಂ ॥
ಸಂತಯ್ಸಿ ದಿಕ್ಪತಿತ್ವಮ ।
ನುಂ ತವೆಯಳಕಾಧಿಪತ್ಯಮಂ ಕರುಣಿಸಿದಂ ॥ ೨೦ ॥

ಭರದಿಂ ವಿದ್ಯುಜ್ಜಿಹ್ವಾ ।
ಸುರಗಿತ್ತಂ ಶೂರ್ಪನಖೆಯನಾ ದಶಕಂಠಂ ॥
ಬರಿಸುತೆ ಮಯಸುತೆ ಮಂದೋ ।
ದರಿಯಂ ಮಿಗೆ ಮದುವೆಯಾದನತಿಸಂಭ್ರಮದಿಂ ॥ ೨೧ ॥

ವೈರೋಚನನೆಂಬಸುರಂ ।
ಭೋರನೆ ದೌಹಿತ್ರಿಯಾದ ವೃತ್ತಜ್ವಾಲಾ ॥
ನಾರಿಯನುಂ ಘಟಕರ್ಣಗೆ ।
ಧಾರೆಯನೆರೆದಿತ್ತನಂದು ದನುಜಪೊರ್ಗಳಲ್ ॥ ೨೨ ॥

ಹರಿಭಕ್ತವಿಭೀಷಣಗಂ ।
ಭರದಿಂ ಶೌಲೂಷನೆಂಬ ಗಂಧರ್ವೇಶಂ ॥
ಸರಮಾಖ್ಯೆಯ ನಿಜಸುತೆಯಂ ।
ಪರಿಣಯಮಂ ಮಾಡಿಕೊಟ್ಟನಮರರ್ಮೆಚ್ಚಲ್ ॥ ೨೩ ॥

ದಶಕಂಠನುಗ್ರತಪದಿಂ ।
ಶಶಿಮೌಳಿಯನೈದೆ ಮೆಚ್ಚಿಸಿಯೆ ಪಡೆದಂ ಶೋ ॥
ಭಿಸುವ ವರಚಂದ್ರಹಾಸಮು ।
ನಸಮೈಶ್ವರ್ಯಾದಿ ಮುಖ್ಯವರಗಳನಾಗಳ್ ॥ ೨೪ ॥

ಮಗನಾದಂ ಮಯಸುತೆಗಂ ।
ಯುಗದಂತ್ಯದ ಮೇಘದಂತೆ ಗರ್ಜಿಸುತೊರ್ವಂ ॥
ಜಗಮುಂ ಬೆಗುದಿಗೊಂಡುದು ।
ಸೊಗಯಿಸಿತಾತಂಗೆ ಮೇಘನಾದಾಹ್ವಯಮುಂ ॥ ೭೫ ॥

ತನುಜಂಬೆರಸಾ ರಾವಣ ।
ನನುದಿನ ಮುನಿಕುಲಮನೈದೆ ಬಾಧಿಸಲಾಗಳ್ ॥
ಅನುಚಿತಮಿದೆಂದು ಧನಪತಿ ।
ಯನುಚರರುಂ ಪೇಳೆ ಕೋಪಿಸಿದನಸುರೇಂದ್ರಂ ॥ ೭೬ ॥

ಕಿಡಿಗೆದರುತೆ ಕಣ್ಗಳೊಳಂ ।
ಕಡುಗಿನಿಸಿಂ ವಿತ್ತನಾಥಪುರಮಂ ಪೊಕ್ಕಂ ॥
ಬಡಿದುಂ ಗುಹ್ಯಕಯಕ್ಷರ ।
ಗಡಣಮನತಿಭರದೆ ತಂದನಾ ಪುಷ್ಪಕಮಂ ॥ ೭೭ ॥

ಇನವಂಶಜನನರಣ್ಯಾಸ ।
ತನುವಂ ನಿಗ್ರಹಿಸಿ ಶಾಪಮಂ ತಳೆದುಂ ಮೇ ॥
ದಿನಿಯೊಡೆಯರನರೆದುಂ ಮೇ ।
ಣನುವಿಂ ದಿಗಧಿಪರ ಪುರಕೆ ನಡೆದಂ ದನುಜಂ ॥ ೭೮ ॥

ಅನಲನನೆಳ್ಬಟ್ಟಿ ದಿನಪ ।
ತನಯನನುರೆ ಗೆಲ್ದು ಬಾಧಿಸುತೆ ನಿರ್ಋತಿಯಂ ॥
ವನಧಿಪನಂ ನೋಯಿಸಿಯನಿ ।
ಲನನೋಡಿಸಿ ಸುರಪಪುರಮನಸುರಂ ಸಾರ್ದಂ ॥ ೭೯ ॥

ದಶವದನಂ ಸಂಯುಗದೊಳ್ ।
ಬಸವಳಿದುಂ ದಿವಿಜನಾಥಗಂ ಸಿಲ್ಕಿರೆ ಬಂ ॥
ದಸದೃಶಯುದ್ಧಂಗೆಯ್ದನಿ ।
ಮಿಷಪತಿಯಂ ಪಿಡಿದನಸುರನಾಯಕತನುಜಂ ॥ ೮೦ ॥

ದಿವಿಜರ್ ಮೊರೆಯಿಡೆ ಸರಸಿಜ ।
ಭವನಲ್ಲಿಗೆ ಬಂದು ಮೇಘನಾದನಿಸಂದಾ ॥
ಪವಿಕರನಂ ಸೆರೆದಪ್ಪಿಸು ।
ತವಿರಳಸಂತೋಷದಿಂದೆ ಮೇಣಿಂತೆಂದಂ ॥ ೮೧ ॥

ಸುರಪಜಿದಾಖ್ಯೆಯೆ ನಿನ್ನೊ ।
ಳ್ಮೆರೆಗುಂ ದಿಗ್ವಿಜಯಿಯಾಗಿ ಸೊಗಮಿರ್ಪುದುಮೆಂ ॥

ದರವಿಂದಭವಂ ವರಮಂ ।
ಕರುಣಿಸಿ ರಾವಣಿಗೆ ತನ್ನ ಪೊಳಲಂ ಸಾರ್ದ್ದಂ ॥ ೮೨ ॥

ಸುತನಂ ಮನ್ನಿಸಿ ರಾವಣ ।
ನತುಳಪರಾಕ್ರಮದೆ ರೂಪ್ಯಶೈಲಮನಾಗಳ್ ॥
ಖತಿಯಿಂ ಕಿಳ್ತೆತ್ತಲ್ಪಶು ।
ಪತಿ ಪದದಿಂದೊತ್ತೆ ಸಿಲ್ಕಿದುವು ನಳಿದೋಳ್ಗಳ್ ॥ ೮೩ ॥

ರಾವಣದನುಜನ ಸಬುದಂ ।
ತೀವಿರೆ ದಿಕ್ತಟಮನಂಬುಜೋದ್ಭವನಾ ಮಾ ॥
ದೇವಂಗೆ ಪೇಳ್ದ ಬಿಡಿಸ ।
ಲ್ಕಾ ವಿಬುಧಾರಾತಿ ನಾಣ್ಚಿ ಮರಳ್ದಂ ಪುರಕಂ ॥ ೮೪ ॥

ಯತಿಗಳಿರ ಕೇಳಿ ರಾಕ್ಷಸ ।
ಪತಿರಾವಣನಿರ್ದ್ದನಧಿಕಸುಖದಿಂ ಲೋಕ ॥
ತ್ರಿತಯಂ ಕರಗತಮಾಗ ।
ಲ್ಪ್ರತಿಯಿಲ್ಲದನೆನಿಸಿದಂ ಸುರಾಸುರಗಣದೊಳ್ ॥ ೮೫ ॥

ಅಂದು ವನದೊಳಾ ಲಕ್ಷ್ಮಣ ।
ನಿಂದಂ ನೇರ್ಪಡೆಯೆ ಕರ್ಣನಾಸಾಚ್ಛೇದಂ ॥
ಬಂದಾ ರಕ್ಕಸಿ ಸಭೆಯೊ ।
ಳ್ನಿಂದುಂ ಮೊರೆಯಿಡುತಲಗ್ರಜಂಗಿಂತೆಂದಳ್ ॥ ೮೬ ॥

ಖರದೂಷಣರಾಲಯದಿಂ ।
ಪೊರಮಟ್ಟುಂ ಬಂದು ದಂಡಕಾವನದೊಳ್ಸಂ ॥
ಚರಿಸುತ್ತಿರೆ ಕಂಡೆಂ ಭೂ ।
ವರಸುತರಿರ್ವರನುಮವರೊಳೊರ್ವನ ಸತಿಯಂ ॥ ೮೭ ॥

ಪದಿನಾಲ್ಕುಂ ಲೋಕದೊಳಾ ।
ಸುದತಿಗೆ ಸಮರೆನಿಪ ನಾರಿಯರನಾಂ ಕಾಣೆಂ ॥
ಸದಮಲೆಯನಭೀಕ್ಷಿಸಿ ತವ ।
ಪದಕರ್ಪಿಪೆನೆಂದು ಪೋದೆನವರೆಡೆಗಾಗಳ್ ॥ ೮೮ ॥

ಸತಿಯಂ ಸ್ವವಶಂಗೊಳಿಪಾ ।
ಜತನದೊಳಾನಿರ್ದೊಡೈದೆ ರಾಘವನನುಜಂ ॥
ಖತಿಯಿಂ ಭಂಗಂಗೆಯ್ಯೆ ।
ಲ್ಕತಿದುಃಖದೆ ಪೋಗಿ ಖರಗೆ ದೂರಿದೆನಾಗಳ್ ॥ ೮೯ ॥

ಆ ದನುಜಂ ಕಡುಗಿನಿಸಿಂ ।
ಸೋದರರೊಡವೆರೆದು ನಿಖಿಳಖಳಬಲಸಹಿತಂ ॥
ಯೋಧನಕಂ ಬರೆ ರಾಘವ ।
ನಾ ದೈತ್ಯರನರೆದು ಕೊಂದನರೆಜಾವದೊಳಂ ॥ ೯೦ ॥

ವಸುಧೆಯೊಳಗ್ಗಳರೆನಿಪ ।
ರ್ದಶರಥಸುತರ್ಕೈದೆ ರಾಮಲಕ್ಷ್ಮಣರೆಂಬರ್ ॥
ಶಶಿಮುಖಿ ರಾಮನ ಸತಿಯಯ್ ।
ರಿಸಿಕುಳಮಂ ಪೊರೆಯುತಿರ್ಪರಯ್ ವಿಪಿನದೊಳಂ ॥ ೯೧ ॥

ಅವರತಿಬಲಿಷ್ಠರಸುರರ ।
ನಿವಹಂ ಮಿಗೆ ನಾಶಮಾದುದವರಿದಿರೊಳ್ಳಿ ॥
ಲ್ಲವರೊರ್ವರನುಂ ಕಾಣೆಂ ।
ಭುವನಾಧಿಪನಾಗಿ ಸುಮ್ಮನಿರ್ಪುದಿದೇನಯ್ ॥ ೯೨ ॥

ಇಂತೆಂದ ಶೂರ್ಪನಖೆಯಂ ।
ಸಂತಯ್ಸುತೆ ಪೊಕ್ಕು ಮನೆಯನಾ ರಾತ್ರಿಯೊಳಂ ॥
ಚಿಂತಿಸಿ ತನ್ನೊಳ್ತಾನಿದ ।
ಕೆಂತೇವೆನೆನುತ್ತೆ ನಿಶ್ಚಯಂಗೆಯ್ದನವಂ ॥ ೯೩ ॥

ಪದುಮಾಕ್ಷಂ ರವಿವಂಶದೊ ।
ಳುದಯಿಸಿ ವರರಾಮನಾಮದಿಂ ಭೂತಳಮಂ ॥
ಪದುಳಂಗೆಯ್ವನೆನುತ್ತಂ ।
ಮೊದಲೆನಗೆ ಸನಕ್ಕುಮಾರಕಂ ಪೇಳ್ದಿರ್ಪಂ ॥ ೯೪ ॥

ಹರಿಯಲ್ಲದಿರ್ದೊಡಾ ನಿಶಿ ।
ಚರವರಖರದೂಷಣಾದಿ ವೀರರನೆಲ್ಲಂ ॥
ಶರಮೊಂದರಿಂದೆ ಕೊಲ್ಲುವ ।
ಧುರಧೀರಸಮರ್ಥರುಂಟೆ ಲೋಕತ್ರಯದೊಳ್ ॥ ೯೫ ॥

ಆತನೆ ಹರಿಯಾದೊಡೆ ಮೇ ।
ಣೀ ತನುವಂ ವೈರದಿಂದಮೊಪ್ಪಿಸುತಂ ಸಂ ॥
ಪ್ರೀತಿಯೊಳಂ ಪಡೆವೆಂ ವಿ ।
ಖ್ಯಾತಮಹಾವಿಷ್ಣುವಿರ್ಪ ಪುಟಭೇದನಮಂ ॥ ೯೬ ॥

ನರನಾಥನಾದೊಡವನಂ ।
ತರಿದಾತನ ಸತಿಯನೈದೆ ತಂದೀ ಪುರದೊಳ್ ॥

ನಿರತಂ ಸೊಗಮಿರ್ದ್ದಪೆನೆಂ ।
ದಿರಲುದಯಂಗೆಯ್ದನಬ್ಜಬಾಂಧವನಾಗಳ್ ॥ ೯೭ ॥

ಸಂಧ್ಯಾಕೃತ್ಯಮನೆಸಗುತೆ ।
ಬಂದಂ ಸ್ಯಂದನಮನೇರ್ದು ರಾವಣದನುಜಂ ॥
ಸಿಂಧುಪ್ರದೇಶಕಂ ನಲ ।
ವಿಂದಂ ಮಾರೀಚನಿರ್ಪ ಪರ್ಣಾಲಯಕಂ ॥ ೯೮ ॥

ಕಾಣುತಮಿದಿರ್ವಂದೆನ್ನಂ ।
ಕಾಣಲ್ಕೇಂ ಬಂದೆ ನಡೆವ ಕಜ್ಜಮದೇನಯ್ ॥
ಮಾಣದೆ ವಿವರಿಪುದೆಂದಾ ।
ಕೌಣಪಪತಿಯೊಡನೆ ಕೇಳ್ವನಾ ಮಾರೀಚಂ ॥ ೯೯ ॥

ಮಾರೀಚನೆ ಕೇಳ್ದಶರಥ ।
ಭೂರಮಣನ ಪುತ್ರರಿರ್ವರೆಳ್ತಂದುಂ ಕಾಂ ॥
ತಾರದೊಳೆಲೆವನೆಗೆಯ್ದು ಸು ।
ರಾರಿವಿರಾಧಾದಿದೈತ್ಯರಂ ಕೊಂದರಣಂ ॥ ೧೦೦ ॥

ತಂಗೆಯ ಕಿವಿಮೂಗುಗಳಂ ।
ಭಂಗಿಸಿ ಖರದೂಷಣಾದಿ ದನುಜಾವಳಿಯಂ ॥
ಕೆಂಗರಿಗೋಲಿಂದಂ ರಘು ।
ಪುಂಗವನುರೆ ಸದೆದನಂತೆ ಕೇಳಯ್ ದನುಜಾ ॥ ೧೦೧ ॥

ಭಗಿನಿಯ ಸೊಬಗಂ ಕಿಡಿಸಿದ ।
ಪಗೆಯಹ ಮಾನವನ ಮಾನಿನಿಯನರಮನೆಯಂ ॥
ಪುಗಿಸದಿರೆಂ ನೀಂ ಸಾಹಾ ।
ಯ್ಯಗಳಂ ನೆರೆಮಾಳ್ಪುದೆಂದನಾ ದಶಕಂಠಂ ॥ ೧೦೨ ॥

ಅಕಟಕಟ ಕಿಡಿಸಿ ಕಳೆವೆಯ ।
ಸಕಲೈಶ್ವರ್ಯಗಳನಿಂದು ಹರಿಯೊಳ್ಕಲಹಂ ॥
ಸುಕರಂ ತಾನಪ್ಪುದೆ ಮಾ ।
ಲಕುಮಿಯ ದಯೆ ನಿನಗೆ ಸಾಧ್ಯಮಪ್ಪುದೆ ನೋಡಲ್ ॥ ೧೦೩ ॥

ಮಾನವನೆಂದರಿಯದಿರಾ ।
ಮಾನಾಥನೆ ರಾಮನಲ್ತೆ ದಿವಿಜರ ಮೊರೆಯಿಂ ॥
ಮಾನವರೂಪದೊಳವತರಿ ।
ಸೀ ನೆಲಕೆಳ್ತಂದನಸುರಕುಲಮಂ ವಧಿಸಲ್ ॥ ೧೦೪ ॥

ಅನುಭವವಿಲ್ಲದೆ ತಿಳಿವುದೆ ।
ಮುನಿವಿಶ್ವಾಮಿತ್ರನಧ್ವರದೊಳಂ ತಾನಾ ॥
ತನ ಶರದಿರವಂ ತಿಳಿದೆಂ ।
ತನುಮಾತ್ರಂ ಜೀವಿಸಿರ್ದೆನಾ ರಘುವರನಿಂ ॥ ೧೦೫ ॥

ಅಂದು ಮೊದಲಾಗೆ ತನಗಂ ।
ಬಂದಿರ್ಕ್ಕುಂ ಭೀತಿಭೀತವಾತುಲನಾಮಂ ॥
ಪೊಂದಿದ ಭಯಮಂ ನೆನೆಯ ।
ಲ್ಕಂದುಗುಮೆನ್ನಾತ್ಮಮಿನ್ನುಮಸುರೋತ್ತಂಸಾ ॥ ೧೦೬ ॥

ಅಸುರಮುನಿಪನಿಂತೆನಲಾ ।
ದಶವದನಂ ಕೋಪದಿಂದೆ ಗದರಿದನೆಲವೋ ॥
ಶಶಿಧರವಿಧಿಮುಖ್ಯರ್ಸೇ ।
ವಿಸುವರ್ಕೇಳೆನ್ನನೈದೆ ಮನುಜನ ಮಾತೇಂ ॥ ೧೦೭ ॥

ಘಡಘಡ ಭೀತಿವಚನಮಂ ।
ನುಡಿದೊಡಮಾನಂಜುವಾತನೇಂ ತದ್ಭಯಮಂ ॥
ಬಿಡುಬಿಡು ನಿಮಿಷಂ ನಿಲ್ಲದೆ ।
ನಡೆನಡೆ ನೀನೆಂದು ಚಂದ್ರಹಾಸಮನುಗಿದಂ ॥ ೧೦೮ ॥

ದಶಗಳನ ಕಿನಿಸನೀಕ್ಷಿಸು ।
ತಸುವಂ ಖಳನುಳಿಸನೀತನಿಂ ಸಾಯ್ವುದರಿಂ ॥
ಬಿಸಜದಳಾಕ್ಷನ ನಿರುಪಮ ।
ವಿಶಿಖಕೆ ನಿಜತನುವನಿತ್ತು ಮುಕ್ತಿಯನುಯ್ವೆಂ ॥ ೧೦೯ ॥

ಎಂದಾಲೋಚಿಸಿ ನಿಶಿಚರ ।
ನೆಂದಂ ದಶಕಂಠನೊಡನೆ ಮುನಿಸೇಕೆನ್ನೊಳ್ ॥
ಬಂದಪೆನೆನ್ನಿಂದಪ್ಪುದ ।
ನಿಂದೆನಗಂ ಪೇಳಲಕ್ಕುಮೆನಲವನೆಂದಂ ॥ ೧೧೦ ॥

ಮಾವಾ ಮನದೊಳ್ನೋಯದೆ ।
ಸಾವಿರಮಂ ತಪ್ಪನಿಂದು ಮನ್ನಿಪುದೆಸುತಂ ॥
ಶ್ರೀವಿಮಲರಥಮನೇರಿಸಿ ।
ತೀವಿದ ಸಂತಸದೆ ಪಂಚವಟಿಗೆಳ್ತಂದಂ ॥ ೧೧೧ ॥

ನಾನಾಯತ್ನಗಳಿಂದಂ ।
ಮಾನವರಂ ಮಂದಿರದಿನೆ ಪೊರಮಡಿಸೆಂದುಂ ॥

ದಾನವಪತಿ ನೇಮಿಸೆ ನಿಜ |
ಮಾನಸದೊಳ್ತಿಳಿದು ಬಂದನಾ ಮಾರೀಚಂ || ೧೧೨ ||

ಕನಕಮಯವಿಗ್ರಹದ ಮಿನು |
ಮಿನುಗುವ ವರರೂಪ್ಯಪದ್ಮಗಳ ಚಂಚಲಲೋ ||
ಚನಗಳ ನುಣ್ಗೊರಲಿನ ಚೆ |
ಲ್ವಿನ ಮೃಗಶಿಶುರೂಪನಾಂತು ರಾರಾಜಿಸಿದಂ || ೧೧೩ ||

ಧೀಂಕಿಡುತುಂ ಪುಲ್ಮೇಯುತೆ |
ಶಂಕಿಸುತೆಡಬಲನನೀಕ್ಷಿಸುತ್ತಡಿಗಡಿಗಂ ||
ಕೊಂಕುತೆ ಕುಸಿಯುತೆ ಸುಳಿದಂ |
ಪಂಕಜಲೋಚನನ ಪರ್ಣಶಾಲೆಯ ಬಳಿಯೊಳ್ || ೧೧೪ ||

ಚಿತ್ರತರಮೃಗಮನೀಕ್ಷಿಸಿ |
ಧಾತ್ರೀಸುತೆ ಬೆರಗುವಟ್ಟು ನಿಜನಾಥನೊಳಂ ||
ನೇತ್ರೋತ್ಸವಮಾಗಿದೆ ಶತ |
ಪತ್ರಾಂಬಕ ಮೃಗಮನೆನಗೆ ಕರುಣಿಪುದೆಂದಳ್ || ೧೧೫ ||

ತಾವರೆಮೊಗದರಗಿಳಿ ಕೇಳ್ |
ಭಾವದೆ ದಾನವನ ಚೇಷ್ಟೆಯೆಂದಾಂ ತಿಳಿವೆಂ ||
ಈ ವಿವಿಧವರ್ಣಮೃಗಮುಂ |
ಭೂವಳಯದೊಳುಂಟೆ ಮಾಯೆಯಲ್ಲದೆ ಬಳಿಕಂ || ೧೧೬ ||

ಖಳರಾವಣನಂ ಕೊಲ್ವೊಡ |
ಮುಳಿದಿರ್ಪುದುಮೊಂದೆ ವರ್ಷಮನ್ನೆಗಂ ವಹ್ನಿಯೊಳಂ ||
ನಲವಿಂ ನೆಲಸವನಿಯೊಳಂ |
ನೆಳಲಂ ನಿಲಿಸೆಂದು ಪೇಳ್ದನಾ ರಘುವೀರಂ || ೧೧೭ ||

ಇಂತೆನೆ ರಘುಜಂ ಸೀತಾ |
ಕಾಂತಾಮಣಿ ನಿಜದೆ ತಿಳಿದು ಛಾಯೆಯನಿಟ್ಟುಂ ||
ತಾಂ ತಳ್ವದೆ ಪತಿಗೆರಗು |
ತ್ತಂ ತೆರಳ್ದಳ್ಮೂಲರೂಪದಿಂ ಶುಚಿಪುರಕಂ || ೧೧೮ ||

ವಿಮಲಮತಿಗಳಿರ ಕೇಳ್ವುದು |
ನಿಮಗಾಂ ಮೊದಲೆಂದ ಪರಿಯೊಳಂದೋರೊರ್ವರ್ ||
ಕಮನೀಯಮೃಗದ ನೆವದಿಂ |
ಕ್ರಮದಿಂದಂ ಪೋದ ಸಮಯದೊಳೆ ದಶಕಂಠಂ || ೧೧೯ ||

ಮಿರುಗುವ ದಂಡಕಮಂಡಲು ।
ಪರಿಶೋಭಿಸುವಕ್ಷಮಾಲೆಗಳನಾಂತುಂ ಭೂ ॥
ವರನೆಲೆವನೆಗೆಳ್ತಂದಂ ।
ಕರವೊಪ್ಪುವ ಜಟಿಲನಾಗಿ ಸಾಯಾಹ್ನದೊಳಂ ॥ ೧೨೦ ॥

ಜತಿಯಿಾತನೆಂದು ಸೀತಾ ।
ಸತಿಯವನಂ ಭಕ್ತಿಯಿಂದೆ ಪೂಜಿಸಿ ನಮಿಸ ॥
ಲ್ಕತಿಸಂತೋಷದೆ ದಾನವ ।
ಪತಿರಾವಣನೆಂದನಬ್ಜಪತ್ರಾಂಬಕೆಯೊಳ್ ॥ ೧೨೧ ॥

ಆವನ ಸತಿ ನೀಂ ನಿನ ।
ಗಾವಂ ಪಿತನಿಲ್ಲಿ ಬಂದ ಕಾರಣಮೇಂ ರಾ ॥
ಜೀವಾನನೆ ಪೇಳೆಂದಾ ।
ರಾವಣಮುನಿ ಕೇಳೆ ಪೇಳ್ದಳವನಿಜೆಯಾಗಳ್ ॥ ೧೨೨ ॥

ಜನಕಜೆ ತಾನಿನವಂಶದ ।
ಜನಪತಿದಶರಥನ ಪುತ್ರವಧುವೆಂ ಕೇಳಾ ॥
ತನ ಸಹಜಾತಂ ಲಕ್ಷ್ಮಣ ।
ನೆನಗಾಯ್ತುವರೊಡನೆ ವಿಪಿನವಾಸಮಿದೆಂದಳ್ ॥ ೧೨೩ ॥

ಅಹಹ ವಿವೇಕಮುದಾದುದು ।
ಮಹಿಯರಸನ ತನುಜೆಯಾಗಿ ವಿಪಿನದೊಳೊರ್ವಳ್ ॥
ಸುಹಿತಮೆ ಬಾಳ್ವುದು ಪಾಣಿ ।
ಗ್ರಹಣಂಗೆಯ್ದಾತನಾರೊ ಶಿವಶಿವ ಎಂದಂ ॥ ೧೨೪ ॥

ಈ ವಿಪಿನವಾಸಮೇತಕೆ ।
ದೇವರ್ಕಳ ಸತಿಯರ್ಬೈದೆ ನಿರತಂ ನಿನ್ನಂ ॥
ಸೇವಿಪ ತೆರನಂ ಮಾಳ್ಪೆಂ ।
ರಾವಣನೆಂ ಸಕಲಲೋಕನಾಯಕಪತಿಯೆಂ ॥ ೧೨೫ ॥

ಶಶಿಮುಖಿ ನೋಡೆಂದೆನುತಂ ।
ದಶವದನಂ ನಿಜಶರೀರಮಂ ತೋರ್ದ್ವನ್ತಾ ॥
ರಸವೆರಸು ಕಿಳ್ತು ಸತಿಯಂ ।
ಮಿಸುಪ ಮಹಾರಥಮನೇರಿಸಿದನಾ ಕ್ಷಣದೊಳ್ ॥ ೧೨೬ ॥

ಬಲೆಯೊಳ್ಸಿಲ್ಕಿದ ಮಿಗದೊ ।
ಲ್ಬಳಲ್ದು ಬಾಯಾರಿ ತಲ್ಲಣಂಗೊಂಡಾಗಳ್ ॥

ನೆಲಸಣುಗಿಯಳ್ಕಿ ಕಡುಪಂ ।
ಬಲಿಸಿದಳೇವೇಳ್ವೆನವಳ ದುಃಖೋನ್ನತಿಯಂ ॥ ೧೨೭ ॥

ಕೊಣಸೇತಕೆ ಬಂದುದೊ ದಿನ ।
ಮಣಿಕುಲಜರನೇಕೆ ಕಳಿಪಿದೆನೊ ಬೆಂಬಳಿಯೊಳ್ ॥
ಕುಣಪಾಶಿ ನಿರಯದಿರವಂ ।
ಗಣಿಸದೆ ಕೊಂಡುಯ್ವನೆನ್ನನಿವಕೇಗೆಯ್ವೆಂ ॥ ೧೨೮ ॥

ಹಾ ರಾಮಾ ಹಾ ಲಕ್ಷ್ಮಣ ।
ಹಾ ರಘುವರ ಕಾವುದೆಂದು ಪಂಬಲಿಸುವ ಸೀ ॥
ತಾರಮಣಿಯನಾ ದನುಜಂ ।
ಭೋರನೆ ಕೊಂಡುಯ್ಯುತಿರ್ದ್ದನಭ್ರಾಧ್ವದೊಳಂ ॥ ೧೨೯ ॥

ತರುಬಿದನಾ ಖಗಪತಿಯಂ ।
ತರುಬುತೆ ಶರನಿಧಿಯನ್ನೈದೆ ದಾಂಟುತೆ ಲಂಕಾ ॥
ಪುರಮಂ ಸಾರ್ದುಂ ಭರದಿಂ ।
ಪರಿಶೋಭಿಸುತಿರ್ಪಶೋಕವನಕೆಳ್ತಂದಂ ॥ ೧೩೦ ॥

ಮಲರಹಿತಶಿಂಶಪದ್ರುಮ ।
ತಲದೊಳ್ಕಳಗಿಳಿಪಿ ಸೀತೆಯಂ ದನುಜೇಂದ್ರಂ ॥
ಬಲಭರಿತರಪ್ಪ ದನುಜಾ ।
ಬಲೆಯರ್ಗಂ ಕಾವುದೆಂದು ಪೇಳ್ದಂ ಬಂದಂ ॥ ೧೩೧ ॥

ಶ್ರೀರಾಮರಾಮನೆಂದೆನು ।
ತಾರಾಮದೊಳವನಿಜಾತೆ ನೆನೆನೆಸೆದಿರ್ದ್ದಳ್ ॥
ಘೂರಮಣರಿರ್ದ್ದರಿತ್ತಲ್ ।
ಸೂರತನೂಭವನ ಗಿರಿಯೊಳೆಂದಂ ಸೂತಂ ॥ ೧೩೨ ॥

# ಚತುರ್ಥಾಶ್ವಾಸ.

ವೃತ್ತ || ಸೀತಾಜಾತವಿಯೋಗದುಃಖವಿಶದಂ ಸುಗ್ರೀವರಾಜ್ಯಪ್ರದಂ |
ಭೂತೇಶಾಬ್ಜಭವೇಂದ್ರವಂದ್ಯಚರಣಂ ಭೂದೇವಸಂರಕ್ಷಣಂ ||
ವಾತೋದ್ಭೂತಹೃದಂಬುಜಾತಸದನಂ ವಾರಾಶಿಗಂಭೀರಗಂ |
ಧೂತಾಶೇಷನತಾಘನೀಗೆ ಶುಭಮಂ ದೂರ್ವಾದಳಶ್ಯಾಮಲಂ || ೧ ||

ಕಂದ || ಪಿಂಗಳಸಯನಂ ಕರುಣಾ |
ಪಾಂಗಂ ಕಮನೀಯರೂಪನಸುರೋದ್ಧತವಾ ||
ತಂಗಮೃಗೇಂದ್ರಂ ವಿಜಿತಾ |
ಸಂಗಾಸ್ತ್ರಂ ಕುಡುಗೆ ಸೌಖ್ಯಮಂ ಹನುಮಂತಂ || ೨ ||

ಮುಂದೇಂ ಗೆಯ್ದಂ ರಾಮಂ |
ಬಂಧುರ ತತ್ಕಥೆಯನ್ನದೆ ಚಿತ್ತರಿಸು ದಯಾ ||
ಸಿಂಧುವೆ ನೀನೆಂದುಂ ಮುನಿ |
ವೃಂದಂ ಬೆಸಗೊಂಡೊಡವರೊಳೆಂದಂ ಸೂತಂ || ೩ ||

ನಿರುಪಮಿತ ಸುಪ್ರವರ್ಷಣ |
ಗಿರಿತಟದೊಳ್ ಭೂಮಿಪಾಲತನುಜರಿರಲ್ಕಂ ||
ಕುರಿತಮುದಾದುದು ವರ್ಷಂ |
ಶರದಂಗಳ್ತೋರ್ದ್ದುವಾಗಳಾಕಾಶದೊಳಂ || ೪ ||

ಗಿರಿಜಯವೊಂದುಂಗೂಡುತೆ |
ಸುರಪತಿಯೊಳ್ಸೆಣಸೆವೇಳ್ಕುಮೆಂದಂಬರಕಂ ||
ಶರನಿಧಿಯಿಂದೇರ್ದ್ದುವಂ ಮಿಗೆ |
ಬರುತಿರ್ದ್ದುವೊ ಎಂಬೊಲೆಸೆದುವಭ್ರಾವಳಿಗಳ್ || ೫ ||

ಅಂಬರಸತಿ ಧರಿಸಿದ ನೀ |
ಲಾಂಬರವೋ ರಾಹು ತೋರ್ದ್ದ ವಿಶ್ವಾಕೃತಿಯೋ ||
ಎಂಬೊಲಸಿತಾಭ್ರನಿಚಯಂ |
ತುಂಬಿದುದಾಕಾಶದೆಡೆಯೊಳಾ ಕಾಲದೊಳಂ || ೬ ||

ಧರೆಯೊಳ್ನೀರಾಹಾರದಿ |
ನಿರಲೇನಹಿ ತಿಂಬುದೆಮ್ಮನನಿಮಿತ್ತಮಿದಂ ||

ಪರಿಹರಿಪುದೆಂದು ಸಿಡಿಲಂ |
ಕರೆವುದೊ ಎನೆ ಮೊರೆವುತಿರ್ದ್ದುದಾ ಭೇಕಕುಲಂ ॥ ೭ ॥
ಜ್ಯೋತಿರ್ಲತೆನೀಪದ್ರುಮ
ಕೇತಕಿಗಳ್ಮುಗುಳನಾಂತು ರಾರಾಜಿಸುಗುಂ ||
ಭೂತಳದೊಳೆತ್ತಲುಂ ಪ್ರತಿ |
ವಾತಭಯಂ ಪೆರ್ಚಿದತ್ತು ವರ್ಷಾಗಮದೊಳ್ ॥ ೮ ॥
ಕೋಗಿಲೆಯ ಕೂಗು ಕುಗ್ಗಿತ್ತು |
ಸೋಗೆಗೆ ಚೊಕ್ಕಳಿಕೆಯಾದುದಂಚೆಯ ಬಳಗಂ ||
ಸಾಗಿತು ಮಾನಸದೆಡೆಗಂ |
ಸಾಗರರವಮ್ಮೆದೆ ತೀವಿತವನೀತಳಮಂ ॥ ೯ ॥
ಖಗಶಶಿಗಳ್ ಪೋ ಕಾಣರ್ |
ಖಗತತಿ ಮಿಗೆ ಚರಿಸದಾಯ್ತು ಗಗನಾಂಗಣದೊಳ್ ||
ಮುಗುಳಂಬನುರುಬೆ ಪೆರ್ಚ್ಚಿತ್ತು |
ಮುಗಿಯಲ್ ಗ್ರೀಷ್ಮಾಧಿನಾಥನೋಲಗಮಾಗಳ್ ॥ ೧೦ ॥
ಸುರವತ್ಸ್ಮಾಬಲೆಯಂಬಕ |
ಸುರುಚಿಯೊ ಗಗನೋರುಭಟನ ಖಡ್ಗದ ಪೊಳೆಪೋ ||
ಶರದೊಡನೆ ಪಾರ್ವ್ವ ಮತ್ಸ್ಯ |
ಸ್ಫುರಣಮೊ ಎನಲೆಸೆದುದಂದು ವಿದ್ಯುನ್ನಿಚಯಂ ॥ ೧೧ ॥
ನೆನೆವ ಮಯೂರಕ್ಕಶನಮು |
ನನುವಿಂದಾಂ ಕುಡುವೆನೆಂದು ಘನಪತಿಯುರಿಯಂ ||
ಕರೆವನೊ ಫಣಿಪನ ಮೇಲ್ಗೆನೆ |
ಭರದಿಂದಂ ಸಿಡಿಲ ಗಡಣಮೆರಗಿದುದಿಳೆಯೊಳ್ ॥ ೧೨ ॥
ವಾತಮೃಗೇಂದ್ರಂ ಜಲದ |
ವ್ರಾತಮತಂಗಜಮನ್ನೆದೆ ತಿವಿಯಲ್ಕಂಭೋ ||
ದ್ಭೂತಸುಮೌಕ್ತಿಕಮುದಿರ್ದುದೊ |
ಭೂತಳಕೆನೆ ಸೂಸಿದತ್ತು ವರ್ಷೋಪಲಮುಂ ॥ ೧೩ ॥
ತನಗೊಂದೆ ಋತುವ ದೊರೆತನ |
ಮನಿತರೊಳುಪಕಾರಿಯೆನಿಪೆನೆಂದಂಬುಧಿಯಿಂ ||
ವನಮಂ ತಂದುಂ ಮಿಗೆ ಮೇ |
ದಿನಿಗಿಡುವನೊ ಎಂಬೊಲೆಸೆದನಂಬುದನಾಥಂ ॥ ೧೪ ॥

ಕಡಲಲೆಗಳಂಬರಂಬರ |
ಮಡರ್ದುವು ಕೆರೆತೊರೆಗಳುಬ್ಬಿ ಪರಿಪರಿದುವು ಮೇಣ್ ||
ಪೊಡವಿ ಕೆಸರಾಯ್ತು ಬೀಸಿತು |
ಪಡುವಲ ದೆಸೆಯಿಂದೆ ಗಾಳಿಮೊತ್ತಂ ಸುತ್ತಂ || ೧೫ ||

ಧರಣಿಪತನುಜರ್ವಲ್ಕಲ |
ಧರರಾ ಗಿರಿತಲದೆ ಸತ್ಕಥಾನಿರತರುಮಾ ||
ಗಿರೆಯೊಂದು ದಿನಂ ಲಕ್ಷ್ಮಣ |
ನುರುಭಕ್ತಿಯೊಳೆಂದನಬ್ಜಪತ್ರಾಂಬಕನೊಳ್ || ೧೬ ||

ಸತಿಸುತಬಾಂಧವಧನಪಶು |
ತತಿಗಂ ವಶರಾಗಿ ಜಾತಿಧರ್ಮಮನುಳಿದುಂ ||
ಮತಿಗೆಟ್ಟು ನಿರಯಕೆಯ್ದುವ |
ಪತಿತರ್ಗೆಂತಕ್ಕುಮೈದೆ ಮೋಕ್ಷಂ ಸುಪಥಂ || ೧೭ ||

ಸುಲಭದೊಳಪ್ಪುದನೆನಗಂ |
ತಿಳಿಪುವುದೆನಲಾತನೊಡನೆ ಪೇಳ್ದಂ ರಾಮಂ ||
ಬಳಲದ ಬೇಗುದಿಗೊಳ್ಳದ |
ನಲವಿಂದಮೆ ಮುಕ್ತಿಸಂಪದಂ ದೊರೆಕೊಳ್ಗುಂ || ೧೮ ||

ಯಾಗಾದಿಕರ್ಮದಿಂದಂ |
ಯೋಗಗಳಿಂ ತಪಗಳಿಂದೆ ಮೂರ್ತ್ಯರ್ಚನೆಯಿಂ ||
ದಾಗಮತಂತ್ರಸುಮಂತ್ರದಿ |
ನಾಗದು ನಿಜಚಿತ್ತಶುದ್ಧಿ ಬಾಲನೆ ಕೇಳಾ || ೧೯ ||

ಕೃತಕರ್ಮದ ಫಲದಿಂ ಸುರ |
ಪತಿಪದವಿಗಳಾದಿಯಪ್ಪ ಭೋಗಗಳಕ್ಕುಂ ||
ಪತನಮುದಕ್ಕುಂ ತತ್ಫಲ |
ತತಿ ತೀರಲ್ಭೂಮಿತಳಕೆ ಜವಗತಿಯಿಂದಂ || ೨೦ ||

ಬೇರೊಂದೆಣಿಸದೆ ಮನದೊಳ್ |
ತಾರಕಮಂ ಭಕ್ತಿಯಿಂದೆ ಜಪಿಸಲ್ಮನುಜಂ ||
ಧಾರಿಣಿಯೊಳ್ ಸೊಗಮಂ ಮೇಣ್ |
ಸಾರೂಪ್ಯಮನೆಯ್ದಿ ಮುಕ್ತಿಯಂ ಪಡೆವನಣಂ || ೨೧ ||

ಕರುಣದೊಳಂದಾ ಗಿರಿಜೆಗೆ |
ಹರನುಪದೇಶಿಸಿದನೆನ್ನ ನಾಮಮನನಿಶಂ ||

ಸ್ಮರಿಸಿದ ನರಂಗೆ ಪಾಪದ ।
ನೆರವಿಯ ಭಯಮಿಲ್ಲಮೆಂದು ಕಾಶೀತಲದೊಳ್ ॥ ೨೨ ॥

ಆ ನಾಮಂ ಭಕ್ತಿಪರಂ ।
ಜಾನಿಪ ಸತ್ಪುರುಷನಿರ್ಪ ಧರೆ ವೈಕುಂಠಂ ॥
ಆ ನರನಂ ತವೆ ನೋಡಿದ ।
ಮಾನವಗಂ ಮೋಕ್ಷಮಕ್ಕುಮಣುಗನೆ ಕೇಳಾ ॥ ೨೩ ॥

ಎರಡಕ್ಕರಮಾ ನಾಮಂ ।
ಸ್ಮರಿಸುವೊಡಂ ಕಷ್ಟಮಿಲ್ಲಮತಿ ಫಲದಮದಂ ॥
ಮರೆಯದೆ ನೆನೆಯಲ್ಕಘತತಿ ।
ಪರಿಗುಂ ಸಂದೇಹಮಿಲ್ಲಮೆಲೆ ಲಕ್ಷ್ಮಣನೇ ॥ ೨೪ ॥

ನೇಮಮುದಿಲ್ಲಮುದರ್ಕ್ಕಂ ।
ಕ್ಷೇಮಂಕರಮಪ್ಪ ರಾಮನಾಮಮನನಿಶಂ ॥
ಪ್ರೇಮದೊಳಂ ನೆನೆ ನಿನಗು ।
ದ್ದಾಮಮಹಾಪದವಿಯಕ್ಕುಮೆಂದಂ ರಾಮಂ ॥ ೨೫ ॥

ಅತಿಭಕ್ತಿಯಿಂದೆ ಸೀತಾ ।
ಪತಿಯಂಘ್ರಿಗೆ ಮಣಿದು ದೇವ ಲಕ್ಷ್ಮಣನವನಂ ॥
ನುತಿಸುತೆ ತನ್ನಾಮಮನತಿ ।
ಹಿತಮೆಂದುರೆ ಜಪಿಸುತಿರ್ದನೆಲೆ ಮುನಿಗಳಿರಾ ॥ ೨೬ ॥

ಇಂತಿರೆ ಪರಿದುದು ಮೇಘದ ।
ತಿಂತಿಣಿ ವಿಮಲತೆಯನಾಂತುದಾಕಾಶಂ ದಿ ॥
ಕ್ಪ್ರಾಂತಂ ಕಳೆಗೊಂಡುದು ಖಗ ।
ಸಂತತಿ ಚರಿಸಿತ್ತು ನಾಡೆ ಶರದಾಗಮದೊಳ್ ॥ ೨೭ ॥

ದಿನಪಶಶಾಂಕರ್ಗಂ ಪ್ರಭೆ ।
ಯನುಗೊಂಡುದು ಕಮಲವೃಂದದೊಳ್ಭ್ರಮರಕುಲಂ ॥
ಬಿನದದೆ ಬಂಡುಣುತಿರ್ದುದು ।
ವನನಿಧಿ ಪರಿಪುಷ್ಟಮಾದುದಾ ಕಾಲದೊಳಂ ॥ ೨೮ ॥

ತಿಳಿದುವು ಕೆರೆತೊರೆಗಳ್ ಶ್ರೀ ।
ಕಲಮಂಗಳ ಗರ್ಭಪೂರ್ಣಮಾದುದು ಬಳಿಯಂ ॥
ನೆಲಸರಿಲಾರಿತು ಮಲ್ಲಿಗೆ ।
ಕಲಿಕಾನ್ವಿತಮಾಯ್ತು ತಾರೆವಳಗಂ ತೊಳಗಲ್ ॥ ೨೯ ॥

ಆ ಸಮಯದೊಳನಿಲಸುತಂ |
ಭಾಸಾಂನಿಧಿಪುತ್ರನೊಡನೆ ಪೇಳ್ದಂ ಗುಣವಾ ||
ರಾಶಿ ಶ್ರೀರಘುಜಂ ತಾ |
ನೇಸು ವಿಲಾಪಿಪನೊ ವಾನರೇಶ್ವರ ನಿನ್ನಿಂ || ೩೦ ||

ಸತಿಸೌಭಾಗ್ಯಂಗಳ್ಕರ |
ಗತಮಾದುವು ರಾಮನತ್ತಣಿಂ ನೀನುಂ ಭೂ ||
ಪತಿಗೆ ಸಹಾಯಂಗೆಯ್ದುಂ |
ಕೃತಕೃತ್ಯನುಮಾಗದಿರ್ಪುದನುಚಿತಮಲ್ತೇ || ೩೧ ||

ಏಂ ತಿಳಿವನೊ ರಘುರಾಮಂ |
ಸೀಂ ತಳ್ವದೆ ಕರೆಸಿ ಕೀಶಕುಲಮಂ ಸೀತಾ ||
ಕಾಂತನ ನುಡಿಯಂ ಮೌಳಿಯೊ |
ಳಾಂತುಂ ತತ್ಕಾರ್ಯಕೊದವೆ ಯೋಗ್ಯಮೆನಿಕ್ಕುಂ || ೩೨ ||

ಇಂತೆಂದನಿಲಕುಮಾರಕ |
ನಂ ತೆಗೆದಾಮೋದದಿಂದೆ ಬಿಗಿದಪ್ಪಿ ಮನ ||
ಶ್ಚಿಂತಾಮಣಿ ನೀನಿರೆ ನಿ |
ಶ್ಚಿಂತೆಯೊಳಾನಿರ್ಪೆನೆಂದನರ್ಯಮಜಾತಂ || ೩೩ ||

ಗಿರಿನಿಭರನತಿಬಲಿಷ್ಠರ |
ನುರೆ ಸಪ್ತದ್ವೀಪವಾಸಿವಾನರವರರಂ ||
ತರುಚರರನೆನ್ನ ಪೊರೆಗಂ |
ಕರೆತನ್ನಿಂ ಪೋಗಿಮೆಂದು ಚರರೊಳ್ನುಡಿದಂ || ೩೪ ||

ಈ ಸಕಲಭುವನಮಧ್ಯದೆ |
ವಾಸಂಗೊಂಡಿರ್ಪ ಕೀಶಭಟರೆನ್ನೆಡೆಗಂ ||
ಮಾಸಾರ್ಧಕೆ ಬಾರದಿರ |
ಲ್ನಾಶಂಗೆಯ್ವಪೆನೆನುತ್ತೆ ನೇಮಮನಿತ್ತಂ || ೩೫ ||

ಏನಾಜ್ಞೆಯೊ ರವಿಸೂನುವ |
ಮಾನಂ ಮಿಗೆ ಪವನವೇಗದಿಂದೆಳ್ತಂದುಂ ||
ಭೂನಾಕನಾಗಲೋಕದ |
ವಾನರರಾಳ್ದಂಗೆ ಮಣಿದು ನಿಂದರ್ನಲವಿಂ || ೩೬ ||

ಇತ್ತಲ್ ಪ್ರಸ್ರವಣಾದ್ರಿಯ |
ನೆತ್ತಿಯೊಳಂ ರಾಮಚಂದ್ರನವನೀಸುತೆಯಂ ||

ಚಿತ್ತದೊಳಂ ಜಾನಿಸಿ ಮರು |
ಗುತ್ತಂ ಸೌಮಿತ್ರಿಯೊಡನೆ ಮೇಣಿಂತೆಂದಂ || ೩೭ ||

ಏನಾಗಿರ್ಪಳೊ ಭೂಮಿಜೆ |
ದಾನವರುಪಹತಿಗಳಿಂದೆ ತದ್ವಾರ್ತೆಗಳಂ ||
ತಾನಾವಂ ಬಿತ್ತರಿಪನೊ |
ಭಾನುಜನತಿಗರ್ವದಿಂದೆ ಮರೆದನೊ ನಮ್ಮಂ || ೩೮ ||

ನಡೆ ನೀನಾತನ ಪೊರೆಗಂ |
ಜಡಮತಿಯಂ ಕೊಂದು ಸುರಪಪುತ್ರನ ಸುತಗಿಂ ||
ದೊಡೆತನಮನಿತ್ತು ಬಳಿಕೆ |
ನ್ನೆಡೆಗಂ ಬಾರೆಂದು ರಾಮನಾಣತಿಗೆಯ್ದಂ || ೩೯ ||

ದೇವ ನಿರೂಪಿಸಿದುದು ನಿಜ |
ಮಾ ವಾನರಸಖ್ಯಮೆಮಗೆ ಹಾಸ್ಯಂ ಮದ್ಬಾ ||
ಣಾವಳಿ ತೃಣಮೇಂ ನತಸಂ |
ಜೀವನೆ ನೋಡೆಂದು ಲಕ್ಷ್ಮಣಂ ಗರ್ಜಿಸಿದಂ || ೪೦ ||

ಜನಪಾಧಮನಂ ಮರ್ದಿಪೊ |
ಡೆನಗೇಕೆ ಸಹಾಯಮೆಂದು ಶರಚಾಪಗಳಂ ||
ಕನಲುತೆ ಕಯ್ಕೊಂಡುಂ ರಘು |
ಜನ ಪದಕಂ ಮಣಿಯೆ ಲಕ್ಷ್ಮಣಂಗಿಂತೆಂದಂ || ೪೧ ||

ನೀನಸಮರ್ಥನೆ ನೋಡಲ್ |
ವಾನರಪತಿಯೊಡನೆ ಸಖ್ಯಮಾದುದರಿಂ ಸ ||
ನ್ಮಾನಿಸುತಂ ಯೋಗ್ಯಸಮಾ |
ಧಾನಮನಾತಂಗೆ ತಿಳಿಪಿ ಕರೆತರೆವೇಳ್ಕುಂ || ೪೨ ||

ಎಂದೊಡೆ ಲಕ್ಷ್ಮಣನಾಗ |
ಳ್ಬಂದುಂ ಕಡುಗಿನಿಸಿನಿಂದಮಾರ್ಭಟಿಸುತೆ ಕಿ ||
ಷ್ಕಿಂಧಾಪುರಕಂ ವಾನರ |
ವೃಂದಂ ತಡೆಯಲ್ಕೆ ಕೊಂದನವರಂ ಜಣದೊಳ್ || ೪೩ ||

ಏವೇಳ್ವೆನದಂ ನಗರಜ |
ನಾವಳಿ ಬೆದರಿದುದು ಲಕ್ಷ್ಮಣನ ಬರವಿನೊಳಂ ||
ದೀ ವೃತ್ತಮನಾಕರ್ಣಿಸು |
ತಾವೇಗದೆ ಬಂದು ಮನ್ನಿಸಿದನಾ ಹನುಮಂ || ೪೪ ||

ದೇವರ್ಗೀತಕೆ ಕೋಪಂ ।
ಸೇವಕರಾಮಲ್ತೆ ನಿಮಗೆ ಪರಿಪಂಥಿಗಳೇ ॥
ನೋವಿರಲೆಮ್ಮಂ ಮುನ್ನಂ ।
ಭಾವಮಿದೇಕತದಿನಾಯ್ತು ಕರುಣಿಪುದೆಂದಂ ॥ ೪೫ ॥

ಹನುಮನಸದೇಂ ಪ್ರೌಢನೊ ಸುರ ।
ಪನ ಪೌತ್ರಂಬೆರಸು ಬೇಗದಿಂ ಲಕ್ಷ್ಮಣನಂ ॥
ಸನಯಂ ಕರೆತಂದುಂ ರವಿ ।
ಜನ ಪೊರೆಯಂ ಸಾರ್ದನವನ ಮುಳಿಸಂ ತಿಳಿಸಲ್ ॥ ೪೬ ॥

ನಡುವನೆವಾಗಿಲೊಳಂ ನಿಂ ।
ದಡಿಗೆರಗುತೆ ರಕ್ಷಿಸೆಂದ ತಾರಾಸತಿಯಂ ॥
ಕಡುಹರಿಸಂಗೊಳಿಸುತೆ ಮಿಗೆ ।
ನಡೆತಂದಂ ರವಿಜನೆಡೆಗೆ ಲಕ್ಷ್ಮಣನಾಗಳ್ ॥ ೪೭ ॥

ಕಾಣುತೆ ಸುಗ್ರೀವಂ ಕ ।
ಯ್ಕಾಣಿಕೆಯಂ ಕೊಟ್ಟು ಭಕ್ತಿಯಿಂ ಪೊಡಮಟ್ಟುಂ ॥
ಕ್ಷೋಣೀಶಸುತನೊಳಂ ಮ ।
ತ್ರಾಣೋಪಮದೇವ ಕಾವುದೆಂದಂ ನಿಂದುಂ ॥ ೪೮ ॥

ಕೃಪೆಯೆನಿತೋ ರಘುವಂಶದ ।
ನೃಪರೊಳ್ ತತ್ಕ್ಷಣದೆ ಲಕ್ಷ್ಮಣಂ ವಕ್ಷದೊಳಂ ॥
ಕಪಿವರನಂ ತಳ್ಕಯ್ಸುತೆ ।
ವಿಪುಳತರಾನಂದದಿಂದೆ ಮನ್ನಿಸಿದನಣಂ ॥ ೪೯ ॥

ಇಂಗಿತಮಂ ತಿಳಿದುಂ ಕಪಿ ।
ಪುಂಗವನಾ ಸಮಯದಲ್ಲಿ ಕಯ್ಮುಗಿದು ದಯಾ ॥
ಪಾಂಗನೆ ಕರೆಸಿರ್ಪಂ ಸಮ ।
ರಾಂಗಣದೊಳ್ನಿಲ್ವ ಕೀಶಪತಿಗಳನೆಂದಂ ॥ ೫೦ ॥

ನುಡಿದ ದಿವಸಕ್ಕೆ ಬಾರದೆ ।
ತಡಗೆಯ್ದಪರಾಧಮೆನ್ನೊಳೊಂದಿರ್ಪುದು ನೀಂ ॥
ಪೊಡೆಯೊಳದನಿಡದೆ ಕಪಿಗಳ ।
ಪಡೆಯಂದವನೈದೆ ನೋಳ್ಪುದೆಂದಂ ರವಿಜಂ ॥ ೫೧ ॥

ಇಂತೆಂದ ಭಾನುಜಂ ಸಹಿ ।
ತಂ ತಳ್ವದೆ ಬಂದು ಲಕ್ಷ್ಮಣಂ ಮುದದಿಂ ಭೂ ॥

ಕಾಂತನ ಪದಕೆರಗುತೆ ಹನು ।
ಮಂತಾರ್ಯಮಪುತ್ರಮುಖ್ಯರಂ ಕಾಣಿಸಿದಂ ॥ ೫೨ ॥

ನೆಲಗಣ್ಣಾಣುಗಂ ಕಾಣಿಕೆ ।
ಗಳನಿತ್ತುಂ ರಾಮಚಂದ್ರನಡಿದಾವರೆಗಂ ॥
ಸಲವಿಂದೆ ತುಳಿಲ್ಗೆಯ್ದುಂ ।
ಬಲಮಂ ಬಿತ್ತರಿಸಿ ತೋರ್ದನಾ ಭೂಪತಿಗಂ ॥ ೫೩ ॥

ವಿಧಿಸುತನೀತಂ ಕರಡಿಗ ।
ಳಧಿನಾಥಂ ಜಾಂಬವಂತನೆಂಬಂ ಜಾಣಂ ॥
ದಧಿಮುಖನೀತಂ ಪನಸಾಂ ।
ಗದಕುಮುದಗವಾಕ್ಷಗವಯರಿವರವನೀಶಾ ॥ ೫೪ ॥

ಈತಂ ಕೇಸರಿ ಗಜನಿವ ।
ನೀತಂ ಶರಭಂ ಸುಷೇಣಕಂ ನೀಲಂ ತಾ ॥
ನೀತಂ ನಳನೀತಂ ರುಮ ।
ನೀತಂ ವರಗಂಧಮಾದನಂ ನೋಡರಸಾ ॥ ೫೫ ॥

ತಾರನಿವಂ ಧೂಮ್ರನಿವಂ ।
ವೀರಾಗ್ರಣಿ ರಂಭಸುಮುಖರ್ಮೈಂದದ್ವಿವಿದ ॥
ಧೀರರುಮಪ್ಪಾಕವಿನತ ।
ಶೂರರ್ಶತಬಲಿದರೀಮುಖಪ್ಲವಗೇಶರ್ ॥ ೫೬ ॥

ಈತಂ ಭೂತೇಶಾಂಶೀ ।
ಭೂತಂ ಕೇಸರಿಯ ಸೂನು ಮನ್ಮಂತ್ರಿವರಂ ॥
ಈತನ ಬಲಮಂ ಗಣಿಪೊಡೆ ।
ವಾತಾಶನಪತಿಗೆ ಸಾಧ್ಯಮಲ್ಲಯಾ ನೋಡಲ್ ॥ ೫೭ ॥

ಅವಧರಿಪುದರಸ ವಾನರ ।
ರಿವರುಂ ದೇವಾಂಶಸಂಭವರ್ಸಾಹಸಿಗ ॥
ರ್ಪವಮಾನವೇಗಿಗಳ್ ಭೈ ।
ರವವಿಕ್ರಮರ್ಕೈದೆ ಕಾಮರೂಪರ್ಬಲಿಗಳ್ ॥ ೫೮ ॥

ದೇವರ ಕಾರ್ಯಮನೆಸಗಲ್ ।
ಭೂವಳಯದೊಳೊರ್ವರುಳಿಯದೊಲ್ಪಡೆತಂದಿ ॥
ಪೀರ್ ವೀರಭಟರ ಸಮರದೊ ।
ಳಾವಂ ನಿಲಲಾರ್ಪನಿವರ ಸಾಹಸಮೆನಿತೋ ॥ ೫೯ ॥

ಒರ್ವರ್ಗಿರ್ಪ್ಪುದು ಸೈನಿಕ ।
ಮುರ್ವೀಕರಿಂ ಲೆಕ್ಕಿಸಲ್ಕೆ ಸಾಧ್ಯಮದಲ್ಲಂ ॥
ಶರ್ವಂ ಮುನಿದೊಡೆ ಬಳಿಕಂ ।
ನಿರ್ವಹಿಪ ಸಮರ್ಥರಿದೆಕೊ ಬೆಸಸೂಳಿಗಮುಂ ॥ ೬೦ ॥

ಎನೆ ರಘುಜಂ ಸಂತಸದಿಂ ।
ದಿನಸುತನಂ ತಳ್ಕೆಗೆಯ್ದು ಭರದಿಂ ಸೀತಾ ॥
ವನಿತೆಯ ವಾರ್ತೆಯನೆನ್ನೆಡೆ ।
ಗಸುವಿಂ ತರಲಾರ್ಪ ಕೀಶರಂ ಕಳಿಪೆಂದಂ ॥ ೬೧ ॥

ದೇವ ನಿರೂಪಿಸಿದಂದದೊ ।
ಳೀ ವಾನರಭಟರನೆಯ್ದಿಸುವೆನೆಂದುಂ ಸು ॥
ಗ್ರೀವಂ ಪಶ್ಚಿಮದಿಶೆಗೆ ಮ ।
ಹಾವೈದ್ಯನನಾ ಸುಷೇಣನಂ ಪೋಗೆಂದಂ ॥ ೬೨ ॥

ಬಡಗಲ್ಗಾ ಶತಬಲಿಯನು ।
ಮೊಡನೆ ಸುರಾಧಿಪನ ದಿಕ್ಕಿಗಂ ವಿನತನನುಂ ॥
ಪಡೆವೆರಸು ಪೋಗಿ ರಘುಜನ ।
ಮಡದಿಯನರಸುತ್ತೆ ಬಂದು ಪೇಳ್ವುದೆಂದಂ ॥ ೬೩ ॥

ಅವರವರಂ ಕರೆಕರೆದುಂ ।
ವಿವರಿಸಿ ಭೂಪ್ರಾಂತದಿರವನುರೆ ಬೀಳ್ಕೊಟ್ಟುಂ ॥
ರವಿಜಂ ಕಯ್ಮುಗಿದುಂ ರಾ ।
ಘವಗೆಂದಂ ವಾಯುಸುತನನೀಕ್ಷಿಸುತಾಗಳ್ ॥ ೬೪ ॥

ಜಲಧಿಯ ಮಧ್ಯದೊಳಾ ದಶ ।
ಗಳನ ಮಹಾಪುರಮನೈದೆ ಪೊಕ್ಕುಂ ಸೀತಾ ॥
ಲಲನೆಯನೀಕ್ಷಿಸಿ ಬರ್ಪೊಡೆ ।
ಕಲಿಹನುಮಂಗಲ್ಲದಿತರ ಭಟಕುಲಕಳವೇ ॥ ೬೫ ॥

ಈತಂ ನಿಪುಣಂ ಸಾಹಸಿ ।
ನೀತಿಯುತಂ ಧೈರ್ಯಶಾಲಿ ಮತಿಮಂತಂ ವಿ ॥
ಖ್ಯಾತಂ ಮಧ್ಭಗಿನೀಸಂ ।
ಜಾತಂ ಸಚ್ಚರಿತನಿವನಿನಕ್ಕುಂ ಕಜ್ಜಂ ॥ ೬೬ ॥

ಜನಿಸಿದ ಮಾತ್ರದೊಳಂ ಸೂ ।
ರ್ಯನ ಮಂಡಲಮಂ ತುಡುಕಿ ವಜ್ರಾಂಗದೊಳಂ ॥

ಮಿನುಗಿದನತಿಬಲನಿವನಂ |
ದನುಜನ ಪಟ್ಟಣಕೆ ಕಳಿಪೆ ಬಾಳ್ತಿಯದಕ್ಕಂ || ೧೭ ||

ರವಿಜಾ ನೀನೆಂದುದು ದಿಟ |
ಘುವನೇ ಶುದ್ಧಾತ್ಮನಲ್ತೆ ಹರಸವತಾರಂ ||
ವಿವರಮನರಿಪುವೆನೆಂದುಂ |
ಪವನಜನಂ ಕರೆದು ಪೇಳ್ದನಾ ರಘುವೀರಂ || ೧೮ ||

ಬಾ ಮಗನೆ ಪೋಗು ಬೇಗನೆ |
ಭಾಮಿನಿಯಂ ಕಂಡು ತಿಳಿದು ನೆಲೆಯಂ ಮಿಗೆ ಮ ||
ನ್ನಾಮಾಕ್ಷರದುಂಗುರಮಂ |
ಪ್ರೇಮದೊಳಾನಿತ್ತೆನೆಂದು ಕುಡು ನೀನೆಂದಂ || ೧೯ ||

ಬಳಿಕೆ ಜನಾಂತಿಕದೊಳ್ ಶ್ರೀ |
ಲಲನೆಯ ಮೆಯ್ಗುರಿಪಿಸೆಲ್ಲ ವೃತ್ತಾಂತಮನುಂ ||
ನಲವಿಂ ಪೇಳ್ದುಂಗುರಮಂ |
ಘಳಿಲನೆ ಕೊಟ್ಟೊಡನೆ ಹನುಮನಂ ಬೀಳ್ಕೊಟ್ಟಂ || ೨೦ ||

ಬೆಂಬಲಕೆ ವಾಲಿಸುತನಂ |
ಜಾಂಬವನಂ ಸೇನೆವೆರಸು ನಿಯಮಿಸಿ ತಿಂಗ ||
ಳ್ತುಂಬಲ್ಕಂ ಬಾರದಿರ |
ಲ್ಕೊಂಬೆಂ ಕಪಿನಾಥರಸುವನೆಂದಂ ರವಿಜಂ || ೨೧ ||

ಇಂತೆನೆ ಹನುಮಾದ್ಯರ್ಭೂ |
ಕಾಂತನ ಪದಪದ್ಮಕೆರಗಿ ಮಿಗೆ ಬೀಳ್ಕೊಂಡುಂ ||
ಸಂತಸದಿಂ ಯಾಮ್ಯಾಶಾ |
ಪ್ರಾಂತಕ್ಕಂ ಬಟ್ಟೆವಿಡಿದು ಬರುವರುತಿರ್ದ್ದರ್ || ೨೨ ||

ಇತ್ತಲ್ ಶತಬಲಿವಿನತ |
ಮರ್ತ್ತಂ ವೈದ್ಯಂ ಸುಷೇಣನುಂ ಭರದಿಂದಂ ||
ತತ್ತದ್ಧರಣಿಯನೀಕ್ಷಿಸಿ |
ಬಿತ್ತರಿಸುತ್ತಿರ್ದರ್ಕೈದೆ ಸೀತಾಪತಿಗಂ || ೨೩ ||

ಬಳಿಯುಂ ಸುರಪನ ಮುಮ್ಮಂ |
ಬಲಮುಂ ಸಂದಣಿಸೆ ನಾಡೆ ತೆಂಕಲ್ದೆಸೆಗಂ ||
ಘಳಿಲನೆ ಬರುತಿರೆ ವಿಂಧ್ಯಾ |
ಚಲದಡವಿಯೊಳೊರ್ವ ರಕ್ಕಸನನೀಕ್ಷಿಸಿದಂ || ೨೪ ||

ಅವನಂ ರಾವಣನೆನುತಂ ।
ತವೆ ಭಾವಿಸಿ ರೋಷದಿಂದೆ ಗಿರಿನಿಭಖಳನಂ ॥
ಪವಿಸನ್ನಿಭಮುಷ್ಟಿಯೊಳಂ ।
ತಿವಿತಿವಿದುಂ ಕೊಂದರ್ಕೈದೆ ಮರ್ಕಟವೀರರ್ ॥ ೭೫ ॥

ಮುಂದೆಯ್ತರೆ ಬಟ್ಟೆಯೊಳಂ ।
ಬಂಧುರತರಮಾದ ವಿಪಿನಮಧ್ಯದ ಕೊಳನಂ ॥
ನಿಂದೀಕ್ಷಿಸಿ ಶಾಖಾಮೃಗ ।
ವೃಂದಂ ನೀರ್ಗುಡಿಯಲಿಳಿದುದದನೇವೇಳ್ವೆಂ ॥ ೭೬ ॥

ಇಳಿಯಿಳಿಯಲ್ಕಾ ಕೊಳಮುಂ ।
ಬಿಲಮಾಗಿರೆ ಚೋದ್ಯವಟ್ಟು ಕರ್ಗತ್ತಲೆಯೊಳ್ ॥
ಕಿಲಿಕಿಲಿಯೆನ್ನುತೆ ವಾನರ ।
ರೊಳಪೊಕ್ಕರ್ದಾರಿಗಾಣದತಿಭೀತಿಯೊಳಂ ॥ ೭೭ ॥

ಪಿಂದಿರುಗಲಸದಳಂ ಮಿಗೆ ।
ಮುಂದಡಿಯಿಡೆ ಬಟ್ಟೆಗಾಣದಿದೆ ಇದಕಿನ್ನೆ ॥
ಮ್ಮಿಂದೇನಕ್ಕುಮೊ ಆಪ ।
ದ್ಬಾಂಧವನಂ ನೆನೆವಮೆಂದು ನುಡಿದಂ ಹನುಮಂ ॥ ೭೮ ॥

ಹನುಮಂತನೆಂದುದಂ ಕೇ ।
ಳ್ದನುವಿಂ ಶ್ರೀರಾಮನಾಮಮಂ ನೆನೆವುತ್ತಂ ॥
ಮನದುರುಭೀತಿಯನುಳಿದುಂ ।
ಬಿನದದೆ ನಡೆತಂದರ್ಕೈದೆ ತಳ್ತಿರೆ ಕಜ್ಜಳ್ ॥ ೭೯ ॥

ನಾಮದ ಮಹಿಮೆಯದೆನಿತೋ ।
ತಾಮಸಮಂ ಪರಿದ ಮುನಿಯ ಮನದಂದದೊಳು ॥
ದ್ದಾಮಂ ಧಾಮಂ ಕಣ್ಗೊಳೆ ।
ನೇಮದಿನಾ ಪ್ರಭೆಯೊಳೆಯ್ದಿದರ್ ಕಪಿವೀರರ್ ॥ ೮೦ ॥

ಫಲಪುಷ್ಪಭರಿತತರುಲತೆ ।
ಗಳ ಸೊಂಪಿಂ ಪೆಂಪನಾಂತ ಖಗಮೃಗತತಿಯಿಂ ॥
ನಳಿನಾಕರಂಗಳಿಂ ಮಣಿ ।
ಶಿಲೆಯಿಂದಂ ಮೆರೆವ ದಿವ್ಯಧರೆಯಂ ಕಂಡರ್ ॥ ೮೧ ॥

ರವಿಚಂದ್ರರುದಯಮಿಲ್ಲದೆ ।
ಪ್ರವಿಲಸಿತಪ್ರಭೆಯೊಳೊಪ್ಪುತಿರ್ಪುದು ಧರೆಯುಂ ॥

ಭುವನಮಿದಾವುದೊ ಎನುತಂ |
ತವಕದೊಳೆಯ್ತಂದರೆಲ್ಲರೊಮ್ಮನದೊಳಣಂ || ೮೨ ||
ಜನವಿರಹಿತವಿಾ ಧರೆ ಮೇ |
ದಿನಿಯಣುಗಿಯನಸುರಸಿಲ್ಲಿ ಬಯ್ತಿರ್ಪನೊ ಎಂ ||
ದೆನುತೆ ತುಡುಂಕಿ ಪುಡುಂಕಿದ |
ರನಿಲಾತ್ಮಜಮುಖ್ಯವಾನರೇಶ್ವರರಾಗಳ್ || ೮೩ ||
ಎತ್ತಲ್ನೋಡಿದೊಡಂ ಪುರು |
ಷೋತ್ತಮನಾಲಯಕೆ ಸಾಟಿಯೆನಿಸಿರೆ ಸೌಧಂ ||
ಚಿತ್ತಭ್ರಾಂತಿಯೊಳಂ ತೊಳ |
ಲುತ್ತಿರೆ ಕಣ್ಗೆಸೆದಳಲ್ಲಿ ಜೋಗಿಣಿಯೊರ್ವಳ್ || ೮೪ ||
ಕನಕದ ಗದ್ದುಗೆಯೊಳ್ಮಿನು |
ಮಿನುಗುವ ಮಾನಿನಿಗೆ ಮಣಿದು ನಿಂದಿರಲಾ ಯೋ ||
ಗಿನಿ ತಾನೀಕ್ಷಿಸಿ ನೀವಾ |
ರೆನೆ ಪೇಳ್ದಂ ಬಂದ ಕಜ್ಜಮಂ ಹನುಮಂತಂ || ೮೫ ||
ಆ ನುಡಿಯಂ ಕೇಳ್ದೆಂದಳ್ |
ವಾನರ ಕೇಳಾದೊಡಾ ಮಯಪ್ರಿಯೆ ಹೇಮಾ ||
ಮಾನಿನಿ ಮೆಚ್ಚಿಸಿ ನೃತ್ಯದೊ |
ಳೀ ನೆಲನಂ ಪಡೆದಳೈದೆ ಪದ್ಮಜನಿಂದಂ || ೮೬ ||
ಹೇಮೆಯ ಸಖಿ ಮನುಸುತೆ ಮ |
ನ್ನಾಮಮದೆಸೆಗುಂ ಸ್ವಯಂಪ್ರಭಾಖ್ಯಂ ಸತತಂ ||
ವಾಮಾಂಗಿಯನಾ ಸತಿಯಂ |
ಪ್ರೇಮದೊಳೋಲಯ್ಸುತಿರ್ದೆನೀ ಭವನದೊಳಂ || ೮೭ ||
ಮೋಕ್ಷಾಕಾಂಕ್ಷೆಯೊಳಾನಿರ |
ಲೀಕ್ಷಿಸುತಂ ತ್ರೇತೆಯೊಳ್ಪರಾತ್ಪರನೆನಿಪಾ ||
ಸಾಕ್ಷಾದ್ವಿಷ್ಣುವೆ ಜನಿಸುವ |
ನೀ ಕ್ಷೋಣಿಯೊಳೈದೆ ರಾಮನಾಮದಿನೆಂದಳ್ || ೮೮ ||
ಆತನ ಸುದತಿಯನರಸಲ್ |
ವಾತಾತ್ಮಜಮುಖ್ಯರಿಲ್ಲಿಗೆಯ್ತಂದಪರಾ ||
ಸೀತಾಪತಿಯಿಂದಕ್ಕುಂ |
ಸಾತಿಶಯಂ ಮೋಕ್ಷಮೆಂದು ಮಯಸತಿ ನುಡಿದಳ್ || ೮೯ ||

ಇಂತೆಂದಯುತಾಬ್ಜಂ ನೆರೆ |
ಸಂತಸದಿಂದಿರ್ದು ಪುರಮನೆನಗಿತ್ತುಂ ನಿ ||
ಶ್ಚಿಂತೆಯೊಳಜನಂ ಸಾರ್ದ |
ಶ್ಚಿಂತಿಸುತಂ ರಾಮನಾಮಮಂ ಬಾಳ್ದಿರ್ಪೆಂ || ೯೦ ||

ಆನಾತನ ಪದಮಂ ಸಾ |
ದಾನಂದಂ ಬಡುವೆನೆಂದೊಡಾ ಮಾನಿನಿ ಪಂ ||
ಥಾನಮನೆಮಗಂ ತೋರೆಂ |
ದಾ ನಾರಿಯೊಳೊರೆದನಂದು ಮಾರುತಜಾತಂ || ೯೧ ||

ನೀಮೆಲ್ಲರ್ಕಣ್ಮುಚ್ಚಲ್ |
ಭೂವಳಯದ ದಾರಿ ತೋರ್ಗುಮೆಂದುಂ ಮಿಗೆ ರಾ ||
ಜೀವಾಂಬಕೆ ಪೇಳಲ್ಕೇ |
ಳ್ದಾ ವಾನರರಾಕೆ ಪೇಳ್ದ ತೆರನಂ ಗೆಯ್ದರ್ || ೯೨ ||

ಆ ತರುಣಿಯ ಮಹಿಮೆಯದೆನಿ |
ತೋ ತಳ್ವದೆ ಬಂದು ಸೇರ್ದರವನಿಯನಾಗಳ್ ||
ಪೂತಾತ್ಮೆಯೊಡನೆ ಸೀತಾ |
ನಾಥನ ಸನ್ನಿಧಿಗೆ ಪೋದಳತಿಮುದದಿಂದಂ || ೯೩ ||

ಸರಸಿಜನೇತ್ರನ ಚರಣಾಂ |
ಬುರುಹಕ್ಕಂ ಮಣಿದು ನುತಿಸಿ ಕಯ್ಮುಗಿದೆಂದಳ್ ||
ಕರುಣಿಸು ಮೋಕ್ಷಮನೆನಗಂ |
ಕರುಣಾಕರ ಕಾಮಜನಕ ಕಮನೀಯಾಂಗಾ || ೯೪ ||

ನೀನೇ ಜಗದಾಧಾರಂ |
ನೀನೇ ಪರದೈವನಲ್ತೆ ಪದ್ಮಜಭವವಂ ||
ದ್ಯಾನತಪೋಷನೆ ಮುನಿಕುಲ |
ಮಾನಸಕಾಸಾರಹಂಸ ಜಯಜಯಮೆಂದಳ್ || ೯೫ ||

ನಿನ್ನಯ ಭಕ್ತಿಗೆ ಮೆಚ್ಚಿದೆ |
ನಿನ್ನೇಂ ನೀಂ ಪೋಗಿ ಬದರಿಕಾಶ್ರಮದೆಡೆಯೊಳ್ ||
ಎನ್ನಂ ಜಾನಿಸೆ ಭಕ್ತಿಯೊ |
ಳುನ್ನತಮಪ್ಪದಮದಪ್ಪುದೆಂದಂ ರಾಮಂ || ೯೬ ||

ಲಲನೆಯತಿಭಕ್ತಿಯೊಳ್ಪದ |
ಜಲರುಹಕಂ ಮಣಿದು ಬಂದು ಬದರೀವನಕಂ ||

ಕೆಲಗಾಲಂ ತಪವಿರ್ದು೯ಂ |
ಸುಲಭಂ ಸದ್ಗತಿಯನ್ನೈದೆ ಸಾಧಿಸಿ ಪೋದಳ್ || ೯೭ ||

ಹನುಮಾದಿಗಳಿತ್ತಲ್ಮು |
ನ್ನಿನ ನೆಲಕಂ ಬಂದು ವಿಂಧ್ಯಪರ್ವತದೆಡೆಯೊಳ್ ||
ವನತರುಗಳ ಪುಷ್ಪೋದ್ಗಮ |
ದಿನೆ ತಿಂಗಳ್ಮಿಗಿದುದೆಂದು ಭೀತಿಯನಾಂತರ್ || ೯೮ ||

ಜನಕಸುತೆಯಿರ್ಪ ತಾಣಂ |
ಮನಕಂ ಗೋಚರಿಸದಾಯ್ತು ಕಳಿದುದು ಮಾಸಂ ||
ಇನತನಯನುಳಿಸನೆಮ್ಮನು |
ಮೆನುತಂ ಚಿಂತಿಸಿದನಿಂದ್ರಸುತಸುಕುಮಾರಂ || ೯೯ ||

ನಿರಯಭಯಮಿಲ್ಲದಣ್ಣನ |
ನುರೆ ಕೊಲಿಸುತೆ ಜನನಿಗಧಿಕಮೆನೆ ಮಾನಿಸದಾ ||
ವರವಧುವಂ ನೆರೆ ಭೋಗಿಪ |
ದುರುಳಂ ಕೊಲದುಳಿಯನೆಂದು ಮರುಗಿದನಾಗಳ್ || ೧೦೦ ||

ರಾಮಂ ಕಾಯ್ದಪನೆಂಬೆನೆ |
ಭೂಮಿಜೆಯಂ ಕಂಡುಬಂದುದಿಲ್ಲಂ ಬಳಿಕಿ ||
ನ್ನೀ ಮಹಿಯೊಳೊಡಲನೀವುದೆ |
ಕ್ಷೇಮಂ ತನಗೆಂದು ಮರುಗಲೆಂದಂ ಹನುಮಂ || ೧೦೧ ||

ಏತರ್ಕೆ ಚಿಂತಿಪಯ್ ರಘು |
ನಾಥಂ ಮಾನಿಸನೆ ಧಾತನತ್ತಣಿನಸುರ ||
ವ್ರಾತಮನುರೆ ಸಂಹರಿಸ |
ಲ್ಕೀ ತನುವಂ ತಾಳ್ದು ಬಂದ ಮುರಹರನಲ್ತೇ || ೧೦೨ ||

ಧರಣೀಸುತೆ ಭಾರ್ಗವಿ ವಾ |
ನರರೆಲ್ಲರ್ದಿವಿಜರಿದಕೆ ಸಂದೆಗಮಿಲ್ಲಂ ||
ಕರಗತಮಪ್ಪುದು ಕಜ್ಜಂ |
ಕರುಣಿಸುವಂ ರವಿಜನೆಮ್ಮನೆಂದಂ ರವಿಜಂ || ೧೦೩ ||

ನೀನಿರೆ ಭಯಮಿನ್ನೆಮಗಂ |
ತಾನಕ್ಕುಮೆಯೆಂದು ವಾಲಿಪುತ್ರಂ ಭರದಿಂ ||
ವಾನರಬಲಸಹಿತಂ ಲಂ |
ಕಾನಗರದ ಬಟ್ಟೆವಿಡಿದು ಬರುವರುತಿರ್ದ೯ಂ || ೧೦೪ ||

ಬರೆ ಶರಧಿಯ ತೀರದೊಳಂ |
ಕರಮೆಸೆವ ಮಹೇಂದ್ರಶೈಲಮಂ ತವೆ ಸಾರ್ದುಂ ||
ವೊರೆವಂಭೋನಿಧಿಯಂ ವಾ |
ನರರೆಲ್ಲರ್ಕಂಡು ಚಿಂತೆಯಿಂದಿರುತಿರ್ದ್ದರ್ || ೧೦೫ ||

ತಿಂಗಳ್ಕೀರಿದುದವನಿಪ |
ಸಂಗಸೆಯಂ ಕಂಡುದಿಲ್ಲಮಿನ್ನುಂ ತನುವಂ ||
ಭಂಗಿಸುವಂ ರವಿಸುತನೆಂ |
ದಂಗದನತಿ ಭಂಗದಿಂದವೊಂದಂ ನೆನೆದಂ || ೧೦೬ ||

ಆತನ ಕಯ್ಯಳಿವಿಂ ನೆರೆ |
ದೀ ತನುವಂ ಕಳೆವೆನಿಲ್ಲಿ ನಾನೆಂದೆನುತಂ ||
ಭೂತಳಮಂ ಶೋಧಿಸಿ ಪರಿ |
ಪೂತಕುಶಾಸ್ತರಣದಲ್ಲಿ ಕುಳಿತಂ ಜವದಿಂ || ೧೦೭ ||

ನಿರಶನಸುವ್ರತದಿಂದಂ |
ಸುರಪತಿಪೌತ್ರಾದಿ ಸಕಲವಾನರವೀರರ್ ||
ನೆರೆದಿರೆ ಪಕ್ಕಿಯದೊಂದಾ |
ಗಿರಿಯಿಂ ಪೊರಮಟ್ಟುದೈದೆ ಸುರಶೈಲಮೆನಲ್ || ೧೦೮ ||

ಇದು ತಿಂಬುದೆಮ್ಮನೆಂದುರೆ |
ಬೆದರುತ್ತೆ ಜಟಾಯುಮೋಕ್ಷದಾಯಕ ಸೀತಾ ||
ವದನಾಬ್ಜಮಿತ್ರ ರಾಘವ |
ಪದುಮಾಂಬಕ ರಾಮ ರಕ್ಷಿಸೆಂದಿಂತೆಂದರ್ || ೧೦೯ ||

ರಾಮನ ಕಾರ್ಯನಿಮಿತ್ತಮೊ |
ಳಾ ಮಹಿಮ ಜಟಾಯುವಳಿದನೀ ಪಕ್ಷಿವರಂ ||
ಪ್ರೇಮಂಬಡೆದುಪಕರಿಸಿದೊ |
ಡೀ ಮಹಿಯುಳ್ಳನ್ನಮಿಪ್ಪುದತುಳಶ್ರೀಯಂ || ೧೧೦ ||

ಅನುಜನ ವಾರ್ತಾಶ್ರುತಿಯದು |
ತನಗಾಯ್ತಾ ದಿನದೊಳೆನುತೆ ಸಂಪಾತಿ ಮಹಾ ||
ವಿನಯದೊಳೆಯ್ತರುತಂ ತ |
ಮ್ಮನ ವಾರ್ತೆಯನೆಂದಿರಿಂದು ನೀವಾರೆಂದಂ || ೧೧೧ ||

ಎನೆಯಂಗದನಾ ವೃತ್ತಮ |
ನನುವಿಂ ಬಿತ್ತರಿಸೆ ಕೇಳ್ದು ದುಃಖಂದಳೆದುಂ ||

ತನಗಾದ ದುರ್ಬಲತೆಯಂ |
ನೆನೆದಾ ಸಂಪಾತಿ ಪೇಳ್ದನಾ ಕಪಿವರನೊಳ್ || ೧೧೨ ||

ಅರುಣಂ ಪಿತನೆಮಗಾಗಿರೆ |
ಕಿರುದಮ್ಮಂ ಮೇಣ್ಜಟಾಯುವೆನಗಂ ವಿಬುಧಾ ||
ಸುರರೊಳ್ ಸಮರಿಲ್ಲಂ ಭಾ |
ಸ್ಕರನಂ ತುಡುಕಲ್ಕೆ ಪೋದೆವಂದಾಮಿರ್ವರ್ || ೧೧೩ ||

ಗರುವತನದಿಂದೆ ಗಗನದ |
ಸರಣಿಯೊಳಂ ಗಮಿಸಲನುಜಗಾದುದು ತಾಪಂ ||
ಗರಿಯಂ ಮರೆಗೆಯ್ವನಂ |
ಪೊರೆಯಲ್ಕುರಿದತ್ತು ಪಕ್ಷಮೆನಗೆಲ್ಲೆಡೆಯೊಳ್ || ೧೧೪ ||

ಪತನಂಗೆಯ್ದಿಂ ಮೇಣೀ |
ಕ್ಷಿತಿಗಂ ವಿಶ್ವಾಸನಾಗಿ ಬಿಳ್ದಿರಲಾಂ ಕಾ ||
ಣುತೆ ರಾತ್ರಿಕರಮುನೀಶ್ವರ |
ನತಿ ವಿಸ್ಮಿತನಾಗಿ ಕೇಳಲೆಲ್ಲಮನೊರೆದೆಂ || ೧೧೫ ||

ಶಿವಶಿವ ನಿನಗಿಂತೀ ಕಡು |
ಬವಣೆಯದಡಸಿತ್ತೆ ನೋಯದಿರ ಎಂದೆನುತಂ ||
ವಿವರಿಸಿದಂ ಮುಂದಪ್ಪುದ |
ನವಿರಳವಾತ್ಸಲ್ಯದಿಂದಮಾ ಮುನಿನಾಥಂ || ೧೧೬ ||

ತ್ರೇತಾಯುಗದೊಳ್ಕಮಲಾ |
ನೇತಂ ರವಿವಂಶದಿಂದೆ ರಾಮಾಖ್ಯೆಯೊಳಂ ||
ಜಾತನುಮಾದಪನಾತನ |
ದೂತರ್ ನಡೆತರ್ಪ್ಪರವನಿಜಾತೆಯನರಸಲ್ || ೧೧೭ ||

ಶರಧಿಯ ತಡಿಗೆಯ್ತಂದೀ |
ಗಿರಿಯೆಡೆಯೊಳ್ನಿನ್ನನೀಕ್ಷಿಸಿದ ಕೀಶರ್ಗಾ ||
ಧರಣೀತನುಜೆಯ ವಾರ್ತೆಯ |
ನೊರೆಯಲ್ಕಿನಗಪ್ಪುದಖಿಳಪಕ್ಷೋದ್ಗಮಮುಂ || ೧೧೮ ||

ಎನುತಂ ಸ್ವಚರಿತ್ರಮನುಂ |
ಜನಕಜೆಯಂ ದನುಜನುಯ್ದ ವೃತ್ತಾಂತಮನುಂ ||
ವಿನಯದೆ ನಿರವಿಸಲಾಗಳ್ |
ಕೊನರೇರ್ದುವು ಗರಿಗಳ್ಪೈದೆ ಖಗರಾಜಂಗಂ || ೧೧೯ ||

ರಾವಣನುದ್ಯಾನದೊಳಂ ।
ದೇವಿಯರಂ ಕಾಣ್ಬ ಕಾರ್ಯಸಿದ್ಧಿಯದಕ್ಕುಂ ॥
ಆ ವಾರ್ತಾಕಥನದಿನೆನ ।
ಗಾವಿರ್ಭವಮಾದೆರಂಕೆಯೊಲ್ಮಿಮಗೆಂದಂ ॥ ೧೨೦ ॥

ಸಲ್ಲಲಿತಮಾದ ವೃತ್ತಮ ।
ನೆಲ್ಲಂ ಮಿಗೆ ಪೇಳ್ದು ಪಾರೆ ಖಗಪತಿಯಾಗ ॥
ಳ್ಗಲ್ಲಿಂದಂ ಶಾಖಾಮೃಗ ।
ವಲ್ಲಭರೆಯ್ತಂದು ಕಂಡರಂಭೋನಿಧಿಯಂ ॥ ೧೨೧ ॥

ಅಂಬುಧಿಯಿದೊ ಅಂಬರಮಿದೊ ।
ಎಂಬ ವಿಭೇದಂಗಳಿನಿತು ತೋರದ ಗಗನಾ ॥
ಲಂಬಿತ ಘನಕಲ್ಲೋಲಕ ।
ದಂಬದ ಭೀಭತ್ಸ ವಾರಿನಿಧಿಯಂ ಕಂಡರ್ ॥ ೧೨೨ ॥

ಘೋರ ಸರಿತ್ಕರ್ಕಟ ಶಾ ।
ಲೂರ ಮಹಾಕಮಠ ಚಕ್ರ ನಕ್ರಗಳಿಂದಂ ॥
ನೀರುಡುವಿಂ ಭೀಕರ ವೈ ।
ಸಾರಿಣಕುಲದಿಂದಮಬ್ಧಿ ರಾಜಿಸಿತಾಗಳ್ ॥ ೧೨೩ ॥

ಒಳಕೊಳ್ವ ಪೆರ್ದೊರೆಗಳಿಂ ।
ವಳಿಯಿಂದಂ ಸುಳಿಗಳಿಂದೆ ಬೆಳ್ನೊರೆಯಿಂ ಪ ॥
ಜ್ಜಳಿಸುವ ಮಣಿಗಣದಿಂ ಮುಂ ।
ಬುಳತರನಿರ್ಘೋಷದಿಂದೆ ವಾರ್ಧಿಯದೆಸೆಗುಂ ॥ ೧೨೪ ॥

ಹರಿಯೊಲ್ವರಚಕ್ರಯುತಂ ।
ಹರನೊಲ್ತಾನದ್ರಿಮಂದಿರಂ ವಿಪಿನದ ವೊಲ್ ॥
ವರವಿದ್ರುಮಾನ್ವಿತಂ ಭಾ ।
ಸ್ಕರನೊಲ್ಗೋನಿಕರಶೋಭಿ ತಾನೆನಲೆಸೆಗುಂ ॥ ೧೨೫ ॥

ಗಿರಿಕುಳಮಿರ್ದೊಡಮೆನ್ನೊಳ್ ।
ಕರುಣದೆ ನೀಂ ಕಾವುದೆಂದು ಮುಕ್ತಾವಳಿಯಂ ॥
ಶರನಿಧಿ ಕಾಣ್ಕೆಯನೀವುದೊ ।
ಸುರಪಂಗೆನೆ ನೀರ್ವ್ವೊತಿದ್ದುವಂಬುಕಣಂಗಳ್ ॥ ೧೨೬ ॥

ನೀರಾನೆಗಂಡು ಸುರಪನ ।
ವಾರಣಮೆಳ್ತಂದು ಸೆಣಸಿ ಕಬಳಿಪುದೆಂಬೊಲ್ ॥

ಶಾರದಘನಮಾಚ್ಛಾದಿಸೆ |
ಕ್ಷೀರಾಬ್ಧಿಯ ಬೆಡಗನಾಂತು ರಾರಾಜಿಸುಗುಂ || ೧೨೭ ||

ಮುಂಬರಿವ ಮರಳ್ವ ತೆರೆಯ ಕ |
ದಂಬಗಳಿಂ ನಿಖಿಲವಾರಿಚರನಿಸ್ವನದಿಂ ||
ಕುಂಬಿನಿಯಂ ಮಿಗೆ ಬಳಸಿ |
ರ್ಪಂಬುಧಿಯಂ ಕಂಡು ವಾಲಿಸುತನಿಂತೆಂದಂ || ೧೨೮ ||

ಈ ವಾರ್ಧಿಯನುಂ ದಾಂಟುವ |
ನಾವಾತನೊ ದಿವಿಜದೈತ್ಯರೊಳ್ನಿಜಮಂ ಮಾ ||
ದೇವನೆ ಬಲ್ಲನೆನುತ್ತಂ |
ಕೋವಿದಪಟುಭಟರ ಮೊಗಮನೀಕ್ಷಿಸುತೆಂದಂ || ೧೨೯ ||

ಸುರಪನ ಪೌತ್ರನೊಳಾ ಕಪಿ |
ವರರೊರೆದರ್ತಮ್ಮತಮ್ಮ ಬಲಪೌರುಷಮುಂ ||
ತರಿಸಲ್ದಶಯೋಜನಸಾ |
ಗರಮುಂತೆಣ್ಬತ್ತು ಯೋಜನಂ ಶರನಿಧಿಯಂ || ೧೩೦ ||

ವಿಧಿತನುಜಾತಂ ಪೇಳ್ದಂ |
ಮುದುಪಂ ತಾನಾದೆನ್ನೈದೆ ಕಡುಜವ್ವನದೊಳ್ ||
ಮುದದಿಂ ಮೂರೇಳ್ಸೂಳೊಳ್ |
ವಿಧಿಯಿಂ ತ್ರೈವಿಕ್ರಮಂಗೆ ಬಲವಂದಿರ್ಪೆಂ || ೧೩೧ ||

ಯುವರಾಜನೆ ಕೇಳ್ವಾನರ |
ನಿವಹದಿನಾಂ ಸುದಶಯೋಜನಾಧಿಕನಪ್ಪೆಂ ||
ಭುವನಧಿಯಂ ನೆಗೆವುದರೊಳ |
ಗವಸಾನಂ ತಾನದೆಲ್ಲಿ ತೀರದದೆನ್ನಿಂ || ೧೩೨ ||

ಎನಲಂಗದನಿಂತೆಂದಂ |
ವನಧಿಯನಾಂ ದಾಂಟಲಾರ್ಪೆನಾದೊಡಮಿನ್ನೀ ||
ಜನಪದಕಂ ಮಗುಳ್ದೆಯ್ತ |
ರ್ಪೆನೊ ಬಾರೆನೊ ಎಂಬುದಿಂದು ತಿಳಿಯದು ಕೇಳಯ್ ||೧೩೩||

ಶತಯೋಜನಮಂ ಲಂಘಿಸಿ |
ದಿತಿಜಾತಾಧಿಪನ ನಗರಮಂ ಪೊಕ್ಕುಂ ಭೂ ||
ಸುತೆಯಂಪ್ರಿಯನೇಂ ಕಾಣ್ಬೆನೊ |
ಯತನಂ ತನಗಿಲ್ಲಮೆಂದು ಯೋಚನೆಗೆಯ್ದಂ || ೧೩೪ ||

ಚಿಂತಿಸಲೇಂ ಕಜ್ಜಂ ಶ್ರೀ |
ಕಾಂತಂಗೀ ತನುವನೊಪ್ಪಿಸುವುದುತ್ತಮಮೆಂ ||
ದುಂ ತಳ್ವದೆ ದರ್ಭಾಂಕುರ |
ಮಂ ಪಾಸುತೆ ಕುಳಿತನಂಗದಂ ನಿರಶನದಿಂ || ೧೩೫ ||

ಏನಿದನೆಸಗಿದೆ ಬಿಡುಬಿಡು |
ತಾನಪ್ಪುದೆ ಹಾನಿ ರಾಮಕಾರ್ಯಕ್ಕಂ ಪಂ ||
ಚಾನನಸನ್ನಿಭನಿರಲಸು |
ಮಾನವೆ ನಿನಗೆಂದು ಜಾಂಬವಂತಂ ಕೇಳ್ದಂ || ೧೩೬ ||

ವಾಲಿಜನೊಳ್ ಪೇಳ್ದನಿಲನ |
ಬಾಲಕನಂ ನೋಡುತೊರೆದನೆಲೆ ಹನುಮ ದಯಾ ||
ಶೀಲಾ ಮೌನಮಿದೇತಕೆ |
ಕಾಲಾಂತಕರುದ್ರನಲ್ತೆ ನೀನೀ ಜಗದೊಳ್ || ೧೩೭ ||

ಶಿಶುಲೀಲೆಯೊಳಂಬರಕಂ |
ನೆಸೆದಿರ್ಪೈಯ್ ಶೂರ ನಿನ್ನೊಳೀ ಶರನಿಧಿ ತಾಂ ||
ಪಸುಪಚ್ಚನೆನೀರಲ್ಲಮೆ |
ನಸುಮುಳಿದೊಡೆ ನಿಲ್ವನಾವನಯ್ ನಿನ್ನಿದಿರೊಳ್ || ೧೩೮ ||

ಯುವರಾಜಮುಖ್ಯವಾನರ |
ನಿವಹಂ ಕಂಗೆಟ್ಟು ಭೀತಿಯಿಂದಿರ್ಪುದು ರಾ ||
ಘವಕಾರ್ಯಾರ್ಥಂ ಧರಣಿಯೊ |
ಳವತರಿಸಿದ ಮಹಿಮ ಸುಮ್ಮನಿರಲೇಕೆಂದಂ || ೧೩೯ ||

ವಿಧಿಸುತನಿಂತೆನೆ ಹನುಮಂ |
ತ್ರಿದಶಾಲಯದಂತೆ ನಿಂದು ಗರ್ಜಿಸುತೆಂದಂ ||
ಉದಧಿಯಿದೇಂ ಘನಮಯ್ ಶಶಿ |
ವದನೆಯನೀಕ್ಷಿಪೊಡೆ ಕಷ್ಟಮೇನಿರ್ದಪುದಯ್ || ೧೪೦ ||

ತೃಣಮೆನಗೆ ರಾವಣಾಸುರ |
ನಣುಮಾತ್ರಂ ಮೇಣ್ ತ್ರಿಕೂಟಗಿರಿ ರಾಕ್ಷಸರಂ ||
ಗಣನೆಗೆ ತಾರೆಂ ನಿಯಮಿಸು |
ಕ್ಷಣದೊಳ್ನೀನೆಂದೊಡೆಂದನಾ ವಿಧಿಪುತ್ರಂ || ೧೪೧ ||

ನೆಸೆದಂಬುಧಿಯಂ ಮೆಯ್ಗಾ |
ಣಿಸದೆ ನಿಶಾಚರಸಮೂಹದೊಳ್ ಧರಣಿಜೆಯಂ ||

ಸಸಿನೆ ನಿರೀಕ್ಷಿಸಿ ರಾಮನ |
ಪೆಸರಿನ ಮುದ್ರಿಕೆಯನಿತ್ತು ಬರೆವೇಳ್ಕೆಂದಂ || ೧೪೨ ||

ದೇವರ ಕಾರ್ಯನಿಮಿತ್ತದೊ |
ಳೀ ವಾರ್ಧಿಯನಿಂದು ದಾಂಟಿ ಜವದಿಂ ಸೀತಾ ||
ದೇವಿಯರನೀಕ್ಷಿಸುತ್ತಂ |
ರಾವಣನುರುಬಲಮನೈದೆ ತಿಳಿದಾಂ ಬರ್ಪೆಂ || ೧೪೩ ||

ಎಂದನಿಲಕುಮಾರಂ ವಿಧಿ |
ನಂದನನಂ ಮಣಿದು ನಡೆಯಲುಜ್ಜುಗಿಸುತ್ತಂ ||
ಬಂದು ಮಹೇಂದ್ರಾದ್ರಿಯನೊಲ |
ವಿಂದಂ ಪಾಯ್ವುತ್ತುಮಿರ್ದ್ದನದನೇವೇಳ್ವೆಂ || ೧೪೪ ||

ಅಡಿಗಡಿಗಂ ಕುಸಿದುದು ಗಿರಿ |
ಸಿಡಿದುದು ತದ್ಗಿರಿಯ ಶಿಖರವೃಕ್ಷಾನೀಕಂ ||
ಕಡಲುಕ್ಕಿರ್ದುದಹಿನಾಥಂ |
ಪೆಡೆಯಂ ತಗ್ಗಿಸಿದನಾನೆಯುಡುಗಿದುದಾಗಳ್ || ೧೪೫ ||

ರವಿಶಶಿಬಿಂಬಂ ಕುಂಡಲ |
ಮವಿರಳತಾರಾಳಿ ಮಕುಟವಾದುದು ವಾಲಂ ||
ಧ್ರುವಮಂಡಲಮಂ ಸೋಂಕಿತು |
ಪವನಜನದ್ಭುತದ ರೂಪನೀಕ್ಷಿಪನಾವಂ || ೧೪೬ ||

ಭರದಿಂದೆ ಗಿರಿಯನೇರ್ದ್ದಂ |
ಶರನಿಧಿಯಂ ನೋಡಿ ಸ್ವಲ್ಪಮಿದು ತನಗೆಂದ ||
ಬ್ಬರಿಸಲ್ಕಬ್ಜಭವಾಂಡಂ |
ಬಿರಿದುದು ಹೀಕರಿಸಿತಂದು ಭುವನಾನೀಕಂ || ೧೪೭ ||

ಮಿರುಪ ಮಹಾದ್ರಿಯ ಶಿರದೊಳ್ |
ಸ್ಮರಿಸುತ್ತಂ ರಾಮನಾಮಮಂ ಹನುಮಂತಂ ||
ಶರನಿಧಿಯಂ ಲಂಘಿಪೆನೆಂ |
ಬುರು ತೋಷದೊಳಿರ್ದ್ದನೆಂದು ಸೂತಂ ಪೇಳ್ದಂ || ೧೪೮ ||

# ಪಂಚಮಾಶ್ವಾಸ.

ವೃತ್ತ || ಶಾಂತಾಕಾರನನೇಕರೂಪನತುಲಂ ದೈತ್ಯಾದ್ರಿದಂಭೋಳಿ ವೇ |
ದಾಂತಾರಾಮವಿಹಾರನಬ್ಜನಯನಂ ದೇವಂ ಘನಶ್ಯಾಮಲಂ ||
ಸಂತೋಷಾನ್ವಿತಮಾನಸಂ ಭವಹರಂ ಸದ್ಭಕ್ತಪಾಪೋನ್ನತ |
ಧ್ವಾಂತಾದಿತ್ಯನೆ ಮಾಳ್ಕೆ ಸೌಖ್ಯಚಯಮಂ ಶ್ರೀರಾಘವಂ ಸಂತತಂ || ೧ ||

ಕಂದ || ಚಿದ್ರೂಪಂ ಚಾಮೀಕರ |
ಕುದ್ಧ್ರೋಪಮದಿವ್ಯಗಾತ್ರನನಿಲಸುತಂ ಶ್ರೀ ||
ಮದ್ರಾಮೋತ್ತಮದೂತಂ |
ರುದ್ರಾಂಶಂ ಕುಡುಗೆ ನಿಚ್ಚಮಾನಂದಮನುಂ || ೨ ||

ವನನಿಧಿಯನೆಂತು ಪಾಯ್ದಂ |
ಜನಕಜೆಯಂ ಕಂಡನೆಂತು ಪವಮಾನಸುತಂ ||
ವಿನಯದೆ ತತ್ಕಥೆಯಂ ಪೇ |
ಳೆನುತಂ ಮುನಿವಿತತಿ ಕೇಳೆ ಪೇಳ್ದಂ ಸೂತಂ || ೩ ||

ಯತಿಗಳಿರ ಕೇಳಿಮನಿಲನ |
ಸುತನಾ ಶೈಲಾಗ್ರದಲ್ಲಿ ಮನದೊಳ್ಸೀತಾ ||
ಪತಿಯ ಪದಾಂಬುಜಮಂ ನೆನೆ |
ವುತೆ ದಕ್ಷಿಣದಿಕ್ಪಥಕ್ಕಮಭಿಮುಖನಾದಂ || ೪ ||

ಕರಗಳನೂರ್ಧ್ವಂ ಮೇಣ್ನಿಜ |
ಚರಣಮನುಂ ಬಲಿದು ತನುವನುಡುಗಿಸಿ ಮುಗುಳ್ದಂ ||
ಬರಮಾರ್ಗಮನೀಕ್ಷಿಸುತುಂ |
ಗಿರಿದುದಿಯಿಂ ಪಾರ್ದ್ದನಂದು ಪವನಕುಮಾರಂ || ೫ ||

ಜರ್ಜರಿತಮಾದುದಾ ಗಿರಿ |
ನಿರ್ಜರರುಂ ನೋಡುತಿರ್ದ್ದರಭ್ರಾಂಗಣದೊಳ್ ||
ದುರ್ಜಯಮಡಸಿತು ಲಂಕೆಗೆ |
ನಿರ್ಜೀವಮುಮಾದುದಂಬುಚರಕುಲಮಾಗಳ್ || ೬ ||

ಸುರವರರನೀತನ ಬಲಮಂ |
ಪರಿಕಿಪೊಡಂ ನಾಗಮಾತೆಯಂ ಕಳಿಪಲ್ಕಾ ||

ಸುರಸಾಂಗನೆ ಬಂದುಂ ಮುಂ |
ಬರಿವ ಮಹಾಬಲಕುಮಾರನಂ ತಡೆದಳಣಂ || ೭ ||

ಪಲಗಾಲಮಶನಮಿಲ್ಲದೆ |
ಬಳಲಿರ್ಪೀಯುದರದನಲನಂ ತಣ್ಪಿಸು ನೀ ||
ನೊಳವೊಕ್ಕುಮಲ್ಲದಿರಲಾ |
ಸುಳಿಸೆಂ ನಿನ್ನೊಡಲನೆಂದು ಬಾಯ್ದೆರೆದಳವಳ್ || ೮ ||

ಪೆಂಗುಸು ನೀನೆನ್ನೊಡಲಂ |
ನುಂಗುವೊಡಂ ಸಾಕೆ ನಿನ್ನ ಬಾಯ್ದೆರೆಯೆನುತಂ ||
ಪಿಂಗಲನಯನಂ ಬಳೆಯ |
ಲ್ಕಂಗನೆ ಬಾಯ್ದೆರೆದಳಯ್ದು ಯೋಜನಮಾಗಳ್ || ೯ ||

ದ್ವಿಗುಣಿಸಿ ಬಳೆದಂ ಹನುಮಂ |
ಮಗುಳ್ದದಕಿರ್ಮ್ಮಡಿಯೊಳಾಸ್ಯಮಂ ತೆರೆಯಲ್ಕಂ ||
ಮಿಗಿಲಾಗೆ ಬಳೆಯಲಾದುದು |
ಸುಗಮನೆಗಯ್ವತ್ತು ಯೋಜನಾಯತವದನಂ || ೧೦ ||

ಇವಳೊಡನೇಂ ಕಜ್ಜಮೆನುತೆ |
ಪವನಜನಂಗುಷ್ಠಮಾತ್ರನಾಗುತೆ ಸುರಸಾ ||
ಯುವತಿಯ ವದನದಿನಿೞಿಯುತೆ |
ತವಕದೆ ಪೊರಮಂದು ನಿಂದನವಳಿದಿರಿನೊಳಂ || ೧೧ ||

ಕಾಣುತಮಾ ಸುರಸೆ ಜಗ |
ತ್ಪ್ರಾಣಜನಂ ಪೊಗಳ್ದು ತನ್ನ ವೃತ್ತಾಂತಮನುಂ ||
ಮಾಣದೆ ನುಡಿದುಂ ದಿವಿಜರ |
ತಾಣಕ್ಕಂ ಪೋಗೆ ಮುಂದೆ ನಡೆದಂ ಹನುಮಂ || ೧೨ ||

ಗಗನಾಧ್ವದೊಳನುಗಮಿಸ |
ಲ್ನಗರಾಜನ ಪುತ್ರನಬ್ಧಿಯನುಮತಿಯಿಂದಂ ||
ಖಗಮಂಡಲಮಂ ಸೋಂಕುವ |
ಬಗೆಯಿಂ ತಲೆದೋರ್ದ್ದು ನಿಂದನನಿಲಜನಿದಿರೊಳ್ || ೧೩ ||

ಏನದ್ಭುತಮಿದು ಕಡಲಿಂ |
ತಾನೊಗೆದುದು ಶೈಲಮೆಂದು ವಿಸ್ಮಯದಿಂದಂ ||
ವಾನರನೀಕ್ಷಿಸುತಿರಲಾ |
ಮೈನಾಕಂ ಪುರುಷನಾಗಿ ಬಂದಿಂತೆಂದಂ || ೧೪ ||

ಕಯ್ಯಂ ಮುಗಿದೆಂದಂ ನಿ |
ಮ್ಮಯ್ಯನ ಕೃಪೆಯಿಂದೆ ಜೀವಿಸಿರ್ಪೆಂ ಕಡಲೊಳ್ ||
ಸಯ್ಪಿನಲರೆಚಣಮಿರ್ದ್ದುಂ |
ರಯ್ಯದೆ ನೀರ್ಗುಡಿದು ಮುಂದೆ ನಡೆಯಲ್ವೇಳ್ಕುಂ || ೧೫ ||

ಎನೆ ರಾಮಕಾರ್ಯದಿರವಂ |
ವಿನಯದೊಳಾತಂಗೆ ಪೇಳ್ದು ಮನ್ನಿಸಿ ಬಳಿಕಂ ||
ಹನುಮಂ ರಾಮನ ಪದಮಂ |
ನೆನೆಯುತ್ತಂ ಗಮಿಸಲಾದುದೊಂದಾಶ್ಚರ್ಯಂ || ೧೬ ||

ಜಳನಿಧಿಯೊಳ್ಸಿಂಹಿಕೆಯೆಂ |
ಬಳ ಛಾಯಾಗ್ರಾಹಿಯಂತೆ ನೆಳಲಿಂ ಜನಮಂ ||
ಸೆಳೆವಳ ದರ್ಶನದಿಂದು |
ಮ್ಮಳಿಸುತೆ ಪವಮಾನಸೂನು ಯೋಚನೆಗೆಯ್ದಂ || ೧೭ ||

ಇವಳಿಂ ಗತಿರೋಧಂ ಸಂ |
ಭವಿಸಿದುದೆಂದಧಿಕಕೋಪದಿಂದಿಳಿದುಂ ರಾ ||
ಹುವ ಜನನಿಯನೊದೆದುಂ ಕೊಂ |
ದವಿಳಂಬದೆ ನೆಗೆದನಾಗಳಲ್ಲಿಂ ಹನುಮಂ || ೧೮ ||

ಅಂಬರಪಥದೊಳ್ನಡೆನಡೆ |
ದಂಬುಧಿಯಂ ದಾಂಟಿ ಮಗುಳೆ ಮರುದಡಿಯೆಡೆಯೊಳ್ ||
ತಾಂ ಭರದಿಂ ಬಂದಿಳಿದುಂ |
ಕುಂಭಿನಿಯೊಳ್ನಿಂದು ನಾಡೆ ನೋಡಿದನಾಗಳ್ || ೧೯ ||

ಇನಿತೆನಿತೆಡರಡಸಿದೊಡಂ |
ಹನುಮಂ ಲೆಕ್ಕಿಸದೆ ನಡೆದನತಿಸಾಹಸಿಯೆಂ ||
ದೆನುತಂತರಿಕ್ಷದೆಡೆಯೊಳ್ |
ಬಿನದದೆ ಕೊಂಡಾಡುತಿರ್ದ್ದುದಮರಾನೀಕಂ || ೨೦ ||

ಇತ್ತಲ್ ಕಪಿ ವರಲಂಕಾ |
ಪತ್ತನಮಂ ಚಿತ್ರಕೂಟದಿಂದೀಕ್ಷಿಸುತುಂ ||
ಮಿತ್ತುಗೆ ಪುಗುವೊಡಸಾಧ್ಯಮೆ |
ನುತ್ತಚ್ಚರಿವಟ್ಟು ನಿಬಿಡವನಮಂ ಸಾರ್ದಂ || ೨೧ ||

ದನುಜನ ಪುರಮಂ ಸಾರಲ್ |
ಮನದಂದುಪವನಮನೈದೆ ಪೊಕ್ಕುಂ ಬಳಿಕಂ ||

ದಿನೊಳಿನನಸ್ತಮನೀಕ್ಷಿಸು |
ತನಿಲಾತ್ಮಜನಿರ್ದನುಚ್ಚಶಾಖಾಗ್ರದೊಳಂ || ೨೨ ||

ಜನಿಸಿದ ಮಾತ್ರದೆ ತನ್ನಂ |
ತಿನಲುದ್ಯೋಗಿಸಿದನೀತನೀ ಜವ್ವನದೊಳ್ ||
ತಿನದುಳಿಯನೆಂದು ದಿನಪಂ |
ತನುವಂ ಮರೆಗೆಯ್ವನೆಂಬೊಲಬ್ಧಿಯೊಳಿಳಿದಂ || ೨೩ ||

ಕುವಲಯಮಂ ಬಾಧಿಸಿ ಸ |
ನ್ನಿವಹಕ್ಕಪಕಾರಿಯೆನಿಸಿ ರಾಜಂಗೆ ವಿರೋ ||
ಧವನೆಸಗಿದ ದುಷ್ಟಂ ಬಾ |
ಳ್ವವನೇ ತಾನೆಂಬೊಲಸ್ತಮಿಸಿದಂ ಸೂರ್ಯಂ || ೨೪ ||

ಪರಿದೋಡುವನಿನನಿವನಂ |
ಕರದಿಂ ಪಿಡಿದೆಳೆವೆನೆಂದು ವಿಶ್ವಾಕೃತಿಯಂ ||
ಧರಿಸಿದ ರಾಹುವೊ ಎನಲಾ |
ವರಿಸಿದುದು ಮಹಾಂಧಕಾರಮವನೀತಳಮಂ || ೨೫ ||

ಧರೆಯಿಂ ಮಾರ್ಪೊಳೆದಾಗಸ |
ದೊರೆಯೊಳ್ಶೋಭಿಸುವ ಮಲ್ಲಿಕಾಸುಮಚಯಮೋ ||
ನೆರೆ ಪುಷ್ಕರಕರಿ ಚೆಲ್ಲಿದ |
ಶರಧಿಯ ಫೇನಗಳೊ ಎಂಬೊಲುಡುಗಣಮೆಸೆಗುಂ || ೨೬ ||

ಮರನಿಳಿದನಿಲಸುತಂ ಕಾ |
ರಿರುಳೊಳ್ ಪೊರವಾಗಿಲೆಡೆಗೆ ಸೂಕ್ಷ್ಮಾಕೃತಿಯಿಂ ||
ಬರೆವರೆ ಲಂಕಿನಿಯೆಂಬಳ್ |
ತರಳಾ ನೀನಾರ್ಗೆಯೆಂದು ತಡೆದಳ್ ಕಪಿಯಂ || ೨೭ ||

ಇವಳೊಡನೆ ಕಲಹಮಂ ಗೆ |
ಯ್ಯುವೊಡೀಗಳ್ಸಮಯಮಲ್ಲಮೆನ್ನುತಮಾ ದಾ ||
ನವಿಯಂ ನೋಡುತ್ತೊಯ್ಯನೆ |
ಪವನಸುತಂ ಪೇಳ್ದನವಳ ಬಗೆಯಂ ತಿಳಿದುಂ || ೨೮ ||

ಜಲಫಲಗಳುಳ್ಳ ಧರಣೀ |
ತಲದೊಳ್ಸಂಚರಿಪ ವೃತ್ತಿಯಾದುದರಿಂದೀ ||
ನೆಲಕಿದೊ ಬಂದೆಂ ಮಿರುಗುವ |
ಪೊಳಲಂ ಮಿಗೆ ಕಂಡು ಪೋಪೆನೆಂದಂ ಹನುಮಂ || ೨೯ ||

ದನುಜನ ಪುರಮಂ ಪುಗುವೊಡೆ ।
ವನಜಭವಾದ್ಯರ್ಗೆ ಸಾಧ್ಯಮಲ್ಲಂ ನೀನೇಂ ॥
ಘನಮೆನಗೆನುತಂ ದಾನವಿ ।
ಕಿನಿಸಿಂದೊದೆಯಲ್ಕೆ ಹನುಮನವಳಂ ಪೊಯ್ದಂ ॥ ೩೦ ॥

ಹನುಮನ ಹಸ್ತಸ್ಪರ್ಶಂ ।
ತನಗಾಗಲ್ ಸ್ಮರಿಸಿಕೊಳುತೆ ಲಂಕಿನಿಯೆಂದಳ್ ॥
ಚಿನುಮಯ ಕೇಳಬ್ಜಜನೀ ।
ದನುಪುರಮಂ ಕಾವುದೆಂದು ಕಳಿಪಿದನೆನ್ನಂ ॥ ೩೧ ॥

ಖಗಪತಿಗಮನಂ ತ್ರೇತಾ ।
ಯುಗದೊಳಗವತರಿಪನವನ ಸತಿಯಂ ಲಂಕಾ ॥
ನಗರಕೆ ದೈತ್ಯಂ ತರಲಂ ।
ದಿಗೆ ಮಾರುತಸೂನು ಬರ್ಪನವಳಂ ಪುಡುಕಲ್ ॥ ೩೨ ॥

ಆತಗೆ ಪಥಮಂ ತೋರುತ ।
ವಿಾ ತಾಣಕೆ ನಡೆವುದೆಂದು ವಿಧಿ ಪೇಳ್ದಿರ್ಪಂ ॥
ವಾತಜ ನಿನಗಿಂದಪ್ಪುದು ।
ಸೀತಾದರ್ಶನಮದೆಂದುಮಜನಂ ಸಾರ್ದಳ್ ॥ ೩೩ ॥

ಅಚ್ಚರಿಪಟ್ಟನಿಲಸುತಂ ।
ಜೆಚ್ಚರದಿಂ ದ್ವಾರಪಾಲರಂ ನದೆದುಂ ಮೇಣ್ ॥
ಸಚ್ಚರಿತರತ್ನರುಚಿಯಂ ।
ಮೆಚ್ಚುತೆ ನಡೆತರುತುಮಿರ್ದ್ದನಾ ಪತ್ತನದೊಳ್ ॥ ೩೪ ॥

ಇರ್ಕೆಲದ ಕೇರಿಕೇರಿಗ ।
ಳಿರ್ಕೆಗಳಂ ಸೂಕ್ಷ್ಮರೂಪದಿಂದಂ ಪುಗುತಂ ॥
ರಕ್ಕಸಪೊಳಲಿದು ಸುರರ ಪು ।
ರಕ್ಕಂ ಮಿಗಿಲೆಂದು ನೋಡಿದಂ ಹನುಮಂತಂ ॥ ೩೫ ॥

ಪ್ರಾಕಾರಗಳಂ ಕಳಿಕಳಿ ।
ದಾ ಕೇರಿಯೊಳಿರ್ಪ ರತ್ನಸೌಧಂಗಳೊಳಂ ॥
ಮಾಕಾಮಿನಿಯಂ ಕಾಣದೆ ।
ಬಾಕುಳಮನನಾಗಿ ನಗರವೀಥಿಗೆ ನಡೆದಂ ॥ ೩೬ ॥

ಪದಜಾತರ ಮಂದಿರಗಳ ।
ಸುದತಿಯರೊಳ್ ನೃತ್ಯಗೀತವಾದ್ಯಾದಿ ಕಲಾ ॥

ವಿದರಬಲೆಯರೊಳ್ ಗಣಿಕಾ |
ಸದನಗಳೊಳ್ ಭರದೊಳರಸಿದಂ ಭೂಮಿಜೆಯಂ || ೩೭ ||

ಕರುಮಾಡಗಳೊಳ್ ಚಾವಿಾ |
ಕರಪರ್ಯಂಕದೆಡೆಗೆ ನೂತನವಿಟರಂ ||
ಕರೆದುಂ ಕಲೆಯಂ ಕಲಿಸುತೆ |
ಕರಮೊಪ್ಪುವ ವಾರವನಿತೆಯರೊಳೀಕ್ಷಿಸಿದಂ || ೩೮ ||

ಇನಿನುಡಿಯೊರ್ವನೊಳಂ ಮೇ |
ಣೆನಿತುಂ ಮುದವೊರ್ವನಲ್ಲಿ ಕಿನಿಸೊರ್ವನೊಳಂ ||
ಮನವೊರ್ವನೊಳಿದ್ದುಂ ಸು |
ಮ್ಮನೆಯೊರ್ವನನೀಕ್ಷಿಪಬಲೆಯರೊಳೀಕ್ಷಿಸಿದಂ || ೩೯ ||

ಪೊಳೆವೆಳಜವ್ವನೆಯರ ಬ |
ಲ್ಮೊಲೆಯರ ಮಾತಂಗಗಮನೆಯರ ಮಧುಕರಕುಂ ||
ತಳೆಯರ ಜಳರುಹನಿಭಕರ |
ತಳೆಯರ ತಿಂತಿಣಿಯೊಳರಸಿದಂ ಧರಣಿಜೆಯಂ || ೪೦ ||

ಶುಕಮಂ ನುಡಿಸುತೆ ವಿಮಲಾಂ |
ಶುಕಮಂ ಸಯ್ಪಿಡುತೆ ಮುದ್ದಿಸುತ್ತಂ ನಿಜಬಾ ||
ಲಕರಂ ಮುಂಗುರುಳಂ ಮೃದು |
ಲಕರದೆ ನೇವರಿಪ ಲಲನೆಯರೊಳೀಕ್ಷಿಸಿದಂ || ೪೧ ||

ಅಲ್ಲಿಂ ತಳರ್ದುಂ ಹನುಮಂ |
ಮೆಲ್ಲನೆ ವೈಶ್ಯಾಲಯಂಗಳಂ ಚರಿಸುತ್ತುಂ ||
ವಲ್ಲಭನರಸಿಯನರಸುತೆ |
ನಿಲ್ಲದೆ ಭೂಭುಜರ ಕೇರಿಯಂ ಸಾರ್ದನಣಂ || ೪೨ ||

ಮಾನಿತಮಹಿಯಧಿನಾಥರ |
ಮಾನಿನಿಯರೊಳರಸಿ ಕಾಣದಂಜನೆಯಣುಗಂ ||
ತಾನಾಲೋಚಿಸಿ ವಿಪ್ರವಿ |
ತಾನದ ನಿಳಯಗಳನೈದೆ ನೋಡುತೆ ನಡೆದಂ || ೪೩ ||

ಅಸುರರನುನ್ನತಹರ್ಮ್ಯ |
ಪ್ರಸರದ ಮಣಿವೆಳಗಿನಿಂದೆ ನಡೆನೋಡುತ್ತುಂ ||
ಸಸಿನೆ ನಿರೀಕ್ಷಿಸಲುದ್ಯೋ |
ಗಿಸಿ ಪೊಕ್ಕಂ ರಾಜವೀಧಿಗಳೊಳನಿಲಸುತಂ || ೪೪ ||

ವಿದ್ಯುನ್ಮಾಲಿನರಾಂತಕ |
ವಿದ್ಯುಜ್ಜಿಹ್ವಾದಿ ದೈತ್ಯನಾಯಕರ ಮಹಾ ||
ವಿದ್ಯುನ್ನಿಭಸೌಧಗಳಂ |
ವಿದ್ಯಾನಿಧಿ ಹನುಮನೈದೆ ಪುಗುತೀಕ್ಷಿಸಿದಂ || ೪೫ ||

ಶುಂಭನ ಶಾರ್ದೂಲನ ಶುಕ |
ಕುಂಭನಿಕುಂಭಾತಿಕಾಯದೈತ್ಯರ ಗೃಹದೊಳ್ ||
ಕುಂಬಿಣಿಗುವರಿಯನರಸಿದ |
ನಂಬುಜಲೋಚನನ ದೂತನಾ ರಾತ್ರಿಯೊಳಂ || ೪೬ ||

ಘಸವಿಘನವಿಕಟಸಾರಣ |
ದನುಜಮಹಾಪಾರ್ಶ್ವಜಂಬುಮಾಲಿರುಧಿರಲೋ ||
ಚನದೇವಾಂತಕಮುಖ್ಯರ |
ವನಿತಾಜನದಲ್ಲಿ ನೋಡಿ ಮರಳ್ದಂ ಹನುಮಂ || ೪೭ ||

ತ್ರಿಶಿರಪ್ರಹಸ್ತದುರ್ಮದ |
ನಿಶಿಚರಮುಕರಾಕ್ಷಮತ್ತಸಾಮಜವರಲೋ ||
ಮಶಯುದ್ಧೋನ್ಮತ್ತಾದಿಗ |
ಳಸಿಯರೊಳೀಕ್ಷಿಸುತೆ ಮುಂದೆ ನಡೆದಂ ಹನುಮಂ || ೪೮ ||

ಭರದೆ ವಿರೂಪಾಕ್ಷಮಹೋ |
ದರಪಾರ್ಶ್ವಕಧೂಮ್ರನೇತ್ರಮುಖ್ಯರ ವರಮಂ ||
ದಿರದೊಳ್ಪಡುಂಕಿ ನಕ್ತಂ |
ಚರನಾಥನ ತಂಗೆಯಾಲಯಮನೊಳವೊಕ್ಕಂ || ೪೯ ||

ಮೂಳಿಯರ ಮೂಗೊರತಿಯರ |
ಮೇಳದ ಫಲಮದ್ಯಶೋಣಿತಾಹಾರದ ವೇ ||
ತಾಳಪಿಶಾಚರ ಪಿರಿತಿನಿ |
ಯೋಳಿಯ ಕೆಲಬಲದ ಶೂರ್ಪನಖಿಯಂ ಕಂಡಂ || ೫೦ ||

ಇವಳಾಗೆವೇಳ್ಕುಮೀಕ್ಷಿಸ |
ಲವನಿಪರಿಂ ಕರ್ಣನಾಸಿಕಚ್ಛೇದನಗೊಂ ||
ಡವಳೆಂದಲ್ಲಿ ವಿಚಾರಿಸಿ |
ತವಕದೆ ಘಟಕರ್ಣನಾಲಯಮನೊಳವೊಕ್ಕಂ || ೫೧ ||

ನೀಳಗಿರಿ ನಿದ್ರೆಗೆಳಸಿ ಕ |
ರಾಳತರಾಕೃತಿಯನಾಂತು ಮಲಗಿರ್ಪ್ಪುದೆನಲ್ ||

ಪೋಲೆ ನಿಶಾಟನನೀಕ್ಷಿಸಿ |
ಮೌಳಿಯನೊಲೆವುತ್ತೆ ಬಳಿಕಮಲ್ಲಿಂ ಮರಳ್ದಂ || ೫೨ ||

ವೀರರಸವೊಸರ್ವ ವೊಗದ ಕ |
ಠೋರಮಹಾದಂಷ್ಟ್ರಯುಗದ ಕುಡಿವಿಡಾಸೆಯ ಶ ||
ಕ್ರಾರಾತಿಯನೀಕ್ಷಿಸಿ ರಣ |
ಧೀರಂ ಖಳನೆಂದು ಪೊಗಳುತಲ್ಲಿಂತಳರ್ದಂ || ೫೩ ||

ಒಳಸುತ್ತಿನ ಪೊಂಗೋಂಟೆಯ |
ನೊಳವುಗುತುಂ ರಾಜನಿಳಯಮುಂ ಸಾರ್ದುಂ ಪ ||
ಜ್ವಳಿಸುವ ಮಣಿವೆಳಗಿನ ಮಂ |
ಜುಳ ದಾನವರಾಜನಂತಃಪುರಮಂ ಪೊಕ್ಕಂ || ೫೪ ||

ಸುರಯಕ್ಷಖಚರಚಾರಣ |
ಗರುಡೋರಗಸಿದ್ಧಸಾಧ್ಯಮನುಮುನಿವಿದ್ಯಾ ||
ಧರನರಕಿನ್ನರಗಂಧ |
ರ್ವರ ನಾರಿಯರಿರ್ದ್ದಸುರನಂತಃಪುರದೊಳ್ || ೫೫ ||

ಅವರವರೊಳ್ ನಡೆನೋಡು |
ತ್ತವಿಳಂಬದೊಳಸುರಪತಿಯ ಸೆಜ್ಜೆಯ ಮನೆಗಂ ||
ಪವನಸುತಂ ನಡೆತಂದಂ |
ಪ್ರವಿಲಸದುರುರತ್ನಕಾಂತಿದಿನಪಪ್ರಭೆಯೊಳ್ || ೫೬ ||

ಕಾರ ಮುಗಿಲಂತೆ ಪೊಳೆವ ಶ |
ರೀರದ ಮುಖದಶಕದರುಣವಸನದ ಸಪಾರ್ ||
ಕಾರದ ವಿಂಶತಿಭುಜಗಳ |
ಹೀರಸುದಂಷ್ಟ್ರಂಗಳಸುರಪತಿಯುಂ ಕಂಡಂ || ೫೭ ||

ಮಿರುಪ ಮಣಿಮಂಚಶಯನದೆ |
ಸುರುಚಿರಚಂಚಲೆಯ ವರಿಯೊಳೊಪ್ಪುವ ಮಂದೋ ||
ದರಿಯಪ್ಪುಗಯ್ಯ ನಿದ್ರಾ |
ಭರದ ನಿಶಾಚರಕುಲೇಶನಂ ಕಂಡನವಂ || ೫೮ ||

ಇವನ ವಿಭವಾತಿಶಯಮಂ |
ವಿವರಿಪೊಡಹಿನಾಥನೇಸರವನೆಂದೆನುತಂ ||
ತವೆ ನೋಡಿನೋಡಿ ಹನುಮಂ |
ತವಕದೆ ನವರತ್ನಮಂಚವೆಡೆಯಂ ಸಾರ್ದ್ದಂ || ೫೯ ||

ತಳಿರಡಿಗಳ ನಲ್ದೊಡೆಗಳ |
ಸೆಳೆನಡುವಿನ ಬಟ್ಟಮೊಲೆಯ ನಳಿದೋಳ್ಗಳ ಮಂ ||
ಜುಳಮುಖದಾಯತನೇತ್ರದ |
ಲಳನೆಯನುರೆ ನೋಡಿ ತನ್ನೊಳಾಳೋಚಿಸಿದಂ || ೬೦ ||

ಇವಳಲ್ತೆ ಜನಕರಾಜನ |
ಕುವರಿಯದೇಕಿಲ್ಲಿ ರಾಮನರಿಪಿದ ಕುರಿಪಂ ||
ತವೆನೋಳ್ಪೆನೆಂದು ಚರಣಮು |
ನವಲೋಕಿಸೆ ಕಾಕರೇಖೆಯಿರೆ ಮೆಯ್ದೆಗೆದಂ || ೬೧ ||

ಪರಮಪತಿವ್ರತೆಯನುಪಮ |
ಚರಿತೆಯೆನಲ್ ರಾಮನರಸಿ ದನುಜಾಧಮನಂ ||
ಬೆರೆವಳೆ ವಿವೇಕಮಿಲ್ಲದೆ |
ಮರುಳೆಯನಾಂ ಸೀತೆಯೆಂದು ತಿಳಿದೆನೆಯಕಟಾ || ೬೨ ||

ನಿರಯಕೆ ಭಾಜನನಾದೆಂ |
ಹರಹರ ತಾನೆಂದು ಮರುಗಿ ಮರಳ್ದಲ್ಲಿಂದಂ ||
ಕರಮೆಸೆವ ಚಂದ್ರಶಾಲೆಯ |
ಸುರುಮಣಿಮಯ ಧನದಪುಷ್ಪಕಮನೀಕ್ಷಿಸಿದಂ || ೬೩ ||

ಧನಧಾನ್ಯದ ಕೋಶಗಳಂ |
ಮಿನುಗುವ ಶಸ್ತ್ರಾಸ್ತ್ರಗೃಹಗಳಂ ಶೋಧಿಸುತಂ ||
ಹನುಮಂ ಬರೆ ಕಂಡಂ ಪಾ |
ವನಮೆನಿಪ ವಿಭೀಷಣಾಲಯದ ಸಂಭ್ರಮಮಂ || ೬೪ ||

ಹರಿನಾಮಕೀರ್ತನೆಗಳಿಂ |
ಹರಿದಾಸರ ನಾಟ್ಯದಿಂದೆ ಬೃಂದಾವನದಿಂ ||
ಕರಮೆಸೆವ ಗೃಹಮನೀಕ್ಷಿಸಿ |
ಕರಿವರದನ ಭಕ್ತನೀತನೆಂದುಂ ಮರಳ್ದಂ || ೬೫ ||

ಆ ನಗರಮೆಲ್ಲಮಂ ಮಿಗೆ |
ತಾನೊರ್ವನೆ ನಿಶೆಯೊಳರಸಿ ಕಾಣದೆ ಸೀತಾ ||
ಮಾನಿನಿಯನಲ್ಲಿ ಕಡುದು |
ಮ್ಮಾನದೊಳುರುಸೌಧಮೊಂದನೇರಿದನಾಗಳ್ || ೬೬ ||

ನಿನಗೇಕೆ ಚಿಂತೆ ಸೀತಾ |
ವನಿತೆಯಶೋಕಾಖ್ಯವನದೊಳಿರ್ಪಳ್ನೀಂ ನೋ ||

ಡೆನುತಂ ತೋರ್ದಪನೋ ಎಂ |
ಬಿನಮುದಯಂಗೆಯ್ದನಬ್ಜನುದಯಾದ್ರಿಯೊಳಂ || ೬೭ ||

ಬಿಸಿಲ್ವಕ್ಕಿಯ ವಿರಹಾಗ್ನಿಯೊ |
ಬಿಸಜದ ಕಡುಗಿನಿಸೊ ಪೂರ್ವದಿಕ್ಸತಿ ಪಣೆಯೊಳ್ ||
ಪೊಸೆದಿಟ್ಟ ರಕ್ತಚಂದನ |
ರಸದುರುತಿಲಕಮೊ ಎನಲ್ಕೆ ಶಶಿ ಕಣ್ಗೆಸೆದಂ || ೬೮ ||

ಸುರರುಣಿಸಿನ ಗುಳಿಗೆಯೊ ಮಿಗೆ |
ಸುರಪನ ಸಾಮಜಮೊ ಪುಷ್ಕರಾಂಭೋನಿಧಿಯೊಳ್ ||
ಮಿರುಪ ನೊರೆಯೊಟ್ಟಿಲೋ ಎನೆ |
ಮೆರೆದುದು ಪರಿಯಿಂದೆ ತಣ್ಗದಿರನುರುಬಿಂಬಂ || ೬೯ ||

ಹರಿಯೊಲ್ಸುದರ್ಶನಕರಂ |
ಧರಣೀಶ್ವರನಂತೆ ಕುವಲಯೋದ್ಭಾಸಂ ಸಾ ||
ಗರನೊಲ್ ಹರಿಜಾತಪ್ರಿಯ |
ತರನೆನಿಸುತೆ ರಾಜನೆಸೆದನಭ್ರಾಂಗಣದೊಳ್ || ೭೦ ||

ಕಡಲುಬ್ಬಿರ್ತು ಕಾರ್ಗಳ್ತಲೆ |
ಗಡಣಂ ತಗ್ಗಿದುದು ನೆಯ್ದಿಲಲರ್ದುದು ನಭದೊಳ್ ||
ಉಡುಗಣಮತಿಶೋಭಿಸಿದುದು |
ಪೊಡವಿಯ ತಳಮೆಸೆದುದಮಲದುಗ್ಧಾರ್ಣವದೊಲ್ || ೭೧ ||

ಬೆಳ್ದಿಂಗಳ ಬೆಳಗಿನೊಳಂ |
ನಾಲ್ದೆಸೆಯಂ ಹನುಮನೀಕ್ಷಿಸುತ್ತಿರಲಾಗಳ್ ||
ಕಾಲ್ದೆಗೆದಶೋಕವನದಿಂ |
ದೊಲ್ದೆಯ್ತಂದಂ ಸರಾಗದಿಂದಂ ಪವನಂ || ೭೨ ||

ತನುಜಾತಂ ಬಳಲ್ದಂ ಮೇ |
ದಿನಿಯಣುಗಿಯನರಸಿ ತಾಣಮಂ ತೋರ್ದಪೆನೆಂ ||
ದೆನುತಂ ನಾನಾಸುಮಗಳ |
ತನಿಗಂಪಂ ತಂದು ಬೀರುತಿರ್ದಂ ಮರುತಂ || ೭೩ ||

ಈ ವನವೊಂದಿರ್ಪ್ಪುದು ತಾ |
ಸೀ ವನಕಂ ಪೋಪೆನೆಂದು ಸೌಧಮನಿಳಿದುಂ ||
ತೀವಿದ ಸಂತಸದಿಂದಂ |
ರಾವಣನುಪಮನ್ನೈದೆ ಪೊಕ್ಕಂ ಹನುಮಂ || ೭೪ ||

ಪ್ರಾಸಾದತೋರಣಗಳಿಂ |
ಭಾಸುರಮಂಡಪಗಳಿಂದೆ ಮಣಿವೇದಿಗಳಿಂ ||
ಕಾಸಾರಗಳಿಂ ಪರವೋ |
ಲ್ಲಾಸಂಬಡೆದಿರ್ಪ ಚಾರುವನಮಂ ಕಂಡಂ || ೭೫ ||

ಪುರುಹೂತನಂದನವೊ ಪುರ |
ಹರಸಖನಾರಾಮಚೈತ್ರರಥವೋ ಬಳಿಕಂ ||
ಸರಸಿಜಶರನಾಕ್ರೀಡವೊ |
ಸರಸಸುಫಲಪುಷ್ಪದಿಂದೆ ಪೂರಿತವನವೋ || ೭೬ ||

ಫಲಸುಮಮಿಲ್ಲದ ತರುಲತೆ |
ಪಳುಕಿನ ಸೋಪಾನಮಿಲ್ಲದಬ್ಜಾಕರಗಳ್ ||
ಗಿಳಿ ಕರ್ದುಕಿದ ಫಲರಸಮಿಳೆ |
ಗಿಳಿಯದ ಮಾಮರಗಳಿಲ್ಲಮಾರಾಮದೊಳಂ || ೭೭ ||

ಮಿಸುಪ ಲತಾಕುಂಜಗಳೊಳ್ |
ಮಿಸುನಿಯ ವರವೃಕ್ಷಷಂಡಮೂಲಗಳೊಳ್ಬಾ ||
ಸಿಸುವೆಳೆಯೆಲೆವನೆಗಳೊಳಂ |
ಬಿಸಜಾಕ್ಷಿಯನರಸುತಿರ್ದ್ದನದನೇವೇಳ್ವೆಂ || ೭೮ ||

ವಿಧುಕಾಂತೋಪಲಗೃಹದೊಳ್ |
ವಿಧುಪದಮಂ ಸೊಂಕುತಿರ್ಪ ಸೌಧಾವಳಿಯೊಳ್ ||
ಮದನವಿಲಾಸಾಶ್ರಯದೊಳ್ |
ಮದಗಜಗಾಮಿನಿಯನರಸುತಿರ್ದ್ದಂ ಹನುಮಂ || ೭೯ ||

ಪನಿಯಿಡುವ ಮರಂದದ ಕಂ |
ಪೆನಿಸುವ ತಿಳಿಗೊಳದ ಹಂಸಶುಕಪಿಕಶಿಖಿನಿ ||
ಸ್ವನದ ವನಜಾತಮುಕುಳ |
ಸ್ತನೆಯರ ಸಂಭ್ರಮದ ವನದೊಳೀಕ್ಷಿಸುತಿರ್ದ್ದಂ || ೮೦ ||

ನಾನಾವೃಕ್ಷಗಳೆಡೆಯೊಳ್ |
ನಾನಾವೀರುಧೆಗಳಡಿಯೊಳುರುಕಾಸಾರಗಳೊಳ್ ||
ಮಾನಾಥಸತಿಯನನುಸಂ |
ಧಾನಂಗೆಯ್ಯುತ್ತುಮಿರ್ದ್ದನೇಂ ಸಾಹಸಿಯೋ || ೮೧ ||

ಬರೆವರೆ ಕಂಡಂ ಮಂಜುಳ |
ತರನಿಬಿಡಚ್ಛದದ ಕನಕವರ್ಣವಿಹಂಗೋ ||

ತ್ಕರದಿಂ ಪರಿಶೋಭಿಪ ಬಂ |
ಧುರತರವರಶಿಂಶಪಾದ್ರುಮಮನಾ ಹನುಮಂ || ೮೨ ||

ಆ ಮರನಡಿಯೊಳ್ ರಾಮನ |
ನಾಮಮನಡಿಗಡಿಗೆ ನೆನೆದು ಶೋಕಿಪ ಸೀತಾ ||
ಕಾಮಿನಿಯಂ ಮುನಿನುತೆಯಂ |
ತಾಮರಸಾಂಬಕೆಯನೈದೆ ಕಂಡಂ ಹನುಮಂ || ೮೩ ||

ಬಳಲಿ ಬಡವಾದ ದೇಹದ |
ಮಳಿನಾಂಬರದೇಕವೇಣಿಯಶ್ರುಸ್ರುತ್ಕರಪ ||
ನ್ಮಿಳಿತಾಯತನೇತ್ರದ ಭೂ |
ತಳಶಯ್ಯೆಯ ಭೂಮಿಜಾತೆಯಂ ಕಂಡನವಂ || ೮೪ ||

ಘನಕುಲಮಧ್ಯದೊಳೊಂದೆಡೆ |
ಮಿನುಗುವ ಚಂಚಲೆಯೊ ರಾಹು ಸಲೆಸೊಂಕಿದ ಚಂ ||
ದ್ರನ ಕಲೆಯೋ ಎನೆ ರಾಕ್ಷಸ |
ವನಿತಾಜನಮಧ್ಯದಬ್ಜಮುಖಿಯಂ ಕಂಡಂ || ೮೫ ||

ಶರಭಲುಲಾಯೋರಗಹರಿ |
ಕರಿಕಿಟಿಶಾರ್ದೂಲಶುನಕವದನದ ನಾಲ್ಕೆಂ ||
ಟೆರಡಾರುದಲೆಯ ರಾಕ್ಷಸಿ |
ಯರ ಪರಿವೇಷ್ಟನದ ಭೂಮಿಸುತೆಯಂ ಕಂಡಂ || ೮೬ ||

ಆನೇಂ ಸುಕೃತಿಯೊ ಸೀತಾ |
ಮಾನಿನಿಯಂ ಪರಮಪುಣ್ಯಚರಿತೆಯನಾ ಚಂ ||
ದ್ರಾನನೆಯಂ ಕಂಡೆನೆನು |
ತ್ತಾನಂದಂಬಡೆದು ಸಾರ್ದನಾ ದ್ರುಮದೆಡೆಯಂ || ೮೭ ||

ಶ್ರೀರಾಮಂ ಪೇಳ್ದಂದದೊ |
ಳೀ ರಮಣಿಯೊಳಿರ್ಪ್ಪವಮಿತಶುಭಲಕ್ಷಣಗಳ್ ||
ಧಾರಿಣಿಸುತೆಯಪ್ಪಳೆನು |
ತ್ತಾರಯ್ದೀಕ್ಷಿಸಿದನನಿಲಸುತನವನಿಜೆಯಂ || ೮೮ ||

ಜನಕಧರಾನಾಥನೊಳಂ |
ಜನಿಸುತೆ ಜಗದೀಶನರಸಿಯೆನಿಸುತಮಿರ್ಪ ||
ಳ್ಗಿನಿತೊಂದು ಬವಣೆಯನುಚಿತ |
ಮೆನುತಂ ಮರುಗುತ್ತಮಿರ್ದ್ದನಾ ಮರದುದಿಯೊಳ್ || ೮೯ ||

ಅತ್ತಲ್ ರಾಕ್ಷಸನಾಥಂ |
ಚಿತ್ತದೊಳಂ ರಾಮನಂಘ್ರಿಗಂ ಮತ್ತನುವಂ ||
ತೆತ್ತಪೆನೆಂದಿಗೆ ತಾನೆಂ |
ದುತ್ತಮತದ್ಧ್ಯಾನದಿಂದಮಿರ್ದಂ ಮನೆಯೊಳ್ || ೯೦ ||

ಕಪಿಯೊಂದೆಳ್ತಂದುಂ ಭೂ |
ಮಿಪನರಸಿಯನ್ನೈದೆ ಕಾಣ್ಬೊಡಿರ್ಪುದುಮೆನುತುಂ ||
ಸೊಪನಂಗಂಡೆಳ್ದಂ ದಶ |
ಲಪನಂ ನಡೆತಂದನಪರರಾತ್ರಿಯೊಳಾಗಳ್ || ೯೧ ||

ನಿಷ್ಠುರದಿಂ ಧರಣಿಜೆಯಂ |
ಕಷ್ಟಂಬಡಿಸಲ್ಕೆ ಕಂಡು ಕಪಿಯದನೆಲ್ಲಂ ||
ವಿಷ್ಟಪಪತಿಗಂ ದೂರ |
ಲ್ಕಿಷ್ಟಂ ತನಗಪ್ಪುದೆಂದು ಯೋಚಿಸಿದನವಂ || ೯೨ ||

ಅದುಮಲ್ಲದೆ ಸೀತಾವಿರ |
ಹದೆ ಬಳಲಿದ ತನುವನವಳ ಸಂಗದಿನಿನ್ನಾಂ ||
ಪದುಳಂಗೆಯ್ವೆಂ ಚಂದ್ರಮು |
ವದನೆಯನುರೆ ನೋಳ್ಪೆನೆಂದು ಭರದಿಂ ಬಂದಂ || ೯೩ ||

ಸತಿಯರ ಗಡಣದೆ ರಾಕ್ಷಸ |
ಪತಿ ಬರೆವರೆ ಕಂಡು ಹನುಮನೇನದ್ಭುತಮೆಂ ||
ದತುಳಿತತನುವಂ ಸಣ್ಣಿಸಿ |
ಕ್ಷಿತಿಯಂ ನೆರೆ ನೋಡುತಿರ್ದ್ದನೆಲೆವರೆಯೊಳಗಿಂ || ೯೪ ||

ಲಲನಾಕರಕಲಿತಸುಮಂ |
ಜುಲದೀಪಾವಳಿಯ ಬೆಳಗಿನೊಳ್ದಶಕಂಠಂ ||
ಗಳಿಲನೆ ನಡೆತಂದುಂ ಮೇ |
ಹೆಳೆಯಣುಗಿಯ ಮುಂದೆ ರತ್ನಪೀಠದೆ ಕುಳಿತಂ || ೯೫ ||

ನೋಡಿದನುರುದೇವತೆಯಂ |
ಬಾಡಿದ ಸಸಿಮೊಗದ ಬತ್ತಿದೊಡಲಿನ ಸಲೆ ಕ ||
ಯ್ಗೂಡಿದ ಗಲ್ಲದ ದುಃಖದೆ |
ಕೋಡಿವರಿವ ನೇತ್ರಜಲದ ಜನಕಾತ್ಮಜೆಯಂ || ೯೬ ||

ನಿರಶನದಿಂದಂ ತನುವಂ |
ಪರಿಶೋಷಣೆಗೆಯ್ಯಲೇಕೆ ಜವ್ವನದೊಳ್ ನಿ ||

ನ್ನರಸಂ ಬಂದಪನೆಂಬುದ |
ಸುರೆ ಮರೆದುಂ ನೋಳ್ಪುದೆನ್ನನೆಂದಂ ನಗುತಂ || ೯೭ ||

ಚರರಿಂ ಕೇಳ್ದಿರ್ಪೆಂ ವಾ |
ನರರೊಳ್ನಿಸ್ಸತ್ವದಿಂದೆ ಮಾನವರಿರ್ವರ್ ||
ಮರೆಗೊಂಡಿರ್ಪರೆನುತ್ತುಂ |
ತರಳಾಂಬಕೆ ಬಿಡುಬಿಡವರ ವಾಂಛೆಯನೆಂದಂ || ೯೮ ||

ಶರನಿಧಿಯಂ ಬಂಧಿಸಿ ದನು |
ಜರ ಬಾಣದೊಳುಳಿದು ನಿನ್ನನತ್ತಣ ಮನುಜರ್ ||
ಕರೆದುಯ್ವರೆಂಬ ಬಗೆಯಂ |
ತೊರೆತೊರೆ ಸಂತಸದೆ ಬಾಳಲೆನ್ನೊಡನೆಂದಂ || ೯೯ ||

ಓಲಗಿಪರೆನ್ನನಬ್ಜಜ |
ಶೂಲಿಸುರೇಂದ್ರಾದ್ಯರನಿಶಮುಮರಸತಿಯರೆ ||
ನ್ನಾಲಯದೊಳ್ನೊಗಮಿರ್ಪ್ಪರ್ |
ನೀಲಾಳಕೆ ನಿನ್ನ ಸೇವಗವರಂ ಕುಡುವೆಂ || ೧೦೦ ||

ಇಂತೆಸಲುರಿ ಮಸಗೆ ಧರಾ |
ಕಾಂತನ ಸತಿ ತೃಣಮನೊಂದನೀಕ್ಷಿಸುತಾಗಳ್ ||
ಸ್ವಾಂತಾಭಿಪ್ರಾಯಗಳಂ |
ತಾಂ ತಳ್ವದೆ ಪೇಳ್ದಳುಗ್ರತರಕೋಪದೊಳಂ || ೧೦೧ ||

ಎಲೆ ಮರುಳೆ ನಿನ್ನ ಸತ್ವದ |
ನೆಲೆಯಂ ನಾಂ ಕಂಡೆನಂದು ಹರಚಾಪದೊಳಂ ||
ಸಲೆಸಿಲ್ಕಿದರ್ದಾಗಳೆ ನೀಂ |
ಗಳಹದಿರಿನ್ನೆನ್ನೊಳೆಂದು ಮಗುಳ್ದಿಂತೆಂದಳ್ || ೧೦೨ ||

ರವಿವಂಶಜರಿಲ್ಲದ ಸಮ |
ಯವನೀಕ್ಷಿಸಿ ಬಂದ ಕಾರಣಂ ಬದುಕಿದೆ ರಾ ||
ಘವನಿರ್ಪ್ಪೊಡೆ ನಿನಗಂ ಕಾ |
ಣ್ಬುವುದಾಗಳೆ ಜವನ ಪತ್ತನಂ ಪಂಥಾನಂ || ೧೦೩ ||

ಶರನಿಧಿಯಂ ಬಂಧಿಸಿ ದೈ |
ತ್ಯರನೆಲ್ಲಂ ಕೊಂದು ನಿನ್ನ ಸಾಲ್ವಲೆಗಳನುಂ ||
ಧರೆಗಿಳಿಪುತುಮೆನ್ನಂ ನಿಜ |
ಪುರಕಂ ಕೊಂಡುಯ್ವನಾತನೆಂದರಿ ಮನದೊಳ್ || ೧೦೪ ||

ಮಾನವನೆಂದರಿತುಂ ಸು ।
ಮ್ಮಾನದೆ ನೀನಿರ್ಪೆ ನಿನ್ನ ಮರಣಾಂತದೊಳಂ ॥
ತಾನಯ್ದೆ ಕಾಣ್ಬುದೆಲ್ಲಂ ।
ದಾನವಕುಲನೀಚ ದುಷ್ಟ ಕೆಲಸಾರೆಂದಳ್ ॥ ೧೦೫ ॥

ರಸೆಯಣುಗಿಯ ವಚನಮನಾ ।
ಲಿಸಿ ದಶಗಳನುಗ್ರಕೋಪದಿಂದೊರೆಯುಗಿದಾ ॥
ಅಸಿಯಂ ಕಯ್ಕೊಂಡುಂ ಭೂ ।
ಮಿಸುತೆಯನುರೆ ಕೊಲ್ವೆನೆಂದು ಜಳಪಿಸಿ ನಿಂದಂ ॥ ೧೦೬ ॥

ಏಸಿದು ಪೆಣ್ಗೊಲೆಗೆಳಸುವ ।
ಮಾನಸಮಮರೋರಗಾಪ್ಸರಾಂಗನೆಯರ್ಗಂ ॥
ಮಾನವಿಯಧಿಕಮೆ ಬಿಡು ದು ।
ಮ್ಮಾನವೆ ನಡೆ ನಿಳಯಕೆಂದು ಮಯಸುತೆ ತಡೆದಳ್ ॥ ೧೦೭ ॥

ನಯಭಯದಿಂದಂ ಮಾನ ।
ದ್ವಯದೊಳ್ ವಶೆಯಾಗೆಗೆಯ್ವುದಲ್ಲದೊಡಿವಳಂ ॥
ರಯದಿಂ ಕೊಂದಪುದೆಂದುಂ ।
ನಿಯಮಿಸಿ ಖಳನುದತಿಯರ್ಗೆ ನೆಲೆಯುಂ ಸಾರ್ದಂ ॥ ೧೦೮ ॥

ದಶಶಿರನತ್ತಲ್ ಪೋಗ ।
ಲ್ಕಸುರೆಯರೊಂದೊಂದು ಪರಿಯೊಳುರುಕೋಪದೊಳಂ ॥
ವಸುಮತಿಯಣುಗಿಯನತಿ ಬಾ ।
ಧಿಸಲಾಗಳ್ ತ್ರಿಜಟೆ ಸಂತಮಿಟ್ಟಿಂತೆಂದಳ್ ॥ ೧೦೯ ॥

ವನಿತಾಮಣಿಯಂ ಪೀಡಿಪು ।
ದನುಚಿತಮದನುಳಿವುದೀಗಳಾಂ ನಿದ್ದೆಯೊಳಂ ॥
ಕನಸಂ ಕಂಡೆ ಶ್ರೀರಘು ।
ಜನ ಜಯಮಂ ದೈತ್ಯವಂಶವಿಧ್ವಂಸನಮಂ ॥ ೧೧೦ ॥

ಎನುತದನಭಿವರ್ಣಿಸಿದಳ್ ।
ವನಿತೆಯರಿರ ಕೇಳಿಮಿಂದ್ರಗಜವಾಹನಮಂ ॥
ಅನುಜಾತಂಬೆರಸೇರ್ದುಂ ।
ವನಜಾಕ್ಷಂ ಬಂದನಿಲ್ಲಿಗೆಂದುಂ ಕಂಡೆಂ ॥ ೧೧೧ ॥

ಈ ನಗರಮನುರೆ ದಹಿಸುತೆ ।
ದಾನವಪತಿಮುಖ್ಯ ದನುಜರಂ ಕೊಂದುಂ ಸು ॥

ಮ್ಮಾನದೆ ವಿಭೀಷಣಗೆ ಕರು |
ಣಾನಿಧಿ ಪಟ್ಟಾಭಿಷೇಕಮಂ ನಡೆಯಿಸಿದಂ || ೧೧೨ ||

ಅದುಮಲ್ಲದೆ ದನುಜಂ ದಶ |
ವದನಂ ತೈಲಾಂಗನಾಗಿ ನಿರ್ವಾಣದೊಳಂ ||
ಕೆದರ್ದಲೆಯಿಂ ಕತ್ತೆಯನೇ |
ರ್ದುದನುಂ ಯಮದಿಶೆಯನೆಯ್ದಿದುದನುಂ ಕಂಡೆಂ || ೧೧೩ ||

ಕಳೆವೆರೆ ಕಂಡೆಂ ಸೀತಾ |
ಲಲನೆಯನಾ ರಾಮನಂಕದೊಳ್ ಮೆರೆವವಳಂ ||
ಸಲವಿಂ ಕೂಡಿರೆ ತಮ್ಮಯೆ |
ಪೊಳಲ್ಗಂ ನಿಜನಾಥನೊಡನೆ ಪೋಪಳನೆಂದಳ್ || ೧೧೪ ||

ದನುಜೆಯರೆಲ್ಲತ್ರಿಜಟೆಯ |
ಕನಸಂ ನೆನೆಯುತ್ತೆ ಭೀತಿಗೊಂಡಿರಲಾಗಳ್ ||
ಮನಗುಂದುತೆ ಸೀತಾಮಾ |
ನಿನಿ ದುಃಖಂಗೆಯ್ಯುತಿರ್ದ್ದಳದನೇವೇಳ್ವೆಂ || ೧೧೫ ||

ರವಿಯುದಯಮಾಗೆ ಮಜ್ಜೀ |
ವವನುಳಿಸರ್ ಘೋರದಾನವಿಯರಿನ್ನಾಂ ರಾ ||
ಘವನಂ ಬಿಟ್ಟೀ ರಾಕ್ಷಸ |
ನಿವಹದೊಳಂ ಜೀವಿಸಿದ್ದೊಡೇಂ ಫಲಮಿಕ್ಕುಂ || ೧೧೬ ||

ಇನಕುಲಭವರೇನಾದರೊ |
ತನಗಾ ವಾರ್ತೆಗಳನ್ನೈದೆ ತಂದಪರಾರೋ ||
ದನುಜಾಧಮನುಪಟಳದಿಂ |
ತನುವಂ ನೀಗುವುದೆ ಸುಹಿತಮೆನಿಪುದು ನೋಡಲ್ || ೧೧೭ ||

ಮರಣನಿಮಿತ್ತದೆ ತನಗಂ |
ಪರಿರಂಭಿಪ ದೀರ್ಘವೇಣಿಯಿರ್ಪುದುಮದರಿಂ ||
ಕೊರಲಂ ಬಂಧಿಸಿ ಪರಣಮ |
ನರಸಂಗೊಪ್ಪಿಸುವೆನೆಂದು ಯೋಚಿಸಿ ನಿಂದಳ್ || ೧೧೮ ||

ಶ್ರೀರಾಮರಾಮ ಎನುತುಂ |
ಧಾರಿಣಿಸುತೆ ವೃಕ್ಷಶಾಖೆಯಂ ಸಾರಲ್ಕಂ ||
ಮಾರುತಿ ಕಂಡು ಸುಧಾರಸ |
ಪೂರಿತಮೃದುವಾಣಿಯಿಂದೆ ಮೆಲ್ಲನೆ ನುಡಿದಂ || ೧೧೯ ||

ಇನವಂಶಜದಶರಥಭೂ |
ಜನಪಾಲಗೆ ಪುತ್ರರಿರ್ಪ್ಪರಾ ನಾಲ್ವರ್ ಪಾ ||
ವನರವರೊಳ್ ಪಿರಿಯಂ ಜನ |
ಕನ ನುಡಿಯಿಂ ಬಂದನೈದೆ ಕಾಂತಾರಕ್ಕಂ || ೧೨೦ ||

ಆತನ ಸತಿ ಜನಕಜೆ ಸಹ |
ಜಾತಂ ಸೌಮಿತ್ರಿವೆರಸು ಪಂಚವಟಿಯೊಳಂ ||
ಗೌತಮಿಯ ತೀರದಲ್ಲಿರೆ |
ನೂತನಮೆನೆ ಹರಿಣಮೊಂದು ಸುಳಿದತ್ತಾಗಳ್ || ೧೨೧ ||

ಸತಿ ಬೇಡಲ್ಕದನಾ ರಘು |
ಪತಿ ಪಿಡಿವೊಡೆ ಪೋದನಾತನನುಜಂ ಬಳಿಕಂ ||
ದತಿಜವದಿಂದಂ ತೆರಳಲ್ |
ಯತಿವೇಷದೆ ಬಂತಿಗೊರಲನಲ್ಲಿಗೆ ಬಂದಂ || ೧೨೨ ||

ಧರಣಿಯನಗುಳ್ದಂ ಸೀತಾ |
ತರುಣಿಯನವನುಯ್ದುಸತ್ತಲಿತ್ತಲ್ ಬೆತೆಯಿಂ ||
ಭರದೊಳ್ಬರೆ ರಾಮಂ ಖಗ |
ವರನಿಂದಂ ಕೇಳ್ದನೆಲ್ಲ ವೃತ್ತಾಂತಮನುಂ || ೧೨೩ ||

ಆತಗೆ ಮುಕ್ತಿಯನಿತ್ತುಂ |
ಸೀತಾನ್ವೇಷಣನಿಮಿತ್ತಮೆಳ್ತರೆ ರವಿಸಂ ||
ಜಾತಂ ಸುಗ್ರೀವಂ ರಘು |
ನಾಥಂಗಂ ಮಿತ್ರನಾದನತಿಭಕ್ತಿಯೊಳಂ || ೧೨೪ ||

ಅವರಟ್ಟಿದರೆನ್ನಂ ಕಪಿ |
ನಿವಹದೊಳಂ ನೂರುಯೋಜನದ ಶರನಿಧಿಯಂ ||
ತವೆ ದಾಂಟಿ ಬಂದೆನಿಲ್ಲಿಗೆ |
ಪವನಸುತಂ ಹನುಮನೆಂದು ಕರೆವರ್ತನ್ನಂ || ೧೨೫ ||

ಆನೇಂ ಧನ್ಯನೊ ರಾಮನ |
ಮಾನಿನಿಯ ಪದಾಂಬುರುಹಮನಿಂದೀಕ್ಷಿಸಿದೆಂ ||
ಆ ನರನಾಥರ್ ಕ್ಷೇಮಿಗ |
ಳೀ ನುಡಿ ನಿಜಮೆಂದು ಸುಮ್ಮನಾದಂ ಹನುಮಂ || ೧೨೬ ||

ಏನಸದೃಶ ವಾಕ್ಯಂ ಮ |
ನ್ಮಾನಸಕಿದು ತೋಷದಾಯಿಯಾಯ್ತೆಂದೆನುತಂ ||

ಮಾನಿನಿ ಮೊಗವೆರುತೀಕ್ಷಿಸಿ ।
ತಾನೊರ್ವನನಲ್ಲಿ ಕಾಣದಿರಲಿಂತೆಂದಳ್ ॥ ೧೨೭ ॥

ಕನಸಿದೊ ಚಿತ್ತಭ್ರಾಂತಿಯೊ ।
ದನುಜರ ಮಾರಣಮೊ ಕಾಣೆನೆನ್ನಯ ಕರ್ಣ ॥
ಕ್ಕಿನಿದಾದುದು ನಿಜಮಾದೊಡೆ ।
ಸನಿಹದೊಳಂ ಕೇಳಲೆನುತೆ ಸುಮ್ಮನೆ ಕುಳಿತಳ್ ॥ ೧೨೮ ॥

ರಾವಣನೆನ್ನಂ ಮೋಹಿಪೊ ।
ಡೀ ವಾನರರೂಪಮಾಂತು ಬಂದನೊ ಎನುತುಂ ॥
ತೀವಿದ ಭಯದಿಂ ಜಾನಕಿ ।
ತಾವರೆಯೆಲೆನೀರ ತೆರದೆ ನಡುಕಂಗೊಂಡಳ್ ॥ ೧೨೯ ॥

ಏನತಿಭಕ್ತನೊ ಮಾರುತಿ ।
ಸಾನಂದದೆ ಮರದಿನಿಳಿದು ಬಂದುಂ ಸೀತಾ ॥
ಮಾನಿನಿಗಂ ವಂದಿಸಿ ಸ ।
ನ್ಮಾನಿಸುತಂ ಪೇಳ್ದನವಳೊಳತಿವಿನಯದೊಳಂ ॥ ೧೩೦ ॥

ತಾಯೆ ವಿಲೋಕಿಪುದೆನ್ನಂ ।
ಮಾಯಾವಿಯೆ ರಾಮಭೃತ್ಯನಲ್ಲಮೆ ನೋಡಾ ॥
ವಾಯುಕುಮಾರಂ ವಾನರ ।
ನಾಯಕನುರುಸಚಿವಮುಖ್ಯನೆಂ ತಾನೆಂದಂ ॥ ೧೩೧ ॥

ಅನುಚರನೆನ್ಗೆ ನರೇಂದ್ರನ ।
ಮನುಜರ್ಗಂ ವಾನರರ್ಗೆ ಸಂಗತಿಯೇನಯ್ ॥
ಮನಕನುಮಾನಂ ತೋರ್ಪುದು ।
ಮೆನುತಂ ಭೂಜಾತೆ ಕೇಳ್ವೊಡೆಂದಂ ಹನುಮಂ ॥ ೧೩೨ ॥

ವರಋಷ್ಯಮೂಕಗಿರಿಗಂ ।
ಧರಣಿಪರೆಯ್ತಂದು ಶಬರಿಯಾಶ್ರಮದೊಳಗಂ ॥
ದಿರೆ ಕಳಿಪಿದನೆನ್ನಂ ಕಪಿ ।
ವರನಲ್ಲಿಗೆ ಬಂದು ಕಂಡೆನಿನವಂಶಜರಂ ॥ ೧೩೩ ॥

ಪೆಗಲೇರಿಸಿಕೊಂಡವರಂ ।
ನಗಶಿಖರಕೆ ನೆಗೆದು ರವಿಜನಂ ತೋರಲ್ಕಂ ॥
ದೊಗುಮಿಗೆ ಹರ್ಷಂಗೊಂಡರ್ ।
ಖಗಜಂಗಾತಂಗೆ ಸಖ್ಯಮಾಯ್ತೌ ದೇವೀ ॥ ೧೩೪ ॥

ಅವನ ಸತಿಯನಪಹರಿಸಿದ |
ಭುವನೈಕಸಮರ್ಥನಪ್ಪ ವಾಲಿಯನುಂ ರಾ ||
ಘವನಸ್ತ್ರದೆ ಕೊಂದಂ ಮೇಣ್ |
ರವಿಜಾತಂಗಿತ್ತನಖಿಲರಾಜ್ಯಮನಾಗಳ್ || ೧೩೫ ||

ಧರಣಿಯೊಳಿರ್ಪತಿಬಲವಾ |
ನರರಂ ತಾಂ ಕರೆಸಿ ರಘುಜನಪ್ಪಣೆಯಿಂದಂ ||
ತರಣಿಯ ಸುತನೆಮ್ಮೆಲ್ಲರೊ |
ಳುರೆ ನಿಮ್ಮಂ ಕಂಡು ಬರ್ಪುದೆಂದುಂ ಪೇಳ್ದಂ || ೧೩೬ ||

ನಡೆತಂದೆಂ ಕಪಿನಾಥರ |
ಗಡಣದೆ ವಿಧಿಪುತ್ರವಾಲಿತನುಜರ ಸಹಿತಂ ||
ಕಡಲೆಡೆಗಂ ಸಂಪಾತಿಯ |
ನುಡಿಯಿಂದಂ ಬಂದೆನಿಲ್ಲಿಗೆಂದಂ ಹನುಮಂ || ೧೩೭ ||

ಏನಿದು ಮಾಯಾವಚನಂ |
ವಾನರರೇಂ ವಾರಿನಿಧಿಯನುಲ್ಲಂಘಿಪರೇ ||
ತಾನರಿತುದಿಲ್ಲಮೆಂದನು |
ಮಾನಂಗೆಯ್ದಿರ್ದ ಸೀತೆಗೆಂದಂ ಹನುಮಂ || ೧೩೮ ||

ಭವಸಾಗರಮಂ ತರಿಪೊಡೆ |
ಭವದೀಯಕೃಪಾಕಟಾಕ್ಷಮಿರೆ ಧನ್ಯಂ ರಾ ||
ಘವನುರುದಯೆಯಿಂ ಲಂಘಿಸಿ |
ತವಪದಮಂ ಕಂಡೆನೆಂದೊಡವನಿಜೆಯುಸಿರ್ದಳ್ || ೧೩೯ ||

ದನುಜರ ಮಾಯೆಯೊಳೆನ್ನಯ |
ಮನಮತಿ ಚಂಚಲಿಸುತಿರ್ಪುದಯ್ ನೀನಾ ರಾ ||
ಮನ ಪದಸೇವಕನಾದೊಡೆ |
ಎನಗಾತನ ಕುರಿಪನೈದೆ ಪೇಳೆನಲೆಂದಂ || ೧೪೦ ||

ಆಲಿಪುದಂಬಿಕೆ ರಾಮಂ |
ನೀಲನಿಭಾಂಗಂ ವಿನೀತನನುಪಮಚರಿತಂ ||
ನಾಲೀಕಾಕ್ಷಂ ಸದ್ಗುಣ |
ಶೀಲಂ ಸದಯಂ ಸುಗೂಢನಕುಟಿಲನನಘಂ || ೧೪೧ ||

ಆಜಾನುಬಾಹುಯುಗಳಂ |
ಭ್ರಾಜಿಪ ವಜ್ರಾಂಕುಶಾಬ್ಜರೇಖಾಯುತಪಂ ||

ಕೇಜಪದಂ ನೀಲೋತ್ಪಲ |
ತೇಜೋಪಮಸುಂದರಾಂಗನಮಲಾಪಾಂಗಂ || ೧೪೨ ||

ತಿರೆಯೊಲ್ ತಿತಿಕ್ಷೆಯೊಳ್ಸುರ |
ಗುರುವೊಲ್ ಸುಜ್ಞಾನದಲ್ಲಿ ದೀಪ್ತಿಯೊಳಂ ಭಾ ||
ಸ್ಕರನೊಲ್ ವರಕೀರ್ತಿಯೊಳಾ |
ಸುರರಾಜನ ತೆರದೆ ಗಣ್ಯನವನೀತಲದೊಳ್ || ೧೪೩ ||

ಈಷದರುಣನೇತ್ರಂ ಬುಧ |
ಪೋಷಣನತಿನಿಪುಣನಬ್ಧಿಗಂಭೀರಂ ಸಂ ||
ತೋಷಾನ್ವಿತಚಿತ್ತಂ ಮೃದು |
ಭಾಷಂ ಸರ್ವೇಶನೆಂದೊಡೆಂದಳ್ಸೀತೆ || ೧೪೪ ||

ಇದು ಸನ್ನಿಯಾದೊಡಂ ಮಮ |
ಹೃದಯಂ ನಿಶ್ಚಯಿಪುದಿಲ್ಲಮೇಂ ಕಾರಣಮೋ ||
ಸದಯಾ ನೀಂ ತಿಳಿದಪುದೆಂ |
ದುದಿತಮಹಾಚಿಂತೆಯಿಂದೆ ಮೌನದಿನಿರ್ದಳ್ || ೧೪೫ ||

ಹನುಮನದೇಂ ಪ್ರಾಜ್ಞನೊ ಮೇ |
ದಿನಿಯಣುಗಿಯ ಮನದ ಪರಿಯನರಿತುಂ ತಾನೊ ||
ಯ್ಯನೆ ಸನಿಹಕ್ಕೆ ಬಂದುಂ |
ವಿನಯದೆ ಪದಕೆರಗಿ ನಿಂದು ಕಯ್ಮುಗಿದೆಂದಂ || ೧೪೬ ||

ಆನೆಲ್ತ್ರಪರ್ವಗಳ್ ಧರ |
ಣೀನಾಥಂ ದೈನ್ಯದಿಂದಮೇಕಾಂತದೊಳಂ ||
ಮಾನಿನಿಗೀವುದೆನುತ್ತಂ |
ತಾನಿತ್ತಿರ್ಪಂಗುಲೀಯಮೆಂದದನಿತ್ತಂ || ೧೪೭ ||

ಕೋಗಿಲೆ ಬಸಂತರಿತುವಂ |
ಸೋಗೆ ಘನೋದಯಮನಂಬುಜಂ ದಿನಕರನಂ ||
ಸಾಗರನಬ್ಜನ ಕಂಡೊಲ್ |
ನಾಗೋಪಮಗಮನೆ ಕಂಡು ಸಂತಸಗೊಂಡಳ್ || ೧೪೮ ||

ತಳತಳಿಪ ಚಾರುಮುದ್ರಿಕೆ |
ಯೊಳಿಳೆ ಬೆಳಗುವ ರಾಮಮೂರ್ತಿಯಂ ನೋಡುತ್ತುಂ ||
ನಲವಿಂ ತುಳಿಲ್ಗೆಯ್ದುಂ ಕರ |
ತಲದೊಳ್ ಪಿಡಿದೊತ್ತಿಕೊಂಡಳಕ್ಷಿದ್ವಯಕಂ || ೧೪೯ ||

ಪ್ರಾಣಮನುಳಿಸಿದೆ ಭುವನ |
ಪ್ರಾಣಾತ್ಮಜ ನಿನ್ನ ಪುಣ್ಯಕೆಣೆಯಂ ಜಗದೊಳ್ ||
ಕಾಣೆನೆನುತ್ತುಂ ಮುದದಿಂ |
ಕ್ಷೋಣೀಸುತೆ ಪೊಗಳುತಿರ್ದ್ದಳದನೇವೇಳ್ವೆಂ || ೧೫೦ ||

ನಿನ್ನತ್ರಾಣಿನಾದುದು ಮನ |
ದನ್ನನ ವೃತ್ತಾಂತಕಥನಮೆನ್ನೊಳ್ ಗುಣಸಂ ||
ಪನ್ನಸುಜನರಕ್ಷಣಸುರ |
ಸನ್ನುತ ಪೇಳೆನಗೆ ರಾಮಲಕ್ಷ್ಮಣರಿರವಂ || ೧೫೧ ||

ಜನಪತಿಗೆನ್ನೊಳ್ ಪ್ರೇಮಮೊ |
ಮುನಿಸೋ ಸೌಮಿತ್ರಿಯೇನನೆನುತಿರ್ಪನೊ ದೈ ||
ತ್ಯನುಪದ್ರವಮೆಂದಿಗೆ ಮೋ |
ಚನಮಕ್ಕುಮೊ ಪೇಳ್ಗುಮೆಂದೊಡೆಂದಂ ಹನುಮಂ || ೧೫೨ ||

ಪಗಲಿರುಳುಂ ತವಚಿಂತೆಯೆ |
ರಘುನಾಥಂಗಲ್ಲದಿತರಯೋಚನೆಯಿಲ್ಲಂ ||
ಖಗತನುಜಂ ನೆರೆಪಿರ್ಪ್ಪಂ |
ಜಗದಗಲಂ ಪ್ಲವಗಸೇನೆಯಂ ನಳಿನಾಕ್ಷೀ || ೧೫೩ ||

ದನುಜಾಧಮನಂ ಕ್ಷಣದೊಳ್ |
ಹನನಮನುಂ ಗೆಯ್ವೆನೆಂದು ಲಕ್ಷ್ಮಣನಿರ್ಪ್ಪಂ ||
ವನಚರರೆಲ್ಲರ್ ಖಳರಂ |
ತಿನುವೆವೆನುತ್ತಿರ್ಪ್ಪರಾದಿದೇವಿಯೆ ಕೇಳಾ || ೧೫೪ ||

ಮೃಗನೇತ್ರೆ ನಿಮ್ಮ ಬಗೆಯಂ |
ರಘುಪತಿಗಂ ಪೇಳ್ದ ಬಳಿಯಮುವರಿರ್ವರನುಂ ||
ಪೆಗಲೇರಿಸಿಕೊಂಡಿಲ್ಲಿಯೆ |
ನಗರಕ್ಕೆಳ್ತಪ್ಪೆನಮ್ಮ ನೋಳ್ಪದು ನಿಜಮುಂ || ೧೫೫ ||

ತರಣಿಸುತಾದ್ಯರ್ ಬರ್ಪ್ಪರ್ |
ತರಿವರ್ ಖಳಕುಲಮನಬ್ಜನೇತ್ರಂ ದಶಕಂ ||
ಧರನಂ ಸವೆದುಂ ಭರದಿಂ |
ಕರೆಮುಯ್ವಂ ನಿಮ್ಮನೆಂದನಾ ಕಲಿಹನುಮಂ || ೧೫೬ ||

ಅಲ್ಲದೊಡೆ ನಿಮ್ಮನೀಗಳೆ |
ಬಲ್ಲಿದನಾನೆನ್ನ ಪೆಗಲೊಳೇರಿಸಿಕೊಳುತುಂ ||

ಬಲ್ಲಹನ ಬಳಿಯೊಳಿಡುವೆಂ ।
ಫುಲ್ಲಾಂಬಕೆ ತೊರೆವುದಿನ್ನು ಚಿಂತೆಯನೆಂದಂ ॥ ೧೫೭ ॥

ತರಳಾ ಕೇಳ್ನೀನೆಂತೀ ।
ಶರನಿಧಿಯಂ ದಾಂಟಿವೋಪೆ ರಘುಜನ ಪೊರೆಗಂ ॥
ನೆರೆಯನುಮಾನಿಪೆನೆನುತಂ ।
ಧರಣಿಜೆಯೊರೆಯಲ್ಕೆ ಬೆಳೆದನಾ ಹನುಮಂತಂ ॥ ೧೫೮ ॥

ವದನದ ರಕ್ತಿಮದಿಂದಂ ।
ವಿಧುಬಿಂಬಂ ಸೂರ್ಯಬಿಂಬದೊಲ್ ಮಾರ್ಪ೯ಂ ತೋ ॥
ರ್ದುದು ಕಾಂಚನಗಿರಿನಿಭಕಾ ।
ಯದ ರುಚಿಯಿಂ ಜೊನ್ನಮೈದೆ ಬಿಸಿಲಾಯ್ತಾಗಳ್ ॥ ೧೫೯ ॥

ಜಗದವಸಾನದೊಳೊಪ್ಪುವ ।
ನಗಜಾಪತಿಯರಸನಂತೆ ಮೆಯ್ವೋರ್ದಿರ್ಪಾ ॥
ಶುಗಸುತನಂ ನೋಡುತ್ತಂ ।
ಮೃಗಲೋಚನೆ ಬೆರಗುವಟ್ಟು ತಾನಿಂತೆಂದಳ್ ॥ ೧೬೦ ॥

ಮಂದರಗಿರಿಯ ವೊಲುದ್ಗತಿ ।
ಬಂಧುರನಾಗಿರ್ಪ್ಪ ಕಾಮರೂಪದ ಕಪಿಯಂ ॥
ಮಂದಗಮನೆಯೊಲ್ವೀಕ್ಷಿಸಿ ।
ಸಂದೇಹಿಸದಂದು ಸಂತಸಂಗೊಂಡೆಂದಳ್ ॥ ೧೬೧ ॥

ಈ ಸಾಹಸಮಿರ್ಪ್ಪುದರಿಂ ।
ದಾಶರಥಿಪ್ರೀತನಾದೆ ಆಪ್ತನೆನಲ್ಸಂ ॥
ತೋಷದೆ ಕಳಿಪಿದನಿಲ್ಲಿಗ ।
ದೇಸುಂ ಶ್ರೇಯಸಿಯೊ ಹನುಮ ನಿನ್ನಂ ಕಂಡೆಂ ॥ ೧೬೨ ॥

ಕೊಂಡುಯ್ಯಲ್ಕೆನ್ನಂ ಬೊ ।
ಮ್ಮಾಂಡಂ ಪರಪುರುಷನೊಡನೆ ನೇಹದೆ ನಡೆದಾ
ಬಂಡೆಯಿವಳೆಂದು ತೆಗಳ್ಗುಂ ।
ಬಂಡತನಂ ನಮ್ಮೊಳಿಲ್ಲಮಾದೊಡಮಿನಿತುಂ ॥ ೧೬೩ ॥

ಅಲ್ಲದೊಡೆ ನಿನ್ನ ವೇಗದೆ ।
ತಲ್ಲಣಿಸುತೆ ವಾರಿನಿಧಿಯೊಳಾಂ ಬಿಳ್ದಪೆನೋ ॥
ನಲ್ಲಳ ಚೌರ್ಯದೆ ರಾಕ್ಷಸ ।
ವಲ್ಲಭನುರುಕೋಪದಿಂದೆ ಕೊಲ್ವನೊ ನಿನ್ನಂ ॥ ೧೬೪ ॥

ಅದರಿಂದಾಂ ಬಾರೆಂ ನಡೆ |
ಪುದು ನೀನೆನ್ನ ರಾಘವನ ಬಳಿಗಂ ಮೇಣ್ ||
ಪದುಳದ ವಾರ್ತೆಯನೊರೆವುದು |
ಪದುಮಾಕ್ಷನನಿಲ್ಲಿಗೆಯ್ದಿಪುದು ಶೀಘ್ರದೊಳಂ || ೧೬೫ ||

ಅಸುರೆಯರುಂ ಕಂಡೊಡೆ ಬಾ |
ಧಿಸುವರ್ಮಗುಳ್ದೆನ್ನನೈದೆ ನೀನೀರೂಪಂ ||
ಬಸಿರೊಳ್ ಬಯ್ತಿಟ್ಟಿಂ ಮೊದ |
ಲೆಸೆದೊಲ್ ಕಾಣಿಸುಗುಮೆಂದೊಡಂತಾದನವಂ || ೧೬೬ ||

ನೀವಪ್ಪಣೆಗುಡುವೊಡೆ ರಾ |
ಜೀವಾಕ್ಷನ ಪೊರೆಗೆ ಪೋಪೆನೆನಗಂ ಕುರಿಪಂ ||
ದೇವಿ ನಿರೂಪಿಪುದೆಂದೆನು |
ತಾ ವಾಯುಕುಮಾರನೈದೆ ಕಯ್ಮುಗಿದುಸಿರ್ದಂ || ೧೬೭ ||

ಮಿನುಗುವ ಚೂಡಾಮಣಿಯಂ |
ವನಜಾಂಬಕೆ ಕೇಶಪಾಶದಿಂ ತೆಗೆದುಂ ರಾ ||
ಮನ ಪದಕರ್ಪಿಪುದೆನುತಂ |
ಹನುಮನ ಕಯ್ಗಿತ್ತಳಂದು ಕಣ್ಬನಿಗಣ್ಣೊಳ್ || ೧೬೮ ||

ಕಂದಾ ಬಾರಯ್ ಕರುಣಾ |
ಸಿಂಧುವಿನೊಡನಂದು ಚಿತ್ರಕೂಟಾದ್ರಿಯೊಳಂ ||
ಬಂಧುರಕೇಳಿಯಿನಿರುತಿರೆ |
ಯೊಂದಚ್ಚರಿಯಾದುದನಘ ಕೇಳಾಂ ಪೇಳ್ವೆಂ || ೧೬೯ ||

ಪತಿಯೆನ್ನಂಕದೊಳಂ ತಾ |
ನತಿನಿದ್ರಾಸಕ್ತನಾಗಿ ಮಲಗಿರೆ ಪಾಕಾ ||
ಹಿತತನುಜಾತಂ ಕಾಕಾ |
ಕೃತಿಯಿಂದಂ ಬಂದು ಭೀತಿವಡಿಸಿದನೆನ್ನಂ || ೧೭೦ ||

ರಮಣಂ ಕಂಡರಿದೆನ್ನಂ |
ಮಮತೆಯೊಳುಪಚರಿಸಿ ಕೋಪದಿಂದಂ ಖಗನಾ ||
ದಮನಕೆ ತೃಣವೊಂದಟ್ಟಿದೊ |
ಡಮಿತಾಗ್ನಿಯನುಗುಳುತೆಯ್ದಿತಾ ಶರಮಾಗಳ್ || ೧೭೧ ||

ಶರದುರುಬೆಗೆ ಸೊಂದುಂ ಸುರ |
ವರಮುಖ್ಯರನೆಯ್ದಿಯವರ ನೇಮದೊಳಲ್ಲಿಂ ||

ಮರಳ್ವಂ ಬಂದುಂ ಕರಟಂ |
ಮರೆವುಗೆ ದಾಶರಥಿ ಕಾದನವನಂ ಕೃಪೆಯಿಂ || ೧೭೨ ||

ತೃಣಮಂದಸ್ತ್ರಮದಾಯ್ತುಯ್ |
ತ್ರಿಣಯನನ ಪಿನಾಕಕಧಿಕಮೆನಿಸಿರ್ಪ ಮಹಾ ||
ತ್ರಣಿತಸುಮಂತ್ರಾಸ್ತ್ರಗಳಿರೆ |
ತೃಣನಿಭಖಳನಿವನನರೆವುದೇನಚ್ಚರಿಯಯ್ || ೧೭೩ ||

ಮಾಸದ್ವಯಮೊಳಗಿವನಂ |
ನಾಶಂಗೆಯದಿರ್ದೊಡೆನ್ನ ದೇಹಮನುಳಿಸಂ ||
ಈ ಸಕಲಾಭಿಪ್ರಾಯಮ |
ನೀಶಗೆ ನೀಂ ಪೇಳ್ಗುಮೆಂದೊಡೆಂದಂ ಹನುಮಂ || ೧೭೪ ||

ಚಿಂತೆಯನುಳಿಯಿಂ ಧರಣೀ |
ಕಾಂತಂ ತಾಂ ಬರ್ಪನಿದಕೆ ಸಂದೆಯಮಿಲ್ಲಂ ||
ಸಂತಸಮಂ ತಾಳ್ದಿಂ ಕೃಪೆ |
ಯಿಂ ತನಗಪ್ಪಣೆಯನೀಯೆವೇಳ್ಕುಂ ದೇವೀ || ೧೭೫ ||

ಬಿಸಜಾಂಬಕೆ ಕಡುಸೇದೆಗೆ |
ಪಸಿದಿರ್ಪೆಂ ವನದೊಳುಳ್ಳ ಪಣ್ಗಳನುಂ ಭುಂ ||
ಜಿಸಲನುಮತಿಗುಡೆವೇಳ್ಕೆಂ |
ದುಸಿರ್ದುಂ ತತ್ಪದಕೆ ಮಣಿದು ನಿಂದಂ ಹನುಮಂ || ೧೭೬ ||

ಅಲಸಿದೆ ನೀನೆನಗೋಸುಗ |
ಮಲಸದೆ ಕುಶಲದೊಳೆ ಪೋಗಿವಪ್ಪುದೆನುತ್ತಂ ||
ನಲವಿಂದೆ ಪರಸಿ ಕಳಿಪಿದ |
ಳೆಲರಣುಗನನಂದು ಮಗುಳೆಮಗುಳ್ವೀಕ್ಷಿಸುತಂ || ೧೭೭ ||

ಅವನಿಜೆಯಂ ಬೀಳ್ಕೊಂಡುಂ |
ಪವನಸುತಂ ಬಂದು ವೃಕ್ಷಶಾಖೆಯನೇರ್ದುಂ ||
ರವಿಯುದಯಮನೀಕ್ಷಿಸುತಂ |
ತವೆ ಹರ್ಷದಿನಿರ್ದನೆಂದು ಪೇಳ್ದಂ ಸೂತಂ || ೧೭೮ ||

# ಷಷ್ಠಾಶ್ವಾಸ.

ವೃತ್ತ || ವೀರಂ ವಿಶ್ವವಿನಾಯಕಂ ಕುವಲಯಶ್ಯಾಮಂ ನತೋದ್ಧಾರಕಂ |
ಧೀರಂ ಧೀನಿಪುಣಂ ಸುರೇಶವಿನತಂ ಸದ್ಭಾಷಿತೋದ್ಭಾಸಕಂ ||
ಮಾರಾರಿಪ್ರಣುತಂ ಪ್ರಮೋದಿಹೃದಯಂ ಗೀರ್ವಾಣಸಂಸೇವಿತಂ |
ಶ್ರೀರಾಮಂ ಮನಮೊಲ್ದು ಮಾಳ್ಕೆಮಗೆ ನಿಚ್ಚಂ ಮಾನಸಾಭೀಷ್ಟಮಂ ||೧||

ಕಂದ || ಶರನಿಧಿಲಂಘನಧೀರಂ |
ಶರಣಾಗತಪೋಷನಸುರಕುಲಸಂಹಾರಂ ||
ಧರಣಿಸುತಾನಂದಕರಂ |
ದುರಿತಾಚಲವಜ್ರಿ ಪೊರೆಗೆ ಪವನಕುಮಾರಂ || ೨ ||

ಹನುಮಂ ಮುಂದೇಗೆಯ್ವಂ |
ಸನಯಂ ತತ್ಕಥೆಯನ್ನೈದೆ ಬಿತ್ತರಿಸುಗುಮೆಂ ||
ದೆನುತಿರಲಾ ಮುನಿಸಂಕುಲ |
ಕನುವಿಂ ಮುಂಗತೆಯನೆಯ್ದೆ ಸೂತಂ ಪೇಳ್ಗಂ || ೩ ||

ಆಲಿಪುದನಿಲಕುಮಾರನ |
ಲೀಲೆಯನಾನೊರೆವೆನೈದೆ ವೃಕ್ಷಾಗ್ರದೊಳಂ ||
ಕಾಲಾಂತಕನೊಲ್ ಕುಳ್ಳಿರ |
ಲಾಲೋಚನೆಗೆಯ್ವನೊಂದು ಕಾರ್ಯಾಂತರಮಂ || ೪ ||

ಸರಸಿಜನೇತ್ರನ ಕೃಪೆಯಿಂ |
ಧರಣಿಜೆಯಂ ಕಂಡು ಧನ್ಯನಾದೆಂ ದಶಕಂ ||
ಧರನಂತಸ್ಥಮನರಿತುಂ |
ಮರಳ್ವಪೆನೆಂಬಾಗಳಬ್ಜಸಖನುದಯಿಸಿದಂ || ೫ ||

ಗಗನಮೆನಿಪ ವಾರ್ಧಿಯೊಳಂ |
ದೊಗೆದಾ ಚೆಂಗುಡಿಯ ಲತೆಯೊ ಖಚರಾಂಗನೆಯರ್ ||
ತೆಗೆದುಟ್ಟ ರಕ್ತಚೇಲದ |
ಬಗೆಯೋ ಎನೆ ಕೆಂಪುವಣ್ಣಮೆಸೆದುದು ನೋಡಲ್ || ೬ ||

ಇನನೆಂಬೆ ಬರಿದೆ ನೀನಿಂ |
ದನುವಿಂ ನೆರೆಯೆಂದು ಚುಂಬಿಸುವ ಪೂರ್ವದಿಶಾಂ ||

ಗನೆಯಧರಕಾಂತಿಯೊೞ ತಾ |
ನೆನೆ ಕಣ್ಗೆಸೆವತ್ತು ರಾಗರುಚಿ ಭಾಸ್ಕರನಾ || ೭ ||
ದಿವಸಮೆನಿಪ್ಪರ್ಭಕನಾ |
ಡುವ ರನ್ನದ ಸೆಂಡೊ ಪೂರ್ವಗಿರಿಮಣಿಶೃಂಗ ||
ಚ್ಛವಿಯೊ ತಮೋದ್ಧತಿಯಂ ನಿಲಿ |
ಸುವ ಹರಿಯೊೞ ಎಂಬ ಪರಿಯೊಳೆಸೆಗುಂ ಬಿಂಬಂ || ೮ ||

ಕಮಲಿನಿ ಸತಿಯೆನಗಾಗಿರೆ |
ಕುಮುದಂಗಳ್ ಪಳಿವುವೆನುತೆಯತಿಕೋಪದೊಳಂ ||
ಕ್ರಮದಿಂ ತತ್ಕಾಂತಿಯೊಳುರು |
ವಿಮಳತೆಯಂ ಸೆಳೆದು ತಾಳ್ದನೆನೆ ರವಿಯೆಸೆದಂ || ೯ ||

ಕೋಕದ ದುಃಖಂ ಪರಿದುದು |
ಕೋಕನದಕೆ ತೋಷಮಾಯ್ತು ಭೂಸುರಘೋಷಾ ||
ನೀಕಂ ತೀವಿತು ಮಿಗೆ ರಜ |
ನೀಕರರುಚಿ ನಷ್ಟಮಾಯ್ತು ಮಿತ್ರೋದಯದೊಳ್ || ೧೦ ||

ಶತಮನ್ಯುವ ವೊಲ್ ಗೋಶೋ |
ಭಿತನಂಬುಧಿಯಂತನಂತಮಣಿ ವಿಪಿನದ ವೊಲ್ ||
ಸತತಂ ನಿಬಿಡಚ್ಛಾಯಾ |
ನ್ವಿತನೆಂದುಂ ಸೂರ್ಯನುದಯಗೆಯ್ದಂ ಬಳಿಕಂ || ೧೧ ||

ಘನಮಪ್ಪ ಕಜ್ಜಮಂ ಗೆ |
ಯ್ದನಿಮಿಷರಿಪುಪತಿಯನಿಂದು ಕಂಡುಂ ಬಳಿಯಂ ||
ವನಜಾಕ್ಷನೆಡೆಗೆ ಪೋಗುವೆ |
ನೆನುತಂ ಮೆಯ್ಯುಬ್ಬೆ ನಿಂದನಾ ಹನುಮಂತಂ || ೧೨ ||

ತರುಗುಲ್ಮಲತೆಗಳಂ ಪರಿ |
ಪರಿಯ ಮಹಾಚೈತ್ಯತೋರಣಾವಳಿಗಳನುಂ ||
ಮುರಿಮುರಿದು ಕಿಳ್ತುಕಿಳ್ತುಂ |
ಶರನಿಧಿಯೊಳ್ ಬಿಸುಡುತಿರ್ದನದನೇವೇಳ್ವೆಂ || ೧೩ ||

ಜನಕಜೆಯಿರ್ಪೊಂದಗಮಂ |
ಬಿನದದೆ ಬಿಟ್ಟುಳಿದ ವೃಕ್ಷಷಂಡಗಳಂ ಬ ||
ಲ್ಪಿನೊಳುತ್ಪಾಟನಗೆಯ್ದುಂ |
ಘನನಾದದೆ ಸೀಳ್ದುಸೀಳ್ದು ಬಿಸುಟಂ ಹನುಮಂ || ೧೪ ||

ಕಾಪಿನ ದೈತ್ಯಾವಳಿಯಂ ।
ಕೋಪದೊಳಂ ಪಿಡಿದು ಬಡಿದು ಕೊಂದುಂ ಮಿಗೆ ಲಂ ॥
ಕಾಪುರದುದ್ಧಮನೀಕ್ಷಿಸು ।
ತಾ ಪವನಕುಮಾರನಿರ್ದನತಿರೋಷದೊಳಂ ॥ ೧೫ ॥

ಏನಿದು ವನಮಂ ತರಿದುದು ।
ವಾನರನೊಂದಿಂದುಮೆಂದು ರಾಕ್ಷಸಸತಿಯರ್ ॥
ಜಾನಕಿಯಂ ಕೇಳಲ್ಕಿಂ ।
ತಾನೇಂ ಬಲ್ಲೆಂ ದನುಜರ ಮಾಯೆಯಿದೆಂದಳ್ ॥ ೧೬ ॥

ಪರಿತಂದಸುರೆಯರುಂ ದಶ ।
ಶಿರಗಂ ದೂರಲ್ಕೆ ಕೇಳ್ದು ಕಡುಗಿನಿಸಿಂ ಕಿಂ ॥
ಕರರಂ ಕಳಿಪಲ್ಕಾಗಳ್ ।
ಸರಭಸದೆಯ್ತಂದು ಮುತ್ತಿದರ್ ಕಪಿವರನಂ ॥ ೧೭ ॥

ಗಣಿಪನೆ ಹನುಮಂ ರಾಕ್ಷಸ ।
ಗಣಮಂ ನಿಮಿಷಾರ್ಧದಲ್ಲಿ ವೈವಸ್ವತಪ ॥
ತ್ತನಮಂ ತೋರಲ್ಕಿಂ ರಾ ।
ವಣನುಂ ಸೇನಾಧಿನಾಥರಂ ಬೀಳ್ಕೊಟ್ಟಂ ॥ ೧೮ ॥

ದಳನಾಯಕರಯ್ವರ್ ಬಹು ।
ಬಲಸಹಿತಂ ಬಂದು ಸಕಲಶಸ್ತ್ರಾಸ್ತ್ರಗಳಂ ॥
ತಳೆದಾರ್ಭಟಿಸಿ ಮುಸುಂಕ ।
ಲ್ಕಲಿಹನುಮಂ ಗಣಿಸದವರನೀಕ್ಷಿಸುತಿರ್ದ್ದ ॥ ೧೯ ॥

ಬಿಡದಿರ್ಕಪಿಯಂ ಕೊಂದುಣ ।
ಬಡಿಸುವುದಡುಬಳಮನಿಂದು ಭೂತಕೆನುತ್ತಂ ॥
ಗುಡುಗುಡಿಸುತೆ ಶರವರ್ಷಮ ।
ನಡಿಗಡಿಗಂ ಕರೆವುತಿರ್ದ್ದರದನೇವೇಳ್ವೆಂ ॥ ೨೦ ॥

ಸ್ಫೂರ್ಕ್ಕಿದ ದೈತ್ಯರನೆಲ್ಲರ ।
ನುರ್ಕ್ಕಿನ ಕಂಬದೊಳೆ ಬಡಿದು ಭೂಮಿತಳದೊಳ್ ॥
ತಿರ್ಕ್ಕಿದನನಿಲಕುಮಾರಕ ।
ನುರ್ಕ್ಕಿಲ್ ಕೋಪಾಗ್ನಿಯಿಂದು ನಿಮಿಷಾರ್ಧದೊಳಂ ॥ ೨೧ ॥

ಈ ವಾರ್ತೆಯನುರೆ ಕೇಳ್ದಂ ।
ರಾವಣನಾ ಮಂತ್ರಿಪುತ್ರಸಪ್ತಕಮಂ ನೇ ॥

ನಾವಳಿವೆರಸುಂ ಕಳಿಪ |
ಲ್ಕಾ ವನಕೆಳ್ತಂದು ಕಂಡರನಿಲಾತ್ಮಜನಂ || ೨೨ ||

ತೊಲತೊಲಗೆನುತಂ ಗರ್ಜಿಸು |
ತಲಘುಮಹಾಮಂತ್ರಪೂತದಿವ್ಯಾಸ್ತ್ರಗಳಾ ||
ವಲಿಯಿಂ ತರುಬಿದರಿಸನಂ |
ಜಲದಂಗಳ್ಕವಿವ ತೆರದೊಳನಿಲನ ಮಗನಂ || ೨೩ ||

ತಿಮಿರಮನೊದೆದುದಯಿಸುವ |
ರ್ಯಮನಂದದೊಳನಿಲತನುಜನುರುಕೋಪದೊಳಂ ||
ದಮಿತಾಸುರಸೈನಿಕವಂ |
ಯಮನೆಡೆಗಂ ಕಳಿಪಿ ನಿಂದನಾರ್ಭಟಿಸುತ್ತಂ || ೨೪ ||

ಉರುಭಯದಿಂದೊರ್ವಂ ದಶ |
ಶಿರಗಂ ದೂರಲ್ಕೆ ಕೇಳ್ದು ಬಿಸವಂದಂದಾ ||
ಳ್ದರರೆ ಮಹಾಸುರರಂ ಸಂ |
ಹರಿಸಿದೆ ಕಪಿಯಲ್ಪಮಲ್ತುಮೆಂದುಂ ಪೇಳ್ದಂ || ೨೫ ||

ನಡೆನಡೆ ನಿಲ್ಲದೆ ಕೋತಿಯ |
ಕಡುಪಂ ನಿಲಿಸೆಂದು ಪೇಳಲಕ್ಷನೊಳವನುಂ ||
ಪಡೆವೆರಸು ಬಂದು ವಾನರ |
ರೊಡೆಯನನುಂ ಕವಿದು ನಿಂದನಾರ್ಭಟಿಸುತ್ತಂ || ೨೬ ||

ಸುರುಚಿರವನಮಂ ತರಿದಸು |
ರರ ಕುಲಮಂ ಕೊಂದೆನೆಂದು ಗರ್ವದೊಳಿರ್ಪೆಯ್ ||
ತರುಚರ ನಿನ್ನಸುವಂ ಮು |
ಜ್ಜರಕಾಹುತಿಗುಡುವೆನೆಂದು ಬೊಬ್ಬಿರಿದನವಂ || ೨೭ ||

ಕಿಡಿಗರೆವ ಕಳಂಬಗಳಂ |
ತುಡಿಸಿ ಮಹಾಚಾಪಕ್ಕೈದೆ ತೆಗೆನೆರೆದಾಗಳ್ ||
ಫಡಫಡ ತೊಲತೊಲಗೆನುತಂ |
ಕಡುಗಿನಿಸಿಂದೆಚ್ಚನನಿಲಸುತನಂ ದನುಜಂ || ೨೮ ||

ಈಕ್ಷಿಸಿ ಮಾರುತಿ ಕಿನಿಸಿಂ |
ದಕ್ಷನ ಬಾಣಗಳನೈದೆ ಮುರಿಮುರಿದಿಡುತುಂ ||
ರಾಕ್ಷಸಕುಲಮಂ ಸದೆಯ |
ಲ್ಕಾಕ್ಷಣಮಸುರೇಂದ್ರಸೂನು ಸರವಳೆಗರೆದಂ || ೨೯ ||

ನಾನಾಶಸ್ತ್ರಾಸ್ತ್ರಗಳಿಂ ।
ದಾನವರೊಂದೆಸೆಯಿನಕ್ಷನೊಂದೆಸೆಯಿಂದಂ ॥
ವಾನರನಂ ಕವಿದರ್ ನಿಂ ।
ದೀ ನೆಲಕಂ ಕಾಲಮೇಘಮಿಳಿವಂದದೊಳಂ ॥ ೩೦ ॥

ಹನುಮನದೇಂ ಸಾಹಸಿಯೋ ।
ತನುವಂ ಪೆರ್ಚಿಸುತೆ ನಭಕೆ ಪಾಯ್ವುತೆ ದನುಜೇಂ ॥
ದ್ರನ ಸುತನುರುಮಸ್ತಕಮಂ ।
ಘನಮುದ್ಗರದಿಂದೆ ತರಿದು ಬಿಸುಟಂ ಭರದಿಂ ॥ ೩೧ ॥

ಅಸುರಸಂಕುಲಮಂ ಕೀ ।
ನಾಶನ ಪತ್ತನಕೆ ಕಳಿಪಿ ಪವನಕುಮಾರಂ ॥
ಪ್ರಾಸಾದಾಗ್ರದೊಳಂ ವೀ ।
ರಾಸನನಾಗಿರ್ದನಧ್ವಮಂ ನೋಡುತ್ತಂ ॥ ೩೨ ॥

ಸುತನಳಿದುದನಾ ರಾಕ್ಷಸ ।
ಪತಿ ಕೇಳ್ದಂ ದುಃಖದಿಂದೆ ಮೆಯ್ಮರೆದೆಳ್ದಂ ॥
ಶತಮನ್ಯುವೈರಿಯಂ ನಿಜ ।
ಸುತನಂ ವಾನರನ ಯುದ್ಧದೊಳ್ ನಿಯಮಿಸಿದಂ ॥ ೩೩ ॥

ಏನಿದು ಘನಮಾ ನಿಮಿಷದೆ ।
ವಾನರನಂ ಪಿಡಿದು ತರ್ಪೆನೆಂದುಂ ಬಲ್ಸು ॥
ಮ್ಮಾನದೆ ಬೀಳ್ಕೊಂಡು ಮಹಾ ।
ಸೇನಾನ್ವಿತನಾಗಿ ಬಂದನಾ ಘನನಾದಂ ॥ ೩೪ ॥

ಪೊಂದೇರನೇರ್ದು ದಶಶಿರ ।
ನಂದನನುರೆ ಚಾಪಶರಮನುಂ ಕಯ್ಕೊಂಡುಂ ॥
ನಂದನನಿಭವನಮಂ ಮುರಿ ।
ದಂದಮನೀಕ್ಷಿಸುತೆ ಕಿನಿಸಿನಿಂದೆಯ್ತಂದಂ ॥ ೩೫ ॥

ವಾಲಮನುಂ ಕುಣಿಯಿಸುತುಂ ।
ಬಾಲಾರ್ಕದ್ಯುತಿಯನಾಂತು ಕಣ್ಗೊಳಿಪ ಮರು ॥
ದ್ಬಾಲಕನಂ ನೋಡುತ್ತತಿ ।
ಬಾಲಿಶನೊಲ್ ವಿಬುಧವೈರಿ ಗರ್ಜಿಸಿ ನಿಂದಂ ॥ ೩೬ ॥

ಸುರಪಾರಾತಿಯನೀಕ್ಷಿಸು ।
ತುರುಲೋಹಸ್ತಂಭಮೊಂದನಲ್ಲಿಂ ಕಿಳ್ತಂ ॥

ಬರಕಂ ವಿಹಗಾಧೀಶನ ।
ಪರಿಯೊಳ್ನೆಗೆದಾರ್ದನನಿಲಸಂಭವನಾಗಳ್ ॥ ೩೭ ॥

ಕನಲುತೆ ದಶಾಸ್ಯತನುಜಂ ।
ಧನುಗಂಬಂ ಪೂಡಿ ವೇಗದಿಂದಿಸುವಾಗಳ್ ॥
ಹನುಮಂ ತಿರ್ರನೆ ತಿರುಗುತೆ ।
ದನುಜನ ತೇರ್ಗೆರಗಿ ಬಡಿದನುರುಕಾಯ್ಪಿಂದಂ ॥ ೩೮ ॥

ತೇರುಡಿದಶ್ವಗಳಳಿದುವು ।
ಸಾರಥಿಯಸುಗಳೆದನನಿಲಜನ ಕರಹತಿಯಿಂ ॥
ನೀರದನಾದಂ ಪೊಸಪೊಂ ।
ದೇರೇರ್ದ್ದಂ ಕರೆದನಸ್ತ್ರವರ್ಷಮನಾಗಳ್ ॥ ೩೯ ॥

ಕರಿಘಟೆಯಂ ತುರಗಾಳಿಯ ।
ನುರುಭಟರಂ ರಥಿಕನಿಚಯಮಂ ತತ್ಕಣದೊಳ್ ॥
ಅರೆದಿಟ್ಟಂ ಕುರಿವಿಂಡಿಂ ।
ಗೆರಗುವ ವೃಕನಂತೆ ವೀರಮಾರುತತನುಜಂ ॥ ೪೦ ॥

ಬಲಮಳಿಯಲ್ಕಾಣುತೆ ದಶ ।
ಗಳಸುತನತಿ ಕೋಪದಿಂದೆ ವಿಧಿಯಸ್ತ್ರಮನುಂ ॥
ಗಳಿಲನೆ ತೆಗೆದುಂ ಮಂತ್ರಿಸಿ ।
ತೊಲತೊಲಗೆನುತೆಚ್ಚು ಬೊಬ್ಬೆಯುಬ್ಬಿನೊಳಿರ್ದ್ದಂ ॥ ೪೧ ॥

ಏವೇಳ್ವೆಂ ಶರದುರುಬೆಗೆ ।
ಭೂವಲಯಂ ಕಂಪಿಸಿತ್ತು ಕಡಲುಕ್ಕಿದುದಾ ॥
ದೇವಕುಲಂ ಬೆದರಿತು ತಾ ।
ರಾವಳಿಯುದಿರ್ದತ್ತು ಬಾಣಶಕ್ತಿಯದೆನಿತೋ ॥ ೪೨

ಕಿಡಿಗರೆವುತೆ ಭೋರ್ವೊರೆವುತೆ ।
ಜಡಜಜನುರುಬಾಣಮೈದೆ ಬರೆವರೆ ಬಳಿಕಂ ॥
ಮೃಡಸನ್ನಿಭನಂ ಕಾಣುತೆ ।
ನಡುಗುತೆ ಪಿಂದಿರುಗಿತನ್ನೆಗಂ ಕಮಲಭವಂ ॥ ೪೩ ॥

ಶರಮಂ ಮೆಯ್ಗೊಂಡೆನ್ನಂ ।
ಪರಿಪೋಷಣೆಗೆಯ್ವುದೆಂದು ಗಗನಾಂಗಣದೊಳ್ ॥
ಕರಮಂ ಮುಗಿಯಲ್ಕಾಗಳ್ ।
ಕರುಣದೊಳಾ ಶರಕೆ ಮೆಯ್ಯನಿತ್ತಂ ಹನುಮಂ ॥ ೪೪ ॥

ಅಜಶರದೊಳ್ಸಿಲ್ಕಿದ ಪವ ।
ನಜನಂ ಸುರಪಾರಿ ಕಂಡು ಕಡುಸಂತಸದಿಂ ॥
ರಜನೀಚರರಂ ಕರೆದುಂ ।
ನಿಜಪುರಕೀ ಕಪಿಯನುಯ್ವುದೆಂದುಂ ಪೇಳ್ದಂ ॥ ೪೫ ॥

ಬಿಗಿಬಿಗಿದು ಕಟ್ಟಿ ಪವನನ ।
ಮಗನಂ ಶಣಸೂತ್ರದಿಂದೆ ರಾಕ್ಷಸರಾಗಳ್ ॥
ನಗಮುಂ ಮಿಗೆ ಕಿಳ್ತೆಳ್ತುವ ।
ಬಗೆಯಿಂದೆಳ್ತಲ್ಕೆ ತೀರದಳಿದರ್ ಪಲಬರ್ ॥ ೪೬ ॥

ಸುರಗಿರಿಯನೆಳ್ತೆವರ್ಪ್ಪುದು ।
ಹರಿಯಂ ಪೊತ್ತುಯ್ವುದೈದೆ ತೀರದೆನುತ್ತಾ ॥
ಗಿರಿನಿಭಖಳರುಂ ಮೊರೆಯಿಡೆ ।
ತರಿಸಿದನಾ ಕುಂಭಕರ್ಣನುರುತರರಥಮಂ ॥ ೪೭ ॥

ಈ ತೇರೊಳೈದೆ ಸೆಳೆದುಂ ।
ಕೋತಿಯನಿರಿಸುವುದೆನುತ್ತೆ ಭರದಿಂ ಸುರಪಾ ॥
ರಾತಿ ನಿರೂಪಿಸೆ ದನುಜ ।
ವ್ರಾತಂ ಕಡುಬಲ್ಪಿನಿಂದಮೆಳ್ತಿದುದಾಗಳ್ ॥ ೪೮ ॥

ಮಂಡಿಯನೂರ್ದ್ದುಂ ಕೆಲಕಂ ।
ಗಂಡುಗಲಿಯೆನಲ್ ಖಳಾಳಿ ಭುಜಗೋಪಮದೋ ॥
ರ್ದಂಡಗಳಂ ಸಾರ್ಚ್ಚತೆ ಮುಂ ।
ಕೊಂಡೆಳ್ತಿದೊಡೇಳದಿರ್ದ್ದನಾ ಕಲಿಹನುಮಂ ॥ ೪೯ ॥

ಕಟಿದಘ್ನಮಾಗೆಯವನಂ ।
ಪಟುಭಟರುಗಳೆಳ್ತಿಯೆಳ್ತಲಾರದೆ ಮಿಗೆ ಸಂ ॥
ಕಟಗೊಂಡು ಬಿಡಲಪರಧೂ ।
ರ್ಜಟಿಯಡಿಯೊಳ್ ಸಿಲ್ಕಿ ಮಡಿದರದನೇವೇಳ್ವೆಂ ॥ ೫೦ ॥

ಯತನಂಗಾಣದೆ ಶತಮಖ ।
ಜಿತು ಕಡುದುಮ್ಮಾನದಿಂದಮಿರೆ ಕಂಡುಂ ಮಾ ॥
ರುತಿಯಿದು ಸಮಯಂ ರಾಕ್ಷಸ ।
ಪತಿಯಂ ತಾಂ ಕಾಣ್ಬೊಡೆಂದು ಬಗೆಯೊಳ್ಬಗೆದಂ ॥ ೫೧ ॥

ಘನನಾದಂ ಕಡುಗಿನಿಸಿಂ ।
ದನುಜಾಳಿಗೆ ಬೆಸಸಲೊಡನೆ ಕರದೀಪಗಳಂ ॥

ತನುಗಂ ಸೋಂಕಿಸೆ ಬೆಚ್ಚಿರ್ದೊ |
ಲನಿಲಭವಂ ನೆಗೆದು ಲೋಹರಥದೊಳ್ಕುಳಿತಂ || ೫೨ ||

ದಿಗ್ಗಜಸನ್ನಿಭಕರಿಗಳ |
ನಗ್ಗಳಮೆನೆ ರಥಕೆ ಕಟ್ಟಿ ದನುಜರ್ಸಕಲರ್ ||
ಸಗ್ಗಿಗರಚ್ಚರಿವಡುತಿರೆ |
ಯಗ್ಗಳನಂ ತಂದರಧಿಕಸಾಹಸದಿಂದಂ || ೫೩ ||

ಕೆಲಬಲದ ಕೇರಿಕೇರಿಯ |
ನಿಳಯಗಳಂ ಚಾರುಗೋಪುರಗಳಂ ಸೌಧಾ ||
ವಳಿಯಂ ಕೆಡೆವುತೆ ಬಂದುದು |
ಕಲಿಹನುಮನ ಕಾಯಚಲನದಿಂದಂ ಶಕಟಂ || ೫೪ ||

ಮೊರೆವ ಮಹಾತೂರ್ಯದ ರವ |
ಮುರುಭಟರುಬ್ಬಟೆಯುಮಂತು ರಥಚೀತ್ಕಾರಂ ||
ತುರಗದ ಹೇಷಾಧ್ವನಿ ತ |
ತ್ಪುರಮಂ ತೀವಿದುದು ಭೂಮಿ ಬಿರಿವ ವೊಲಾಗಳ್ || ೫೫ ||

ನಿಲಿಸಿ ಮಹಾರಥಮಂ ದಶ |
ಗಳನಾಲಯದೆಡೆಯೊಳಸುರರಾ ಮಾರುತಿಯಂ ||
ಕೆಲಕಿಟ್ಟರ್ ಮಂದರಮಂ |
ಜಳಧಿಯೊಳಂದಮರದೈತ್ಯರಿಟ್ಟ ವೊಲಂದುಂ || ೫೬ ||

ಬಂಧುರಪೀಠದೊಳಂ ದಶ |
ಕಂಧರನೊಪ್ಪಿರ್ದ ಸಮಯಮಂ ನೋಡುತೆ ಸಂ ||
ಕ್ರಂದನರಿಪು ಪವನಜನಂ |
ತಂದಾತನ ಮುಂದು ನಿಂದು ಕಯ್ಮುಗಿದೆಂದಂ || ೫೭ ||

ವನಮಂ ಭಂಗಿಸಿ ದೇವರ |
ತನುಜನನುಂ ದಾನವಾಳಿಯಂ ನೆರೆಕೊಂದಾ ||
ವನಚರಮಿದು ವಿಧಿಶರದಿಂ |
ದನುಬಂಧಿಸಿ ತಂದೆನೆಂದು ವಿಜ್ಞಾಪಿಸಿದಂ || ೫೮ ||

ವನಜಭವಾಸ್ತ್ರಂ ತನಗೇಂ |
ಘನ ಮೇ ಲೌಕಿಕಮನಿಂದು ನಡೆಯಿಸುವೆಂ ತಾ ||
ನೆನುತಂ ಮೌನದೊಳಿರ್ದ್ದಂ |
ದನುಜೇಶ್ವರನಿದಿರೊಳನಿಲಸಂಭವನಾಗಳ್ || ೫೯ ||

ಈ ತರುಚರನವನಿಯ ಪು ।
ಲ್ಲೋಗೀತಿಗಳಂತಲ್ತು ದಿವ್ಯಪೂರುಷನಿವನಂ ॥
ಮಾತಾಡಿಸೆವೇಳ್ಕುಮೆನು ।
ತ್ತೋತುಂ ದಶವದನನಾ ಪ್ರಹಸ್ತನೊಳೆಂದಂ ॥ ೬೦ ॥

ಆವಂ ನೀನಿಲ್ಲಿಗೆವಂ ।
ದೀ ವನಮಂ ತರಿದ ಕಜ್ಜಮೇಂ ರಾಕ್ಷಸರಂ ॥
ಜೀವಂಗಳೆದುದುಮೇಂ ನಿನ ।
ಗಾವೂರಾರೊಡೆಯರೆಂದು ಕೇಳ್ದಂ ಸಚಿವಂ ॥ ೬೧ ॥

ಏನೆನ್ನೆಂ ನಿರ್ಬಂಧ ।
ಕ್ಕಾನೊಳಗಾಗಿರ್ಪೆನಕಟ ನಿರ್ವ್ಯಾಜಮುಮಾ ॥
ದಾನವರೆನ್ನಂ ಕಟ್ಟಿದ ।
ರೀ ನೋವಿಂ ಬಿಡಿಸೆ ಪೇಳ್ವೆನೆಲ್ಲಮನೆಂದಂ ॥ ೬೨ ॥

ಬಿಡುಬಿಡು ಭಯಮಂ ನಿನ್ನಂ ।
ಬಿಡಿಪೆಂ ನಾನೆಂದು ರಾಜಸನ್ನಿಧಿಯೊಳ್ನೀಂ ॥
ನುಡಿ ಸತ್ಯಮನೆಂದು ಸಚಿವ ।
ರೊಡೆಯಂ ನುಡಿಯಲ್ಕೆ ಕೇಳ್ದನಾ ಪವನಜನುಂ ॥ ೬೩ ॥

ಸ್ಮರಿಸುತೆ ಮನದೊಳ್ ರಾಮನ ।
ಚರಣಾಬ್ಜಮನಂದು ಹನುಮನೊರೆದಂ ಕೇಳಯ್ ॥
ಸುರವೈರೀಶ್ವರ ಹರಿಯಮ ।
ವರುಣಧನೇಶಾದಿ ಪರಿಚಯಂ ತನಗಿಲ್ಲಂ ॥ ೬೪ ॥

ಸರ್ವಾಂತರ್ಯಾಮಿಯ ವರ ।
ದೂರ್ವಾದಳನೀಲಸನ್ನಿಭಾಂಗನ ನತಗಂ ॥
ಧರ್ವನ ದನುಜೌಘಸಮು ।
ದ್ರೌರ್ವಾಗ್ನಿಯ ದೂತನೆಂದು ತಿಳಿ ನೀನೆನ್ನಂ ॥ ೬೫ ॥

ರಾಮಂ ಮತಂಗಪರ್ವತ ।
ಧಾಮದೊಳಂ ರವಿಜನಿಂದೆ ಸೇವಿಸಿಕೊಳುತಂ ॥
ಪ್ರೇಮಂಬೆರಸಿರ್ಪ್ಪಂ ಸು ।
ತ್ರಾಮಜನಂ ಕೊಂದುಮಧಿಕಶೌರ್ಯೋರ್ನ್ನತಿಯಿಂ ॥ ೬೬ ॥

ಎನಗಧಿಕರಾಗೆ ಪಟುಭಟ ।
ವನಚರರವರಿರ್ಪ್ಪರಮಿತಬಲಯುತರಾ ಮೇ ॥

ದಿನಿಯಣುಗಿಯನರಸುವೊಡಂ |
ದಿನಪಸುತಂ ನೇಮಿಸಲ್ಕೆ ನಡೆದರ್ ನಲವಿಂ ‖ ೭೭ ‖

ಆವರೊಳಗೊರ್ವಂ ತಾನೀ |
ಭುವನಧಿಯಂ ದಾಂಟಿವಂದು ಕಂಡೆಂ ಸೀತಾ ‖
ಯುವತಿಯನಿನ್ನಿಲ್ಲಿಂದೆ |
ಯ್ದುವ ಸಮಯದೆ ಬಂದು ಕೊಂದರೆನ್ನಂ ದನುಜರ್ ‖ ೭೮ ‖

ಪ್ಲವಗತೆಯಿಂದಂ ರಸಮಯ |
ನವಫಲಗಳನ್ನೈದೆ ನೆಗೆದು ತಿನೆ ಮನಬಂದಂ ‖
ತಿವರದರಿಂದೆನ್ನಂ ತಿವಿ |
ತಿವಿದುಂ ಕಟ್ಟುತ್ತೆ ತಂದರೀ ಬವಣೆಗಳಂ ‖ ೭೯ ‖

ಭೂಸುರಕುಲದೊಳ್ಜನಿಸಿ ಮ |
ಹೇಶನ ಕೃಪೆಯಿಂದೆ ಪಡೆದು ಸೌಭಾಗ್ಯಗಳಂ ‖
ಭೂಸುತೆಯಂ ತಂದುಂ ಮಿಗೆ |
ಪೇಸುಗೆಯಂ ಪೊತ್ತುಕೊಂಡೆಯಕಟ ನಿರರ್ಥಂ ‖ ೮೦ ‖

ರಮೆಯರಸನೊಳಂ ಕಲಹಂ |
ಸಮುಮೆನಿಪುದೆ ನಿನಗೆ ದುಷ್ಟಕಾರ್ಯಗಳಿಂದಂ ‖
ವಿಮಲಪುಲಸ್ತ್ಯಾನ್ವಯಮಂ |
ಯಮಯಾತನೆಗೆಳಿಸೆವೇಡಮೆಲೆ ದಶಕಂಠಾ ‖ ೮೧ ‖

ಕೊಲದುಳಿವನೆ ರಾಮಂ ಖಳ |
ಕುಲಮಂ ತವಪುತ್ರಮಿತ್ರಬಾಂಧವರಂ ಭೂ ‖
ಲಲನಾತ್ಮಜೆ ಬಸಮಪ್ಪಳೆ |
ಬಲಿಯಿಸಿದಯ್ ಪಾಪಕೃತ್ಯಮಂ ಮೂರ್ಖತೆಯೊಳ್ ‖ ೮೨ ‖

ತನುವಿದು ಶಾಶ್ವತಮೇ ಸತಿ |
ತನುಜಾದ್ಯರ್ಕಷ್ಟಕಾಲಕೊದವುವರೇ ಸು ‖
ಮ್ಮನೆ ಮಾಯಾವಶನಾಗದೆ |
ಮನಗುಂದದೆ ರಾಮನಂಘ್ರಿಗಾನತನಾಗಾ ‖ ೮೩ ‖

ಸೀತೆಯನೊಪ್ಪಿಸಿ ರಾಮಂ |
ಗಾತನ ಸತ್ಕೃಪೆಯನ್ನೈದೆ ಪಡೆದುಂ ಬಹುಳ ‖
ಖ್ಯಾತಿಯಿನಖಿಳೈಶ್ವರ್ಯಮ |
ಹಾತಿಶಯಮನುಳಿಸಿಕೊಳ್ವುದೆಂದಂ ಹನುಮಂ ‖ ೮೪ ‖

ಕೇಳುತೆ ಕಡುಗಿನಿಸಿಂ ದಶ |
ಮೌಳಿ ನಿಜಾಂಬಕಗಳಲ್ಲಿ ಕಿಡಿಗೆದರುತ್ತಂ ||
ಕೂಳ ವಿವೇಕಮನೆನಗಂ |
ಪೇಳಲ್ಕೀಂ ದೈತ್ಯಗುರುವೆ ಬಗುಳದಿರೆಂದಂ || ೭೫ ||

ಮಾನವರಂ ವಾನರರಂ |
ಭಾನುಜನಂ ನಿನ್ನನೈದೆ ನಿಮಿಷಾರ್ಧದೊಳಂ ||
ಕೀನಾಶನೆಡೆಗೆ ಕಳಿಪುವೆ |
ನೀ ನುಡಿ ದಿಡಮೆಂದು ತಿಳಿವುದೆಲೆ ಕೋಡಗನೇ || ೭೬ ||

ಎನೆ ಕೋಪಾಟೋಪದೊಳಂ |
ಹನುಮಂ ಕಿಡಿಗೆದರುತೆಂದನೆಲವೋ ಕುಣಪಾ ||
ಶನ ನೀಚ ದುರಾತ್ಮ ದಶಾ |
ನನ ನೀನೇಂ ಕಂಡೆಯೆನ್ನ ಸತ್ವಂಗಳನುಂ || ೭೭ ||

ಶತಕೋಟಿರಾವಣರ್ಬರೆ |
ಶತಮುಖಜಿತ್ಸನ್ನಿಭಾಸುರಾವಳಿಯಿರಲುಂ ||
ಹತಗೊಳಿಸದಿದ್ದೊರ್ಡಾಂ ರಘು |
ಪತಿಯನುಚರನಲ್ಲಮೆಂದನಾ ಕಲಿಹನುಮಂ || ೭೮ ||

ಇವನಂ ನುಡಿಸುವುದೇತಕೆ |
ತಿವಿತಿವಿದುಂ ಕೊಂದುಕೊಂದು ಬಗಿದೊಡಲಂ ಭೈ ||
ರವಸಂದೋಹಕ್ಕದನಿ |
ಕ್ಕುವುದೆಂದಸುರರ್ಗೆ ಪೇಳ್ದನಾ ದಶಕಂಠಂ || ೭೯ ||

ಕರಕಲಿತಶಸ್ತ್ರದಸುರರ್ |
ಭರದಿಂ ಕಡಿದಿರಿದು ಬಡಿದೊಡಾಯುಧನಿಕರಂ ||
ಮುರಿದುದುಮಲ್ಲದೆ ರೋಮಂ |
ಪರಿದುದುಮಿಲ್ಲನಿಲಪುತ್ರನವಯವಗಳೊಳಂ || ೮೦ ||

ನಾಥನನುರೆ ಪೊಗಳಲ್ಕಂ |
ದೂತರ್ಗದು ಸಹಜಮತ್ತೆ ತರುಚರನಿವನಂ ||
ಘಾತಿಪುದನುಚಿತಮೆಂದಂ |
ನೀತಿವಿದಂ ಸರಮೆಯರಸನಾ ದಶಗಳನೊಳ್ || ೮೧ ||

ತರಿಯದಿರಿಂ ಕೋಡಗನಂ |
ಭರದಿಂದಂ ವಾಲಕಗ್ನಿಯಂ ಪೊತ್ತಿಸುತಂ ||

ಪೊರಡಿಪುದೆಂದುಂ ದನುಜೇ |
ಶ್ವರನಸುರಾವಳಿಗೆ ನೇಮಿಸಿದನಾ ಕ್ಷಣದೊಳ್ || ೮೨ ||

ಬಾಲಕೆ ಸುತ್ತಿದರಸುರ |
ಜೇಲಗಳಂ ಗಣನೆಗುಡದೆ ತೈಲಮನೆರೆದುಂ ||
ಪೇಳಲದೇನಚ್ಚರಿಯಂ |
ಲೀಲೆಯೊಳಂ ಬೆಳೆವುತಿರ್ದುದಾ ಲಾಂಗೂಲಂ || ೮೩ ||

ನೆಲೆಯಗಣಿತವರವಸನಂ |
ಗಳನಾ ದನುಜೇಂದ್ರನಾಲಯದ ಬಟ್ಟೆಗಳಂ ||
ಸಲೆ ತಂದುತಂದು ಸುತ್ತಿದ |
ರಲಘುಮಹಾವಾಲಕ್ಕೈದೆ ರಕ್ಕಸರಾಗಳ್ || ೮೪ ||

ಹುತವಹನಂ ಸೊಂಕಿಸಿದ |
ರ್ಹುತಿಗೊಳಿಸಿ ವಿನೋದದಿಂದೆ ವಾಲಾಗ್ರದೊಳಂ ||
ದತುಳಿತತೂರ್ಯತ್ರಯದಿಂ |
ವಿತತಮಹಾರಾಜವೀಧಿಗಂ ತಂದರಣಂ || ೮೫ ||

ಮನೆವನೆಯ ಮುಂದು ನಡೆದುಂ |
ಬಿನದದೆ ಪಶ್ಚಿಮದ ಬಾಗಿಲೆಡೆಗೆಯ್ತರಲುಂ ||
ಹನುಮಂ ತನುವಂ ಸಣ್ಣಿಸಿ |
ಘನಬಂಧನದಿಂದೆ ನುಸುಳ್ದು ಬಳಿಯಂ ಬಳೆದಂ || ೮೬ ||

ಭರದಿಂದುರ್ಕ್ಕಿನ ಕಂಬಮ ||
ನುರೆ ಕಯ್ಕೊಡಿದಸುರನಿಕರಮಂ ನದೆಬಡಿದುಂ ||
ಹರಿನಾದಂಗೆಯ್ವುತ್ತಂ |
ಹರಿಸದೆ ಪಿತಮಿತ್ರಗಿತ್ತನಾ ಪತ್ತನಮಂ || ೮೭ ||

ನೆಗೆನೆಗೆದು ಕೇರಿಕೇರಿಗೆ |
ಬಿಗಿಬಿಗಿದುಂ ಸೌಧಸೌಧಮಂ ಹುತವಹನಿಂ ||
ನಿಗುರಿಸಿ ನಿಜವಾಲಾಗ್ರಮ |
ನಗಣಿತಗೇಹಗಳನ್ನೆದೆ ಚುಚ್ಚಿದನಾಗಳ್ || ೮೮ ||

ಹರಿಭಕ್ತವಿಭೀಷಣಮಂ |
ದಿರವೊಂದಂ ಬಿಟ್ಟು ಮಿಕ್ಕ ನಿಳಯಾವಳಿಯಂ ||
ಸರಭಸಮಾದಂ ದಹಿಸಿದ |
ನುರಿಗಣ್ಣಂ ತ್ರಿಪುರದಹನಮಂ ಮಾಡಿದ ವೊಲ್ || ೮೯ ||

ಪುರಜನಪರಿಜನನಿಕರಂ |
ತರುಣಿಯರುಂ ಬಾಲವೃದ್ಧರುಂ ಖೇದದೊಳಂ ||
ಪರಿದೋಡಿದರತ್ತಲ್ ದಶ |
ಶಿರನಂ ಸಲೆ ಬಯ್ವುತೆಯ್ದೆ ಹಾಹಾರವದಿಂ || ೯೦ ||

ಧರಣಿಜೆಯೆಂತಿರ್ಪ್ಪಳೊ ತ |
ಚ್ಚರಣಮನೀಕ್ಷಿಸುವೆನೆಂದು ವಾಲಧಿಯಂ ಸಾ ||
ಗರದೊಳ್ನಾನಂಗೆಯ್ಸಿ |
ಭರದಿಂ ನಡೆತಂದಶೋಕವನಮಂ ಸಾರ್ದ್ದಂ || ೯೧ ||

ವಿನಮಿತನಾಗಿ ಧರಾಸುತೆ |
ಗನುವಿಂ ತಾನೆಸಗಿದಮಿತಕಾರ್ಯಗಳಂ ಪಾ ||
ವನೆಯೊಡನೆ ಬಿನ್ನವಿಸಿ ರಘು |
ಜನ ಪೊರೆಗಪ್ಪಣೆಯನೀವುದೆಂದಂ ಹನುಮಂ || ೯೨ ||

ಬಾಳಕ ಬಳಲ್ದೆ ನೀನೀ |
ಕೂಳರ ದೆಸೆಯಿಂದಮಿನ್ನು ನಿಲ್ಲದೆ ಭರದೊಳ್ ||
ನೀಳಾಂಗನೆಡೆಗೆ ಗಮಿಸುತೆ |
ಪೇಳಯ್ ಮದ್ವಾರ್ತೆಯೆಲ್ಲಮಂ ಸಲವಿಂದಂ || ೯೩ ||

ನೀನಿಲ್ಲಿದ್ದುದರಿಂ ಮ |
ನ್ಮಾನಸದುರುಚಿಂತೆಯಳಿಯೆ ಸೊಗದಿಂದಿರ್ದ್ದೆಂ ||
ನೀನೆಂದಿಗೆ ಕರೆತರ್ಪ್ಪೆಯೊ |
ದಾನವನುಪಟಳದೊಳೆಂತು ಜೀವಿಪೆನೆಂದಳ್ || ೯೪ ||

ಪೆಗಲೇರಿಸಿ ಕೊಂಡುಯ್ವೆಂ |
ರಘುಜನ ಸನ್ನಿಧಿಗೆ ನಿಮ್ಮನತಿಸತ್ವರದಿಂ ||
ಜಗದಂಬಿಕೆ ಚಿತ್ತದೊಳಂ |
ಬೆಗಡುಂಗೊಳೆವೇಡಿಮೆಂದೊಡವಳಿಂತೆಂದಳ್ || ೯೫ ||

ನಿನ್ನೊಡನಾನೆಳ್ತರೆ ಮನ |
ದನ್ನನ ಮನಕೆಂತು ತೋರೆವಪ್ಪುದೊ ಕಾಣೆಂ ||
ಮುನ್ನೀರಂ ಬಂಧಿಸಿ ಬಳಿ |
ಕೆನ್ನಂ ಶ್ರೀರಾಮನುಯ್ವುದುಚಿತಮೆನಿಕ್ಕುಂ || ೯೬ ||

ದನುಜಾವಳಿಯಂ ಸದೆಬಡಿ |
ದನಿಮಿಷರುಂ ಮೆಚ್ಚುವಂತೆ ರಾಘವನೆನ್ನಂ ||

ಬಿನದದೆ ಕರೆದುಯ್ವೊಡೆ ಮಿನು ।
ಮಿನುಗುವವೃದಾತಂಗೆ ಕೀರ್ತಿಯವನೀತಳದೊಳ್ ॥ ೯೭ ॥

ನೀನರಿಯದಾತನೇಂ ಪವ ।
ಮಾನಾತ್ಮಜ ವೇಗದಿಂದೆ ಪೋಗೆನುತಾಗಳ್ ॥
ಜಾನಕಿ ಕಣ್ಬಾನಿದುಂಬುತೆ ।
ತಾನಪ್ಪಣೆಗೊಟ್ಟು ಕಳಿಪಿದಳ್ ಮಾರುತಿಯಂ ॥ ೯೮ ॥

ಅತಿಭಕ್ತಿಯೊಳಂ ಮಾರುತ ।
ಸುತನವನಿಜೆಯಂಘ್ರಿಗೆರಗಿ ಬೀಳ್ಕೊಂಡು ಮಹಾ ॥
ಕ್ಷಿತಿಧರಮುಸಡರ್ದುಂ ರಘು ।
ಪತಿಯಂ ಮನದಲ್ಲಿ ನೆನೆದು ಗಳಿಲನೆ ಪಾರ್ದಂ ॥ ೯೯ ॥

ವಿಾರಿರೆ ರಭಸಂ ಕುಸಿದುದು ।
ಧಾರಿಣಿಯಾ ತಳಕೆ ಶೈಲಮನಿಲಕುಮಾರಂ ॥
ನೀರದಪಥದೊಳ್ ಬಲ್ಸನಿ ।
ದೋರುತೆ ಬರುತಿರ್ದ್ದನಂಡಜಾಧೀಶನ ವೋಲ್ ॥ ೧೦೦ ॥

ಈ ನಿಸ್ಸನದಿಂ ಹನುಮಂ ।
ಜಾನಕಿಯಂ ಕಂಡುಬಂದುದದು ನಿಜಮೆನುತುಂ ॥
ಮಾನದೆ ಕುಣಿದಾಡುತ್ತಂ ।
ವಾನರರಿರಲಿಳಿದನಲ್ಲಿ ಮಾರುತಪುತ್ರಂ ॥ ೧೦೧ ॥

ಕವಿಕವಿದು ಕಪಿಗಳೆಲ್ಲರ್ ।
ಪವಮಾನನ ಮಗನನ್ನೈದೆ ತಳ್ಕಿಸುತಂ ವಾ ॥
ಲವನುರೆ ಚುಂಬಿಸಿ ಕುಣಿವು ।
ತ್ತವಿರಳತೋಷದೊಳಮಿರ್ದ್ದರದನೇವೇಳ್ವೆಂ ॥ ೧೦೨ ॥

ವಿಧಿತನುಜಾತಾಂಗದರತಿ ।
ಮುದದಿಂ ತಳ್ಕಯ್ಸಿ ಮುದ್ದಿಡುತ್ತುಂ ನಲವಿಂ ॥
ಸದಮಲ ನಿರುಪಮ ಕರುಣಾ ।
ನಿಧಿಯೇ ನೀನೆಮ್ಮನಿಂದು ಸಲಹಿದೆಯೆಂದರ್ ॥ ೧೦೩ ॥

ಕಂಡೆಯ ಸೀತೆಯನಸುರರ ।
ಗಂಡಂ ತಾನಿರ್ಪನೆಂತು ಬಲಮೆಂತಿಕ್ಕುಂ ॥
ಚಂಡಪರಾಕ್ರಮಿ ಪೇಳೆನೆ ।
ಗಂಡುಗಲಿ ಮಹಾನಿಲಾತ್ಮಸಂಭವನುಸಿರ್ದಂ ॥ ೧೦೪ ॥

ಶರಧಿಯನುತ್ತರಿಸುತಮಾ ।
ತರುಣಿಗೆ ಮುದ್ರಿಕೆಯನಿತ್ತು ಬನಮಂ ಮುರಿದಾ ॥
ಸುರರಂ ಸಂಹರಿಸುತೆ ತ ।
ತ್ಪುರಕಗ್ಗಿಯನಿಕ್ಕಿ ಬಂದೆನೆಂದಂ ಹನುಮಂ ॥ ೧೦೫ ॥

ಆಲಿಸುತತಿಸಂತೋಷದೆ ।
ವಾಲಿಸುತಾದ್ಯಧಿಕವೀರಕಪಿಗಳ್ಭರದಿಂ ॥
ಕೋಲಾಹಲಮಂ ಮಾಡುತೆ ।
ಲೀಲೆಯೊಳೆಯ್ತಂದರಂದು ಮಧುವನದೆಡೆಗಂ ॥ ೧೦೬ ॥

ನಂದನಕೆ ಮಿಗಿಲೆನಿಪ ರವಿ ।
ನಂದನನುಪವನಮನೈದೆ ಮರ್ಕಟಸೇನಾ ॥
ವೃಂದಂ ಪೊಕ್ಕುಂ ಮಧುಫಲ ।
ಕಂದಗಳಂ ಸವಿದುದಂಗದನ ಸಮ್ಮತಿಯಿಂ ॥ ೧೦೭ ॥

ಆರಪ್ಪಣೆಯಿಂ ಪುಗುವಿರ್ ।
ಸೂರಜನುಪವನಮನೆಂದು ದಧಿವಕ್ತ್ರಂ ತ ॥
ದ್ದ್ವಾರದೊಳವರಂ ತಡೆಯಲ್ ।
ವೀರರ್ಸದೆಬಡಿದರಂದು ವನಪಾಲಕರಂ ॥ ೧೦೮ ॥

ಕಿನಿಸಿಂದಂ ದಧಿವಕ್ತ್ರಂ ।
ದಿನಪಾತ್ಮಜನೆಡೆಗೆ ಬಂದು ತದ್ವಾರ್ತೆಯನಂ ॥
ದನುವಿಂ ಬಿನ್ನವಿಸಿದನಾ ।
ವನಮಂ ಕಾವುದಕೆ ತೀರದೆಂದೆನುತಾಗಳ್ ॥ ೧೦೯ ॥

ಹನುಮಂ ಪ್ರಾಜ್ಞಂ ಸೀತಾ ।
ವನಿತಾದರ್ಶನದ ಹರ್ಷದಿಂ ಕೀಶರ್ಗಂ ॥
ವನಮಂ ಪುಗುವೊಡೆ ಪೇಳ್ದಂ ।
ವಿನಯದೆ ಕರೆತಪ್ಪುದವರನೆಂದಂ ರವಿಜಂ ॥ ೧೧೦ ॥

ಎನೆ ದಧಿವಕ್ತ್ರಂ ವೇಗದೊ ।
ಳನಿಳಾತ್ಮಜಮುಖ್ಯರೆಡೆಗೆ ಬಂದುಂ ಪೇಳ ॥
ಲ್ಕನುವಿಂದಂಬರಪಥದೊಳ್ ।
ಘನನಾದಂಗೆಯ್ವುತೆಂದು ಬರುತಿರ್ದ್ದರವರ್ ॥ ೧೧೧ ॥

ಸೀತಾವಾರ್ತೆಯದೇನೆಂ ।
ಬಾತುರದಿಂ ರಘುಜನೈದೆ ಕೇಳ್ದೊಡಮಿನಜಂ ॥

ವಾತಸುತಮುಖ್ಯವಾನರ |
ನಾಥರ್ ಕೃತಕಾರ್ಯರಾಗಿ ಬರ್ಪುದೆಂದಂ || ೧೧೨ ||

ಇಂತೆಂಬ ಸಮಯದೊಳ್ ವರ |
ಕಂತುಹರೋಪಮ ಸಮೀರಸಂಭವಮುಖರುಂ ||
ಸಂತಸದಿಂದಂ ಸೀತಾ |
ಕಾಂತನ ಸನ್ನಿಧಿಗೆ ಬಂದು ಜಯಜಯವೆಂದರ್ || ೧೧೩ ||

ಪವನಸುತಾಂಗದ ವಿಧಿಸುತ |
ರವರಾ ರಾಘವನ ಪದಕೆ ವಂದಿಸುತೊಲವಿಂ ||
ರವಿಜಗೆ ಕಯ್ಮುಗಿದುಂ ನಿಲೆ |
ತವಕದೊಳತಿಭಕ್ತಿಯಿಂದೆ ನಮಿಸಿದರುೞಿದರ್ || ೧೧೪ ||

ಬಂದಯ್ ಪವನಜ ಧರಣೀ |
ನಂದನೆಯಂ ಕಂಡೆಯೆಂತು ದನುಜನ ಪೊೞಲೊಳ್ ||
ಎಂದಿಂತು ಕೇಳ್ದೊಡಾ ಹನು |
ಮಂ ದೇವರ್ಗೆಱಗಿ ಬಿನ್ನವಿಸಿದಂ ಮುದದಿಂ || ೧೧೫ ||

ದೇವರಡಿಗೆಱಗಿ ಪೋಳ್ದುಂ |
ಪಾವೆಯ್ದಿದೆವಂದು ದಕ್ಷಿಣಾಬ್ಧಿಯ ತಟಮಂ ||
ಆ ವನಧಿಯನುಂ ಲಂಘಿಸಿ |
ರಾವಣಸುರುಪುರಮನೆಯ್ದೆ ಪೊಕ್ಕೆಂ ನಿಶೆಯೊಳ್ || ೧೧೬ ||

ಆ ರಾತ್ರಿಯೊಳಾ ಪೊೞಲೊಳ್ |
ರಾರಾಜಿಪ ಗೃಹಗಳಲ್ಲಿ ರಾಜಾಲಯದೊಳ್ ||
ಓರಂತರಸಿ ಧರಾಸುತೆ |
ಯಾರಿಯನೀಕ್ಷಿಸದೆ ನಗರವನಮಂ ಸಾರ್ದೆಂ || ೧೧೭ ||

ಮಿರುಪ ಸದಶೋಕವನದೊಳ್ |
ನಿರತಂ ಭವದೀಯನಾಮಸಂಕೀರ್ತನದಿಂ ||
ಕರಮೆಸೆವ ಶಿಂಶಪಾವರ |
ತರುಮೂಲದೊಳಿರ್ಪ ದೇವಿಯಂ ಕಂಡೆನಣಂ || ೧೧೮ ||

ಮುಸುಕಿದ ಮುಗಿಲೊಬ್ಬುಳಿಯೊಳ್ |
ಶಶಿ ತೋರ್ಪಂತಸುರನಾರಿಯರ ಮಧ್ಯದೊಳಂ ||
ಕೃಶೆಯಾಗಿರ್ಪಳನೀಕ್ಷಿಸಿ |
ಬಸವಳಿದಾ ಮರಸನೇರ್ದು ಮೌನದೊಳಿರ್ದೆಂ || ೧೧೯ ||

ಸಲೆ ಸಪ್ತರಾತ್ರಿಯೊಳಂ ದಶ |
ಗಳನೆಳ್ತಂದುಂ ಸರಾಗದಿಂ ಭಾಷಿಸೆ ಕೇ ||
ಳ್ದಳುಕದೆ ನೋಡದೆ ಸೀತಾ |
ಬಲನೆ ಮಹಾಕೋಪದಿಂದೆ ಪೇಳ್ದಳ್ ಖಳನೊಳ್ || ೧೨೦ ||

ಎಲವೊ ಖಳ ನಿನ್ನ ತಲೆಗಳ |
ನಿಳಿಪಿ ನಿಶಾಚರರ ವಂಶವಿಷಸಾಗರಮಂ ||
ಕಲಕದೆ ಬಿಡುವುದೆ ರಘುಕುಲ |
ತಿಳಕನ ದಿವ್ಯಾಸ್ತ್ರಮೈದೆ ಸುಳಿಯದಿರೆಂದಳ್ || ೧೨೧ ||

ತಿಂಗಳೆರಡರೊಳಗೀ ಮನು |
ಜಾಂಗನೆ ವಶೆಯಪ್ಪ ತೆರದೆ ಗೆಯ್ವುದೆನುತ್ತಂ ||
ಇಂಗಳ ಕಣ್ಗಳೊಳವಸ |
ತ್ತಂ ಗಮಿಸಿದನಸುರನಾರಿಯರ ಮೇಳದೊಳಂ || ೧೨೨ ||

ಧರಣೀಸುತೆ ದುಃಖಂಗೊಳು |
ತಿರೆ ಕಂಡಾನೊಡನೆ ನಿಮ್ಮ ಚರಿತಾವಳಿಯಂ ||
ತರಣಿಜದರ್ಶನವೃತ್ತಮ |
ನೊರೆದೆಂ ತದ್ರಾತ್ರಿಯಲ್ಲಿ ವೃಕ್ಷಾಗ್ರದೊಳಂ || ೧೨೩ ||

ರಘುವಂಶವಾರ್ಧಿಚಂದ್ರನ |
ಸುಗುಣಕಥಾಶ್ರವಣಮಾಯ್ತು ತನಗೆಂದೆನುತಂ ||
ಮೊಗವೆತ್ತು ನೋಡಿ ಕಾಣದೆ |
ಬಗೆಯೊಳ್ಚಿಂತಿಸುವ ಸಮಯಕಿಳಿದೆಂ ಮರನಿಂ || ೧೨೪ ||

ಪದಕೆರಗಿ ನಿಂದು ನಾನಾ |
ವಿಧದಿಂ ಸಂಶಯನಿವೃತ್ತಿಯಪ್ಪಂತುಸಿರ್ದುಂ ||
ಸದಮಲಮುದ್ರಿಕೆಯಂ ಶಶಿ |
ವದನೆಗೆ ಕೊಟ್ಟಮಿತದುಃಖಮಂ ತಣ್ಪಿಸಿದೆಂ || ೧೨೫ ||

ತಿಂಗಳ್ಕಂಡಂಬುಧಿಯಂ |
ತುಂಗುರಮಂ ನೋಡಿನೋಡಿ ಕಯ್ಕೊಂಡೆಂದಳ್ ||
ಪಿಂಗುವ ಜೀವಮನುಳಿಸಿದೆ |
ಕಂಗೊಳಿಪೀ ರಾಮಮುದ್ರಿಕೆಯನಿತ್ತೆನಗಂ || ೧೨೬ ||

ಅಸುರರ ಬಾಧೆಯೊಳಿಂ ಜೀ |
ವಿಸಲಾರೆಂ ನೀನೆ ಕಂಡೆಯಲ್ಲಯ್ ಮಜ್ಝೀ ||

ಕಸಮುದ್ರಮಸಿನ್ನೇನಾ ।
ನುಸಿರ್ದಪೆನಿನನೆನ್ನನೆಂದಿಗಂ ಕರೆದುಯ್ವಂ ॥ ೧೨೭ ॥

ಕುರಿಪನಿದನೀವುದೆನುತಂ ।
ವರಚೂಡಾಮಣಿಯನಿತ್ತು ಮುನ್ನಂ ವನದೊಳ್ ॥
ಕರಟಂ ತಮ್ಮಂ ಬೆದರಿಸಿ ।
ದಿರಮಂ ನಿಮಗೊರೆವುದೆಂದು ಪೇಳ್ದರ್ಸಲವಿಂ ॥ ೧೨೮ ॥

ಬಿರುನುಡಿಯನಾಡಿ ಕಳಿಪಿದ ।
ಪರಿಯಂ ಮಾನಸದೊಳಿಡದೆ ಶೀಘ್ರದೊಳೆನ್ನಂ ॥
ಕರೆದುಯ್ವ ಯತ್ನದೊಳ್ತಾ ।
ನಿರಲೆನ್ನುತೆ ಲಕ್ಷ್ಮಣಂಗೆ ಪೇಳೆನಲೆಂದೆಂ ॥ ೧೨೯ ॥

ಏವುದೊ ಚಿಂತೆಯದಿಂ ನಿ ।
ವ್ವಾ ವಾರ್ತೆಯನಾಲಿಸುತ್ತಮಾ ರಘುಜಂ ಸು ॥
ಗ್ರೀವಾದ್ಯರೊಡನೆ ತಾಂ ರಾ ।
ಜೀವಾಂಬಕೆ ನಿಮ್ಮ ಪೊರೆಗೆ ಬರ್ಪಂ ನೈಜಂ ॥ ೧೩೦ ॥

ಎಂದು ಪದಕೆರಗಿ ಬೀಳ್ಕೊಂ ।
ಡಂದುಂ ತದ್ವನಮನೈದೆ ಮುರಿದುಂ ಸೆಣಸ ॥
ಲ್ಬಂದಸುರಾವಳಿಯಂ ಸಲೆ ।
ಕೊಂದೆಂ ನಿಮಿಷಾರ್ಧದಲ್ಲಿ ನಿಮ್ಮಯ ಕೃಪೆಯಿಂ ॥ ೧೩೧ ॥

ಮುಳಿವುತೆ ರಾವಣದನುಜನ ।
ಬಳಿಗಂ ನಡೆತಂದು ಸರ್ವಲೋಕೇಶ್ವರನೊಳ್ ॥
ಕಲಹಂ ಕಯ್ಗೂಡದು ರವಿ ।
ಕುಲಜನ ಪಿಶಿಖಕ್ಕೆ ತನುವನೊಡ್ಡದಿರೆಂದೆಂ ॥ ೧೩೨ ॥

ಎನೆ ಕೋಪದೊಳಸುರೇಂದ್ರಂ ।
ತನಗೀ ಕಪಿ ಬುದ್ಧಿಗಲಿಸೆವಂದುದೆ ಭರದಿಂ ॥
ಕೊನೆವಾಲಮನುರಿಗೊಳಿಸುತೆ ।
ಬಿನದದೆ ಪುರಮಧ್ಯದಿಂದೆ ಪೊರಡಿಪುದೆಂದಂ ॥ ೧೩೩ ॥

ಅಸುರಾವಳಿ ತನ್ನಂ ಭಂ ।
ಗಿಸಲವರಂ ಕೊಂದು ಪುರವನನಲಂಗಿತ್ತುಂ ॥
ರಸೆಯಾತ್ಮಜೆಯಂ ಮುಗುಳ್ದೀ ।
ಕ್ಷಿಸಿ ವಾನರಸೇನೆವೆರಸುಮಿಲ್ಲಿಗೆ ಬಂದೆಂ ॥ ೧೩೪ ॥

ಇಂತೆಂದು ಶಿರೋರತ್ನಮ |
ನುಂ ತವಕದೊಳಿತ್ತು ನಮಿಸಲಬ್ಬದಳಾಕ್ಷಂ ||
ಸಂತಸದಿಂ ಕಯ್ಕೊಂಡುಂ |
ಚಿಂತಿಸಿದಂ ಭೂಮಿಜಾತೆಯಂ ನೆನೆನೆನೆದುಂ || ೧೩೫ ||

ಎಲರಣುಗನನೀಕ್ಷಿಸುತಂ |
ತೊಲವಿಂ ನಿನ್ನಸಮಬುದ್ಧಿಶೌರ್ಯಾದಿಗುಣಂ ||
ಗಳನಮರೋರಗಮರ್ತ್ಯ |
ವಳಿಯೊಳ್ ನಾಂ ಕಾಣೆನೆಂದು ಮೇಣಿಂತೆಂದಂ || ೧೩೬ ||

ಕಳಿದಂಬುಧಿಯಂ ದನುಜನ |
ಪೊಳಲಂ ಸಾರ್ದವನಿಜಾತೆಯಿರವಂ ತಿಳಿದಾ ||
ಬಳಿಯಿಂ ಬಂದೆಮಗೊರೆದಿಂ |
ದುಳಿಪಿದೆ ಮದ್ವಂಶಕಲ್ಪವಲ್ಲಿಯನೆಂದಂ || ೧೩೭ ||

ನೀನೆನಗೆ ಮಾಡಿದುಪಕಾ |
ರಾನುಗುಣಂ ಪ್ರತಿಯನಾಚರಿಸುವೊಡೆ ಸಾಧ್ಯಂ ||
ತಾನಲ್ಲವೆಂದು ಹನುಮನ |
ನಾನಂದದೊಳಪ್ಪುಗೊಂಡನಾ ರಘುವೀರಂ || ೧೩೮ ||

ರವಿತನುಜಾತಾಂಗದಜಾಂ |
ಬವಕೇಸರಿನೀಲಶರಭಶತಬಲಿನಳರಾ ||
ಘವಲಕ್ಷ್ಮಣರಾನಂದಾ |
ರ್ಣವದೊಳಗೋಲಾಡುತಿರ್ದರೆಂದಂ ಸೂತಂ || ೧೩೯ ||

# ಸಪ್ತಮಾಶ್ವಾಸ.

ವೃತ್ತ || ಶ್ರೀಶಂ ವಿಶ್ವವಿರಾಜಿತಂ ದನುಜಮಾತಂಗೌಘಪಂಚಾನನಂ |
ಕೀಶಾಧೀಶಸುಪೂಜಿತಂ ಪದನತವ್ರಾತಾಬ್ಧಿಚಂದ್ರೋಪಮಂ ||
ದೋಷಾರಣ್ಯದವಾಗ್ನಿರೂಪಸಮರಾನೀಕೇಷ್ಟದಾತಂ ನಭೋ |
ಕೇಶಾನಂದಕರಂ ವರಂ ರಘುವರಂ ರಕ್ಷಿಕ್ಕೆ ತಾಂ ಸರ್ವರಂ || ೧ ||

ಕಂದ || ಧರಣಿಜೆಯ ದುಃಖಮಂ ಪರಿ |
ಹರಿಸಿ ನಿಶಾಚರರನೆಲ್ಲನರೆದುಂ ಲಂಕಾ ||
ಪುರಮಂ ದಹಿಸುತೆ ರಘುಜಗೆ |
ಪರಿತೋಷಂಗೆಯ್ದ ಹನುಮಸಂಘ್ರಿಗೆ ಮಣಿವೆಂ || ೨ ||

ಹನುಮನ ಚಾರುಚರಿತ್ರಮ |
ನನುವಿಂ ಚಿತ್ತರಿಸಲಾದುದೆಮಗಾನಂದಂ ||
ಸನಯಂ ಮುಂಗತೆಯಂ ಪೇ |
ಳೆನುತಂ ಮುನಿವಿತತಿ ಕೇಳೆ ಸೂತಂ ಪೇಳ್ದಂ || ೩ ||

ಅವಧರಿಪುದು ಮುನಿಗಳೆ ರಾ |
ಘವನನಿಲಾತ್ಮಜನನೀಕ್ಷಿಸುತ್ತಂ ರವಿಸಂ ||
ಭವಗೆಂದಂ ಮಿತ್ರನೆ ಕೇ |
ಳಿವನೆಸಗಿದ ಕಜ್ಜಕಿನ್ನು ಪಾಸಟಿಯುಂಟೇ || ೪ ||

ನೋಡಲಶಕ್ಯಂ ಕಡಲಂ |
ರೂಢಿಯೊಳಂ ದಾಂಟಿ ಶತ್ರುಪುರದೊಳ್ ನೆರೆ ಕ ||
ಯ್ಗೂಡಿದ ಖಳರಂ ಯಮಪುರಿ |
ಗೋಡಿಸಿ ನಡೆತಂದನಿವನ ಸಾಹಸಕೆಣೆಯೇಂ || ೫ ||

ಇನಸುತ ನೀನೇಂ ಸುಕೃತಿಯೊ |
ಹನುಮಂತಂ ನಿನ್ನ ಮಂತ್ರಿಯಾದುದೆ ಚೋದ್ಯಂ ||
ಮನವೊಲ್ದಂ ನೇಹದೆ ನೀ |
ನೆನಗಂ ಸಖನಾದುದೆನ್ನ ಪುಣ್ಯವಿಶೇಷಂ || ೬ ||

ಈ ವಾನರಬಲಮಿರಲುಂ |
ರಾವಣನಂ ವಧಿಪುದೆನಗದೇಂ ಘನಮೆಂದಂ ||

ದಾ ವಾಯುಜಗೆಂದಂ ರಾ |
ಜೀವಾಂಬಕನಧಿಕತೋಷದಿಂದವನಿದಿರೊಳ್ ‖ ೭ ‖

ನೆಲೆಯೆಂತಿರ್ಪ್ಪುದು ದನುಜನ |
ಬಲಮೆಂತಿರ್ಕ್ಕುಂ ವಿಚಾರಿಸಿದ ವಿವರಮನಿ ‖
ನ್ನಲಸದೆ ಪೇಳೆಂದೊಡೆ ರಘು |
ಕುಲತಿಲಕನೊಳೆಂದನನಿಲಸಂಭವನಾಗಳ್ ‖ ೮ ‖

ವನನಿಧಿಯಿರ್ಪ್ಪುದು ಶತಯೋ |
ಜನಮದರತ್ತಲ್ ತ್ರಿಕೂಟಗಿರಿಯಗ್ರದೊಳಂ ‖
ಕನಕದ ಕೋಂಟೆಯ ಮಧ್ಯದೊ |
ಳನುವಿಂದೆಸೆದಿರ್ಪ್ಪುದಸುರನಾಥನ ನಗರಂ ‖ ೯ ‖

ಜಳಮಧಿಕಮುಳ್ಳ ಪರಿಖಾ |
ವಳಯದಿನೆಸೆವಾ ಪುರಕ್ಕೆ ಬಾಗಿಲ್ನಾಲ್ಕುಂ ‖
ಖಳರಿರ್ಪ್ಪರ್ನಾನಾಯುಧ |
ಗಳನಾಂತತಿಸಜ್ಜರಾಗಿ ತದ್ದ್ವಾರಗಳೊಳ್ ‖ ೧೦ ‖

ಘೋರಶತಘ್ನಿಗಳಿಂ ದಿ |
ಕ್ಪೂರಿತವಾದ್ಯಂಗಳಿಂದೆ ಬಳಸಿದ ಸುಪ್ರಾ ‖
ಕಾರಗಳಂ ಜಾಗ್ರತೆಯಿಂ |
ಸೇರಿರ್ಪ್ಪ ಬಲೌಘದಿಂದೆ ತತ್ಪುರಮೆಸೆಗುಂ ‖ ೧೧ ‖

ಕರಿತುರಗರಥಪದಾತಿಯ |
ನೆರವಿಯನಸುರೇಂದ್ರಪುತ್ರಸಚಿವಾದ್ಯರ ಮಂ ‖
ದಿರಗಳನುರುರಾಜಾಲಯ |
ದಿರವುಂ ಬಣ್ಣಿಸುವೊಡೆಸಗೆ ತೀರದು ದೇವಾ ‖ ‖ ೧೨ ‖

ವಿತತಾಗ್ನಿಹೋತ್ರಮಂ ಮಾ |
ಡುತೆ ವೇದಾಧ್ಯಯನದಿಂದೆ ರಾಕ್ಷಸರುಂ ಸಂ ‖
ತತಮಿರ್ಪ್ಪರ್ಬಳಿಕೆ ದಯಾ |
ಮತಿಶೌಚಾಚಾರಸತ್ಯಮೆಂಬುದನರಿಯರ್ ‖ ೧೩ ‖

ಕೊಂದೆಂ ಖಳರಂ ನಾಲ್ಕರೊ |
ಳೊಂದಂಶಮನನಲಗಿತ್ತೆನಾ ಪತ್ತನಮಂ ‖
ಮುಂದಪ್ಪ ಕಾರ್ಯಸಂಗತಿ |
ಯಂ ದೇವರೆ ಬಲ್ಲಿರೆಂದನನಿಲಕುಮಾರಂ ‖ ೧೪ ‖

ಶರನಿಧಿಯಂ ದಾಂಟಿ ಮಹಾ |
ಪುರಮಂ ಪೊಕ್ಕಸುರಪತಿಯನರೆದುಂ ಸೀತಾ ||
ತರುಣಿಯನೀಕ್ಷಿಪುದತಿದು |
ಸ್ತರಮೆಂದುಂ ರಘುಜನೊಡನೆ ಪೇಳ್ದಂ ರವಿಜಂ || ೧೫ ||

ದೇವರ್ಗೀತಕೆ ಯೋಚನೆ |
ಯಾ ವಾರ್ಧಿಯನೈದೆ ಕಳಿದು ಪೋದೊಡೆ ಬಳಿಕಂ ||
ರಾವಣಮುಖ್ಯನಿಶಾಚರ |
ರಾವಳಿಯಂ ಕೊಲ್ವೊಡೇನಸಾಧ್ಯಮದಿಕ್ಕರ್ಗಂ || ೧೬ ||

ಮರುತಜನಿಂತೆನೆ ಮನುಜೇ |
ಶ್ವರಗಾದುದು ದಕ್ಷಿಣಾಕ್ಷಿಬಾಹುಸ್ಫುರಣಂ ||
ಪರಿತೋಷದೊಳಾ ವಾನರ |
ವರನಂ ಕರೆದೆಂದನಾಗಳಾ ರಘುವೀರಂ || ೧೭ ||

ಲೇಸಾಗಿದೆ ಶುಭಸೂಚನೆ |
ಯೀ ಸುಮುಹೂರ್ತದೊಳೆ ಪೋದೊಡರಿಜಯಮಕ್ಕುಂ ||
ಕೀಶಬಲಂವೆರಸು ನೆರೆ ವಾ |
ರಾಶಿಯ ತೀರಕ್ಕೆ ಗಮಿಸಲುಜ್ಜುಗಿಸೆಂದಂ || ೧೮ ||

ಸೇನಾಧಿಪತ್ಯಮಂ ವೈ |
ಶ್ವಾನರತನುಜಾತಗಿತ್ತು ರಘುಜನ ಮತದಿಂ ||
ಭಾನುಕುಮಾರಂ ಬಳಿಕಂ |
ವಾನರಬಲದೊಡನೆ ನಿಂದು ಗಮಿಸುಗುಮೆಂದಂ || ೧೯ ||

ಸಸಿನೆ ಮಹಾಬಲವೆರಸುಂ |
ಮಿಸುಪ ತಪೋಮಾಸದಲ್ಲಿ ಸಿತಪಕ್ಷಚತು ||
ರ್ದಶಿಯೊಳ್ಮಧ್ಯಾಹ್ನದೊಳಂ |
ವಸುಧೇಶಂ ಪೊರಟನಮಿತಶುಭಶಕುನಗಳಿಂ || ೨೦ ||

ಹನುಮನ ಪೆಗಲೊಳ್ ರಾಘವ |
ನನುವಿಂದಂಗದನನೇರ್ದ್ದು ಲಕ್ಷ್ಮಣದೇವಂ ||
ಬಿನದದೆ ವಾನರಸೇನಾ |
ವನಧಿಯ ಮಧ್ಯದೊಳೆ ಬರುತುಮಿರ್ದ್ದರ್ ಭರದಿಂ || ೨೧ ||

ಮುಂಗುಡಿಯೊಳೆ ಸೇನಾಪತಿ |
ಪಿಂಗಡೆಗೆ ಸುಷೇಣಜಾಂಬವರ್ ಕೆಲಬಲದೊಳ್ ||

ತಾಂ ಗಕ್ಕನೆ ನಡೆದುಂ ಕಪಿ ।
ಪುಂಗವನಳಶರಭಮುಖ್ಯರೆಳ್ತರುತಿರ್ದ್ದರ್ ॥ ೨೨ ॥

ಗಣಿಸುವನಾವೊಂ ವಾನರ ।
ಗಣಮಂ ಬೆಸಲಾದುದವನಿಯೆನೆ ವಾಹಿನಿ ದ ॥
ಕ್ಷಿಣಕಂ ಬರೆವರೆ ಪದಘು ।
ಟ್ಟನಕಳ್ಕಿದರಹಿಪಕೂರ್ಮರದನೇವೇಳ್ವೆಂ ॥ ೨೩ ॥

ಗಿರಿಯಂ ಪತ್ತುತಮಿಳಿವುತೆ ।
ತರುಶಾಖೆಗೆ ನೆಗೆದುನೆಗೆದು ತತ್ಫಲಕುಲಮಂ ॥
ತಿರಿತಿರಿದುಂ ಸವಿಸವಿಯು ।
ತ್ತುರುಗರ್ಜನಗೆಯ್ವುತಧಿಕವೇಗದೆ ನಡೆದರ್ ॥ ೨೪ ॥

ಭರದಿಂ ಸಹ್ಯಾದ್ರಿಯನುಳಿ ।
ದುರುಮಲಯಾಚಲಕೆ ಬಂದು ನಿಲ್ಲದೆ ಬಳಿಕಂ ॥
ಮರುದಿನ ಸಾಯಾಹ್ನದೊಳಂ ।
ಶರಧಿಗೆ ರವಿಸೂನುವೆರಸು ಬಂದಂ ರಘುಜಂ ॥ ೨೫ ॥

ಹನುಮನ ಪೆಗಲಿಂದಿಳಿದುಂ ।
ವನಜಾಂಬಕನಾ ಸಮುದ್ರತೀರದೊಳಾಗ ॥
ಳ್ಗನುಜಂ ಸಹಿತಂ ಕುಳ್ಳಿರ ।
ಲಿನತನುಜಾತಾದ್ಯರಿರ್ದರಾತನ ಪೊರೆಯೊಳ್ ॥ ೨೬ ॥

ಭೀಕರರಝುಷನಕ್ರಗಳಿಂ ।
ದಾಕಾಶಮನ್ನೆದೆ ಚುಂಬಿಸುವ ವೀಚಿಗಳಿಂ ॥
ಹೀಕರಿಸುವ ಘೋಷಗಳಿಂ ।
ದಾ ಕಡಲಿರೆ ಕಾಣುತವನಿಪತಿಯಿಂತೆಂದಂ ॥ ೨೭ ॥

ಈ ವಾರಿಧಿಯಂ ದಾಂಟುವ ।
ನಾವಾತನೊ ಪಾರಗಾಣೆಮಾಮೆನುತುಂ ಸು ॥
ಗ್ರೀವಾದ್ಯರನೀಕ್ಷಿಸೆ ಪರಿ ।
ದೇವನದಿಂದಿರ್ದ್ದರಖಿಳವಾನರವೀರರ್ ॥ ೨೮ ॥

ಅತ್ತಲ್ ದಶಕಂಠಂ ನಿಜ ।
ಪತ್ತನಮಂ ವಿಶ್ವಕರ್ಮಮಯರಿಂದಂ ಸ ॥
ರ್ವೋತ್ತಮಮೆನಲಾಗಿಸಿ ಮುದ ।
ವೆತ್ತೋಲಗಗೊಂಡು ಮೆರೆದನಾ ಮರುದಿನದೊಳ್ ॥ ೨೯ ॥

ಒಂದು ಕಪಿ ಬಂದು ಧರಣೀ |
ನಂದನೆಯಂ ಕಂಡು ದಿವ್ಯವನಮಂ ಮುರಿದುಂ ||
ಕೊಂದಕ್ಷಾದಿಗಳಂ ಪುರ |
ಮಂ ದಹಿಸುತೆ ಪೋದುದಮುಮ ರಾಮನ ಬಳಿಗಂ || ೩೦ ||

ಆ ರಾಮಂ ಬಂದಂ ಗಡ |
ಸೂರಾತ್ಮಜಮುಖ್ಯವಾನರಾವಳಿವೆರಸುಂ ||
ವಾರಿಧಿತೀರಕೆನುತ್ತಂ |
ಶೂರರೊಳಂ ಪೇಳ್ದನಸುರನಾಯಕನಾಗಳ್ || ೩೧ ||

ಏಸು ಬಲಮಿರ್ದೊಡೇನಾ |
ಕೀಶನನುರೆ ಪಿಡಿಯದಾದುದಿನ್ನೀ ಬಳಮುಂ ||
ನಾಶಂಗೆಯ್ವಪರೊಳರೆ ಸ |
ಭಾಸದರೊಳಗೆಂದೊಡಸುರವರರಿಂತೆಂದರ್ || ೩೨ ||

ದೇವರ್ದಯೆಯಿಂ ಬಿಡಿಸಿದೊ |
ಡಾ ವಾನರನೆಯ್ದಿತಲ್ಲದೆಮ್ಮಾಯುಧದೊಳ್ ||
ಜೀವಿಸಿ ಪೋಪುದೆ ಬೆಸಸಿ |
ನ್ನಾವನ ತಲೆಗುಯ್ಯೆವೇಳ್ಕುಮೆಂದರ್ ದೈತ್ಯರ್ || ೩೩ ||

ನೀನೇನಸಮರ್ಥನೆ ದಿವಿ |
ಜಾನೀಕಂ ಬೆದರುತಿರ್ಪ್ಪುದನಿಶಂ ನಿನಗಂ ||
ಮಾನವವಾನರರೇಂ ಘನ |
ಮಾ ನತರೇನೊಳರೆ ನಿನ್ನ ಸಮರಾಂಗಣದೊಳ್ || ೩೪ ||

ಜವನೇನಾದಂ ಸುರಪನ |
ಪವಣೇನಾಯ್ತು ಕುಬೇರನುರುಪುಷ್ಪಕಮೊ ||
ಪ್ಪವುದಾರೆಡೆಯೊಳ್ ಜಲಧಿಪ |
ನವನಿವನಂತಿಲ್ಲಮಿವನ ಪಾಡೇನರಸಾ || ೩೫ ||

ಎಂದುರೆ ಗರ್ಜಿಪ ರಾಕ್ಷಸ |
ಬೃಂದಮನೀಕ್ಷಿಸುತೆ ಕುಂಭಕರ್ಣಂ ಹೋಹೋ ||
ನಿಂದಿರೆ ನೀಮೆನುತಂ ದಶ |
ಕಂಧರನೊಳ್ಪೇಳ್ದನಧಿಕಕುಶಲೋಕ್ತಿಗಳಿಂ || ೩೬ ||

ಆಲಿಪುದಸುರಾಧಿಪ ಸೀ |
ತಾಲಲನಾಮಣಿಯನೈದೆ ತಂದಾಗಳೆ ನಿ ||

ನ್ನಾಲಯದಯ್ಸಿರಿ ಕುಂದಿದು ।
ದಾಲೋಚಿಸಲೇತಕೆಂದು ಮಗುಳ್ದಿಂತೆಂದಂ ॥ ೩೭ ॥

ಸೀತೆಯಸುಯ್ದಾಗಳೆ ರಘು ।
ನಾಥಂ ತಾಂಗಿದ್ರ್ದೊಡಾತನುರುಬಾಣದ ಸ ॥
ತ್ವಾತಿಶಯಂ ತೋರ್ದ್ದತ್ತು ಪ ।
ರಾತುಮನೊಳ್ಸಿಣಸೆ ಜೀವಿಸಿದರಂ ಕಾಣೆಂ ॥ ೩೮ ॥

ರಾಮನನರಿಯೆಯ ನೀನಖಿ ।
ಳಾಮರರಧಿದೈವಮಲ್ತೆ ಜನಕಾತ್ಮಜೆ ತಾಂ ॥
ಕಾಮನ ಪೆತ್ತವಳಲ್ಲಮೆ ।
ತಾಮಸಮತಿಯಿಂದೆ ತಂದೆ ನೀನಾಕೆಯನುಂ ॥ ೩೯ ॥

ಮುನ್ನಮೆ ಯೋಚಿಸವೇಳ್ಕಾ ।
ಯ್ತಿನ್ನೆಸಗುವ ಕಾರ್ಯಮಾವುದೆಂದೊಡೆ ರಣದೊಳ್ ॥
ಪನ್ನತಿಕೆಗಳಂ ನೆರೆ ತೋ ।
ರ್ದುನ್ನತಶಸ್ತ್ರಾಸ್ತ್ರದಿಂದೆ ಸೆಣಸುವುದೆ ಮತಂ ॥ ೪೦ ॥

ನಿಲಿಸುವೆನೀ ಕ್ಷಣಮಾ ಕಪಿ ।
ಬಲಮಂ ನಿಮಿಷಾರ್ಧದಲ್ಲಿ ಮನುಜರ ಚಲಮುಂ ॥
ಬಲಿಗುಡುವೆಂ ಮಿಗೆ ಭೂತಾ ।
ವಲಿಗೆನಲಿಂದ್ರಾರಿ ಪೇಳ್ದನಸುರಾಧಿಪನೊಳ್ ॥ ೪೧ ॥

ತೃಣಮಲ್ಲಮೆ ಶಾಖಾಮೃಗ ।
ಗಣಮೆನಗಂ ಕೀಟಸದೃಶರಾ ಮಾನವರುಂ ॥
ತ್ರಿಣಯನನಡ್ಡಯ್ಸಿದೊಡಂ ।
ಗಣಿಪೆನೆ ಮತ್ಸಾಹಸಂಗಳಂ ನೀನರಿಯಾ ॥ ೪೨ ॥

ಎನ್ನಭಿಧಾನಮನಾಲಿಸೆ ।
ಪನ್ನಗಪತಿದಿವಿಜನಾಥರತಿಭಯದಿಂದಂ ॥
ಕೆನ್ನೆಯೊಳುಗಿವರ್ ಕರಗಳ ।
ನ್ನಿನ್ನಿವರಿಂದಪ್ಪ ಕಜ್ಜಮೇನೆನುತಿರ್ದ್ದಂ ॥ ೪೩ ॥

ಆ ಸಮಯದೊಳತಿನಿಪುಣ ವಿ ।
ಭೀಷಣನುರುನಮ್ರಭಾವದಿಂದಂ ದನುಜಾ ॥
ಧೀಶನೊಳೆಂದಂ ಕೇಳ್ದಪು ।
ದೀ ಸಕಲಾಸುರರ ನುಡಿಯನಿಡದೆಯೆ ಮನದೊಳ್ ॥ ೪೪ ॥

ಅರಸನ ಮತಮೆಂತಂತಂ |
ತರಿಪುತೆ ನಿಜಪುತ್ರಮಿತ್ರಬಾಂಧವರಂ ತಾಂ ||
ಪೊರೆವ ಜನಮಿರ್ದೊಡೇಂ ತಾ |
ನಿರುವುದೆ ತದ್ಭೂಮಿಪಾಲನೊಳ್ ಸರ್ವಸ್ವಂ || ೪೫ ||

ಅರಿ ತಾನಾವಂ ಬಲಮೆನಿ |
ತಿರುವುದು ಸತ್ವಾತಿಶಯಗಳೆಂತವಗೆನುತಂ ||
ಚರಮುಖದಿಂದಾಲಿಸಿ ಮಿಗೆ |
ವಿರಚಿಪುದಾ ಕಾರ್ಯದನುವನರಿತುಂ ಜಾಣಂ || ೪೬ ||

ಮಾನುಷನೆಂದರಿಯದಿರಾ |
ಮಾನಾಥಂ ಪಿಂತೆ ಸುರರ ದೂರಿಂ ಧರೆಯೊಳ್ ||
ಮಾನವರೂಪಿಂದಿರ್ಪ್ಪಂ |
ದಾನವರಂ ಮಥಿಸವೇಳ್ಕುಮೆಂಬ ನಿಮಿತ್ತಂ || ೪೭ ||

ಈ ಘಟಕರ್ಣಸುಪಾರ್ಶ್ವಕ |
ಮೇಘನಿನಾದಾತಿಕಾಯಕುಂಭನಿಕುಂಭರ್ ||
ಕೂಗಿದೊಡೇಂ ಸಮರದೊಳಂ |
ರಾಘವನಿದಿರಾಂತು ನಿಂದು ಪಳಚುವರೊಳರೇ || ೪೮ ||

ಆತಂ ಹರಿಯಲ್ಲದೊಡತಿ |
ಘಾತಿಸುವನೆ ಘೋರತಾಟಕೆಯನುಂ ಗಿರಿಜಾ ||
ನೇತನ ಧನುವಂ ಮುರಿವನೆ |
ಸೀತಾಪತಿಯಾದಿವಿಷ್ಣುವೆಂದರಿ ಮನದೊಳ್ || ೪೯ ||

ಅಸುರವಿರಾಧಂ ಬಡವನೆ |
ಪಸುಳೆಯೆ ಮಧ್ಯಗಿನಿ ಧೂರ್ತಖರದೂಷಣರುಂ ||
ನುಸಿಗಳೆ ಮಾರೀಚಾದಿಗ |
ಳಸುಗಳೆವೊಡೆ ಸಾಧ್ಯಮುಂಟೆ ನರನಾದೊಡವಂ || ೫೦ ||

ಸುರದಾನವರೊಳಗಂ ನೀ |
ನುರುಶೂರಂ ನಿನ್ನನೈದೆ ವಾಲಾಗ್ರದೊಳಂ ||
ಪರಿಬಂಧಿಸಿದಿಂದ್ರಜನಂ |
ನೆರೆಕೊಂದವನಾವನೆಂದು ತಿಳಿ ಚಿತ್ತದೊಳಂ || ೫೧ ||

ಕೇಳರಸ ನಿನ್ನ ಗರ್ವಮ |
ನೇಳಿಸಿದತಿಶೂರಕಾರ್ತವೀರ್ಯಾರ್ಜುನನಂ ||

ಕಾಲನ ಪುರಕಟ್ಟಿದನಂ ।
ಸೋಲಿಸಿದ ಬಲಿಷ್ಠನೊಡನೆ ಸೆಣಸೆಯಸಾಧ್ಯಂ ॥ ೫೨ ॥

ಆತನ ಶರದಿದಿರೊಳ್ನಿ ।
ಲ್ವಾತಂ ತಾನಾವನಮರದೈತ್ಯೋರಗರೊಳ್ ॥
ಭೂತೇಶಾದ್ಯರ ಮರೆವುಗೆ ।
ಪಾತಾಳಕ್ಕಿಳಿಯೆ ಬಿಡದು ತನ್ಮಂತ್ರಾಸ್ತ್ರಂ ॥ ೫೩ ॥

ನೀನೇನಾದೊಡೆಯುಂ ಮತಿ ।
ಹೀನನೆ ಪೌಲಸ್ತ್ಯಮುನಿಪಸುತನಲ್ತೆ ಮಹಾ ॥
ಜ್ಞಾನಿಯಲಾ ಶ್ರುತಿ ನಿನ್ನಾ ।
ಧೀನಮಲಾ ಶಂಕರಾರ್ಚಕಂ ನೀನೆಯಲಾ ॥ ೫೪ ॥

ಪರಸತಿಯೊಳ್ ಮನಮಿಟ್ಟುಂ ।
ಸುರಪತಿಯೇನಾದನಬ್ಜನೆಂತಿರ್ಪ್ಪಂ ಶ್ರೀ ॥
ವರನರಸಿಯನನಘೆಯನುರು ।
ತರಸುಪತಿವ್ರತೆಯನ್ನೈದೆ ತಂದೆ ನಿರರ್ಥಂ ॥ ೫೫ ॥

ಉರಿಯಂ ಸಲೆ ಸೊಂಕಿದ ಕ ।
ರ್ಪ್ಪುರದಂತಾಯ್ತುಕಟ ನಿನ್ನ ಸಕಲೈಶ್ವರ್ಯಂ ॥
ಹರಹರ ನಿನಗೀ ದುರ್ಮತಿ ।
ದೊರೆದುದೆ ಕುಲನಾಶಕಾರಣಂ ತಾನೆನಿಕುಂ ॥ ೫೬ ॥

ವಾನರಪತಿಯೊರ್ವ್ವಂ ಬಂ ।
ದೀ ನಗರಮನ್ನೈದೆ ಪೊಕ್ಕು ದನುಜಾವಳಿಯಂ ॥
ತಾನರೆವಾಗಳ್ಪಟುಭಟ ।
ರೇನೆಸಗಿದರಿವರನ್ನೈದೆ ನಚ್ಚಿರವೇಡಯ್ ॥ ೫೭ ॥

ಸರಸಿಜನೇತ್ರನ ವಿಶಿಖಂ ।
ಬರುವುದಕಂ ಮುನ್ನಮಿಂದೆ ಸೀತಾಸತಿಯಂ ॥
ಕರೆದುಯ್ದೊಪ್ಪಿಸಿ ರಘುಜಗೆ ।
ಶರಣಾಗಲ್ ಪೊರೆವನಾತನುರುಕೃಪೆಯಿಂದಂ ॥ ೫೮ ॥

ನಿನಗಿಂ ಲಜ್ಜೆಯದಾದೊಡ ।
ಮೆನಗಪ್ಪಣೆಗೊಟ್ಟು ಕಳಿಪೆಯವನೀಸುತೆಯಂ ॥
ಇನಕುಲತಿಲಕಂಗೊಪ್ಪಿಸಿ ।
ವಿನಯದಿನೆಳ್ತರ್ಪ್ಪೆನರಸ ಬಿಡು ಮೂರ್ಖತೆಯಂ ॥ ೫೯ ॥

ಪಿರಿಯರ್ಗ್ಗಂ ಪಿತೃಗುರುಗ |
ಳ್ಗೊರೆವುದದನುಚಿತಮುಮಾದೊಡಂ ಕಷ್ಟಂಗಳ್ ||
ಬರುವೆಡೆಯೊಳ್ಸುಮ್ಮನೆ ತಾ |
ನಿರಲುಚಿತಮದಲ್ಲವೆಂದು ಪೇಳ್ದೆಂ ನಿನ್ನೊಳ್ || ೬೦ ||

ಇಂತೆನೆ ಕೇಳ್ದಂ ರಾಕ್ಷಸ |
ಕಾಂತಂ ತಾಂ ಮುಳಿಸಿನಿಂದೆ ಕಿಡಿಗೆದರುತೆ ನೇ ||
ತ್ರಾಂತದೊಳಂ ಪ್ರಳಯದ ಕಾ |
ಲಾಂತಕನೆಂಬಂತು ಗರ್ಜಿಸುತ್ತಿಂತೆಂದಂ || ೬೧ ||

ಎಲವೋ ನಿನಗೀ ವಿದ್ಯೆಯ |
ಕಲಿಸಿದ ಖಳನಾವನೆಮ್ಮ ಸತ್ಪ್ರೋನ್ನತಿಯಂ ||
ಸಲೆ ಪಳಿದುಂ ವಾನರರ |
ಗ್ಗಳಿಕೆಯನುಂ ಪೇಳಲವರ ವಂಶೋದ್ಭವಿಯೇ || ೬೨ ||

ಎನ್ನನ್ನಮನುಂಡುಂ ಬಳಿ |
ಕೆನ್ನಂ ನೆರೆ ಜರೆವುದಾವ ನೀತಿಯೊ ನಿನಗಂ ||
ಕುನ್ನಿಯದಾದೊಡಮುಂ ತನ |
ಗನ್ನಮನಿತ್ತಾತಗೊಡಲನೊಪ್ಪಿಸುವುದಣಂ || ೬೩ ||

ಕೊಂದಪೆನೆ ಕೈಕಸೆಯ ತನು |
ವಿಂದೊಗೆದುದರಿಂದೆ ತನಗೆ ಬರ್ಕ್ಕುಮಧರ್ಮಂ ||
ಮಂದಿರಕಿನ್ನೆಯ್ತಂದೊಡೆ |
ಬಂಧಿಸುವೆಂ ಪೋಗು ಪೋಗು ನಿಲ್ಲದಿರಿದಿರೊಳ್ || ೬೪ ||

ಕಿನಿಸೇಕೆ ಪೋಗಿ ಜೀವಿಪೆ |
ನಿನಕುಲಜನ ಪೊರೆಗೆನುತ್ತೆ ಸತ್ವರದಿಂ ಸ್ವಂ ||
ದನಮಂ ತಾನೇರ್ದ್ದಂ ಸ |
ಜ್ಜನಮಂತ್ರಿಚತುಷ್ಕವೆರಸು ಪೊರಪೊರಮಟ್ಟಂ || ೬೫ ||

ಹಿತಮಂ ನುಡಿದೊಡೆ ನಿನಗಂ |
ಪ್ರತಿಕೂಲಮದಾಗಿ ತೋರ್ಪ್ಪುದಾದೊಡೆಯುಂ ಶ್ರೀ ||
ಪತಿಯೊಳ್ಸೆಣಸದೆ ಧರಣೀ |
ಸುತೆಯಂ ನೀನಾತಗಿತ್ತೊಡರಿ ಸುಖಮೆಂದುಂ || ೬೬ ||

ಇಂತೊರೆದು ವಿಭೀಷಣನತಿ |
ಸಂತಸದಿಂ ರಾಮನಡಿಯನೀಕ್ಷಿಪ ಮನದಿಂ ||

ತಾಂ ತವಕದೊಳಂ ಪುಷ್ಕರ |
ಪಂಥಾನದೊಳೆಯ್ದುತಿರ್ದನದನೇವೇಳ್ವೆಂ || ೧೭ ||

ರಾಮನೆ ರವಿಕುಲವಾರಿಧಿ |
ಸೋಮನೆ ಸಚರಾಚರಾತ್ಮಕನೆ ಪಾವನನೇ ||
ಶ್ಯಾಮಾಂಗನೆ ಪೊರೆಯೆಂದು ನ |
ಭೋಮಾರ್ಗದೊಳಬ್ಜನೇತ್ರನಂ ನುತಿಗೆಯ್ದಂ || ೧೮ ||

ದೇವರ ಸತಿಯಂ ಸೀತಾ |
ದೇವಿಯರಂ ತೊರೆವುದಿನ್ನು ಸಾಯದಿರೆನುತಂ ||
ರಾವಣಗೊರೆಯಲ್ಕಾತಂ |
ತೀವ್ರಮಹಾಕೋಪದಿಂದೆ ಪೊರಮಡಿಸಿದನಯ್ || ೧೯ ||

ಮುನಿನಾಥ ವಿಶ್ರವಸ್ಸಿನ |
ತನುಜನೆನಾನಾ ನಿಶಾಚರೇಶ್ವರನನುಜಂ ||
ವನರುಹಸಂಭವನಂಶಜ |
ನೆನಗೆ ವಿಭೀಷಣನೆನಿಪ್ಪ ನಾಮಂ ದೇವಾ || ೨೦ ||

ಮರೆವೊಕ್ಕೆಂ ದೇವರ ಪದ |
ಸರಸಿಜಮಂ ಕಾಯೆವೇಳ್ಕುಮೆಂದಂಬರದೊಳ್ ||
ಭರದಿಂ ಕೂಗಿಡೆ ಕೇಳ್ದಂ |
ತರಣಿಜನಿಂತೆಂದನವನಿಪತಿಯೊಡನಾಗಳ್ || ೨೧ ||

ದಶಶಿರನನುಜಂ ತಾಂ ಗಡ |
ಶಶಿಮುಖಿಯಂ ಬಿಡೆನುತೆಂದೊಡಾ ದನುಜಂ ಕೋ ||
ಪಿಸಲೆಳ್ತಂದಂ ಗಡ ರಾ |
ಕ್ಷಸನಿವನಂ ಕೊಲ್ಲೆವೇಳ್ಕುಮೆನ್ನೊಳ್ ಬೆಸಸಯ್ || ೨೨ ||

ತರಣಿಜ ನೀನೆಂದುದು ನಿಜ |
ಮುರುಭಯದಿಂ ಬಂದೆನೆಂದು ಮೊರೆಯಿಡುತಿಪ್ಪಿರ್ ||
ಮರೆವೊಕ್ಕನನುಳಿಪುದು ಸ |
ತ್ಪುರುಷರ ಗುಣಮವನನಿಲ್ಲಿಗಂ ಬರಿಸೆಂದಂ || ೨೩ ||

ವನಜಾಂಬಕನಿಂತೆನೆ ರವಿ |
ತನುಜಂ ಸಂತೋಷದಿಂದೆ ಸರಮಾಧವನಂ ||
ಬಿನದದೆ ಕರೆಯಲ್ಕಾತಂ |
ವಿನಮಿತನಾಗುತ್ತೆ ನಿಂದನವನೀತಳದೊಳ್ || ೨೪ ||

ಸಚಿವರನೊಡಗೊಂಡುಂ ರಾ |
ತ್ರಿಚರಾಧಿಪನನುಜನಧಿಕಭಯಭಕ್ತಿಗಳಿಂ ||
ರುಚಿರಾಂಗ ಪದ್ಮಲೋಚನ |
ಸುಚರಿತ್ರ ಸುರೌಘವಂದ್ಯ ಶರಣಾಗೆಂದಂ || ೭೫ ||

ಶರಣು ಶರಣೆನುತೆ ರಘುಜನ |
ಚರಣಾಬ್ಜಕ್ಕೆರಗಿ ನಿಂದು ಕಯ್ಮುಗಿದುಂ ಭಾ ||
ಸ್ಕರವಂಶೋತ್ತಂಸ ದಯಾ |
ಕರ ರಾಘವ ರಾಮ ರಾಮ ಶರಣಾಗೆಂದಂ || ೭೬ ||

ದನುಜಾಂತಕ ಧಾತ್ರೀಭವ |
ಧನದೋದಧಿನಾಥದಂಡಧರದೇವೇಂದ್ರಾ ||
ದ್ಯನಿಮಿಷನುತ ದಶರಥಸುತ |
ದಿನಪಾತ್ಮಜಪೋಷ ದೇವ ಶರಣಾಗೆಂದಂ || ೭೭ ||

ಪಲವಗೆಯಿಂದಂ ಸೀತಾ |
ಲಲನೆಯರಂ ದೇವರೆಡೆಗೆ ಕಳಿಪೆಂದೆನುತಂ ||
ತಿಳಿಪಿದೊಡಾ ದಶಕಂಠಂ |
ಮುಳಿಯಲ್ಕೆಳ್ತಂದೆನಿಂದು ರಕ್ಷಿಪುದೆಂದಂ || ೭೮ ||

ಎಂದ ವಿಭೀಷಣನಂ ರಘು |
ನಂದನನತಿ ಕರುಣದಿಂದೆ ಮನ್ನಿಸುತಂ ಮೇ ||
ಣೆಂದಿಗೆ ನೀಂ ಗೆಯ್ದುರುನುತಿ |
ಯಿಂದಂ ಸಂತುಷ್ಟನಾದೆನೆಂದಂ ನಗುತಂ || ೭೯ ||

ಪರಮುದಯಾಳುವಲಾ ರಘು |
ವರನವನಂ ಕರೆದು ಬೇಳ್ದ ವರಮಂ ನಿನಗಂ ||
ಕರುಣಿಪೆನೆಂದೆನೆ ದನುಜೇ |
ಶ್ವರನಾಗಳ್ಬಯಸಿ ಬೇಳ್ದನಬ್ಜಾಕ್ಷನೊಳಂ || ೮೦ ||

ಸತತಂ ನೆಲೆಗೊಳ್ಳವನೀ |
ಸುತೆವೆರಸುಂ ದೇವ ನೀನೆ ಮಚ್ಚಿತ್ತದೊಳಂ ||
ಮತಿವಾಯೆಯೊಳಡಗದೆ ರಘು |
ಪತಿ ನಿಮ್ಮಂ ಜಾನಿಪಂತೆ ಕರುಣಿಪುದೆಂದಂ || ೮೧ ||

ಲೇಸಂ ಪೇಳ್ದಯ್ ನಿನ್ನೊಳ್ |
ವಾಸಂಗೆಯ್ದಿರ್ಪೆನಿದಕೆ ಸಂದೆಯಮಿಲ್ಲಂ ||

ಆಸುರಪತಿಯಂ ಸಲೆ ಕೊಂ ।
ದೀಶತ್ವಮನೀವೆನ್ನೈದೆ ನಿನಗೀ ಧರೆಯೊಳ್ ॥ ೮೨ ॥

ಈ ರವಿತಾರಾಧೀಶರ್ ।
ಧಾರಿಣಿರಾಮಾಯಣಂಗಳುಳ್ಳನ್ನೆಬರಂ ॥
ವೀರಾಗ್ರಣಿ ಲಂಕೆಯೊಳಂ ।
ಭೂರಿಮಹಾಸುಖದಿನಿರ್ಪ್ಪುದೆಂದಂ ರಾಮಂ ॥ ೮೩ ॥

ಬಾರಯ್ ಲಕ್ಷ್ಮಣ ವಾನರ ।
ವೀರರ್ ನೋಡಲ್ ವಿಭೀಷಣಂಗಭಿಷೇಕಂ ॥
ಭೋರೆನೆ ನೆರವೇರುಗುಮೆನೆ ।
ವಾರಿಧಿಯಿಂ ತಂದನ್ನೈದೆ ನಿರ್ಮ್ಮಲಜಲಮಂ ॥ ೮೪ ॥

ಸಚಿವರ್ಬ್ಬೆರಸುಂ ಮಿಗೆ ರಾ ।
ತ್ರಿಚರಾಧಿಪತಿತ್ವಕ್ಕೈದೆ ಲಕ್ಷ್ಮಣನಾಗಳ್ ॥
ರಚಯಿಸಿದಂ ಸಂತೋಷದೊ ।
ಳುಚಿತಂ ಪಟ್ಟಾಭಿಷೇಕಮಂ ದನುಜಂಗಂ ॥ ೮೫ ॥

ವಾನರರುರ್ಬ್ಬಿದರಾಗಳ್ ।
ಭಾನುಸುತಂ ತುಷಿತನಾದನಮರಾವಳಿ ಸು ॥
ಮ್ಮಾನದೆ ಪೂವಳೆಗರೆದುದು ।
ಮಾನವರಧಿನಾಥನಿರ್ದ್ದನತಿಸಂಭ್ರಮದೊಳ್ ॥ ೮೬ ॥

ಅನುಜಂ ತಾನೇನಾದಂ ।
ಮನುಜರದೆಂತಿರ್ಪ್ಪರವರ ಬಲಮೆನಿತಿರ್ಕ್ಕುಂ ॥
ಎನುವುದನರಿವೊಡೆ ರಾವಣ ।
ದನುಜಾಧಿಪನ್ನೈದೆ ಶುಕನನುಂ ಕರೆದಂದಂ ॥ ೮೭ ॥

ನೀನವರೆಡೆಗಂ ಪೋಗಿ ನಿ ।
ದಾನದೆ ತದ್ಬಲಮನೀಕ್ಷಿಸುತ್ತುಂ ಬಳಿಯಂ ॥
ಭಾನುಜನಂತಸ್ಸ್ಥಮನರಿ ।
ದಾ ನುಡಿಯಂ ಪೇಳ್ವುದೆಂದು ನಿಯಮಿಸಿದನವಂ ॥ ೮೮ ॥

ಶುಕನತಿಭರದಿಂ ರವಿಜನ ।
ನಿಕಟಕ್ಕೈತರ್ಪ್ಪ ಸಮಯದೊಳೆ ವಾನರನ್ನೈ ॥
ನಿಕಮೀಕ್ಷಿಸಿ ಕೋಪದೆ ಗಗ ।
ನಕೆ ಪಾರ್ದ್ದುಂ ಪಿಡಿದು ಗುರ್ದ್ದುತಿರ್ದ್ದುದು ಖಳನಂ ॥ ೮೯ ॥

ಆದರಿಂದತಿಭೀತಿಯೊಳಂ ।
ಬೆದರುತೆ ಬಳಲುತ್ತೆ ಬಾಧೆಯಿಂ ಬಸವಳಿದಂ ॥
ದೊರ್ದರ್ಮಂ ದಾನವನಾಗಳ್ ।
ಸದಯಾ ಸುಗ್ರೀವ ರಕ್ಷಿಸೆನ್ನನೆನುತ್ತಂ ॥ ೯೦ ॥

ರಾವಣನನುಚರನೆಂ ಸು ।
ಗ್ರೀವನೆ ನಿನ್ನಣ್ಣನಾತಗಂ ಭ್ರಾತೃ ಗಡಾ ॥
ಆ ವಿಬುಧೇಶನ ಸುತನೊಳ ।
ತೀವಸ್ನೇಹದೊಳಗಾಯ್ತು ಗಡ ಸಂಬಂಧಂ ॥ ೯೧ ॥

ಅವನನುಜಂ ನೀನಾಗಿರ ।
ಲವನಿಂದೆಮಗಧಿಕನಲ್ತೆ ಮನುಜಗೆ ಸಾಹಾ ॥
ಯ್ಯವನೆಸಗೆವೇಡಮೆಂಬೀ ।
ವಿವರಮನೊರೆ ನಿನ್ನೊಳೆಂದು ಕಳಿಪಿದನೆನ್ನಂ ॥ ೯೨ ॥

ಅಸುರೇಶನೆಂದ ವಿವರಮ ।
ನುಸಿರಲ್ಕೆಯ್ತಂದ ದೂತನಂ ಕಪಿಗಳ್ಘಾ ॥
ತಿಸುವೊಡದೇನಪರಾಧಮ ।
ನೆಸಗಿದೆನಯ್ ಬಿಡಿಸು ರಾಮ ಕೃಪೆಯಿಂದೆನ್ನಂ ॥ ೯೩ ॥

ಕರುಣೆಯಲಾ ರಾಘವ ವಾ ।
ನರರುಪಹತಿಯಿಂದೆ ನೊಂದೆನೆಂದಾಗಸದೊಳ್ ॥
ಮೊರೆಯಿಡೆ ಕೇಳುತ್ತಂ ರಘು ।
ವರನಿನಜಂಗೊರೆದು ಬಿಡಿಸಿದಂ ತತ್ಕ್ಷಣಸಂ ॥ ೯೪ ॥

ಅಲಸದೆ ತದ್ದನುಜಂ ದಶ ।
ಗಳನೊಳ್ ತಾನೇನನೊರೆಗುಮೆನೆಯವನಂ ತಾಂ ॥
ಮುಳಿಸಿಂ ರವಿಜಂ ಬಂಧನ ।
ದೊಳಗಿರಿಸಿದನಲ್ಲಿಗೆಯ್ದಿದಂ ಶಾರ್ದೂಲಂ ॥ ೯೫ ॥

ತನುವಂ ಮರೆಗೊಂಡುಂ ವಂ ।
ಚನೆಯಿಂ ಬಂದಮಿತಬಲಮನೀಕ್ಷಿಸಿ ಮಗುಳ್ದುಂ ॥
ದನುಜಂ ಬಿತ್ತರಿಸಲ್ಕಂ ।
ಮನದೊಳ್ಚಿಂತಿಸುತುಮಿರ್ದನಾ ದಶಕಂಠಂ ॥ ೯೬ ॥

ಇತ್ತಲ್ ಕಡಲಂ ಕಟ್ಟಲ್ ।
ಪೊತ್ತಿಕ್ಕಿದರಂದು ಪಿರಿಯ ಗಿರಿಯಂ ಗಿರಿಯಂ ॥

ತೆತ್ತಿದ ನೆತ್ತಿಯೊಳತ್ತಲ್ ।
ವೆತ್ತಮುದಾಗುತ್ತಿರಲ್ಕೆ ಪೇಳ್ದಂ ರಾಮಂ ॥ ೯೭ ॥

ಬೇಡುವೆನಬ್ಧಿಯನರ್ಥ್ಯಂ ।
ಗೂಡೆ ನಿರಾಕರಿಸಿ ದಾರಿಗುಡದಿರೆ ಬಳಿಯಂ ॥
ಮಾಡುವೆನುರುಯತ್ನಮನೆಂ ।
ದಾಡಿ ಕುಶಾಸ್ತರಣದಲ್ಲಿ ಕುಳಿತಂ ರಾಮಂ ॥ ೯೮ ॥

ಮೂರುಂ ದಿನಮುಂ ಚಿತ್ತದೆ ।
ವಾರಿಧಿಯಂ ಧ್ಯಾನಿಸುತ್ತಮಿದ್ದೊಡಮುಂ ಮೆ ॥
ಯ್ದೋರದಿರಲ್ ಕಣ್ದೆರೆದುಂ ।
ಭೋರೆನೆ ಲಕ್ಷ್ಮಣನನೀಕ್ಷಿಸುತ್ತಿಂತೆಂದಂ ॥ ೯೯ ॥

ಶರಧಿಯ ಗರ್ವಮನೀಗಳೆ ।
ಮುರಿವೆಂ ನೋಡೆನುತೆ ಚಾಪಶರಮಂ ಕಯ್ಕೊಂ ॥
ಡುರುತರಕೋಪದೊಳಂಬಂ ।
ತಿರುವಿಗೆ ತುಡಿಸಲ್ಕೆ ವಾರ್ಧಿ ನಡುಗಿದನಾಗಳ್ ॥ ೧೦೦ ॥

ಪುರುಷಾಕೃತಿಯಿಂ ಮಂಜುಳ ।
ವರರತ್ನಾವಳಿಯನೈವೆ ಕಾಣ್ಕೆಯನಿತ್ತುಂ ॥
ಶರಣಾಗತರಕ್ಷಣಚಣ ।
ಪೊರೆಯೆಂದಡಿಗಳ್ಗೆ ಮಣಿದು ಕಯ್ಮುಗಿದೆಂದಂ ॥ ೧೦೧ ॥

ಜಡದೇಹಿಯೆಂಬುದಂ ನಿ ।
ಮ್ಮಡಿ ಬಲ್ಲುದು ಕೃಪೆಯೊಳೆನ್ನನುಳಿಸಲ್ವೇಳ್ಕುಂ ॥
ಕುಡುವೆಂ ಬಟ್ಟೆಯನಮರರ ।
ಬಡಗಿಯ ಮಗನದ್ರಿತರುಗಳಿಂ ಕಟ್ಟಲೊಡಂ ॥ ೧೦೨ ॥

ಶರಮಿದಮೋಘಂ ತೋರಾ ।
ಗುರಿಯಂ ತಾನಲ್ಲಿಗಟ್ಟುವೆಂ ಬಾಣಮನೆಂ ॥
ದರವಿಂದಾಂಬಕನೆನೆ ಸಾ ।
ಗರನುರೆ ಬೆದರುತ್ತೆ ಪೇಳ್ದನಾ ರಾಮನೊಳಂ ॥ ೧೦೩ ॥

ದ್ರುಮಕುಲ್ಯದೊಳಂ ಬಾಧಿಪ ।
ರಮಿತಮಹಾದುಷ್ಟರೆನ್ನನಲ್ಲಿಗೆ ತದ್ಬಾ ॥
ಣಮನೆಸ್ಸುವುದೆನೆ ರಾಘವ ।
ನಮಲಾಸ್ತ್ರಕೆ ನೇಮಮಿತ್ತನತಿವೇಗದೊಳಂ ॥ ೧೦೪ ॥

ಶರಮೆಯ್ದಿ ದುಷ್ಟರಂ ಸಂ |
ಹರಿಸುತೆ ತಾಂ ಬಂದು ಮೂಡಿಗೆಯನುರೆ ಸಾರಲ್ ||
ಶರಭವಿಭೀಷಣರವಿಜಾ |
ದ್ಯರುಮತ್ಯಾಶ್ಚರ್ಯದಿಂದೆ ಪೊಗಳ್ದರಳುಂಬಂ || ೧೦೫ ||

ಶರನಿಧಿಯಂ ಬೀಳ್ಕೊಳುತುಂ |
ಸರಸಿಜನೇತ್ರಂ ಸಮುದ್ರತಟದೊಳ್ ರಾಮೇ ||
ಶ್ವರನೆಂಬಭಿಧಾನದೊಳಂ |
ವಿರಚಿಸಿ ಲಿಂಗಪ್ರತಿಷ್ಠೆಯಂ ಗೆಯ್ದನಣಂ || ೧೦೬ ||

ವಾರಾಣಸಿಯಿಂದಂ ಭಾ |
ಗೀರಥಿಯಂ ತಂದು ಲಿಂಗಕಭಿಷೇಚನಮಂ ||
ಆರುಂ ಮಾಡಲೊಡಂ ಘನ |
ಘೋರಮಹಾಪಾಪಮಳಿಯೆ ಸುಕೃತಿಗಳಪ್ಪರ್ || ೧೦೭ ||

ಎಂದತಿಭಕ್ತಿಯೊಳಂ ಬಾ |
ಲೇಂದುಶಿಖಾಮಣಿಯನ್ನೈದೆ ಪೂಜಿಸಿ ಪರಮಾ ||
ನಂದದೆ ನಳನಂ ಕರೆದಾ |
ಸಿಂಧುವನಿಂ ಬಂಧಿಸೆಂದನಾ ರಘುರಾಮಂ || ೧೦೮ ||

ರಾಮಾಜ್ಞೆಯೊಳಂ ಪ್ಲವಗ |
ಸ್ತೋಮಂ ತಂದೀಯೆ ಶೈಲವೃಕ್ಷಾವಳಿಯಂ ||
ತಾಮಸಮುಳಿದುಂ ನಳನುಂ |
ಪ್ರೇಮದೊಳಂ ಕಟ್ಟುತಿರ್ದ್ದನಾ ಸೇತುವನುಂ || ೧೦೯ ||

ಮುನಿಗಳಿರ ಚವುತಿಯೊಳ್ ಶುಭ |
ದಿನದೊಳ್ ಪ್ರಾರಂಭಗೆಯ್ಯೆ ತದ್ದಿವಸದೊಳಂ ||
ಬಿನದದೆ ಪದಿನಾಲ್ಕುಂ ಯೋ |
ಜನಮಾದುದು ಸೇತು ವಿಶ್ವಕರ್ಮಾತ್ಮಜನಿಂ || ೧೧೦ ||

ಮರುದೆವಸಮುಮಿಪ್ಪತ್ತಾ |
ಮರುದೆವಸಂ ಗಣಿಸಲೇಕವಿಂಶತಿ ಮೇಣಾ ||
ಮರುದೆವಸಂ ದ್ವಾವಿಂಶತಿ |
ಮರುದಿನಮಿಪ್ಪತ್ತ ಮೂರು ಯೋಜನಮಾಯ್ತಿಂ || ೧೧೧ ||

ದಿನಮಯ್ದುಕಾಯ್ತು ಶತ |
ಯೋಜನಮಿಂತದನೆಯ್ದಿ ನೋಡಿ ಕಪಿನಾಯಕನಂ ||

ವನಜಾಕ್ಷಂ ಮನ್ನಿಸಿ ಹನು ।
ಮನ ಪೆಗಲೇರ್ದ್ದಂ ನಡೆಯಿಸಿದಂ ಮುಂಬಲಮಂ ॥ ೧೧೨ ॥

ಅಂಗದನನೇರ್ದ್ದ ವಾನರ ।
ಪುಂಗವನಂ ಕೂಡಿಕೊಳುತೆ ಸೌಮಿತ್ರಿ ಕೃಪಾ ॥
ಪಾಂಗನ ಸೀತಾನಾಥನ ।
ಸಂಗಡಮೆಯ್ತಂದನಧಿಕಸಂತೋಷದೊಳಂ ॥ ೧೧೩ ॥

ಶ್ರೀರಾಮಂ ಬಲವೆರಸುಂ ।
ವಾರಿಧಿಯಂ ದಾಂಟಿ ದಕ್ಷಿಣದ ಕೂಲದೊಳಂ ॥
ಚಾರುಸುವೇಲಾಶೈಲಮ ।
ನೇರಿರ್ದ್ದಂ ರಾತ್ರಿಯಲ್ಲಿ ಚಂದ್ರಪ್ರಭೆಯಿಂ ॥ ೧೧೪ ॥

ಆ ಮರುದೆವಸಂ ರತ್ನ ।
ಸ್ತೋಮಮಹಾಕಾಂತಿಯಿಂದೆ ಶೋಭಿಪ ಲಂಕಾ ॥
ನಾಮಾಂಕಿತಪುರಮಂ ರಘು ।
ರಾಮಂ ನೋಡುತ್ತಮಿರ್ದ್ದನಚ್ಚರಿಯೆಂದುಂ ॥ ೧೧೫ ॥

ಈ ನಗರಮನೊಳವುಗೆ ಗಿರಿ ।
ಜಾನಾಥಂಗಮದಸಾಧ್ಯಮಲ್ತೆ ಪವನಜಂ ॥
ತಾನೊರ್ವನೆ ನಡೆದುಂ ದನು ।
ಜಾನೀಕಮನರೆದು ಬಂದುದತ್ಯಾಶ್ಚರ್ಯಂ ॥ ೧೧೬ ॥

ಎನುತಂ ರಾಘವನನಿಲನ ।
ತನುಜಾತನನ್ನೆದೆ ಪೊಗಳುತಿರೆ ನೋಡುತಮಂ ॥
ದಿನಜವಿಭೀಷಣಮುಖ್ಯರ್ ।
ಬ್ಬಿನದದೆ ಕೊಂಡಾಡುತಿರ್ದ್ದರದನೇವೇಳ್ವೆಂ ॥ ೧೧೭ ॥

ಇನಸುತ ನೀನೆಂದುಂ ಬಂ ।
ಧನದೊಳಗಿರಿಸಿದನನಿಂದು ಬೀಳ್ಕುಡಲವನಾ ॥
ದನುಜೇಂದ್ರನ ಪೊರೆಗೆಯ್ದುಗೆ ।
ಎನುತಂ ನಿಯಮಿಸಿದನಬ್ಜಲೋಚನನಾಗಳ್ ॥ ೧೧೮ ॥

ಸುರಪಜನಂ ಕೊಂದೊಲ್ ದಶ ।
ಶಿರನಂ ತತ್ಪುತ್ರಮಿತ್ರಬಾಂಧವರಂ ಸಂ ॥
ಹರಿಸುವನೀ ರಾಘವನಿದ ।
ನೊರೆಯೆಂದಿನಸೂನು ಶುಕನನುರೆ ಬೀಳ್ಕೊಟ್ಟಂ ॥ ೧೧೯ ॥

ಪುನರುದ್ಭವಿಸಿದೆನೆನುತಂ |
ಮನಗುಂದುತೆ ಬಂದು ಗೋಪುರದೊಳಿರೆ ದನುಜೇ ||
ಶನನೀಕ್ಷಿಸಿ ಕಂಪಿಸುತಂ |
ವಿನಮಿಸಿ ಕಯ್ಮುಗಿದು ಪೇಳ್ದನಾ ವೃತ್ತಮನುಂ || ೧೨೦ ||

ಅವಧರಿಪುದರಸ ಸೀನಾ |
ರವಿಸಂಭವನೆಡೆಗೆ ಕಳಿಪೆ ವಾನರಸೇನಾ ||
ನಿವಹದೊಳೆಯ್ದಲ್ ಕಪಿಗಳ್ |
ತಿವಿತಿವಿದೆಳೆದುಯ್ದರೆನ್ನನದನೇವೇಳ್ವೆಂ || ೧೨೧ ||

ತಂತಮಗೆ ಬಂದು ಕಪಿಗಳ |
ತಿಂತಿಣಿ ನಖದಂಷ್ಟ್ರದಿಂದೆ ಘಾತಿಸೆ ಸೀತಾ ||
ಕಾಂತಗೆ ಮೊರೆಯಿಡೆ ಕರುಣಾ |
ಸ್ವಾಂತದೆ ತಲೆಗಾಯ್ದನೆನ್ನನಸುರೋತ್ತಂಸಾ || ೧೨೨ ||

ನೀನೆಂದುದನಾ ಭಾಸ್ಕರ |
ಸೂನುಗೆ ಪೇಳಲ್ಕೆ ಕೇಳ್ದು ಬಂಧಿಸಲೆನ್ನಂ ||
ವಾನರಶೌರ್ಯೋನ್ನತಿಯನ |
ಹೀನಂಗಂ ಪೇಳಲರಿದದಂ ದಶಕಂಠಾ || ೧೨೩ ||

ನಿನ್ನನುಜಂ ಬರೆ ಕೃಪೆಯಿಂ |
ಮನ್ನಿಸಿ ಲಂಕಾಧಿಪತ್ಯಮಂ ಕರುಣಿಸಿದಂ ||
ಮುನ್ನೀರಂ ಬಂಧಿಸಿ ಬಳಿ |
ಕನ್ನಡೆತಂದಂ ಸರಾಗದಿಂದಂ ರಾಮಂ || ೧೨೪ ||

ಚಾರುಸುವೇಲಾಚಲದೊಳ್ |
ಸೂರಾತ್ಮಜಮುಖ್ಯವಾನರೇಂದ್ರರ್ವೆರಸಾ ||
ಶ್ರೀರಾಘವನೊಪ್ಪಿರ್ಪ್ಪಂ |
ವೀರಾರ್ಭಟೆಗೊಂಡು ಕಪಿಗಳವನಂ ಬಳಸಲ್ || ೧೨೫ ||

ಕರುಣದೆ ರಾಘವನೆನ್ನಂ |
ಕರೆಯಿಸಿ ದನುಜೇಂದ್ರಗೆಮ್ಮ ಸೈನಿಕಮಂ ಬಿ ||
ತ್ತರಿಸೆಂದು ಪೇಳೆ ಬಂದೆಂ |
ಪರಮುದಯಾಪರನುಮಲ್ತೆ ರಾಘವನದಟಿಂ || ೧೨೬ ||

ಅವರವರಾಕಾರಂಗಳ |
ನವರ ಮಹಾಸತ್ವಶೌರ್ಯಸಾಹಸಗಳನುಂ ||

ವಿವರಿಪರಾರಯ್ ನೋಡಿದೊ |
ಡೆವೆ ಸೀಯದೆ ತತ್ಪ್ರತಾಪವಹ್ನಿಯಿನಧಿಪಾ || ೧೨೭ ||

ರಾಕ್ಷಸನಾಯಕ ನಿರ್ಭಯ |
ವೀಕ್ಷಿಸು ಮುಂಗುಡಿಯೊಳಿರ್ಪನಾತನೆ ಸೇನಾ ||
ಧ್ಯಕ್ಷಂ ರಿಪುಕುಲಹರಿಣತ |
ರಕ್ಷ ಮಹಾಶೂರನಗ್ನಿಸುತನವನರಿಯಾ || ೧೨೮ ||

ಯಮನಂ ಲೆಕ್ಕಿಸದ ಪರಾ |
ಕ್ರಮಿ ಬಹುಳಬಲಿಷ್ಠನಂಬುನಿಧಿಯಂ ಶೈಲ ||
ದ್ರುಮಕುಲದಿಂ ಕಟ್ಟಿದ ನಿರು |
ಪಮನೀತಂ ವಿಶ್ವಕರ್ಮತನುಜಂ ನೋಡಾ || ೧೨೯ ||

ಶತಮುಸ್ಯಗೆ ಮಿಗಿಲೆನಿಸುವ |
ಶತಬಲಿಯೆಂಬಾತನೀತನೀಕ್ಷಿಸ ಗೌರೀ ||
ಪತಿಗಂ ಪಾಸಟಿಯೆಂಬ |
ಪ್ರತಿಮಮಹಾಧೈರ್ಯಶಾಲಿ ವೃಷಭಂ ನೋಡಾ || ೧೩೦ ||

ಜವಗಂ ನೀರ್ಗುಡಿಸುವಸುಂ |
ಬವರದೊಳೀತಂ ಗವಾಕ್ಷನೆನಿಪಂ ಕೀಶಂ ||
ಶಿವನೊರ್ಮ್ಮೆ ಮುಳಿದೊಡಂ ನಿ |
ಲ್ಪವನೀತಂ ಗವಯನೆಂಬ ಕಪಿಮುಖನರಸಾ || ೧೩೧ ||

ಈತಂ ಸುಷೇಣನೆಂಬ ಮ |
ಹಾತಿಬಲಂ ದೇವವೈದ್ಯನಂಶೀಭೂತಂ ||
ನೂತನಭೈರವನುರುವಿ |
ಖ್ಯಾತಬಲಂ ಕೇಸರಾಖ್ಯಕಪಿನಾಥನಿವಂ || ೧೩೨ ||

ಮುತ್ತಿದರ ಗೋಣಸರೆವ ಭ |
ಟೋತ್ತಮನಬ್ಜಜನ ಸೂನು ದನುಜರನೊಂದೇ ||
ತುತ್ತಂ ಮಾಡುವ ಕರಡಿಯ |
ವೊತ್ತಗಳಧಿನಾಥನಪ್ಪ ಜಾಂಬವನೀತಂ || ೧೩೩ ||

ರಣದೊಳ್ ರುದ್ರಂ ನಿಂದೊಡೆ |
ಗಣಿಸದ ಬಹುಸತ್ವಶಾಲಿ ಶರಭಾಖ್ಯನಿವಂ ||
ಅಣಕಿಪನಮರನಿಶಾಚರ |
ಗಣಮಂ ಕಲಿವಿನತನೆಂಬನಿವನಂ ನೋಡಾ || ೧೩೪ ||

ಸಮರದೊಳತಿ ಸಾಹಸಿಗಳ್ ।
ರುಮಪನಸರುಮಣ್ವರಂಭದಧಿಮುಖಧೂಮ್ರರ್ ॥
ಸುಮುಖಗಜಗಂಧಮಾದನ ।
ರಮಿತಪರಾಕ್ರಮಿಗಳಿವರನೀಕ್ಷಿಪುದರಸಾ ॥ ೧೩೫ ॥

ಇವರಂ ನೋಡಯ್ ಮೈಂದ ।
ದ್ವಿವಿದರ್ ಕ್ಷೀರಾಬ್ಧಿಮಥನದೊಳ್ಸುರಸುಧೆಯಂ ॥
ಸವಿದವರಿವರಿದಿರೊಳ್ ಸೆಣ ।
ಸುವರಂ ದೈತ್ಯರೊಳೆ ಕಾಣೆನಸುರೋತ್ತಂಸಾ ॥ ೧೩೬ ॥

ಈತನನೀಕ್ಷಿಪುದಯ್ ಪುರು ।
ಹೂತನ ಮುಮ್ಮಂ ಬಲಿಷ್ಠನಕುಟಿಲಕುಶಲಂ ॥
ತಾತನಿನಧಿಕಂ ರಿಪುಘನ ।
ವಾತಂ ಯುವರಾಜನಂಗದಂ ವಿಖ್ಯಾತಂ ॥ ೧೩೭ ॥

ಜನಿಸಿದ ಮಾತ್ರಂ ರವಿಯಂ ।
ತಿನುವೆಂ ತಾನೆಂದು ನಭಕೆ ಪಾಯ್ದುಂ ಕಮಲಾ ॥
ಸನಹರಿಶಂಕರರಿಂ ಪಾ ।
ವನವಜ್ರಶರೀರಿಯಾದ ಹನುಮಂತನಿವಂ ॥ ೧೩೮ ॥

ಮುರಿದುಪವನಮಂ ಲಂಕಾ ।
ಪುರಕಗ್ನಿಯನಿಕ್ಕಿ ದೈತ್ಯಕುಲಮಂ ಸದೆದುಂ ॥
ಭರದಿಂದೆ ಪೋಗಿ ಭೂಮಿಾ ।
ಶ್ವರನಂ ಕರೆತಂದ ಶೌರ್ಯಯುತನೀತನಲಾ ॥ ೧೩೯ ॥

ಈತನ ಸಾಹಸಮಂ ನೀ ।
ನೇತಿಳಿದಯ್ ಬಣ್ಣಿಸಲ್ಕೆ ಸಾಧ್ಯಮೆ ನಗಜಾ ॥
ನೇತಾಂಶೀಭೂತಂ ಪರಿ ।
ಪೂತಾತ್ಮಕನಿವನ ಮುಂದೆ ನಿಲ್ವವನಾವಂ ॥ ೧೪೦ ॥

ಈತನಲಾ ರವಿಜಂ ರಘು ।
ನಾಥನ ಸಖನಪ್ಪ ವಾನರೇಂದ್ರಂ ಶೂರಂ ॥
ಪಾತಾಳತ್ರಿದಶಾಲಯ ।
ಭೂತಳಗಳೊಳಿವನ ಶೌರ್ಯಕಿನ್ನಿದಿರುಂಟೇ ॥ ೧೪೧ ॥

ಉರುತರಶರಚಾಪಗಳಂ ।
ಧರಿಸುತೆ ಫಣಿನಾಥನಂತೆ ಮೊರೆವಂ ವರಭೂ ॥

ವರನನುಜನಿವನ ಸತ್ವಮ |
ನೊರೆವೊಡೆ ಫಣಿನಾಥನೊರೆಯೆ ದನುಜೋತ್ತಂಸಾ || ೧೪೨ ||

ಶತಮುಖಕಮಲಜಗಿರಿಜಾ |
ಪತಿನುತನಂ ವೇದವೇದ್ಯನಂ ನಿರುಪಮನಂ ||
ವಿತತಸುಸೇನಾಮಧ್ಯ |
ಸ್ಥಿತನಂ ಶ್ರೀರಾಮಚಂದ್ರನಂ ನೋಡರಸಾ || ೧೪೩ ||

ಪರಿತೋಷದೊಳಂ ಸರಮಾ |
ವರನಂ ನೋಡುತ್ತುಮಿರ್ಪನಾತನೆ ರಾಮಂ ||
ಧರಣಿಯನುರೆ ಪಾಲಿಸಲವ |
ತರಿಸಿದ ಪರಮಾತ್ಮನೆಂದುಮಿಳೆ ತಿಳಿಗಿವನಂ || ೧೪೪ ||

ಈತನಲಾ ಮಧುಮಥನಂ |
ಸೀತೆಯಲಾ ಲೋಕಮಾತೆ ತಿಳಿಯದೆ ನೀನೀ ||
ಪಾತಕಕೊಳಗಾದೆಯಲಾ |
ಭೂತಳದೊಳ್ ಬ್ರಹ್ಮಕುಲದೊಳುದಯಂಗೆಯ್ದುಂ || ೧೪೫ ||

ಧರಣೀಸುತೆಯಂ ಶ್ರೀರಘು |
ವರಗೊಪ್ಪಿಸಿ ಕಾವುದೆಂದು ಮರೆವುಗಲಾತಂ ||
ಕರುಣಿಸುವಂ ಮೇಣ್ ನಿನಗಿಹ |
ಪರದೊಳಗತ್ಯಂತಸುಖಮನಿತ್ತಪನರಸಾ || ೧೪೬ ||

ಶುಕನಿಂತೆನೆ ಕೇಳ್ದಂ ದಶ |
ಮುಖನತಿ ಕೋಪದೊಳೆ ಪೇಳ್ದನೆಲವೋ ನೀನೀ ||
ಯುಕುತಿಯನೆನ್ನೊಳ್ ಪೇಳ್ವೊಡೆ |
ಸಕುತಿಯುಮೆನಿತಿರ್ಕ್ಕುಮಧಮ ನೀಚ ದುರಾತ್ಮಾ || ೧೪೭ ||

ನಿರ್ಜರರೆನಗನುಚರರಾ |
ಧೂರ್ಜಟಿ ಮದ್ಗೃಹದೊಳಿರ್ಪನೀ ಕಪಿನರರಂ ||
ತರ್ಜಿಪುದೇಂ ಘನಮೆನುತಂ |
ಗರ್ಜಿಸಿ ಜಳಪಿಸಿದನಂದು ಶಶಿಹಾಸಮನುಂ || ೧೪೮ ||

ಪೋಷಿಸಿದಾತಂ ನೀನೆಂ |
ದೀಸೊರೆದೊಡೆ ಕೋಪಮಾಯ್ತು ಪಥ್ಯಂ ನಿನಗಾಂ ||
ಭಾಷಿಸಿದುದಪ್ಪುದೇನೆನು |
ತಾ ಸಭೆಯಿಂ ಪೊರಟನಂದು ಶುಕನುಂ ವ್ಯಥೆಯಿಂ || ೧೪೯ ||

ಒರೆ ಮಂದಿರದೊಳ್ ಪೂರ್ವ ।
ಸ್ಮರಣೆಯದಾಗಲ್ಕೆ ಬಿಟ್ಟು ರಾಕ್ಷಸತನುವಂ ॥
ಕರವೊಪ್ಪುವ ವಸದೊಳ್ ಭೂ ।
ಸುರನಾಗುತೆ ಮೆರೆದನಂದು ಮುನ್ನಿನ ಪರಿಯಿಂ ॥ ೧೫೦ ॥

ಸಲೆ ಕೋಪದೆ ರಾವಣನುಂ ।
ನಿಲಯಕೆ ನಡೆತಂದು ಮನದೊಳಾಲೋಚಿಸುತಂ ॥
ಕಲಿವಿದ್ಯುಜ್ಜಿಹ್ವಮಹಾ ।
ಖಲನಂ ಕರೆದೆಂದನಾಗಳೇಕಾಂತದೊಳಂ ॥ ೧೫೧ ॥

ನರಪತಿಯಂದದ ಮಾಯಾ ।
ಶಿರಮಂ ನೀಂ ಗೆಯ್ದು ಭೂಮಿಜೆಯ ಮುಂಗುಡಿಯೊಳ್ ॥
ಇರಿಸೆನೆ ಕೇಳ್ದಾ ಕ್ಷಣದೊಳ್ ।
ಪೊರಮಟ್ಟೆಳ್ತಂದನೊಂದು ತಾಣಕೆ ದನುಜಂ ॥ ೧೫೨ ॥

ಅತ್ತಲ್ ದನುಜೇಂದ್ರಂ ನಿಜ ।
ಚಿತ್ತದೊಳಂ ಚಿಂತಿಸುತ್ತುಮುಪವನದೆಡೆಗಂ ॥
ಮತ್ತತೆಯಿಂದೆಯ್ತಂದು ರ ।
ಘೂತ್ತಮನರ್ಧಾಂಗಿಯೊಡನೆ ತಾನಿಂತೆಂದಂ ॥ ೧೫೩ ॥

ನರವಾನರರೆಂಬರನಾ ।
ನರಿದಟ್ಟಿದೆನೆನ್ನ ಸತ್ವಸಾಹಸದಿಂದಂ ॥
ತರುಣೀಮಣಿ ನೀನೇತಕೆ ।
ನಿರಶನದಿಂದಿರ್ಪೆ ಬಿಸುಡು ತದ್ವಾಂಛೆಯನುಂ ॥ ೧೫೪ ॥

ಇನ್ನಾದೊಡೆಯುಂ ಚಿತ್ತದೆ ।
ಖಿನ್ನತೆಯಂ ಬಿಟ್ಟು ಬಂದು ಮದ್ಗೇಹದೊಳಂ ॥
ಚೆನ್ನಾಗಿರ್ದ್ದಪುದೆಂದೆಂ ।
ಬನ್ನೆಗೆ ಮಾಯಾವಿ ಬಂದನಾರ್ಭಟಿಸುತ್ತಂ ॥ ೧೫೫ ॥

ಒರೆಯುಗಿದ ರಕ್ತಖಡ್ಗದ ।
ಮಿರುಗುವ ಮಾಯಿಕದ ಮಸ್ತಕದ ರಕ್ಕಸನುಂ ॥
ಭರದಿಂ ಬಂದುಂ ದನುಜೇ ।
ಶ್ವರನಿದಿರೊಳ್ನಿಂದು ಗರ್ಜಿಸುತ್ತಿಂತೆಂದಂ ॥ ೧೫೬ ॥

ಇದು ರಾಮನ ತಲೆ ನೋಡಯ್ ।
ತ್ರಿದಶಾಂತಕ ನಿನ್ನ ಮುಂದು ನಿಲ್ವವನಾವೊಂ ॥

ಸದೆದೆಂ ಲಕ್ಷ್ಮಣರಘುಜರ |
ನೊದೆದಟ್ಟಿದೆನಮಿತಕಪಿಗಳಂ ಕ್ಷಣಮಾತ್ರಂ || ೧೫೭ ||

ಎನಲವನಂ ಮನ್ನಿಸಿ ಮೇ |
ದಿನಿಯಣುಗಿಯ ಬಳಿಗೆ ತಲೆಯನಿಳಿಪೆಂದು ದಶಾ ||
ನನನಾತಗೆ ನೇಮಿಸೆ ತ |
ದ್ದನುಜಂ ತಂದಿಟ್ಟನವಳ ಪೊರೆಯೊಳ್ ಶಿರಮಂ || ೧೫೮ ||

ನೋಡಿದಳವನಿಜೆ ಶಿರಮಂ |
ಕೇಡಾದುದೆ ನಿನ್ನ ನಾಮುಕಕಟಾ ಧರೆಯೊಳ್ ||
ಬಾಡಿತೆ ರವಿವಂಶದ ಲತೆ |
ಮೂಡಿತೆ ವೈಧವ್ಯಮೆನಗೆ ಹಾಹಾ ಎಂದಳ್ || ೧೫೯ ||

ದಶರಥಭೂವಿಭಾಪಾಲನ |
ಬಸಿರೊಳ್ ಸಂಜನಿಸಿ ಮೃತ್ಯುಕೈಕೆಯಿಯಿಂದಂ ||
ಬಿಸುಟಯ್ಸಿರಿಯಂ ನಿನಗೀ |
ವಸುಮತಿಯೊಳಗಾಯ್ತೆ ಮರಣಮೆಲೆ ಮದ್ರಮಣಾ || ೧೬೦ ||

ಸತ್ಯಮೆ ಲೋಕತ್ರಯದೊಳ್ |
ನಿತ್ಯಂ ತಾನೆಂದು ಬಂದು ದೈತ್ಯನ ಮುಖದೊಳ್ ||
ಮೃತ್ಯುವಶನಾಗುತೆನ್ನಂ |
ಪ್ರತ್ಯೇಕಕ್ಲೇಶಕೂಪದೊಳಗಿಳಿಪಿದೆಯಾ || ೧೬೧ ||

ಎನ್ನತ್ತಣಿನಾದುದು ಮನ |
ದನ್ನಗೆ ಮೃತಿಯೆಂದು ಮರುಗಿ ನಾನಾವಿಧದುಃ ||
ಖೋನ್ನತಿಯಿಂ ಧರಣೀಸುತೆ |
ತನ್ನಿದಿರಿನೊಳಿರ್ಪ ಪಂಬ್ತಿಕಂಠನೊಳುಸಿರ್ದಳ್ || ೧೬೨ ||

ಎಲವೊ ಖಲನೆ ಮತ್ಪತಿಯಂ |
ತಲೆಗುಯ್ದಂತೆನ್ನನಿಂದು ಹತಿಗೊಳಿಸೆನುತಂ ||
ಪಲವಗೆಯಿಂ ಪಂಬಲಿಸು |
ತ್ತಳುತಿರೆ ಚರನೊರ್ವನಂದು ದನುಜನೊಳೆಂದಂ || ೧೬೩ ||

ಕಾರ್ಯನಿಮಿತ್ತದೆ ತವಸಚಿ |
ವಾರ್ಯಂ ಬಂದಿರ್ಪನಿಲ್ಲಿಗೆಂದೆನೆ ಭರದಿಂ ||
ಧೈರ್ಯಂಗುಂದುತೆ ದಾನವ |
ವರ್ಯಂ ನಡೆತಂದನಾಲಯಕೆ ಚಿಂತಿಸುತಂ || ೧೬೪ ||

ಆ ಸಮಯದೊಳಲ್ಲಿಗೆ ಸರ |
ಮಾಸತಿ ನಡೆತಂದು ನೋಡಿ ಖಳಕೃತ್ಯದ ಮಾ ||
ಯಾಶಿರಮಿದು ಕೇಳೇದೆನು |
ತಾ ಸೀತೆಯ ಕರದೊಳಿರ್ದ್ದ ಶಿರಮಂ ಬಿಸುಟಳ್ || ೧೬೫ ||

ಆಸುರಮಂತ್ರದೆ ಸಮೆದಾ |
ವೈಶಿಕಶಿರಮುಂದು ಮಾಯಮಾಗಲ್ ವರಧಾ ||
ತ್ರೀಸುತೆಯತ್ಯಾಶ್ಚರ್ಯದೊ |
ಳಾ ಸರಮೆಯೊಳಂದು ಕೇಳಲವಳಿಂತೆಂದಳ್ || ೧೬೬ ||

ಚಿಂತಿಸದಿರಮ್ಮ ನಿನ್ನಯೆ |
ಕಾಂತಂ ಸುಕ್ಷೇಮಿ ಲಕ್ಷ್ಮಣಂ ಜೀವಂತಂ ||
ಅಂತಕಹರನಿಭಕಪಿಗಳ |
ತಿಂತಿಣಿ ತಾನಿರ್ಪ್ಪದವನಿಯಗಲದೊಳಿನ್ನುಂ || ೧೬೭ ||

ಶರನಿಧಿಯಂ ಬಂಧಿಸಿ ವಾ |
ನರಬಲವೆರಸುಂ ಸುವೇಲಗಿರಿಯೆಡೆಗಂ ಸ ||
ತ್ವರದಿಂ ಬಂದಿರ್ಪ್ಪಂ ರಘು |
ವರನಿದು ಸುಳ್ಳಲ್ಲಮಬ್ಜಲೋಚನೆ ಕೇಳಾ || ೧೬೮ ||

ಸುತ್ತಲ್ ಮುತ್ತಿರೆ ವಾಹಿನಿ |
ಪತ್ತನಮಂ ವಾರ್ತೆಗೇಳ್ದು ಪೋದಂ ದನುಜಂ ||
ತತ್ತರಿಸುತ್ತಿದೆ ದೈತ್ಯರ |
ಮೊತ್ತಂ ಕಪಿವರ್ಗದಾರ್ಭಟೆಯೊಳಮಲಾಂಗೀ || ೧೬೯ ||

ನಾಶಂಗೆಯ್ದಪನಸುರಾ |
ಧೀಶನನೊರ್ಚ್ಚಣದೊಳ್ಕೈದೆ ರಘುರಾಮಂ ತಾಂ ||
ಬೇಸಗೊಳ್ಳದೆ ನೀನು |
ಲ್ಲಾಸದೆ ಸೊಗಮಿರ್ಪ್ಪದೆಂದು ಪೇಳ್ದಳ್ ನಲವಿಂ || ೧೭೦ ||

ಇಂತೆನೆ ಸೀತಾಮಾನಿನಿ |
ಚಿಂತೆಯನುಪಹರಿಸಿ ನೆನೆಯುತಿರ್ದ್ದಳ್ ಪತಿಯಂ ||
ಸಂತೋಷದೊಳೆನುತಂ ಮುನಿ |
ಸಂತತಿಗಂ ಪೇಳ್ದನೊಲ್ದು ಸೂತಮುನೀಂದ್ರಂ || ೧೭೧ ||

# ಅಷ್ಟಮಾಶ್ವಾಸ.

ವೃತ್ತ || ಸೀತಾವೃತ್ತಮನ್ನೈದೆ ಕೇಳ್ದು ಪವಮಾನೋದ್ಭೂತನಿಂ ಸೂರಸಂ |
ಜಾತಾದಿಪ್ಲವಗೇಂದ್ರವಾಹಿನಿಯೊಡಂ ಬಂದಬ್ಧಿಯೊಳ್ಪಾರ್ವತೀ ||
ನೇತಂಗಂ ಸ್ಥಿತಿಗೆಯ್ದು ತಜ್ಜಲಧಿಯೊಳ್ ಪಂಥಾನಮುಂ ತೋರೆ ವಿ |
ಖ್ಯಾತೋರ್ವೀತಳನಾಥನಪ್ಪ ರಘುಜಂ ತಾನೀಗೆ ಸಂತೋಷಮಂ || ೧ ||

ಕಂದ || ಶ್ರುತಿಲೋಲಂ ನತಪಾಲಂ |
ಜಿತಕಾಲಂ ಜಾತರೂಪಗಿರಿನಿಭದೇಹಂ ||
ಸ್ಮಿತವಕ್ತ್ರಂ ನುತಿಪಾತ್ರಂ |
ಸತತಂ ಕುಡುಗೆಮಗೆ ಸೌಖ್ಯಮಂ ಹನುಮಂತಂ || ೨ ||

ಮುನಿಗಳಿರ ಕೇಳ್ಗೆ ರಾವಣ |
ದನುಜಂ ನಿಜಸಚಿವಬಂಧುವರ್ಗದೊಳಾಗ ||
ಳ್ಗನುವರದಾಳೋಚನೆಗೆ |
ಯ್ವನಿತರೊಳಾ ಮಾಲ್ಯವಂತನಲ್ಲಿಗೆ ಬಂದಂ || ೩ ||

ಮಾತಾಮಹನೆಳ್ತರೆ ಸಂ |
ಪ್ರೀತಿಯೊಳುಪಚರಿಸಿ ಪಂಙ್ತ್ತಿಮುಖನೈದೆ ನಿಜಾ ||
ರಾತಿಯ ವೀರ್ಯಮನೊರೆಯು |
ಲ್ಕಾತಂ ನೆರೆ ವಿನಯದಿಂದೆ ಪೇಳ್ದಂ ಬಗೆಯಂ || ೪ ||

ದಾನವನಾಯಕ ಕೇಳಯ್ |
ನೀನತಿಕುಶಲಜ್ಞನತುಳಸಾಹಸಿ ಧೀರಂ ||
ಮಾನವವಾನರರಲ್ತು ನಿ |
ದಾನಿಸಲವರಬ್ಜನೇತ್ರದಿವಿಜರ್ ನೋಡಾ || ೫ ||

ಖರಮುಖ್ಯಾಸುರರಂ ಸಂ |
ಹರಿಸುವೊಡಾರಿಂದೆ ಸಾಧ್ಯವಿಾ ಶರನಿಧಿಯಂ ||
ಪರಿಬಂಧಿಪನಾವನವಂ |
ನರನೆಂದುಂ ತಿಳಿಯೆವೇಡಮಾ ರಾಮನನುಂ || ೬ ||

ಈ ನಗರದೊಳವಶಕುನವಿ |
ತಾನಂ ನೆರೆ ತೋರುತಿಪ್ಪುದೆಲ್ಲೆಡೆಯೊಳಗಂ ||

ಭಾನುಕುಲೇಶನೊಳಂ ಸಂ |
ಧಾನಂಗೆಯ್ದಾಯೆವೇಳ್ಕುಮಯ್ ಸೀತೆಯನುಂ || ೭ ||

ಮಾಲಿಪ್ರಮುಖಾಸುರರಂ |
ಶ್ರೀಲೋಲಂ ಸದೆದನಂದು ಕೃತಯುಗದೊಳ್ ಪಾ ||
ತಾಳಕೆ ಪೋದೆಂ ಮಗುಳ್ದು ಸು |
ಮಾಲಿಯ ಬೆಂಬಳಿಯೊಳಸುರನಾಥನೆ ಕೇಳಯ್ || ೮ ||

ಪಲದಿನಮಾಗಲ್ ಯೋಚಿಸು |
ತಿಳೆಗೆಳ್ತಂದುಂ ಸುಮಾಲಿ ನಿಜತನುಜೆಯನುಂ ||
ಕುಲವೃದ್ಧಿಗೋಸುಗಂ ಮುನಿ |
ತಿಲಕಗೆ ತಾನಿತ್ತು ಪೋದನಾ ಕೈಕಸೆಯಂ || ೯ ||

ಅವನಳಿದಂ ನಿರ್ಜರರಾ |
ಹವದೊಳ್ ತಾನೊರ್ವನುಳಿದೆನಸುರೇಂದ್ರನೆ ಕೇ ||
ಳವನಿಯೊಳಾದುದು ಮತ್ಕುಲ |
ಭವ ನಿನ್ನಿಂದಸುರವೃದ್ಧಿಯಿದನಳಿಸದಿರಾ || ೧೦ ||

ದೇವರ್ಕಳ ದೂರಿಂದಂ |
ಭಾವಜಪಿತನೈದೆ ಮನುಜರೂಪದೊಳಂ ಲೇ ||
ಖಾವಳಿ ವಾನರರೂಪದೊ |
ಳಾವಿರ್ಭವಿಸಿರ್ಪುದವನಿಯೊಳ್ದನುಜೇಶಾ || ೧೧ ||

ಕೊಲದುಳಿಯಂ ರಾಮಂ ಮ |
ತ್ಕುಲಮಂ ನೀನಾತನೊಡನೆ ಸೆಣಸದೆ ಸೀತಾ ||
ಲಲನೆಯನೊಪ್ಪಿಸಿ ಸಂತಸ |
ದಳೆದಿರ್ಪುದುಮೆಂದೊಡೆಂದನಸುರವರೇಣ್ಯಂ || ೧೨ ||

ನಿನ್ನಗ್ರಜರೆಂಬರದೇಂ |
ಪನ್ನತಿಕೆಯನುಳ್ಳ ಕಲಿಗಳೇ ನೀನವರಂ ||
ತೆನ್ನಂ ಗಣಿಪೆಯ ನಡೆನಡೆ |
ಬಿನ್ನಣಮಂ ಕೇಳೆನೆಂದನಾ ದಶಕಂಠಂ || ೧೩ ||

ಪೆಸರಂ ಕೊಳಲಂಜಿ ಸುರ |
ಪ್ರಸರಂ ಮದ್ದ್ವಾರದಲ್ಲಿ ಕಾದಿರ್ಪುದಣಂ ||
ಶಶಿಧರಕಮಲಜಮುಖ್ಯರ್ |
ವಶರಾಗಿರೆ ಮುದುಪನೆನಗೆ ನೀನೇನೆಂಬಯ್ || ೧೪ ||

ಕರಿಕಲಭಕೆ ಬೆದರುಗುಮೇ |
ಹರಿಶಾಬಂ ಘೋರಸಮರಕಳ್ಕುವನೇನಯ್ ||
ನರವಾನರರಂ ಯಮಮುಂ |
ದಿರಕಟ್ಟುವುದೇನಸಾಧ್ಯಮೆನಗೆಲೆ ವೃದ್ಧಾ || ೧೫ ||

ಇನ್ನೇನಂ ಬಗುಳದೆ ನಡೆ |
ನಿನ್ನಯೆ ನೆಲೆಗೆಂದು ಕೋಪಿಸುತೆ ನುಡಿಯಲ್ಕಂ ||
ಮುನ್ನಿನ ಗುಣಮಿಲ್ಲಂ ತ್ರಿಜ |
ಗನ್ನಿಲಯಂ ಕೊಲ್ವನಿವನನೆಂದುಂ ಪೋದಂ || ೧೬ ||

ಬಲಮೆಯ್ತರೆ ದನುಜೇಂದ್ರಂ |
ಕೆಲಬಲಮಂ ನೋಡಿ ಸಾಹಸಿಗಳಂ ಕರೆದುಂ ||
ಅಲಸದೆ ನಗರದ್ವಾರಂ |
ಗಳನುರೆ ಕಾದಿರ್ಪುದೆನುತೆ ನೇಮಮನಿತ್ತಂ || ೧೭ ||

ಸುರಪದಿಶೆಯೊಳ್ ಪ್ರಹಸ್ತಂ |
ತರಣಿಕುಮಾರಕನ ದಿಶೆಗೆ ಸುಮಹಾಪಾರ್ಶ್ವಂ ||
ವರುಣಾಶೆಗೆ ಸುರಪಜಿದು |
ತ್ತರದ ಮಹಾದ್ವಾರಕೈದೆ ಸಾರಣದನುಜಂ || ೧೮ ||

ಕರಿತುರಗಸ್ಯಂದನಪದ |
ಚರಕುಲಮಂ ಕೂಡಿ ನಡೆದು ವೀರಾರ್ಭಟೆಯಿಂ ||
ದರಿಬಲಮಂ ಲೆಕ್ಕಿಸದುರು |
ತರಜಾಗ್ರತರಾಗುತಿರ್ದರವರಾಯೆಡೆಯೊಳ್ || ೧೯ ||

ಬಳಸಿದ ಕೋಂಟೆಯ ಸುತ್ತಲ್ |
ಬಳಯುತರಾದಖಿಳದೈತ್ಯರಂ ಬೇಗದೊಳಂ ||
ನಿಲಿಸುತೆ ಬಡಗಲ ಗೋಪುರ |
ಕಲಸದೆ ನಡೆತಂದು ನಿಂದನಾ ದಶಕಂಠಂ || ೨೦ ||

ಚೊಕ್ಕಳಿಕೆಯ ಕೊಡೆಸಾಸಿರ |
ದಿಕ್ಕೆಲದಸುರರ ಸಮೂಹದರ್ಯಮರುಚಿಯಿಂ ||
ಲೆಕ್ಕಿಸದುರು ಮಣಿಮುಕುಟದ |
ರಕ್ಕಸರಧಿನಾಥನೊಪ್ಪೆ ಕಂಡಂ ರಾಮಂ || ೨೧ ||

ಇವನಾರತಿವಿಭವದೊಳೊ |
ಪ್ಪುವನೆನುತೆ ವಿಭೀಷಣಾಸುರೇಶನೊಳಂ ರಾ ||

ಘವದೇವಂ ಕೇಳಲ್ಕಂ ।
ವಿವರಿಸಿದಂ ವಿನಯದಿಂದಮಾ ಸರಮೇಶಂ ॥ ೨೨ ॥

ಈತನೆ ದಶಕಂಠಂ ಪುರು ।
ಹೂತಾದ್ಯರ್ ಸೇವಿಸುತ್ತುಮಿರ್ಪ್ಪರ್ ನಿರತಂ ॥
ಈತನ ಬಲಮಂ ಗಣಿಪೊಡೆ ।
ಪಾತಾಳಾಧೀಶನಿಂದೆ ತೀರದದೆಂದಂ ॥ ೨೩ ॥

ಎನಲನುಜನ ಕಯ್ಯಿಂದಂ ।
ಧನುವಂ ಕಯ್ಕೊಂಡು ದಿವ್ಯಮಾರ್ಗಣಮೊಂದಂ ॥
ಅನುವಿಂ ತುಡಿಸಿ ದಶಾಸ್ಯನ ।
ಸನಿಹಕೆ ನಸುನಗುತೆ ಕಳಿಪಿದಂ ರಘುವೀರಂ ॥ ೨೪ ॥

ಆ ವಿಶಿಖಮೈದೆ ಭರದಿಂ ।
ರಾವಣನಿರ್ಕ್ಕೆಲದೊಳಿರ್ದ್ದ ಭಾಸಿಪ ಸಿತಛ ॥
ತ್ರಾವಳಿಯಂ ಕಡಿದಿಡೆ ಸು ।
ಗ್ರೀವಂ ಪವಮಾನವೇಗದಿಂ ಪೋದನಣಂ ॥ ೨೫ ॥

ಅಸುರೇಂದ್ರನ ಮಣಿಮೌಳೀ ।
ದಶಕಮನುರೆ ಕಿಳ್ತು ಖಳನನೊದೆದುಂ ಭರದಿಂ ॥
ವಿಶಿಖಂಬೆರಸುಂ ಬಂದುಂ ।
ಬಿಸಜಾಂಬಕನಿದಿರೊಳಿರಿಸಿದಂ ಮಕುಟಗಳಂ ॥ ೨೬ ॥

ಏನಯ್ ವಾನರನಾಯಕ ।
ನೀನೊರ್ವ್ವನೆ ಪೋಗೆವರ್ಪ್ಪುದೇನರಿಬಲಕಿಂ ॥
ದಾನೆಸಗಿದ ಪುಣ್ಯಂ ಮರ ।
ಳ್ದೀ ನೆಲಕೆಳ್ತಂದುದೆಂದು ಪೇಳ್ದಂ ರಘುಜಂ ॥ ೨೭ ॥

ಬರಸೆಳೆದಾಲಿಂಗಿಸಿ ನಿ ।
ನ್ನುರು ಸಾಹಸಕೆಣೆಯದಾವುದೆನುತಿರೆ ಅತ್ತಲ್ ॥
ಬೆರಗಾಗುತ್ತಂ ದಶಕಂ ।
ಧರನಂತಃಪುರಮನೆಯ್ದಿದಂ ಬೇಗದೊಳಂ ॥ ೨೮ ॥

ದೇವ ನಿರೂಪಂಗುಡು ದನು ।
ಜಾವಳಿಯಂ ನಿಮಿಷದಲ್ಲಿ ಸದೆದುಂ ಪುರಮಂ ॥
ಪಾವಕಗಿತ್ತಪೆಮೆಂದೆನು ।
ತಾ ವಾನರರೆಂದೊಡಿನಜಗೆಂದಂ ರಾಮಂ ॥ ೨೯ ॥

ಸಂಧಿಗೆ ಕಳಿಪುವುದಾ ದಶ |
ಕಂಧರನೆಡೆಗಿಂದು ಸುಜ್ಞನಂ ಸಾಮದೊಳಂ ||
ಬಂದಪನೋ ಬಾರನೊ ಮನ |
ದಂದಮದೇನೆಂದು ತಿಳಿವುದೆಂದಂ ರಾಮಂ || ೩೦ ||

ಸುರಪನ ಮುಮ್ಮಂ ಬಲಯುತ |
ನುರುಕುಶಲಿ ಸಮರ್ಥನಾಹವದೊಳಂ ದಶಕಂ ||
ಧರನೆಡೆಗೆಯ್ದಿ ನಿರೂಪಮ |
ನುರುಭರದಿಂದೀವುದೆಂದನಾ ರವಿಜಾತಂ || ೩೧ ||

ಇಂತೆನೆ ಕೇಳುತ್ತಂ ಕಡು |
ಸಂತಸದಿಂ ಕರೆದು ವಾಲಿಸುತನಂ ಲಂಕಾ ||
ಕಾಂತನ ಸನ್ನಿಧಿಗಂ ನಡೆ |
ದಂತಸ್ಸ್ಥಮನರಿದು ಬರ್ಪ್ಪುದೆಂದಂ ರಾಮಂ || ೩೨ ||

ಅಂಗದನತಿವೇಗಂ ರಘು |
ಪುಂಗವನಡಿಗೆರಗಿ ರವಿಜನಂ ಬೀಳ್ಕೊಂಡು ||
ತ್ತುಂಗಧರಾಧರಮೊಂದನ |
ಡಂಗಿಸಿ ಕೌಂಕುಳೊಳೆ ಪಾರ್ದ್ದನಾಗಸಕಾಗಳ್ || ೩೩ ||

ಸರಭಸಮುಂ ನಡೆತಂದಾ |
ಪುರಕಿಳಿದಂ ಗಗನದಿಂದೆ ಗರುಡನ ಪರಿಯೊಳ್ ||
ಹರಿಸುತೆ ದೈತ್ಯಾವಳಿಯಂ |
ಕರಹತಿಯಿಂ ಜವನ ಪುರಕೆ ಕಳಿಪಿದನಾಗಳ್ || ೩೪ ||

ಸುಖದಿಂ ಮರಳ್ದಂ ಪವನನ |
ಸುಕುಮಾರಂ ಕೆಟ್ಟೆಮಕಟ ಹಾಹಾ ಎನುತುಂ ||
ಶಿಖಿಯಂ ನಂದಿಸುತುಂ ದಶ |
ಮುಖನಂ ಬಯ್ವುತ್ತುಮಿರ್ದ್ದುದಾ ನಗರಜನಂ || ೩೫ ||

ಶಿಶುವೃದ್ಧಬಾಲೆಯರ್ ದುಃ |
ಖಿಸುತುಂ ಕೂಗಿಡುವ ದನಿಯನುರೆ ಕೇಳುತ್ತಂ ||
ದಶಶಿರನೋಲಗಗೊಟ್ಟೇ |
ಕ್ಷಿಸೆಯಂಗದನನಿಲವೇಗದಿಂದೆಳ್ತಂದಂ || ೩೬ ||

ಅವನಂ ಕಾಣುತೆ ರಾಕ್ಷಸ |
ನಿವಹಂ ಗರಸೊಂಕಿದಂತೆ ಮೆಯ್ಮರೆದುದು ಸಂ ||

ಭವಿಸಿತು ದಶಶಿರಗಂ ಭಯ |
ಮವಲೋಕನಮಾತ್ರದಿಂದೆ ಮನದೊಳಗಾಗಳ್ || ೩೭ ||

ವಾಲಾಸನಮಂ ಗೆಯ್ದು ನಿ |
ರಾಲಸ್ಯಂ ಸಭೆಯೊಳಿಳಿದು ಸುಮ್ಮಾನದೊಳಂ ||
ವಾಲಿಜನಿರೆಯಿರೆ ರಾಕ್ಷಸ |
ಮೌಲಿಯ ಸಚಿವಂ ಪ್ರಹಸ್ತನೊಯ್ಯನೆ ಕೇಳ್ದಂ || ೩೮ ||

ನೀನಾರವನೆಮ್ಮ ಸಭಾ |
ಸ್ಥಾನಕ್ಕೆಳ್ತಂದ ಕಜ್ಜಮಾವುದು ಪೆಸರೇಂ ||
ವಾನರ ನಿನಗಾಪ್ತರದಾ |
ರೀ ನಗರದೊಳ್ಪೈದೆ ಮಾಂಜದುಸಿರಯ್ ಭರದಿಂ || ೩೯ ||

ದುರುಳತನದಿಂದೆ ಮೊದಲೀ |
ಪುರಕಂ ಕಪಿಯೊಂದು ಬಂದು ನಿಜವಾಲಧಿಯಂ ||
ಉರಿಪಿಸಿಕೊಂಡೋಡಿದುದದ |
ನರಿಯದೆ ನೀನೇಕೆ ಬಂದೆ ರಾಜಾಲಯಕಂ || ೪೦ ||

ಜೀವಾಭಿಲಾಷೆಯುಳ್ಳವ |
ರೀ ವಸುಧೆಗೆ ಬರ್ಪ್ಪೊಡಂಜುವರ್ ನಿನಗಂ ತಾ ||
ನಾವೊಂ ಬೋಧಿಸಿ ಕಳಿಪಿದ |
ನೀ ವಿವರಮನುಸಿರ್ಗುಮೆಂದೊಡಂಗದನೆಂದಂ || ೪೧ ||

ಲೇಸಯ್ ಕೇಳ್ವೀ ವಚನವಿ |
ಲಾಸಂ ನೀಂ ಪ್ರೌಢನಲ್ತೆ ರಾಕ್ಷಸಸಭೆಗಿಂ ||
ದಾಸುರವರನಂ ನೋಳ್ಪಭಿ |
ಲಾಷೆಯೊಳೆಯ್ತಂದೆನವನನೆನಗಂ ತೋರಾ || ೪೨ ||

ಮೂರಯ್ದುನಾಲ್ಕುಪತ್ತರ |
ಮೋರೆಯರಿಲ್ಲಿರ್ಪ್ಪರಿವರೊಳವನೀಸುತೆಯಂ ||
ಚೋರತ್ವದಿಂದೆ ಯತ್ನಾ |
ಕಾರಂದಳೆದುಯ್ದು ತಂದ ರಕ್ಕಸನಾವೊಂ || ೪೩ ||

ಕೇಳಲ್ಕಾರೆಂಬೆಂ ನಿ |
ನ್ನಾಳಿದನನುಜಾತರಪ್ಪ ಖರದೂಷಣರಂ ||
ಕಾಳನ ಪುರಕಟ್ಟಿದ ಕರು |
ಣಾಳಯನಂ ಕೇಳ್ದರುಂಟೆ ತಾನವನ ಚರಂ || ೪೪ ||

ದಶಶಿರನೆಂಬನನುರೆ ಬಂ ।
ಧಿಸಿದ ಮಹಾಶೂರನಪ್ಪ ವಾಲಿಯ ಕುವರಂ ॥
ಪೆಸರೆನಗಂಗದನೆಂಬುದು ।
ಬಿಸಜಾಕ್ಷಂ ಪೇಳೆ ಬಂದೆನೀ ಕಡೆಗೆಂದಂ ॥ ೪೫ ॥

ಕಿಡಿಸಿದೆಯಕಟ ನಿರರ್ಥಂ ।
ಪಡೆದವನಂ ಕೊಂದ ಪಾತಕಿಯ ಬಳಿಯೊಳ್ನಿ ॥
ನ್ನೊಡಲಂ ಭರಿಸುತೆ ಜಸಮಂ ।
ಕಡುಪೇಸುಕೆಯಾದುದೆಂದು ಪೇಳ್ದಂ ಸಚಿವಂ ॥ ೪೬ ॥

ಅವರೆಸಗಿದ ಕಡುಕಜ್ಜದ ।
ಪವಣಂ ನೀನರಿಯದಾದೆ ನಿನ್ನಂ ರಿಪುವಿಂ ॥
ಜವನಾಲಯಕಟ್ಟುವೊಡಾ ।
ನೆವದಿಂ ಕಳಿಪಿಪ್ಪರಿಲ್ಲಿ ಕೊಲ್ಲೆಂ ಕೇಳಾ ॥ ೪೭ ॥

ತವಪಿತನೆಮ್ಮೊಡೆಯಗೆ ಸಹ ।
ಭವನೆಂದೆನಿಸಿದ್ದನಗ್ನಿಸಾಕ್ಷಿಯೊಳಂದುಂ ॥
ಅವನನುಗಂ ನೀನಾಗಿರೆ ।
ಕುವರರ ಪಂಙ್ಕ್ತಿಯೊಳೆ ನಿಲಿಸುವಂ ನಿನ್ನನವಂ ॥ ೪೮ ॥

ಇದಕನುಮಾನಮದಿಲ್ಲಂ ।
ತ್ರಿದಶಾರಿಯ ಸರ್ವಲೋಕವಿನುತನ ಸಂಪ ॥
ತ್ಸದನನ ರಾಕ್ಷಸರಾಜನ ।
ಪದಮಂ ಮರೆವೊಕ್ಕು ಬದುಕಿಕೊಳ್ವುದೆ ಸಾಜಂ ॥ ೪೯ ॥

ನಿನ್ನೊಡೆಯನುಳಿದ ಕಾಲ ।
ಕ್ಕೆನ್ನೊಡಲಂ ಪೊರೆವೆನಿಲ್ಲಿಗೆಳ್ತಂದುಂ ನೀ ॥
ನಿನ್ನಾದೊಡಮವನಿಜೆಯುಂ ।
ಚೆನ್ನನೆ ಕಳ್ದುಯ್ದ ಕಳ್ಳನಂ ತೋರೆಂದಂ ॥ ೫೦ ॥

ಸೀತಾನಾಯಕನಾಡಿದ ।
ಮಾತಂ ನಿಮ್ಮಾತಗೊರೆದು ಪೋಪೆನೆನುತ್ತಂ ॥
ನೀತಿಯೊಳಂಗದನೆಂದೊಡ ।
ಭೀತಿಯೊಳಂದಾ ಪ್ರಹಸ್ತನಿಂತೆಂದನಣಂ ॥ ೫೧ ॥

ಈತನಲಾ ಭುವನತ್ರಯ ।
ನಾಥಂ ನೀನೆನ್ನೊಳಾಡಿದಂತಾಡದೆ ನಿ ॥

ನ್ನಾತಗಳೊರೆದುಂ ಕಲಿಸಿದ |
ಮಾತಂ ಬಿನ್ನವಿಸಿ ಪೋಪುದೆಂದಂ ಸಚಿವಂ || ೫೨ ||

ಎನೆ ಗಹಗಹಿಸುತ್ತುಂ ರಾ |
ವಣನಂ ತವೆನೋಡುತಂಗದಂ ತಾನೆಂದಂ ||
ದನುಜಾಧಮ ನೀನೇಂ ಧರೆ |
ಯಣುಗಿಯನುರೆ ಚೋರನಂತೆ ಕಳ್ದುಯ್ದ ಖಳಂ || ೫೩ ||

ನೀನೆಸಗಿದ ಪಾಪದ ಪಂ |
ಥಾನಮನಾರಯ್ ನಿರೀಕ್ಷಿಪರ್ ಸನ್ಮುನಿಸಂ ||
ತಾನದೊಳುದಯಿಸಿ ಪೆರಬರ |
ಮಾನಿನಿಯೊಳ್ ಮನಮನಿಟ್ಟು ನೀಗಿದೆ ತನುವಂ || ೫೪ ||

ನಿನಗಂ ಸೋಲ್ದಪಳೇಂ ಮೇ |
ದಿನಿಸುತೆಯುಂ ನೋಡೆ ಲಕ್ಷ್ಮಿಯಲ್ಲಮೆ ರಾಮಂ ||
ವನಜದಳಾಕ್ಷಂ ವಾನರ |
ರನಿಮಿಷರೆಂದರಿದು ಸಂಧಿಗೆಳಸಯ್ ಮನಮಂ || ೫೫ ||

ಮಾಡದ ಕೃತ್ಯಗಳಂ ನೀಂ |
ಮಾಡಿದುದಾಯ್ತಾದೊಡಿಂದು ರಾಮನ ಬಳಿಯೊಳ್ ||
ಗಾಡದಿನೆಳ್ತಂದುಂ ಕೃಪೆ |
ಮಾಡೆನೆ ತಲೆಗಾವನಾತನೆಲೆ ದಶಕಂಠಾ || ೫೬ ||

ನಿನ್ನನುಜಾತಂ ನಡೆತರೆ |
ಮನ್ನಿಸದೇಗೆಯ್ದನಾತನತಿಕರುಣೆಯಲಾ ||
ಭಿನ್ನಮನಿನ್ನಾಲೋಚಿಸ |
ದೆನ್ನೊಡನೆಳ್ತಂದೊಡಧಿಕಸುಖಮಪ್ಪುದಲಾ || ೫೭ ||

ಹರನ ದಯೆಯಿಂದೆ ದನುಜ |
ಗುರುಸತ್ವಮದಿಪ್ಪುದೆಂದು ಗರ್ವಂದಳೆದುಂ ||
ಮರೆದಿರ್ಪೆ ಮನಮನಾ ರಘು |
ವರನ ಮಹಾಶರಕೆ ತನುವನೊಡ್ಡುವರುಂಟೇ || ೫೮ ||

ಸಾಮದೊಳೆಯ್ತಂದೊಡೆ ರಘು |
ರಾಮಂ ತಲೆಗಾವನಲ್ಲದಿರ್ದೊಡೆ ನೀಂ ಸಂ ||
ಗ್ರಾಮಕೆ ಬರವೇಳ್ಕೆಂದುಂ |
ನೇಮಿಸಿ ಕಳಿಪಿರ್ಪನೆನ್ನನಿಲ್ಲಿಗೆ ಜವದಿಂ || ೫೯ ||

ಆತನ ವಿಮಲಾಂಘ್ರಿಸರೋ |
ಜಾತಮನುರೆ ನಂಬಿ ಕೆಟ್ಟವರನಾಂ ಕಾಣೆಂ ||
ಕಾತಿಯಿನುಳಿದಹಿತರ್ ಜಗ |
ತೀತಳದೊಳಗೊರ್ವರಿಲ್ಲಮೆಲೆ ದಶಕಂಠಾ || ೬೦ ||

ಇದರೊಳಗೇವುದು ತವಮತ |
ಮದನೊರೆದೊಡೆ ಪೋಗಿ ಪೇಳ್ವೆನಾಳ್ದಗೆನುತ್ತಂ ||
ಸದಮಲವಾಲಿಜನಾಡ |
ಲ್ಕಧಿಕಕ್ರೋಧಾಸ್ಯನಾಗಿ ದಶಗಳನೆಂದಂ || ೬೧ ||

ಕಪಿಯೆನಗೆ ನೀತಿಯಂ ಪೇ |
ಳ್ವಪುದಾದುದೆ ಕುಯ್ಯುದಿದರ ನಾಲಗೆಯನುಮೆಂ ||
ದಪರಿಮಿತಾಸುರಸುಭಟರ |
ಲಪಸಗಳಂ ನೋಡೆ ಕವಿದರಾ ವಾಲಿಜನಂ || ೬೨ ||

ಕಡಿ ತಿವಿ ಪೊಯ್ ಕೊಲ್ಲೆನುತು |
ಗ್ಗಡಿಸಿ ಮುಸುಂಕಲ್ಕೆ ವಾಲಜಂ ಕೋಪದೊಳಂ ||
ಪಿಡಿದೆಳೆದಾ ದಶಗಳನಂ |
ಮುಡದಿಂದೊದೆದಸುರನಿಕರಮಂ ಸದೆಬಡಿದಂ || ೬೩ ||

ಖೋ ಎಂದಾರ್ಬಟಿಸುತೆ ದಳ |
ನಾಯಕರಿದಿರಾಂತು ಸಮರಭರದೊಳ್ ನಾನಾ ||
ಸಾಯಕಶಸ್ತ್ರಗಳಿಂ ಕಪಿ |
ನಾಯಕವರಸುತನನೈದೆ ತರುಬಿದರಾಗಳ್ || ೬೪ ||

ಗಣಿಸದೆ ಮನದೊಳ್ ಸುರಪಜ |
ನಣುಗಂ ನಿಮಿಷಾರ್ಧದಲ್ಲಿ ಯಮಮಂದಿರಕಂ ||
ಕುಣಪಾಶಿಗಳಂ ತೆರಳಿಸ |
ಲೆಣಿಸುವೊಡಹಿನಾಥಗರಿದು ಮೃತರಾದವರಂ || ೬೫ ||

ಕರಿತುರಗವರೂಥಂಗಳ |
ನೆರವಿಯನುರೆ ಪಿಡಿದು ಬಡಿದು ನಭಕಿಡೆಯದು ವಾ ||
ನರಬಲದೆಡೆಯೊಳ್ ಬಿಳ್ವುದು |
ಸುರದಾನವಯುದ್ಧಮಾಯ್ತು ಗಗನದೊಳೆಂಬೊಲ್ || ೬೬ ||

ಪಸದ್ಭುತಮಿದು ವಾಲಿಯ |
ಸೂನುವನೇತರ್ಕ್ಕೆ ಕಳಿಪಿದೆಂ ದೈತ್ಯನ ಸಂ ||

ಧಾನಂ ಮುರಿದುದಲಾ ಪವ |
ಮಾನಾತ್ಮಜ ಪೋಗು ಶೀಘ್ರಮೆಂದಂ ರಾಮಂ || ೬೭ ||

ಎನೆ ನೆಗೆದಂಬರಮಾರ್ಗದೊ |
ಳನಿಲಸುತಂ ಪೋಗುತಿರ್ದ್ದ ಸಮಯದೊಳತ್ತಲ್ ||
ದನುಜರನರಿದಮರೇಂದ್ರನ |
ತನುಜನ ಸುಕುಮಾರನೈದೆ ಒರುತಿರ್ದ್ದನಣಂ || ೬೮ ||

ಅವನಂ ಕಾಣುತೆ ಮುದದಿಂ |
ಪವನಸುತಂ ಸಮರವಿಜಯದಿರಮಂ ಕೇಳ್ದಂ ||
ಜವದಿಂದಿರ್ವ್ವರ್ ನಡೆತಂ |
ದವನೀಶನ ಪಾದಕೆರಗಿ ನಿಂದರ್ನಲವಿಂ || ೬೯ ||

ಬಂದೆಯ ಯುವರಾಜನೆ ದಶ |
ಕಂಧರನೊಳ್ ಸಮರಮಾಯ್ತೆ ಮೂರ್ಖನ ಪೊರೆಯೊಳ್ ||
ಸಂಧಾನಂ ಸಮನಿಸುಮೇ |
ನೊಂದೆಯಲಾ ಎನುತೆ ರಾಮನಪ್ಪಿದನವನಂ || ೭೦ ||

ದೇವರ ದಯೆಯಿರಲೆನಗಾ |
ರಾವಣನೇಂ ಗಣ್ಯನೆನ್ನೆನೆನುತಂಗದನುಂ ||
ಆ ವಿವರಮನೊರೆಯಲ್ ರಾ |
ಜೀವಾಂಬಕನಿನಕುಮಾರಕನನೀಕ್ಷಿಸಿದಂ || ೭೧ ||

ಸ್ವಾಮಿ ನಿರೂಪಿಸೆ ಲಂಕಾ |
ನಾಮಾಂಕಿತಪುರಮನೈದೆ ನಿಮಿಷದೊಳಂ ನಿ ||
ರ್ಧೂಮಂಗೆಯ್ವಪೆನೆಂದುಂ |
ತಾಮರಸಾಂಬಕಗೆ ಪೇಳ್ದನಾ ರವಿಜಾತಂ || ೭೨ ||

ಇದರೊಳವಿಂ ಸಂದೆಗಗೆ |
ಯ್ಯದೆ ಪುರಮಂ ಸೂರೆಗೊಳ್ವುದೆನೆ ರವಿಜಂ ತಾಂ ||
ಪದುಮಾಕ್ಷನ ನೇಮದೆ ವರ |
ಕದನಕ್ಕನುವಾದುದಂದು ಕಪಿಸಂದೋಹಂ || ೭೩ ||

ನಲಕುಮುದಗಂಧಮಾದನ |
ಕಲಿಕೇಸರಿಶರಭವೃಷಭಜಾಂಬವಗವಯಾ ||
ನಲಸುತಸುಷೇಣರುಮಶತ |
ಬಲಿಪನಸರುಮಣ್ವಕಾದಿ ಕಪಿಗಳ್ ನಡೆದರ್ || ೭೪ ||

ತಂತಮಗೆ ಸೂರ್ಯಸುತಹನು |
ಮಂತಾಂಗದಮುಖ್ಯರಂದು ವೃಕ್ಷಾದಿಗಳಂ ||
ಆಂತಾರ್ಭಟಿಸುತೆ ಲಂಕಾ |
ಪಂಥಾನಮನ್ನೈದೆ ಬಂಧಿಸಿದರೆಣ್ದೆಸೆಯೊಳ್ || ೭೫ ||

ರಾಘವಲಕ್ಷ್ಮಣರುತ್ತರ |
ಭಾಗದೊಳಂ ರಾವಣಾನುಜಾತಂಬೆರಸುಂ ||
ಬೇಗದೆ ಶರಚಾಪಾನ್ವಿತ |
ರಾಗಿ ಮಹಾಪುರಮನೀಕ್ಷಿಸುತುಮಿರ್ದರಣಂ || ೭೬ ||

ಅಗಳಂ ಮುಚ್ಚಿದರಾಕ್ಷಣ |
ಮಗಣಿತಗಿರಿತರುಗಳಿಂದೆ ವಾನರವೀರರ್ ||
ನೆಗೆದಾ ಕೋಂಟೆಯ ಬಂತಿಯ |
ನಗುಳ್ದರ್ ಪುಲಿವೊಗದ ಕೊತ್ತಳಂಗಳನಾಗಳ್ || ೭೭ ||

ಉರಿವೆಣ್ಣೆಮಣಲ ಸುಣ್ಣದ |
ಪರವಿಗಳಂ ಕರಗಿಸಿರ್ದ ಸೀಸದ ರಸಮಂ ||
ಭರದಿಂ ಚೆಲ್ಲುವ ದೈತ್ಯರ |
ನೆರವಿಯನುರುಮುಷ್ಟಿಯಿಂದೆ ತಿವಿತಿವಿದಿಟ್ಟರ್ || ೭೮ ||

ದ್ವಾರಗಳಂ ಮುರಿದುಂ ರಣ |
ಶೂರರ್ಕಳ್ ಪೊಕ್ಕು ಸದೆದು ದೈತ್ಯಾವಳಿಯಂ ||
ಘೋರಾರ್ಭಟಿಗೆಯ್ದುಂ ಪ್ರಾ |
ಕಾರಗಳಂ ಕೆಡೆಪಿ ಕೊಂದರಡಪಾಯ್ದಳಮಂ || ೭೯ ||

ಎಲ್ಲೆಡೆಯೊಳ್ ಕಪಿವರ್ಗದ |
ಗಲ್ಲಣೆ ಬಿರುಸಾಗೆ ಕೇಳ್ದು ರಾಕ್ಷಸನಾಥಂ ||
ತಲ್ಲಣಿಸುತೆ ನಿಜಸೇನಾ |
ವಲ್ಲಭರಂ ಬೇಗದಿಂದೆ ಪೋದಪುದೆಂದಂ || ೮೦ ||

ತುರಗಸ್ಯಂದನಕುಕ್ಕುರ |
ಕರಿಖರಶಾರ್ದೂಲಕಾಸರೋಷ್ಟ್ರಾದಿಗಳಂ ||
ಭರದಿಂದೇರ್ದರ್ ರಜನೀ |
ಚರರಾರ್ಭಟಿಸುತ್ತೆ ಬಂದರತಿರೋಷದೊಳಂ || ೮೧ ||

ಘೋರಾಕಾರದ ರಾಕ್ಷಸ |
ವೀರರ್ ಮುಂದಳೆದು ತೇಜಿತ್ತೇಶಾನೆಗಳಂ ||

ಘೋರೆನೆ ನಡೆಯಿಸುತೆ ಶರಾ |
ಸಾರಮಸ್ಸುರೆ ಕರೆದು ತೂಳ್ದರಾ ಹರಿಬಲಮಂ || ೮೨ ||

ಪೊಕ್ಕಿರಿದರ್ ಕಾಲಾಳ್ಗಳ್ |
ಕಿಕ್ಕಿರಿದುಂ ಶೂಲಖಡ್ಗಕುಂತಾವಳಿಯಂ ||
ರಕ್ಕಸರಾಹವದಿಂ ಕ |
ಣ್ಣಿಕ್ಕುವೊಡಸದಳಮದಾಯ್ತು ವಾನರಬಲದೊಳ್ || ೮೩ ||

ಕುಂಭನಿಕುಂಭನರಾಂತಕ |
ಜಂಭಾಹಿತಶತ್ರುಮುಖ್ಯದಾನವರುಂ ಕೂ ||
ರಂಬಿನ ಮಳೆಯಂ ಕರೆವುತೆ |
ಮುಂಬರಿದೆಳ್ತಂದು ಕೆಡೆಪಿದರ್ ಕಪಿಬಲಮಂ || ೮೪ ||

ಶರಭವೃಷಭಶತಬಲಿಕೇ |
ಸರಿಗವಯಗವಾಕ್ಷಗಂಧಮಾದನಮುಖ್ಯರ್ ||
ಗಿರಿತರುಗಳಿಂದೆ ಗಜರಥ |
ತುರಗಾರೋಹಕರ ಪೆಸರನಂದಳಿಯಿಸಿದರ್ || ೮೫ ||

ಪೊಳ್ಗೆಯ್ದರ್ ಕರಿಘಟೆಯಂ |
ಸೀಳ್ಗೆಯ್ದರ್ ವಾಜಿಕುಳಮನರಿದರ್ ಖಳರಂ ||
ಕೋಲ್ಗರೆವಸುರರ ತೇರ್ಗ್ಗಳ |
ಸಾಲ್ಗಳನುರೆ ಮುರಿದು ಸೂತಕುಲಮಂ ಕೊಂದರ್ || ೮೬ ||

ಒಂದೆಸೆಯೊಳ್ ಮಾರುತಿಯಿ |
ನ್ನೊಂದೆಸೆಯೊಳ್ ಸೂರಜಾಂಗದಾದಿಪ್ರಮುಖರ್ ||
ಸಿಂಧುರಗಳನುರೆ ಪಿಡಿದದ |
ರಿಂದಂ ಸಲೆ ಸದೆದರಂದು ದನುಜಾವಳಿಯಂ || ೮೭ ||

ಸೌಮಿತ್ರಿಯೊಂದು ಕಡೆಯೊಳ್ |
ಭೀಮಧ್ವನಿಗೆಯ್ದು ನಿಶಿತಶರಗಳನಿಸುತಂ ||
ತಾಮಸದಾನವರಂ ಯಮ |
ಧಾಮಕ್ಕಂ ಕಳಿಪುತಿರ್ದ್ದನದನೇವೇಳ್ವೆಂ || ೮೮ ||

ಕಡುಗಿನಿಸಿಂದೂ ರಘುಜಂ |
ಪಿಡಿದು ಮಹಾಧನುವನ್ನೆದೆ ಟಂಕೃತಿಗೆಯ್ಯ ||
ಲ್ಕೊಡೆದುದು ಕಮಲಭವಾಂಡಂ |
ಕಡಲುಕ್ಕಿತು ನಡುಗಿತಸುರವಾಹಿನಿಯಾಗಳ್ || ೮೯ ||

ಮುಸಗಿ ಮಹಾವಾನರರಾ |
ಕ್ಷಸರುಂ ಕಯ್ಗಲಸಿ ಪೊಣರ್ದರತ್ಯಂತೋತ್ಸಾ ||
ಹಸದಿಂದೋರೊರ್ವರ್ ಕಂ |
ಪಿಸಿತವನೀತಳಮುಮೋಘವೀರಸ್ವನದಿಂ || ೯೦ ||

ನಳಿನಸಖಂ ಕಂಡಂಜುತೆ |
ಜಳನಿಧಿಯಂ ಸಾರ್ದನಿತ್ತಲಸುರರ್ಗಂ ಬೆಂ ||
ಬಲವಾಗಲ್ ಬಂದುದೊ ಕ |
ಳ್ತಲೆಯೆನೆ ಕವಿದತ್ತು ಪೆರ್ಚ್ಚಿತಸುರರ ಸತ್ತ್ವಂ || ೯೧ ||

ಅಂಗದಗಂ ರಾವಣಿಯೊಳ್ |
ಸಂಗರಮನಿಲಜಗೆ ಜಂಬುಮಾಲಿಯೊಳಂ ನೀ ||
ಲಂಗೆ ನಿಕುಂಭನೊಳಂ ಕಪಿ |
ಪುಂಗವಗಾಯ್ತಾ ಪ್ರಹಸ್ತಸಚಿವೇಂದ್ರನೊಳಂ || ೯೨ ||

ನಳಗಂ ವಿದ್ಯುನ್ಮಾಲಿಯೊ |
ಳಲಸದೆ ಲಕ್ಷ್ಮಣಗೆ ಖಳವಿರೂಪಾಕ್ಷನೊಳಂ ||
ಕಲಿಸರಮಾರಮಣಗೆ ಕೊಳು |
ಗುಳವಾದುದು ತೀವ್ರವಾಗೆ ಮಿತ್ರಘ್ನನೊಳಂ || ೯೩ ||

ಒರ್ವೊರ್ವರ್ಗಾದುದು ಪೊಣ |
ರುರ್ವಿಯೊಳಂ ಪೊಸತಿದೆಂಬ ಪರಿಯೊಳ್ ಸ್ವಮಹಾ ||
ಗರ್ವದೊಳಾರ್ಬಟಿಸುತ್ತಿರೆ |
ಪರ್ವತವೃಕ್ಷಾಸ್ತ್ರಶಸ್ತ್ರಚಯದಿಂದಾಗಳ್ || ೯೪ ||

ಬಾಡದೆ ಬಸವಳಿಯದೆ ಮುರು |
ಮೋಡಿಗಳಿನಿತಿಲ್ಲದಸುರವಾನರರಾಗಳ್ ||
ಖಾಡಾಖಾಡಿಯನೆಸಗಿದ |
ರಾಡಲದೇನಮಮ ಸಮರಸಾಹಸದಿರವಂ || ೯೫ ||

ಮೈಂದದ್ವಿವಿದಕಪೀಶರೊ |
ಳಂದಳಿದರ್ ವಜ್ರಮುಷ್ಟಿತಪನಾಸುರರುಂ ||
ಕೊಂದಂ ವಿಭೀಷಣಂ ಗದೆ |
ಯಿಂದಂ ಮಿತ್ರಘ್ನನೆಂಬ ದೈತ್ಯಾಗ್ರಣಿಯಂ || ೯೬ ||

ರಾಮಂ ನೆರೆ ಜವದಿಂದೈಂ |
ದ್ರಾವೋಘಾಸ್ತ್ರದಿನೆ ಯಜ್ಞಕೋಪಾದಿ ಮಹಾ ||

ತಾಮಸಿಪಂಚಕಮಂ ನಿ |
ರ್ನಾಮಂಗೆಯ್ದಂ ದಿವೌಕಸರ್ ನಲಿದಾಡಲ್ || ೯೭ ||

ಅಸುರರ ತಲೆಗಳ್ ನೆಗೆದಾ |
ಗಸಕಂ ಚಿಗಿಚಿಗಿದು ಪಾರ್ದ್ದು ಬಿಳ್ದವು ನೆಲಕಂ ||
ದೆಸಗಿದ ಸುಕೃತಂ ತೀರಲ್ |
ವಸುಮತಿಗಂ ಪತನಮಪ್ಪುದುಡುಗಣಮೆಂಬೊಲ್ || ೯೮ ||

ಘನನಾದಂ ಕಾಣುತೆ ನಿಜ |
ತನುವಂ ಮರೆಗೆಯ್ದು ನಿಂದು ಗಗನಾಂತರದೊಳ್ ||
ಅನುವಿಂ ಮಾಯಾಕಲೆಯಂ |
ನೆನೆದುಂ ಕಯ್ಕೊಂಡನಂದು ಕಾರ್ಗಳ್ತಲೆಯೊಳ್ || ೯೯ ||

ನಾನಾವಿಧಾಸ್ತ್ರನಿಚಯದ |
ಸೋನೆಯನುರೆ ಕರೆದು ಘಾತಿಸಲ್ಕತಿಭಯದಿಂ ||
ವಾನರರಂಜುತಮಿರ್ದ್ದರ್ |
ಮಾನವಪತಿ ನೋಡುತಿರ್ದ್ದನಾಶ್ಚರ್ಯದೊಳಂ || ೧೦೦ ||

ಇವನಸುರಾಧೀಶನತನು |
ಭವನಾಗಸದಲ್ಲಿ ಮಾಯೆಯಿಂದಸ್ತ್ರಗಳಿಂ ||
ಕವಿವೃತುಮಿರ್ಪ್ಪನೆನುತ್ತಂ |
ಬುವಿಯೊಡೆಯಗೆ ಪೇಳ್ದನಾ ವಿಭೀಷಣನಾಗಳ್ || ೧೦೧ ||

ಹನುಮಂ ನೆಗೆದಂಬರಕಂ |
ಘನನಾದನ ತೇರನೈದೆ ಮುರಿದಶ್ವಗಳಂ ||
ಹನನಂಗೊಳಿಸಲ್ಕಾತಂ |
ಮನಗುಂದದೆ ಚಿಗಿದನೊಂದು ಮಾಯಾರಥಕಂ || ೧೦೨ ||

ಆ ರಥಮಂ ಮುರಿಯಲ್ಕಂ |
ಡೇರುತಮಿನ್ನೊಂದು ಮಾಯೆದೇರಂ ಬರಲುಂ ||
ಮಾರುತಿ ಮುರಿದೊಡನಂಜುತೆ |
ಪಾರಲ್ಮನದಂದನಂದು ಮೆಯ್ಗಾಣದವೊಲ್ || ೧೦೩ ||

ಗರದುರಗಾಸ್ತ್ರಮನುಗಿದುರು |
ತರತನ್ಮಂತ್ರಾಧಿದೇವತೆಯನುರೆ ನೆನೆದುಂ ||
ತಿರುವಿಗೆ ತುಡಿಸಲ್ಕಾಗಳ್ |
ಧರೆ ಕಂಪಿತವಾಯ್ತು ಕಂದಿತಮರಾನೀಕಂ || ೧೦೪ ||

ಕನಲುತೆ ಮಾಸರಲಂ ಕಿವಿ |
ಗೊನೆಗುಗಿದಾರ್ಬಟಿಸುತೆಚ್ಚೊಡಂಬತಿಭರದಿಂ ||
ಜನಿತವಿಷಾಗ್ನಿಯನುಗುಳ್ದಂ |
ಮನುಜೇಶನ ಸೇನೆಯೆಡೆಗೆ ನಡೆತಂದುದಣಂ || ೧೦೫ ||

ಬಿಸಮಂ ಕರೆದುದೊ ಮೇಘ |
ಪ್ರಸರಮದೆಂಬಂತು ವಿಶ್ವರೂಪಮನಾಂತುಂ ||
ವಿಶಿಖಂ ಬಿಗಿದುದು ಮರ್ಕಟ |
ವಿಸರಮನೇವೇಳ್ವೆನಸುರನಹಿಶರಬಲಮಂ || ೧೦೬ ||

ರವಿಜಾದಿ ಮಹಾವಾನರ |
ನಿವಹಮನರೆಗಳಿಗೆಯೊಳ್ ವಿಬಂಧಿಸಿ ಮಿಗೆ ರಾ ||
ಘವನೆಡೆಗಂ ಬರಲಂಜುತೆ |
ಪವಣಿಂ ಪಾಸುಗೆಯದಾಯ್ತು ತದ್ರಘುಜಂಗಂ || ೧೦೭ ||

ದುರುಳದಶಾಸನನಾತ್ಮಜ |
ನರಿಯಲ್ಕೇಂ ನಾಗಬಾಣಮರಿಯದೆ ಲಕ್ಷ್ಮೀ ||
ವರನನೆನಲ್ ತಾಂ ಮುನ್ನಿನ |
ಪರಿಯೊಳ್ ಪರ್ಯಂಕವಾಗೆ ಶೋಭಿಸಿತಾಗಳ್ || ೧೦೮ ||

ಅಹಿತಲ್ಪನೆಂಬುದಂ ಮಿಗೆ |
ಮಹಿಗಂ ತೋರುತ್ತಲಿರ್ಪ್ಪನೆಂಬೊಲ್ ನಿದ್ರಾ ||
ವಹನಾಗಿ ಮಲಂಗಿದನಾ |
ಮಿಹಿರಕುಲೋತ್ತಂಸನಂದು ನರಲೀಲೆಯೊಳಂ || ೧೦೯ ||

ಅಧಿನಾಥನೆಂದು ಲಕ್ಷ್ಮಣ |
ನಿದಿರೊಳ್ ಸೇವಿಸುತುಮಿರ್ದ್ದುದಾ ಸರ್ಪಾಸ್ತ್ರಂ ||
ತ್ರಿದಶಾರಿ ಬಲಮನೀಕ್ಷಿಸಿ |
ಮುದದಿಂ ನಡೆತಂದು ಪೊಕ್ಕನಂದರಮನೆಯಂ || ೧೧೦ ||

ಸುತನಂ ಮನ್ನಿಸಿ ರಾವಣ |
ನತಿಹರ್ಷದಿಂದಾಳ್ದು ಭೂಮಿಸುತೆಯಂ ಸಮರ ||
ಕ್ಷಿತಿಗಂ ಕೊಂಡುಯ್ದಂ ತ |
ತ್ಪತಿಯಿರವಂ ತೋರ್ಪ್ಪುದೆಂದನಸುರಾಂಗನೆಯೊಳ್ || ೧೧೧ ||

ದಾನವಿಯರ್ ನಡೆತಂದುಂ |
ಜಾನಕಿಗಂ ಪೇಳೆ ವಾರ್ತೆಯಂ ಶೋಕದೊಳಂ ||

ಹಾ ನಾಥ ಹಾ ರಮಣ ಹಾ ।
ಹಾ ನರವರರತ್ನ ಎನುತೆ ಮೆಯ್ಮರೆದಿರ್ದ್ದಳ್ ॥ ೧೧೨ ॥

ಮರಣಭಯಮುಂಟೆ ಮಾಯಾ ।
ವಿರಹಿತಗೆಲೆ ದೇವಿ ಭೀತಿಗೊಳದಿರೆನುತ್ತುಂ ॥
ತರಿಸಿ ವಿಮಾನಮನೇರಿಸಿ ।
ಭರದಿಂ ರಣಭೂಮಿಯೆಡೆಗೆ ಬಂದಳ್ತ್ರಿಜಟೇ ॥ ೧೧೩ ॥

ಉರಗಾಸ್ತ್ರದೊಳೊರಗಿದ ವಾ ।
ನರಬಲಮಂ ನೋಡುತ್ತೈದೆ ಬರೆವರೆ ಭೂಮೀ ॥
ಶ್ವರನಿರ್ದ್ದಂ ಫಣಿತಲ್ಪಗ ।
ಹರಿಯೊಳ್ ಕಂಡಪನಿಜಾತೆ ಕಣ್ಬನಿಗರೆದಳ್ ॥ ೧೧೪ ॥

ನಿನಗಿಂತಾದುದೆ ಶಿವಶಿವ ।
ಮೆನಗಿರ್ದ್ದ ಸುಲಕ್ಷಣಂಗಳೇನಾದುವೊ ಮೇ ॥
ದಿನಿಯೊಳ್ ಸತ್ಯಂ ಮಸುಳ್ದ ।
ತ್ತೆನುತುಂ ಪಂಬಲಿಪ ಸೀತೆಗೆಂದಳ್ ತ್ರಿಜಟೇ ॥ ೧೧೫ ॥

ವದನದ ರುಚಿಯುಂ ಜ್ವಲಿಸು ।
ತ್ತಿದೆ ನೇತ್ರಗಳುದಯಕಮಲದಂತಿವೆ ನೋಡಾ ॥
ಬೆದರದಿರಿನ್ನೀತಗೆ ಮರ ।
ಣದ ಚಿಹ್ನೆಗಳೆನಿತುಮಿಲ್ಲಮೆಂದುಂಪೇಳ್ದಳ್ ॥ ೧೧೬ ॥

ಅನಿತರೊಳೆಯ್ತಂದಂ ಮಿನು ।
ಮಿನುಗುತ್ತುಂ ಪಕ್ಷಜನಿತವರಘೋಷಗಳಿಂ ॥
ವಿನತಾತ್ಮಭವಂ ತದ್ದ ।
ರ್ಶನಮಾತ್ರದಿನಾಯ್ತು ಸರ್ಪಪಾಶವಿಮೋಕ್ಷಂ ॥ ೧೧೭ ॥

ಒಂದುಳಿಯದಂತು ಪನ್ನಗ ।
ವೃಂದಂ ನೆರೆ ನಾಶಮಾಯ್ತು ವಾನರರಾಗಳ್ ॥
ಬಂದರ್ ಜಯಜಯ ಎನುತರ ।
ವಿಂದಾಕ್ಷನ ಪೊರೆಗೆ ನೊಸಲ ಕಯ್ಗಳೊಳಾಗಳ್ ॥ ೧೧೮ ॥

ರಾಮಸುಮಿತ್ರಾತ್ಮಜರುಂ ।
ಕ್ಷೇಮಂ ಮಿಗೆ ಮುನ್ನಿನಂತು ಸೊಗಮಿರೆ ಬಳಿಕಂ ॥
ಭೂಮಿಜೆಗಂ ತೋರ್ದ್ದಸುರಾ ।
ರಾಮಕೆ ಕರೆತಂದಳಂದು ತನ್ನಾಸಿನಿಯುಂ ॥ ೧೧೯ ॥

ಧರಣಿಜೆ ಸೊಗವಿರಲಿತ್ತಲ್ |
ಸರಸಿಜನೇತ್ರಂಗೆ ಮಣಿದು ಸದ್ಭಕ್ತಿಯೊಳಂ ||
ಗರುಡಂ ಸಂಸ್ತವಗೆಯ್ದಂ |
ಕರುಣಾಕರ ಕಮಲನಾಭ ಜಯಜಯಮೆಂದುಂ || ೧೨೦ ||

ಮನುಜಾವತಾರ ಮಾಧವ |
ಮನಸಿಜಪಿತ ಮಂಗಲಾಂಗ ಮಧುಮಥನ ಮಹಾ ||
ಮುನಿವಂದಿತ ಮೃಡಸನ್ನುತ |
ಮುನಿಸೇವಿತ ಮಂಜುಭಾಷ ರಕ್ಷಿಪುದೆಂದಂ || ೧೨೧ ||

ನಿನ್ನಿಂದಾದುದು ಪುನರು |
ತ್ಪನ್ನತೆ ತಮಗೆನುತೆ ರಾಘವಂ ಖಗಪತಿಯಂ ||
ಮನ್ನಿಸಿ ಬೀಳ್ಕುಡಲಾತಂ |
ಸನ್ನುತಿಗೆಯ್ದಂದು ಪೋದನಭ್ರಾಧ್ವದೊಳಂ || ೧೨೨ ||

ಇನಜಾತಾಂಗದಜಾಂಬವ |
ಹನುಮಗದಾಪಾಣಿಮುಖ್ಯರೆಲ್ಲರ್ ಶ್ರೀರಾ ||
ಮನಚರಣಾಂಬುರುಹಕೆ ನಂ |
ದನಗೆಯ್ದುಂ ನುತಿಸಿ ನಿಂದರತಿಭಕ್ತಿಯೊಳಂ || ೧೨೩ ||

ತನ್ನನ್ವಯದವನೀಶನ |
ಪನ್ನತಿಕೆಯನ್ನೈದೆ ನೋಳ್ಪೆನೆಂದುಂ ಸೂರ್ಯಂ ||
ರನ್ನದ ತೊಡವುಗಳಂ ತೊ |
ಟ್ಟುನ್ನತಪರ್ವತಮನೇರ್ದ್ದನೆಂಬ ವೊಲೊಗೆದಂ || ೧೨೪ ||

ಆ ಸಮಯದೊಳಂ ವಸುಧಾ |
ಧೀಶನ ನೇಮದಿನೆ ದಾನವೇಂದ್ರನ ಪುರಮಂ ||
ಕೀಶಬಲಂ ಮುಳ್ತಿ ಮಹಾ |
ಘೋಷಂಗೆಯ್ಯಲ್ಕೆ ಕೇಳ್ದನಾ ದಶಕಂಠಂ || ೧೨೫ ||

ಪುನರುದ್ಭವಿಸಿದರೇಂ ಮ |
ತ್ತನುಜಾತನ ಬಾಣದಿಂದೆ ಹತರಾದೊಷಮಾ ||
ಮನುಜರ್ ವಾನರನಾಯಕ |
ರೆನುತಂ ಧೂಮ್ರಾಕ್ಷನೆಂಬ ದೈತ್ಯನೊಳೆಂದಂ || ೧೨೬ ||

ನಡೆ ಜವದಿಂದಂ ರಕ್ಕಸ |
ಪಡೆವೆರಸುಂ ನಿಮಿಷದಲ್ಲಿ ವಾನರಬಲಮಂ ||

ಕೆಡೆಪಿ ನರಾಧಮರಂ ಸದೆ |
ಬಡಿದುಂ ನೀಂ ಬರ್ಪುದೆಂದು ನೇಮಮನಿತ್ತಂ || ೧೨೭ ||

ಜೀಯ್ಯ ಪಸಾದಮೆನುತ್ತಂ |
ಕಯ್ಯಂ ಮುಗಿದೇರ್ದು ರಥಮನುರುಭರದಿಂದೆ ||
ಣ್ಮೆಯ್ಯನ ಮಾಳ್ಕೆಯೊಳಂ ಜಗ |
ದಯ್ಯನ ಸಮರಕ್ಕೆ ಬಂದನಾ ಧೂಮ್ರಾಕ್ಷಂ || ೧೨೮ ||

ವಾರಣತುರಗವರೂಥದ |
ವಾರಮನೊಡಗೊಂಡು ಸರ್ವಸನ್ನಾಹದೊಳಂ ||
ವಾರಿದನಿಸ್ವನದಿಂ ಪರಿ |
ವಾರಸಹಿತನಾಗಿ ಬಂದನುರುಕೋಪದೊಳಂ || ೧೨೯ ||

ಶರವರ್ಷಂಗರೆಯುತ್ತುರು |
ತರತೋಮರಖಡ್ಗಭಿಂಡಿವಾಳಗಳಿಂ ವಾ ||
ನರಬಲಮಂ ಸದೆವ ನಿಶಾ |
ಚರಕುಲಮಂ ಕಂಡು ಪವನಜಂ ನಡೆತಂದಂ || ೧೩೦ ||

ತೇರ್ಗಳನುರೆ ಮುರಿದುಂ ಸುಭ |
ಟರ್ಗಳನರಿದರಿದು ವಾರಣವಾಜಿಕುಳಮಂ ||
ನೀರ್ಗುಡಿಯೆ ಕಳಿಪಿದಂ ನೇ |
ಸರ್ಗುವರನ ಪುರಕೆ ವೇಗದಿಂದಾ ಹನುಮಂ || ೧೩೧ ||

ಮುಂಬರೆದುಂ ವಾನರನಿಕು |
ರುಂಬಮನೆಳ್ಚಟ್ಟಿ ಕೊಲ್ವ ಧೂಮ್ರಾಕ್ಷಕನಂ ||
ಬೆಂಬತ್ತಿ ಪಿಡಿದು ಭರದಿಂ |
ಕುಂಬಿಣಿಯೊಳ್ ಕೆಡೆಪಿ ಗುದ್ದಿ ಕೊಂದಂ ಹನುಮಂ || ೧೩೨ ||

ಸುರತತಿ ಹರಿಸದೆ ಪೂವಳೆ |
ಸುರಿದುದು ಮಾರುತಿಯ ದಿವ್ಯಮಕುಟದೊಳಂ ವಾ ||
ನರರುರ್ಬಿದರಾ ಮನುಜೇ |
ಶ್ವರನುರೆ ಕೊಂಡಾಡುತಿರ್ದನನಿಲಾತ್ಮಜನಂ || ೧೩೩ ||

ಈ ಸುದ್ದಿಯನುರೆ ಕೇಳ್ದು ಮ |
ಹಾಸುರನಾ ವಜ್ರದಂಷ್ಟ್ರಖಳನಂ ಕರೆದುಂ ||
ಕೀಶನರಾಧಮರಂ ಕೀ |
ನಾಶನ ಪುರಕಟ್ಟಿ ಬರ್ಪುದೆಂದುಂ ಪೇಳ್ದಂ || ೧೩೪ ||

ಚತುರಂಗಸೇನೆವೆರಸುಂ |
ವಿತತಮಹಾವಾದ್ಯಘೋಷಮಾಗಲ್ ಸಮರ ||
ಕ್ಷಿತಿಗೆಯ್ತಂದುಂ ವಾನರ |
ತತಿಯಂ ಮಿಗೆ ಕೊಂದನಖಿಳಶಸ್ತ್ರಾಸ್ತ್ರಗಳಿಂ || ೧೩೫ ||

ವಾನರರಾರ್ಭಟಿಸುತ್ತುಂ |
ದಾನವರಂ ಶೈಲವೃಕ್ಷನಖದಂಷ್ಟ್ರಗಳಿಂ ||
ಹಾನಿಯನೆಯ್ದಿಸಿ ನಿಮಿಷದೆ |
ಕೀನಾಶನ ನಗರಕಂದು ಕಳಿಪುತುಮಿರ್ದ್ದರ್ || ೧೩೬ ||

ತೇರೇರ್ದ್ದು ವಜ್ರದಂಷ್ಟ್ರಂ |
ಘೋರೆನೆ ಶರವೃಷ್ಟಿಗರೆದು ವಾನರಕುಲಮಂ ||
ಧಾರಿಣಿಗೊರಗಿಸುತೆಳ್ತರೆ |
ಶೂರಾಗ್ರಣಿ ವಾಲಿಸೂನು ತರುಬಿದನವನಂ || ೧೩೭ ||

ಅತಿಸತ್ವದಿಂದೆ ಖಳನಂ |
ಕ್ಷಿತಿತಳದೊಳ್ಕೆಡೆಪಿ ಕೊಂದು ನಿಮಿಷಾರ್ಧದೊಳಂ ||
ಪತಸಂಗೆಯ್ದಿದನಸುರರ |
ತತಿಯಂ ಕಡುಗಿಸಿಸಿಂದಮದನೇವೇಳ್ವೆಂ || ೧೩೮ ||

ಚರನೊರ್ವ್ವಂ ಭಯದಿಂದಂ |
ಪರಿತಂದು ನಿಶಾಚರೇಶನೊಳ್ ಪೇಳಲ್ಕಂ ||
ತರದೊಳ್ತಾಳ್ದಂ ಚಿಂತಾ |
ತುರಮಂ ತಾಂ ಪಂಙ್ತಿಕಂಠನಿರ್ದ್ದಂ ಸಭೆಯೊಳ್ || ೧೩೯ ||

ಚಿಂತೆಯಿದೇತಕೆ ಕಪಿಗಳ |
ತಿಂತಿಣಿಯಂ ಸದೆದು ಮನುಜರಂ ತವೆ ತರಿದುಂ ||
ಅಂತಕನಂ ಕಾಣ್ಬುವೆನಿಂ |
ತಾಂ ತವಕದೊಳೆಂದಕಂಪನಂ ಕಯ್ಮುಗಿದಂ || ೧೪೦ ||

ಲೇಸೆನುತಂ ಬೀಳ್ಕುಡೆ ಕೊನೆ |
ಮೀಸೆಗಳಂ ತಿರ್ದ್ದಿ ದನುಜವಾಹಿನಿವೆರಸುಂ ||
ಸೀಸಕಮಂ ತೊಟ್ಟುಂ ಜಯ |
ದಾಸೆಯೊಳಂ ಸಮರಭೂಮಿಗಂದೆಯ್ತಂದಂ || ೧೪೧ ||

ಕನಕಮಯರಥಮನೇರ್ದುಂ |
ಧನುಗಂಬಂ ತುಡಿಸಿ ಬೊಬ್ಬೆಗೆಯ್ಯುತ್ತುಮಕಂ ||

ಪನದೈತ್ಯಂ ಯುದ್ಧಜಯಾ |
ವನಿಗಂ ನಡೆತಂದನಖಿಳವಾದ್ಯಂ ಮೊಳಗಲ್ || ೧೪೨ ||

ಗೋಳಾಯ್ಲುಜೋದರರ್ ಬೆಂ |
ಬೀಳಲ್ಕಸಿಚಕ್ರಕುಂತಮುದ್ಗರಸುಗದಾ ||
ಶೂರಾದ್ಯಾಯುಧಮಾರ್ಗಣ |
ಜಾಲಗಳಂ ತಾಳ್ದು ಸಿಂಹನಾದಂಗೆಯ್ದರ್ || ೧೪೩ ||

ಕಡಿದಿರಿದಾರ್ಭಟಿಸುತೆ ಮುಂ |
ಗುಡಿಯೊಳ್ ವಾನರರ ಪಡೆಯನರಿದರಿದಾಗಳ್ ||
ಕಡುಗಿನಿಸಿಂ ಬಪ್ಪಸುರರ |
ಗಡಣಮನೀಕ್ಷಿಸುತೆ ಪವನಸುತನಿದಿರಾಂತಂ || ೧೪೪ ||

ಏಂ ಸಾಹಸಿಯೋ ಹನುಮಂ |
ಮಾಂಸಾಹಾರಿಗಳನೈದೆ ಸದೆಬಡಿದಿಡುತುಂ ||
ಧ್ವಂಸಂಗೆಯ್ವಂ ಭಾಸ್ಕರ |
ವಂಶಜರುಂ ಮೆಚ್ಚುವಂತು ಸಮರಾಂಗಣದೊಳ್ || ೧೪೫ ||

ಕಾಣುತಕಂಪನದೈತ್ಯಂ |
ಶೋಣಾಂಬಕನಾಗೆ ಮುಂದು ಪರಿದರಿದಾದ್ರ್ಗಂ ||
ಬಾಣದ ಮಳೆಯಂ ಭುವನ |
ಪ್ರಾಣಕುಮಾರಕನ ಶಿರದೆ ಸುರಿದಂ ಭರದಿಂ || ೧೪೬ ||

ಮಂಜು ಕರೆದೊಡೇಂ ಪರ್ವತ |
ಮಂಜುಗುಮೇ ಭೀತಿದಾಳ್ದಪನೆ ಕಳ್ತಲೆಯೊಳ್ ||
ಕಂಜಸಖಂ ದೈತ್ಯರ ಶರ |
ಪುಂಜದಿನೇಂ ವಜ್ರದೇಹಿ ತಾಂ ಜಾರ್ದಪನೇ || ೧೪೭ ||

ಆರಿದುಂ ಮುರಿದುಂ ಶರಪಂ |
ಜರಮಂ ಪಲ್ಮೊರೆದು ತೋರಮರಮಂ ಪಿಡಿದುಂ ||
ಗಿರಿಗೆರಗುವ ಬರಸಿಡಿಲಾ |
ಪರಿಯೊಳ್ಪೊಡೆದವನ ತೇರನಂದುರೆ ನೇರ್ದಂ || ೧೪೮ ||

ಎಲವೆಲವೊ ನಿಲ್ಲನಿಲ್ಲೆಂ |
ದುಲಿವುತ್ತಂ ಖಡ್ಗಖೇಟಗಳನುಂ ಕೊಂಡುಂ ||
ಖಳನಿದಿರಾಂತಿರೆ ನೋಡುತೆ |
ಕಲಿಹನುಮಂ ವಜ್ರಮುಷ್ಟಿಯಿಂದಂ ತಿವಿದಂ || ೧೪೯ ||

ಖಳನಂ ಪಿಡಿದುಂ ನೆಲಕ |
ಪ್ಪಳಿಸುತೆ ನಖದಿಂದೆ ಸೀಳ್ದು ಪೋಳ್ಗೆಯ್ದಂದಾ ||
ಕೊಳುಗುಳದೊಳ್ ಮೆರೆದಂ ಸುರ |
ವರರನಿಲಾತ್ಮಜನ ಶಿರದೆ ಪೂವಳೆಗರೆದರ್ || ೧೫೦ ||

ಆ ವಾರ್ತೆಯನಾಕರ್ಣಿಸಿ |
ರಾವಣನತಿಚಿಂತೆಯಿಂದೆ ನಿಜಚಿತ್ತದೊಳಂ ||
ದಾ ವಾನರಮಾನವರುಂ |
ದೇವಾಂಶೀಭೂತರೆನುತೆ ನಿಶ್ಚಯಗೆಯ್ದಂ || ೧೫೧ ||

ನೆಲೆಗಂ ಪ್ರಹಸ್ತಮಂತ್ರಿಯ |
ನೊಲವಿಂ ಕರೆದಾಜಿಗೆಯ್ದಿದಸುರರೊಳೊರ್ವರ್ ||
ಸಲೆ ಗೆಲ್ದು ಬಂದರಂ ತಾಂ |
ತಿಳಿದುದುಮಿಲ್ಲವರನರಿದು ಬಾ ಪೋಗೆಂದಂ || ೧೫೨ ||

ಎನಲುಂ ಪ್ರಹಸ್ತನಾಗ |
ಳ್ಗನುವರಕಂ ಸೇನೆವೆರಸು ನಡೆತಂದಂ ಸ್ಯಂ ||
ದನಮುಂ ತಾನೇರ್ದುಂ ಕಡು |
ಜನದದೆ ಬೊಬ್ಬಿರಿದನವನಿ ಕುಸಿವ ವೊಲಂದುಂ || ೧೫೩ ||

ಇವನಾರಯ್ ಫಣಿಕೇತನ |
ದವನೆನುತೆ ವಿಭೀಷಣಾಸುರೇಂದ್ರನೊಳಂ ರಾ ||
ಘವನಚ್ಚರಿಯಿಂ ಕೇಳ್ದೊಡೆ |
ವಿವರಿಸಿದಂ ಖಳನ ಸತ್ವಸಾಹಸದಿರವಂ || ೧೫೪ ||

ರಾವಣನ ಚಮೂನಾಥಂ |
ದೇವರ್ಕಳ ಗರ್ವಭಂಗಮಂ ಗೆಯ್ದಾತಂ ||
ಈ ವಾನರಬಲದೊಳಗಿ |
ನ್ನಾವನೊ ನಿಲಲಾರ್ಪನೀತನಿದಿರಿನೊಳೆಂದಂ || ೧೫೫ ||

ಅನ್ನೆಗಮಾ ದಾನವಭಟ |
ರುನ್ನತಖಗಮಹಿಷಸೂಕರಂಗಳನೇರ್ದುಂ ||
ಬನ್ನಂಬಡಿಸುತೆ ಬಂದರ್ |
ಮುನ್ನೀರ್ ಮುಂಬರಿದು ಬಂದುದೆಂಬ ವೊಲಾಗಳ್ || ೧೫೬ ||

ಗಿರಿತರುಶಸ್ತ್ರಾಸ್ತ್ರಗಳಿಂ |
ದುರುಯುದ್ಧಂಗೆಯ್ದರಸುರವಾನರರುಂ ಮೇ ||

ಣಿರದೋರ್ರೊರ್ವರ ಸತ್ವದ |
ಪರಿಯಂ ತೋರುತ್ತಮಧಿಕಸಾಹಸದಿಂದಂ || ೧೫೭ ||

ದಾನವರಿರಿದರ್ ತಿವಿದರ್ |
ವಾನರರುಂ ಮುಷ್ಟಿಯಿಂದೆ ದನುಜರ್ ಗದೆಯಂ ||
ಕಯ್ನೆಗೆಪಿಟ್ಟರ್ ಕಪಿಗಳ್ |
ಬಾನೆಡೆಗಂ ನೆಗೆದು ವೃಕ್ಷದಿಂ ಸದೆಬಡಿದರ್ || ೧೫೮ ||

ನರನಾಥನೆಡೆಗೆ ರಥಮಂ |
ಭರದಿಂ ಕೊಂಡುಯ್ಯಲುಸಿದುರ್ ಸೂತನೊಳಂ ಜೆ ||
ಚ್ಚರದಿಂ ಪ್ರಹಸ್ತನೆಳ್ತರೆ |
ನೆರದಿರೆಯಲ್ಲಲ್ಲಿ ಕೀಶನಾಥರ್ ತಡೆದರ್ || ೧೫೯ ||

ಅವರವರಂ ಗೆಲ್ದಂ ರಾ |
ಘವನೆಡೆಗಂ ಬರ್ಪ ಸಮಯಕಗ್ನಿಕುಮಾರಂ ||
ಜವದಿಂದಿದಿರಾಂತವನಾ |
ಹವಕಂ ಮೆಯ್ಗೊಟ್ಟು ನಿಂದನೇಂ ಸಾಹಸಿಯೋ || ೧೬೦ ||

ನೀನೇನೆನ್ನೊಡನಾಹವ |
ಕಾನುವನಪಹಾಸ್ಯಮಾಯ್ತುದೆನ್ನದಟಿಗೆನು ||
ತ್ತಾ ನೀಲನ ಮೇಲಂಬಿನ |
ಸೋನೆಯನುರೆ ಕರೆದನಸುರನಾಯಕಸಚಿವಂ || ೧೬೧ ||

ಸರಲಂ ಮುರಿಮುರಿದುಂ ಸ |
ತ್ವರದಿಂದೊಂದದ್ರಿಶಿಖರಮಂ ಕಿಳ್ತು ನಿಶಾ ||
ಚರರಥಕಿಟ್ಟೊಡಮದು ಜ |
ರ್ಜರಿತಂ ತಾನಾದುದಗ್ನಿಜನ ಸತ್ತ್ವದೊಳಂ || ೧೬೨ ||

ಮುಗುಳ್ದೊಂದು ರಥಮನೇರ್ದುಗ್ರಂ |
ಬಗೆಬಗೆಯ ಮಹಾಸ್ತ್ರನಿಚಯವರ್ಷಂಗೆಯ್ಯ ||
ಲ್ಕಗಿನಿಯ ಮಗನದಕಂಜದೆ |
ನಿಗರದ ಬಲ್ವೆಟ್ಟಿನಿಂದೆ ಪೊಡೆದಂ ಖಳನಂ || ೧೬೩ ||

ಅರೆಗಳಿಗೆ ಮೆಯ್ಮರೆದು ದನು |
ಜರ ಸೇನೆಯ ನಾಥನುಗ್ರಕೋಪದೊಳುರುಮು ||
ದ್ಗರದಿಂದಂ ತಿವಿಯಲ್ ತ |
ತ್ತರಿಸಿದೊಡಂ ತರಹರಿಸುತೆ ನಿಂದಂ ನೀಲಂ || ೧೬೪ ||

ಬಲಿಯಪ್ಪುದೆಂದುಮವನ |
ಪ್ಪಳಿಸಲ್ ಪೆರ್ಮುರದೊಳಾಗಳಾ ಸಚಿವೇಂದ್ರಂ ||
ಧರೆಗುರುಳ್ದು ಬಿಳ್ದು ರಕ್ತಂ |
ಸುರಿಯಲ್ ತಾಂ ಮುಚ್ಚೆವೋಗಿ ಮಗುಳ್ದಿದಿರಾದಂ || ೧೬೫ ||

ಕಡುಗಿನಿಸಿಂದುಬ್ಬಣಮುಂ |
ಜಡಿದುಂ ಬರೆ ಕಂಡು ನೀಲನಾ ದಳಪತಿಯುಂ ||
ಪಿಡಿದುಂ ತಲೆಯುಂ ಬಡಿದುಂ |
ಪೊಡವಿಯೊಳಿಟ್ಟೊದೆದು ಕೊಂದನಮರರ್ ಪೊಗಳಲ್ ||೧೬೬||

ಅಳಿದುಳಿದ ಬಲಮನೊಂದೇ |
ಗಳಿಗೆಯೊಳಂ ಸದೆದು ಬಂದು ಮಣಿಯಲ್ಕವನಂ ||
ನಲವಿಂ ಪತಿಕರಿಸುತೆ ರಘು |
ಕುಲತಿಲಕಂ ಪೊಗಳುತಿರ್ದನೆಂದಂ ಸೂತಂ || ೧೬೭ ||

# ನವಮಾಶ್ವಾಸ.

ವೃತ್ತ ॥ ಭೂಜಾತಾನನಪದ್ಮಮಿತ್ರನಮರಾನೀಕೇಷ್ಟಸಂದಾಯಕಂ ।
ರಾಜೀವಾಸನಸನ್ನತಾಂಘ್ರಿಕಮಲಂ ರಕ್ತಾಂತದೀರ್ಘಾಂಬಕಂ ॥
ಭ್ರಾಜನ್ಮಂಗಲಗಾತ್ರನೀಶಹೃದಯಾವಾಸಂ ನತೋದ್ಧಾರಕಂ ।
ರಾಜೇಂದ್ರಂ ರಘುರಾಮಚಂದ್ರನೆಮಗೀಗಾನಂದಸಂದೋಹಮಂ ॥ ೧ ॥

ಕಂದ ॥ ಅಂಜನೆಯಣುಗಂ ದಾನವ ।
ಕುಂಜರಕುಲಸಿಂಹನಮರವಂದಿತಚರಣಂ ॥
ಮಂಜುಳರೂಪಂ ನತಹೃ ।
ತ್ಕಂಜಾತನಿವಾಸನೀಗೆಶುಭಮಂ ಹನುಮಂ ॥ ೨ ॥

ಕೇಳಿಂ ಮುನಿಗಳೆ ರಾವಣ ।
ನಾಳುಗಳೆತ್ತಂದು ಭೀತಿಯಿಂ ಪೊಡೆಮಟ್ಟಂ ॥
ದಾಳಿದಗೊರೆದರ್ ಸಚಿವಂ ।
ಕಾಳನ ಪುರಿಗೈದೆ ನಡೆದನೆಂದುಂ ಸಭೆಯೊಳ್ ॥ ೩ ॥

ಚರರಾಡಿದ ನುಡಿಗೇಳ್ದ ।
ಚ್ಚರಿವಟ್ಟ ಸುರೇಂದ್ರ ನಧಿಕಚಿಂತೆಯೊಳಂ ದೈ ॥
ತ್ಯರಸುರೆ ಕರೆದುಂ ನರವಾ ।
ನರರಂ ಸಂಹರಿಸಿ ಬರ್ಪ್ಪೆನೆಂದೆಳ್ದನವಂ ॥ ೪ ॥

ಕಂಗಳೊಳಿಂಗಳ್ಗರೆವುತೆ ।
ತುಂಗಮಹಾರಥಮನೇರ್ದ್ದು ಪುರದಿಂ ಪೊರಡಲ್ ॥
ಪಿಂಗಡೆಯೊಳ್ಪಂಗಪವಾ ।
ತಂಗಮಹಾರಥಗಳಿಂದೆ ಸುತರೆಳ್ತಂದರ್ ॥ ೫ ॥

ಕೆಮ್ಮೀಸೆಯ ಕಿಡಿಗಣ್ಗಳ ।
ಚಿಮ್ಮಿದ ಕರವಾಲಕರದ ಬಿಡುಮಂಡೆಗಳಾ ॥
ಒಮ್ಮಾರಿನ ಜೆಂಗೂದಲ ।
ದಿಮ್ಮಿದರಕ್ಕಸರ ಗಡಣಮೆಸೆದತ್ತಿದಿರೊಳ್ ॥ ೬ ॥

ಜೆಚ್ಚರದೆ ಜೀಯ ಸುರರೆದೆ ।
ಗೆಚ್ಚಂ ಕಳೆದತುಳಧೀರ ಶಾತ್ರವಕುಲಮಂ ॥

ನುಚ್ಚರಿದ ಸುಭಟ ಜಯ ಎನು |
ತುಚ್ಚರಿಸುತ್ತಿಯ್ದಿತಂದು ಮಾಗಧಬೃಂದಂ || ೭ ||

ಭೇರೀಮೃದಂಗ ಮುಖವೀ |
ಣಾರವಮುರುಸಾಮಜಗಳ ಘಂಟಾಘೋಷಂ ||
ವೀರಸ್ವನಮುಂ ಜವದಿಂ |
ಧಾರಿಣಿಯೊಳ್ ತೀವಿತಂದು ಪೇಳ್ವೆನದೇನಂ || ೮ ||

ಬೆಳ್ಗೊಡೆಗಳ ಚಾಮರಗಳ |
ಸಾಲ್ಗಳ ಸುರವಾರನಾರಿಯರ ನರ್ತನದಾ ||
ಕಾಲ್ಗಳ ಕಡುಬಿರುದಿನ ಕ |
ಟ್ಟಾಳ್ಗಳ ಗೊಂದಣದೆ ದನುಜನಾಥಂ ನಡೆದಂ || ೯ ||

ಪದಘಟ್ಟನದಿಂ ತಲೆವಾ |
ಗಿದನಹಿಪಂ ದಿಗ್ಗಜಂಗಳೊದರಲ್ ದಿವದೊಳ್ ||
ತ್ರಿದಶರ್ ಬೆಚ್ಚಿರ್ದರಂಭೋ |
ನಿಧಿಯುಕ್ಕಿತು ಭೂಮಿ ಕಂಪನಂಗೆಯ್ದುದಣಂ || ೧೦ ||

ಇವನಾರಿಂತು ಮಹಾವೈ |
ಭವದಿಂ ನಡೆತರ್ಪನಸುರಪತಿಯೋ ತತ್ಸಂ ||
ಭವನೋ ವಿವರಿಪುದೆಂದಾ |
ರವಿಕುಲಜಂ ಕೇಳೆ ಸರಮೆಯರಸಂ ಪೇಳ್ದಂ || ೧೧ ||

ಈತನಲಾ ತ್ರಿಭುವನವಿ |
ಖ್ಯಾತಂ ದಶಕಂಠನೆನಿಪ ರಾಕ್ಷಸನಾಥಂ ||
ಈತನ ಬಲಮಂ ಗಣಿಪೊಡೆ |
ಭೂತಳಮಂ ತಾಳ್ದ ಶೇಷಗರಿದೆಲೆ ಮಹಿಪಾ || ೧೨ ||

ಹರಿಕೇತನರಥದೊಳ್ ಭೀ |
ಕರರೂಪದಿನೊಪ್ಪುವಾತನೇ ಘನನಾದಂ ||
ಸುರವರನಂ ಭಂಗಿಸಿ ಕ |
ಯ್ಸೆರೆಗೊಂಡದಟಿಂದೆ ವೀರನಾಮಂಬಡೆದಂ || ೧೩ ||

ತಳತಳಿಪ ಮಹಾರಥದೊಳ್ |
ಪ್ರಳಯದ ಭೈರವನೊಲೊಪ್ಪುವವನತಿಕಾಯಂ ||
ಮುಳಿದಿವನೀಕ್ಷಿಸೆ ವಾನರ |
ಬಳದೊಳಗಿದಿರಾಂಪ ಭಟರನಾರಂ ಕಾಣೆಂ || ೧೪ ||

ಉರುಗಜಮನೇರ್ದ್ದು ಕಣ್ಗಳೊ |
ಳುರಿಯಂ ಸೂಸುತ್ತೆ ಬರ್ಪ್ಪ ವೀರನೆ ಸುಮುಹೋ ‖
ದರನೆಂಬನೀತನೊಳ್ಸಂ |
ಗರಕಾಂಪೊಡೆ ಸುಭಟರಿಲ್ಲಮವನೀತಳದೊಳ್ ‖ ೧೫ ‖

ಶೂಲಧರನಾಗಿ ವೃಷಭದ |
ಮೇಲೇರ್ದ್ದುಂ ಬರ್ಪ್ಪನವನೆ ವೃಷಭಾಖ್ಯ ಖಳಂ ‖
ಸ್ಥೂಲವರೂಥಮನೇರ್ದ್ದುಂ |
ಕಾಲೋಪಮನಾಗಿ ಬರ್ಪ್ಪನವನೆ ನಿಕುಂಭಂ ‖ ೧೬ ‖

ತುರಗಮನೇರ್ದ್ದುಂ ಮಿಗೆ ಸ |
ತ್ವರದಿಂ ನಡೆತರ್ಪ್ಪನವನೆ ದೇವಾಂತಕನಯ್ ‖
ವರರಥದೊಳ್ ಶರಧನುವಂ |
ಧರಿಸಿರ್ಪ್ಪಂ ವರನರಾಂತಕಂ ಕೇಳೆರಸಾ ‖ ೧೭ ‖

ಜಾಂಬೂನದರಥದೊಳ್ ಬಿ |
ಲ್ಲಂಬಂ ತಾಳ್ದಿರ್ಪ್ಪನಾತನೆ ವಿರೂಪಾಕ್ಷಂ ‖
ಕುಂಭಿಯ ಮೇಲೇರ್ದ್ದಂ ವರ |
ಕುಂಭಾಸುರನೆಂಬನತುಳಸಾಹಸಿಯಧಿಪಾ ‖ ೧೮ ‖

ಈತಂ ಯುದ್ಧೋನ್ಮದಕ |
ನೀತನೆ ಮಕರಾಕ್ಷನಿವನೆ ಸಾರಣದನುಜಂ ‖
ಈತಂ ವಿದ್ಯುನ್ಮಾಲಿ ಗ |
ಡೀತನೊಳಂ ಸೆಣಸಿ ಗೆಲ್ದ ಭಟರಂ ಕಾಣೆಂ ‖ ೧೯ ‖

ಮಣಿಖಚಿತಕನಕರಥದೊಳ್ |
ತ್ರಣಿತಮಹಾಚಂದ್ರಹಾಸಶಕ್ತ್ಯಾಯುಧಮಾ ‖
ರ್ಗಣಮಂ ಧರಿಸಿರ್ಪ್ಪಾತನೆ |
ರಣರುದ್ರಂ ರಾವಣಾಸುರೇಂದ್ರಂ ನೋಡಾ ‖ ೨೦ ‖

ಸಿತವೇದಂಡಸುದಂತ |
ಕ್ಷತವಕ್ಷಸ್ಸ್ಥಲದ ಚಾರುಮಣಿಮುಕುಟಮಹಾ ‖
ದ್ಯುತಿರುಚಿರವದನದಶಕದ |
ಚತುರಾನನದತ್ತವರದ ದನುಜೇಂದ್ರನಿವಂ ‖ ೨೧ ‖

ಹರಗಿರಿಯನೆತ್ತಿದಾತಂ |
ಸುರಪಾದ್ಯರ ಜೇತನೀತನದಟಿನ ಬಲಮಂ ‖

ಒರೆಯಲ್ಕಾಗ್ಗರ್ಕ್ಕುಂ ದೇ |
ವರೆ ಬಲ್ಲಿಂ ನೆನೆಯಲಸದಳಂ ತನಗೆಂದಂ || ೨೨ ||

ಎನೆ ರಘುಜಂ ನಸುನಗುತಂ |
ಧನುವಂ ಪಿಡಿದೇಳಲೊಡನೆ ಲಕ್ಷ್ಮಣದೇವಂ ||
ತನಗಪ್ಪಣೆಗುಡವೇಳ್ಕೆಂ |
ದನುನಯದಿಂ ಕೇಳ್ದನಂದು ದುರವೀಳಿಗೆಯಂ || ೨೩ ||

ಅನಿತರೊಳಸುರೇಂದ್ರನ ವಾ |
ಹಿನಿ ವಾನರಚಯಮನೈದೆ ಘಾತಿಸುತಿರಲಂ ||
ದಿನಸುತನಾರ್ಬಟಿಸುತೆ ಕಡು |
ಗಿನಿಸಿಂ ರಾಕ್ಷಸರನದ್ರಿಯಿಂದಸಿಬಡಿದಂ || ೨೪ ||

ಈ ವಾನರನಾವೊಂ ತಾ |
ನೇವೊಂ ನಿಜಧುರದೊಳಾನಲಾಪ್ಪರ್ನೆ ಎನುತುಂ ||
ರಾವಣಸುರುಕೋಪದೆ ಸು |
ಗ್ರೀವನನೀಕ್ಷಿಸುತೆ ಗರ್ಜಿಸಿದನಾ ಕ್ಷಣದೊಳ್ || ೨೫ ||

ರಾವಣನೆಂಬಂ ನೀನೇ |
ನಾ ವಿಪಿನದೊಳಂದು ಕಳ್ಳನಂದದೆ ಸೀತಾ ||
ದೇವಿಯರಂ ಕಳ್ದುಯ್ದು ಮ |
ಹಾವೀರನೆ ಪೇಳೆನುತ್ತೆ ಪೊಡೆದಂ ರವಿಜಂ || ೨೬ ||

ಇವಗಳ್ಕುವನೇ ರಾವಣ |
ನವಿಲಂಬದೆ ಶರಮನುಗಿದು ಬಿಡೆ ಪೇರ್ಪೊಡೆಗಂ ||
ರವಿಜಂ ತಚ್ಛರಘಾತದಿ |
ನವನಿಯೊಳಂ ಮುಚ್ಛೆವೋಗೆ ಮಲಗಿದನಾಗಳ್ || ೨೭ ||

ಪತಿ ಬಿಳ್ದನೆಂದು ಮರ್ಕಟ |
ತತಿಯಾರ್ಬಟಿಸುತ್ತೆ ದೈತ್ಯಬಲಮಂ ಕ್ಷಣದೊಳ್ ||
ಪತನಂಗೊಳಿಸುತ್ತಿರೆ ಕಂ |
ಡತಿಶೌರ್ಯದಿನೆಚ್ಚನಸ್ತ್ರಗಳನಸುರೇಂದ್ರಂ || ೨೮ ||

ಉರುಬಾಣದ ಹತಿಯಿಂ ವಾ |
ನರರಳವಳಿದೋಡುತಿರ್ಪ ಸಮಯದೊಳಂ ಕೇ ||
ಸರಿಸುಕುಮಾರಂ ಬಂದುಂ |
ಹರಿನಾದಂ ಗೆಯ್ವುತೆಂದನಸುರೇಂದ್ರನೊಳಂ || ೨೯ ||

ಸರಸಿಜಭವಶಂಕರರಿಂ |
ವರಮಂ ಪಡೆದಿರ್ಪ್ಪ ಧೀರ ನೀನೆನ್ನೊಳ್ ಸಂ ||
ಗರಮಾಂತೊಡೆ ನೋಡುವೆನಿಂ |
ದುರುಮುಷ್ಟಿಯೊಳೆಂದೊಡೆಂದನಾ ದಶಕಂಠಂ || ೩೦ ||

ಲೇಸಾಯ್ತು ಪೇಳ್ದ ನುಡಿ ತಾಳ್ |
ಕೀಶನೆ ಮನ್ಮುಷ್ಟಿಘಾತಮಂ ತಾಳೆನುತುಂ ||
ವಾಶಿಸುತಂ ಪೊಡೆಯಲ್ಕಂ |
ಕೇಸರಿಜಂ ನಡುಗಿ ಮಗುಳೆ ಪೊಯ್ದಂ ಖಳನಂ || ೩೧ ||

ಹನುಮನ ಮುಷ್ಟ್ಯಾಘಾತದೆ |
ದನುಜೇಂದ್ರಂ ಮುಚ್ಚೆದಳೆದು ನಿಮಿಷಾರ್ಧದೊಳಂ ||
ತನುವಂ ಚೇತನಗೊಳಿಸುತ |
ಮನಿಲಾತ್ಮಜನೆರ್ದೆಗೆ ಗುರ್ದ್ದಿದಂ ಮುಷ್ಟಿಯೊಳಂ || ೩೨ ||

ಧರೆಯೊಳ್ಮಾರುತಿ ಮೆಯ್ಮರೆ |
ದಿರೆ ಕಂಡಿವನೆಳ್ದೊಡೆನ್ನನುಳಿಸನೆನುತ್ತುಂ ||
ಭರದಿಂದಗ್ನಿಕುಮಾರನ |
ಪೊರೆಗಂ ನಡೆತಂದು ಕೆಣಕಿದಂ ದಶಕಂಠಂ || ೩೩ ||

ಅವನೇಂ ಸಮರ್ಥನೋ ಕಪಿ |
ನಿವಹದೊಳತಿವೀರನಲ್ತೆ ಪಾವಕಪುತ್ರಂ ||
ಜವದಿಂ ಗಿರಿಯಂ ಕಿಳ್ತಿ |
ಟ್ಟವನ ಮಹಾಕನಕಶಕಟಕಂ ಪಾಯ್ದನಣಂ || ೩೪ ||

ತಲೆಗಳನೊದೆವುತ್ತಿರೆ ದಶ |
ಗಳನತಿಕೋಪದೊಳೆ ಪಾವಕಾಸ್ತ್ರಮನೆಚ್ಚಂ ||
ಜ್ವಲಿಸುತೆ ಬಂದುಂ ಕೆಡೆಪಿದು |
ದಿಳೆಗವನಂ ಸ್ಯಂದನಾಗ್ರದಿಂದಂ ವಿಶಿಖಂ || ೩೫ ||

ಮರೆದೊರಗಿದ ಶಿಖಿಪುತ್ರನ |
ಪರಿಯಂ ನಿರುಕಿಸುತೆ ರಾವಣ ಮುಂಕೊಂಡುಂ ||
ಬರೆವರೆ ಲಕ್ಷ್ಮಣದೇವಂ |
ನೆರೆ ಭರದಿಂ ಶರಮನಿಸುತೆ ಘಾತಿಸಿದನಣಂ || ೩೬ ||

ನರನಾದೊಡೇನೊ ಬಲಮುಂ |
ಪರಿಯಿರ್ಪ್ಪುದು ಕೊರತೆಯಿಲ್ಲಮುದಟನೆ ಎನುತುಂ ||

ಭರದಿಂದುರುಶಕ್ತಿಯನಾಂ ।
ತುರುವೇಗದೆ ಪೊಡೆದನವನನಸುರೋತ್ತಂಸಂ ॥ ೩೭ ॥

ಉರಿಗೆದರುತೆ ಬರೆ ಲಕ್ಷ್ಮಣ ।
ನುರುಬಾಣಮನೆಚ್ಚು ಶಕ್ತಿಯಂ ಖಂಡಿಸಿದಂ ॥
ಮುರಿವಿಂ ಮುಮ್ಮೊನೆ ಬಂದೆರ್ದೆ ।
ಗುರುವೇಗದೊಳೆರಗೆ ಮೂರ್ಛೆಯಂ ತಾನಾಂತಂ ॥ ೩೮ ॥

ಇಳಿದೆಳ್ತಂದು ವರೂಥದಿ ।
ನೊಲವಿಂ ದಶಕಂಠನೈದೆ ರಾಮಾನುಜನಂ ॥
ಗಳಿಲೆನಲೆತ್ತಿದೊಡೇಳದೆ ।
ಚಲಿಸದೆ ರಜತಾದ್ರಿಗಧಿಕಮಾಯ್ತೆನಲೆಸೆದಂ ॥ ೩೯ ॥

ಅಚ್ಚರಿವಡುತಿರೆ ಪವನಜ ।
ನುಚ್ಚಲಿಸುತೆ ಬಲಮನೀಕ್ಷಿಸುತೆ ಕಂಗಳೊಳಂ ॥
ಕಿಚ್ಚಂ ಕರೆವುತೆ ಕಿನಿಸಿಂ ।
ಚೆಚ್ಚರದಿಂ ಬಂದು ಕಂಡನಾ ದಶಗಳನಂ ॥ ೪೦ ॥

ಎಲವೋ ರಣಚೋರನೆ ನಿಲ್ ।
ತೊಲಗದಿರಿನ್ನೊಂದೆ ಗುದ್ದಿಗಂ ನಿನ್ನಸುವಂ ॥
ಸಲೆ ಸದೆವೆನೆನುತೆ ತಿವಿಯ ।
ಲ್ಕಳವಳಗೊಂಡಿಳೆಗೆ ಬಿಳ್ದು ಮೂರ್ಛಿತನಾದಂ ॥ ೪೧ ॥

ಎರಡನೆಯ ರುದ್ರನೀತಂ ।
ಮರುತಾತ್ಮಜನೆಂದು ದೇವತತಿ ಕೊಂಡಾಡು ॥
ತ್ತಿರಲೆತ್ತುತೆ ಲಕ್ಷ್ಮಣನಂ ।
ಭರದಿಂ ಭೂಪಾಲನೆಡೆಗೆ ತಂದಂ ಹನುಮಂ ॥ ೪೨ ॥

ಅನುಜನನೀಕ್ಷಿಸಿ ರಾಮಂ ।
ಘನಚಿಂತೆಯೊಳಂಕಶಾಯಿಯಂ ಮುದ್ದಿಸಿ ತ ॥
ತ್ತನುವಂ ನೇವರಿಸಲ್ ಕರ ।
ವನಜಸ್ಪರ್ಶನಮದಾಗೆ ಮೆಯ್ಮುರಿದೆಳ್ದಂ ॥ ೪೩ ॥

ಅಗ್ರಜಗೆ ಮಣಿದು ಲಕ್ಷ್ಮಣ ।
ನುಗ್ರಮಹಾಕೋಪದಿಂದೆ ಧನುವಂ ಪಿಡಿದುಂ ॥
ನಿಗ್ರಹಿಪೆಂ ದಶಕಂಠಸು ।
ವಿಗ್ರಹಮನೆನುತ್ತೆ ಗರ್ಜಿಸಿದನಾ ಕ್ಷಣದೊಳ್ ॥ ೪೪ ॥

ಲೇಪಯ್ ಲಕ್ಷ್ಮಣ ನಿನಗೀ |
ಸಾಸಂ ನೆರೆ ಯೋಗ್ಯಮಪ್ಪುದಾದೊಡಮುಂ ನಿ ||
ನ್ನೀ ಸಮರವೀರ್ಯಮಂ ತಡೆ |
ಲೇಸೆನಿಕುಂ ರಾವಣಾಜಿ ತಾನೆನಗೆಂದಂ || ೪೫ ||

ಶರಧನುವಂ ಪಿಡಿದುಂ ರಘು |
ವರನತಿಕೋಪದೊಳೆ ಯುದ್ಧಕೆಯ್ತರಲಾಗಳ್ ||
ಕರಮಂ ಮುಗಿದನಿಲಸುತಂ |
ಗರುಡನ ವೊಲ್ತನ್ನ ಪೆಗಲೊಳೇರಿಸಿಕೊಂಡಂ || ೪೬ ||

ಆನಿತರೊಳತ್ತಲ್ ರಾವಣ |
ದನುಜಂ ಚೇತರಿಸಿ ದಿವ್ಯರಥಮನಡರ್ದ್ದುಂ ||
ಘನಗರ್ಜನೆಗೆಯ್ವುತ್ತಂ |
ವನಜಾಕ್ಷನ ಬಳಿಗೆ ತೇರನುಂ ಚಲಿಯಿಸಿದಂ || ೪೭ ||

ಆನಾರೆಂದರಿಯದೆ ಸು |
ಮ್ಮಾನದೊಳೆಯ್ತಂದೆಯಲ್ತೆ ಮಾನವ ನಿನ್ನಂ ||
ತಾನುಳಿಸೆಂ ನೀನಿದಕನು |
ಮಾನಂಗೊಳೆವೇಡವೆಂದು ಬಾಣಮನುಗಿದಂ || ೪೮ ||

ತಿರುವಿಗೆ ತುಡಿಸಿ ಮಹಾಸ್ತ್ರಮ |
ನುರುಸತ್ತ್ವದೆ ಸೆಳೆದು ಕರ್ಣಪರ್ಯಂತಂ ಸ ||
ತ್ವರಮೆಚ್ಚಂ ಬೊಮ್ಮಾಂಡಂ |
ಬಿರಿವೊಲ್ ಕಡುಗಿನಿಸಿನಿಂದಮಾ ದಶಕಂಠಂ || ೪೯ ||

ಸುರತತಿ ಕಂಪಿಸುತಿರೆ ರಘು |
ವರನಾಶುಗವೊಂದನುಗಿದು ಬಿಡೆ ತಚ್ಛರಮಂ ||
ಭರದಿಂ ಖಂಡಿಸಿ ರಾವಣ |
ನುರುರಥಮಂ ಮುರಿದು ಮಗುಳೆವಂದುದು ಡೊಣೆಗಂ || ೫೦ ||

ಬೆಕ್ಕಸವಟ್ಟಸುರೇಶಂ |
ಗಕ್ಕನೆ ಬಿಲ್ಗೋಲ್ಗಳಾಂತು ಕಡುಗಿನಿಸಿಂದಂ ||
ದಿಕ್ಕೆಲದಸುರರ್ ಪೊಗಳಲ್ |
ಬಿಕ್ಕಿದನವನೀಶನಂಗದೊಳ್ಕಣೆ ಬಿತ್ತಂ || ೫೧ ||

ಸರಲಂ ಕಡಿದಿಡಿದುಡಿದುಂ |
ಸರಭಸಮುಂ ರಾಮನಸ್ತ್ರಜಾಲಮನಿಸಲುಂ ||

ಅರೆಕೊರೆದುಚ್ಚಿರ್ದುದಸುರೇ |
ಶ್ವರನಂಗಮನೇವೊಗಳ್ವೆನುರುಸಾಹಸಮಂ || ೫೨ ||

ಈ ನರಗಿನಿತೇನೆನುತುಂ |
ದಾನವಪತಿ ಕೋಪದಿಂದೆ ದಿವ್ಯಾಸ್ತ್ರಗಳಂ ||
ತಾನಿಸುತಾರ್ಭಟಿಗೆಯ್ದಂ |
ಭೂನಾಕಂ ಕಂಪಿಸಲ್ಕಮದನೇವೇಳ್ವೆಂ || ೫೩ ||

ಕಿಡಿಗರೆದುಂ ಭೋರ್ವೊರೆದುಂ |
ಸಿಡಿಲಂದದೆ ಬರ್ಪ್ಪ ಕಣೆಯನಾ ರಘುರಾಮಂ ||
ಕಡಿದುರುಬಾಣಮನೆಚ್ಚೊಡೆ |
ಗುಡುಗುಡಿಸುತ್ತ ಸುರನಾಥನಂ ಪೊಯ್ದುದಣಂ || ೫೪ ||

ಖತಿಯಿಂದುರುಶಸ್ತ್ರಾಸ್ತ್ರ |
ಪ್ರತತಿಯನಿಸುತಿರ್ದ್ದನಂದು ರಾವಣದನುಜಂ ||
ಕ್ಷಿತಿಪತಿ ತರಿತರಿದಸುರನ |
ಧೃತಿಯಂ ಕಿಡಿಸುತ್ತುಮಿರ್ದ್ದನಮರರ್ ಪೊಗಳಲ್ || ೫೫ ||

ಸುರವರಜಂಭರ ಯುದ್ಧಮೊ |
ಗಿರಿಶಾಂಧಕದೈತ್ಯಸಮರವೋ ತಾನೆಂಬೊಲ್ ||
ಧುರದೊಳ್ಕಂದದೆ ಕಂದದೆ |
ಸರಭಸಮುಂ ಸೆಣಸುತಿರ್ದ್ದರವರತಿವೀರರ್ || ೫೬ ||

ನಿಲದೆ ಬಳಲ್ದಂ ಸಮರದೆ |
ಕಲಿಯೇರಲ್ ಮಗುಳೆ ಸೆಣಸಲೆಳಪುದು ಹಿತಮೆಂ |
ದಿಳೆಯರಸಂ ಪವನಾತ್ಮಜ |
ನೊಳೆ ಪೇಳ್ದರ್ಧೇಂದುಬಾಣಮಂ ತೆಗೆದೆಚ್ಚಂ || ೫೭ ||

ಸರಭಸಮುಂ ಶರಮುಸುರನ |
ತುರಗಾವಳಿಸೂತಶಕಟಶರಚಾಪಗಳಂ ||
ವರಮಣಿಕೋಟೀರಮನುಂ |
ತರಿದವನಂ ಕೆಡೆಪಿ ಬಂದುದತಿಸತ್ವರದಿಂ || ೫೮ ||

ವದನಗಳಿಂ ನಾಸಿಕದಿಂ |
ರುಧಿರಮನುರೆ ಕಾರ್ದ್ದು ಮುಚ್ಚೆದಳೆದಸುರೇಂದ್ರಂ ||
ಒದರುತೆ ಬಿಳ್ದಿರೆ ಕಂಡಂ |
ದುದಿತಮಹಾದಯೆಯಿನವನಿಪತಿಯಿಂತೆಂದಂ || ೫೯ ||

ರಣಮುಖದೊಳ್ಸೆಣಸುತೆ ಕಡು ।
ಧಣಿದಿರ್ಪಯ್ ದನುಜ ನಿನ್ನನಿಂದಾಂ ಕೊಲ್ಲೆಂ ॥
ತ್ರಣಿತಾಸ್ತ್ರಗಳಂ ತಾಳ್ದಂ ।
ಮಣಿರಥದೊಳ್ಮಗುಳೆವರ್ಪ್ಪುದೆಂದಂ ರಾಮಂ ॥ ೬೦ ॥

ಶರಸಂಧಾನಚಮತ್ಕೃತಿ ।
ಕರುಣಾಭರಸತ್ವಸಾಹಸಂ ಧೃತಿಶೌರ್ಯಂ ॥
ನರನಾಥಗಿರ್ಪ್ಪುದೆನುತಂ ।
ಸುರತತಿ ಸಂತೋಷದಿಂದೆ ಪೂವಳೆಗರೆದರ್ ॥ ೬೧ ॥

ಹನುಮನನಿಳಿದುಂ ರಾಘವ ।
ನಿನಜಾನಲತನುಜಮುಖ್ಯ ಕಪಿಗಳನಾದಂ ॥
ವಿನಯದೊಳಂ ಮನ್ನಿಸಿ ಬಳಿ ।
ಕನುಜಾತಂಬೆರಸುಮಿರ್ದ್ದನತಿಹರ್ಷದೊಳಂ ॥ ೬೨ ॥

ಅತ್ತಲ್ ರಾವಣನುರೆ ನಾ ।
ಣ್ಚುತ್ತಂ ಬಿಡುಮಂಡೆಯಿಂದೆ ಪೊಕ್ಕಂ ಪುರಮಂ ॥
ಎತ್ತುವ ಕಯ್ಯಾರತಿಗಳ ।
ಮೊತ್ತಮನೀಕ್ಷಿಸದೆ ಬಂದನಂತಃಪುರಕಂ ॥ ೬೩ ॥

ಸುರಪಾರಿ ಬಂದು ತಂದೆಗೆ ।
ಕರಮಂ ಮುಗಿದೆಂದನಯ್ಯ ದುಗುಡಮಿದೇಂ ಸಂ ॥
ಗರದೊಳ್ ಜಯಾಪಜಯಗಳ್ ।
ದೊರೆತನಮಂ ಮಾಳ್ಪವರ್ಗ್ಗೆ ಸಹಜಗಳಲ್ತೇ ॥ ೬೪ ॥

ಜಾಳೆನಿಪ ಮನುಜಮರ್ಕಟ ।
ಜಾಳಮದೇಂ ಗಣ್ಯಮೆನಗೆ ನಿಮಿಷಾರ್ಧದೊಳಂ ॥
ಕಾಳನ ಪುರಕಟ್ಟುವೆನಿದ ।
ಕಾಳೋಚಿಸವೇಡವೆಂದು ಮನೆಗೆಳ್ತಂದಂ ॥ ೬೫ ॥

ಕಳೆದಭಿಮಾನಮನುಗಿವೊಡೆ ।
ಕಲಿಕುಂಭಶ್ರವಣನಿಂದೆ ಸಾಧ್ಯಮೆನುತ್ತಂ ॥
ದಿಳಿಯ ನಿಶಾಚರಸುಭಟಾ ।
ವಲಿಯಂ ಕರೆದೆಂದನಂದು ದನುಜಾಧೀಶಂ ॥ ೬೬ ॥

ದಿನವೊಂಬತ್ತಾದುದು ತ ।
ನ್ನನುಜಾತಂ ಮಲಗೆ ಮಗುಳೆ ನೀಮವನಂ ಗ ॥

ಕ್ಕನೆಯೆಳ್ಚಿಸಿ ಕರೆತಪ್ಪುರ್ದು |
ಮೆನಲಸುರವ್ರಾತಮುಂದು ಬಂದುದು ಪೊರೆಗಂ || ೬೭ ||

ನೀಳಗಿರಿ ಮಲಂಗಿಪ್ಪುರ್ದೊ |
ಕಾಳೋರಗಮಧಿಕನಿದ್ರೆಗೆಯ್ವುದೊ ಎಂಬೊಲ್ ||
ಸ್ಥೂಳಾಕಾರದ ನಿದ್ರಾ |
ಬಾಳಾಲಿಂಗನದ ದೈತ್ಯನಂ ಕಂಡರಣಂ || ೬೮ ||

ಬಿರುಗಾಳಿಯಂತು ಸುಯ್ಗಳ್ |
ಸರಭಸಮುಂ ಗೊಗೊರ್ರೆಂದು ಕಟ್ಟುಬ್ಬಟೆಯಿಂ ||
ದುರಿಗೂಡಿ ಬಪ್ಪುರ್ವಂ ಕಂ |
ಡಿರಿದರ್ ಖರಖಡ್ಗಕುಂತಶೂಲಾದಿಗಳಿಂ || ೬೯ ||

ಕಡಿದರ್ ಬಡಿದರ್ ಕೊರೆದರ್ |
ಜಡಿದರ್ ಬಲ್ವೆಟ್ಟುವೆಣೆಗಳಂ ಸೊಳ್ಳೆಗಳೊಳ್ ||
ಪೊಡೆದರ್ ಭೇರಿಗಳಂ ಕಿವಿ |
ಯೆಡೆಯೊಳ್ ದಿಗ್ವಾರಣಂಗಳೆರ್ದೆ ನಡುಗುವಿನಂ || ೭೦ ||

ಕರಿಘಟೆಯಿಂ ತುಳಿಯಿಸಿದರ್ |
ಕರೆದರ್ ಶಸ್ತ್ರಾಸ್ತ್ರವರ್ಷಮಂ ತ್ರಪುವಂ ತಂ ||
ದೆರೆದರ್ ಕರಗಿಸಿ ಕರ್ಣದೊ |
ಳುರಿಗೊಳಿಸಿದರವನ ತನುವನದನೇವೇಳ್ವೆಂ || ೭೧ ||

ನಾನಾವಿಧದೊಳ್ ಬಾಧಿಸೆ |
ದಾನವನೆಳ್ಚೆತ್ತುರ್ಜೃಂಭಣಂಗೆಯ್ದುಂ ದು ||
ಮ್ಮಾನದೆ ಮೆಯ್ಮುರಿದೆಳ್ದನ |
ಹೀನನ ತೆರದಿಂದೆ ಮೊರೆದು ನೋಡುತಲವರಂ || ೭೨ ||

ಮುಂಗುಡಿಯ ಮದ್ಯಮಾಂಸದ |
ವಂಗಡಮಂ ಕುಡಿದು ತಿಂದು ಡರ್ರೆನೆ ತೇಗಲ್ ||
ಕಂಗೆಟ್ಟುದು ಸುರವಿತತಿಯ |
ಡಂಗಿದುದಸುರಾಳಿ ಕುದಿದುವಂಭೋನಿಧಿಗಳ್ || ೭೩ ||

ಮಲಗಿದ್ದಾರ್ತನನೆಳ್ಚಿಸ |
ಲೆಳಸಿದ ಕಡುಪುಳ್ಳ ಧೀರನಾವನೊ ಎನುತಂ ||
ಕೆಲಬಲನಂ ನೋಡುತ್ತಿರ |
ಲೀಳೆಯೊಳ್ ಮೆಯ್ಯಿಕ್ಕಿ ಬಂದು ನಿಂದರ್ ದನುಜರ್ || ೭೪ ||

ದೇವರ ಪದರಾಜೀವದ |
ಸೇವಕರಾಮಲ್ತೆ ನಿಮ್ಮನೆಳ್ಬಿಪುದೆನುತಂ ||
ರಾವಣನಾಜ್ಞಾಪಿಸಿದಂ |
ತಾವಿಲ್ಲಿಗೆ ಬಂದೆವೆಂದು ಕಯ್ಮುಗಿದರಣಂ || ೭೫ ||

ಎನೆಗಹಗಹಿಸುತ್ತಂ ಕಾಂ |
ಚನಮಣಿಮಯಭೂಷಣಂಗಳಂ ಧರಿಸುತ್ತಂ ||
ದನುವಿಂ ಬಂದಗ್ರಜಗಂ |
ವಿನಮಿಸಿ ಕುಳಿತಂ ಪರಾಸನದೊಳಾ ದನುಜಂ || ೭೬ ||

ನರವಾನರರೆಂಬಧಮರ್ |
ಶರನಿಧಿಯಂ ಕಟ್ಟಿ ಬಂದು ದನುಜಾವಳಿಯಂ ||
ತರಿದರ್ ನೀನವರಂ ಸಂ |
ಹರಿಸುಗುಮೆಂದನುಜನೊಡನೆ ರಾವಣನುಸಿರ್ದಂ || ೭೭ ||

ಮುನ್ನಮೆ ಪೇಳ್ದೆಂ ಧರಣಿಯ |
ಕನ್ನಿಕೆಯಂ ತಂದ ದಿವಸಮೆಲೆ ದನುಜೇಂದ್ರಾ ||
ಚೆನ್ನಳಿದುದು ಕಜ್ಜಂ ನೀ |
ನಿನ್ನಾದೊಡಮುಂ ರಮೇಶಗಾನತನಾಗಾ || ೭೮ ||

ಪದುಮಾಕ್ಷಂ ರಾಮಾಖ್ಯೆಯೊ |
ಳುದಯಿಸಿ ಸಂಹರಿಪನಸುರನಿಚಯಮನೆಂದುಂ ||
ತ್ರಿದಶಮುನಿನಾಥನೆನ್ನೊಳ್ |
ಮೊದಲೊಳ್ ಪೇಳ್ದಿರ್ಪ್ಪನಸುರನಾಯಕ ಕೇಳಾ || ೭೯ ||

ಆ ಜತಿಯಾಡಿದ ವಚನಂ |
ನೈಜಂ ತಾನಾದುದಿಂದು ರಾಮನೆ ಸಾಕ್ಷಾ ||
ದ್ರಾಜೀವಾಕ್ಷಂ ತಥ್ಯಂ |
ಭೂಜಾತೆಯೆ ಲೋಕಮಾತೆಯೆಂದಾಂ ತಿಳಿವೆಂ || ೮೦ ||

ಕಲಹಂಗೆಯ್ಯದೆ ಸೀತಾ |
ಲಲನೆಯನಾ ರಾಮಚಂದ್ರನಡಿಗೊಪ್ಪಿಸಿ ಮ ||
ತ್ಕುಲಮುಂ ರಕ್ಷಿಸವೇಳ್ಕುಂ |
ದೊಲವಿಂ ಘಟಕರ್ಣನೆಂದನಸುರಾಧಿಪನೊಳ್ || ೮೧ ||

ಏನೆಂಬೆ ಬಾಯ್ಗೆ ಬಂದಂ |
ತಾ ನರಸಬ್ಬಾಜ್ಞಕ್ಷನಾದೊಡೇಂ ಭಯಮತಿನಿ ||

ದ್ರಾನುದ್ರೇಕದ ಜಾಡ್ಯದ |
ಮಾನಸ ನಡೆ ನಿಲಯಕೆಂದನಾ ದಶಕಂಠಂ || ೮೨ ||

ಮುಂದಪ್ಪ ಕಾರ್ಯಸಂಗತಿ |
ಯಂ ದೇವರ್ಗ್ಗರಿಪಲಿಂತು ಕೋಪಂಗೆಯ್ದಾ ||
ಇಂದಿನ ರಣದೊಳ್ ವಾನರ |
ವೃಂದಮನರೆದಿಟ್ಟು ಸೂರಸುತನಂ ತರ್ಪೆಂ || ೮೩ ||

ಎನ್ನ ಪರಾಕ್ರಮಸತ್ವಗ |
ಳುನ್ನತಿಯಂ ನೀನೆ ಬಲ್ಲೆ ವಿಜಯಾಪಜಯಂ ||
ನಿನ್ನದೆನುತ್ತಂ ರಾವಣ |
ಗನ್ನವಿಸುತೆ ರಣಕೆ ಪೋದನಾ ಘಟಕರ್ಣಂ || ೮೪ ||

ಗರಿಯುಳ್ಳ ಗಿರಿಯೊ ವಿಲಯದ |
ಪುರಹರನೋ ಕಾಲಕೂಟಮಸುರಾಕೃತಿಯಂ ||
ಧರಿಸಿಪ್ಪುದೊಯೆನೆ ದನುಜಂ |
ಭರದಿಂ ಲಂಘಿಸುತೆ ಕೋಂಟೆಯಂ ನಡೆತಂದಂ || ೮೫ ||

ಅಡಿಗಡಿಗಂ ಮೋದಿಸಿ ನಡು |
ನಡುಗಿದುವಾ ತೋಳ ಗಾಳಿಗಂ ತರುಗಿರಿಗಳ್ ||
ಉಡಿದುವು ಗರ್ಜನೆಗಂಬರ |
ಮೊಡೆದುದು ತದ್ಗಮನರಭಸಮುದನೇವೇಳ್ವೆಂ || ೮೬ ||

ಅವನಾರಯ್ ಬರ್ಪ್ಪನೆನು |
ತ್ತವನೀಶಂ ಕೇಳೆ ಜೀಯ ರಾವಣನನುಜಂ ||
ಇವನೇ ಕುಂಭಶ್ರವಣಂ |
ಭವನಂಬುವನೀತಗೆಂದನಾ ಪರಮೇಶಂ || ೮೭ ||

ಅನ್ನೆಗಮಾ ಘಟಕರ್ಣಂ |
ತನ್ನಂ ತಾನರಿಯದಸುರವಾಹಿನಿವೆರಸಂ ||
ದುನ್ನತಮುದ್ಗರಹತಿಯಿಂ |
ಬನ್ನಂಬಡಿಸುತ್ತೆ ಬಂದನಾ ಕಪಿಕುಲದೊಳ್ || ೮೮ ||

ಕಡುಬೆದರುತೆ ಕುಂಭಶ್ರುತ |
ನಡಿಗಂ ಬಂದೆರಗಿ ನಿಂದು ಕಯ್ಮುಗಿದುಂ ನಿ ||
ನ್ನೊಡವುಟ್ಟಿದನುಜನಾನೆ |
ನ್ನೊಡಲಂ ಪೊರೆಯೆಂದನಣ್ಣನೊಳ್ಪರಮೇಶಂ || ೮೯ ||

ಕುಲವಲ್ಲಿಯನಿಳಿಕೆಯ್ದುಪ ।
ಪೊಲೆಗಜ್ಜಮಿದೆಂದು ಪೇಳ್ದೊಡಣ್ಣಂ ಕಿನಿಸಿಂ ॥
ಪೊಳಲಂ ಪೊರಮಡಿಸಿದೊಡಾಂ ।
ಗಳಿಲನೆ ನಡೆತಂದೆನೆಂದು ಕಣ್ಬನಿಗರೆದಂ ॥ ೯೦ ॥

ತಿಳಿಯೆಂ ಮತ್ತತೆಯಿಂ ಮ ।
ದ್ಬಲಮಂ ಪರಬಲಮನಿಂದು ಭೇದದಿನಿದಿರೊಳ್ ॥
ಸಲೆ ಸುಳಿಯದೆ ರಘುಜನೊಳಂ ।
ಸಲಹಯ್ ತವತನುವನೆಂದನಾ ಘಟಕರ್ಣಂ ॥ ೯೧ ॥

ಎನಲಡಿಗೆರಗಿ ವಿಭೀಷಣ ।
ನನುವಿಂ ಪೆರಸಾರೆ ಕುಂಭಕರ್ಣಂ ಮುಳಿಸಿಂ ॥
ತೊನೆವುತ್ತಂ ಬರೆವರೆ ಸಂ ।
ಜನಿಸಿತ್ತುರುಭೀತಿ ವಾನರರ ವಾಹಿನಿಯೊಳ್ ॥ ೯೨ ॥

ಕದಳೀವನಮಂ ಪೊಕ್ಕಾ ।
ಮದಹಸ್ತಿಯೊ ಎಂಬೊಲಮಿತವಾನರಬಲಮಂ ॥
ಸದೆವುತೆ ತಿಕ್ಕುತೆ ಮುಕ್ಕುತೆ ।
ಪದದಿಂದರೆವುತ್ತೆ ಗರ್ಜಿಸುತ್ತೆಳ್ತಂದಂ ॥ ೯೩ ॥

ವಾನರರೊರ್ವರ್ ನಿಲ್ಲದೆ ।
ಕಾನನಗಿರಿತಟಮನೈದೆ ಪುಗೆ ಕಾಣುತ್ತಂ ॥
ಭಾನುಜನವರಂ ಬರಿಸುತೆ ।
ದಾನವಗಿದಿರಾಂತು ನಿಂದನತಿಕೋಪದೊಳಂ ॥ ೯೪ ॥

ಒತ್ತರಿಸಿ ಬಲಮನೆಳ್ಚಿಸೆ ।
ಪತ್ತಿದರವನಂಗದೇಶಮಂ ಬಂಭರಗಳ್ ॥
ಮತ್ತಗಜದ ಮದಜಲಕಂ ।
ಮುತ್ತುವವೊಲ್ ಕೀಶಸುಭಟರತಿವೇಗದೊಳಂ ॥ ೯೫ ॥

ಗಣಿಪನೆ ದನುಜಂ ವಾನರ ।
ಗಣಮಂ ನಿಮಿಷಾರ್ಧದಲ್ಲಿ ಮೆಯ್ಯೊಗ್ಗಡಪೆ ಸಮಾ ॥
ರಣಹತಿಯಿ ಮಾವಣ್ಗೊಂ ।
ದಣಮಿಳೆಗುರುಳ್ವಂತು ಬಿಳ್ದುದಾ ಕಪಿವೃಂದಂ ॥ ೯೬ ॥

ಮೇಲ್ವಾಯ್ದೋರೊರ್ವರ್ ಮಿಗೆ ।
ಬಲ್ವೆಟ್ಟುವನೆಸೆದು ಮರಗಳಂ ಕಿಳ್ತಿಟ್ಟುಂ ॥

ಕಲ್ವಳೆಗರೆದರ್ ಕಪಿಗಳ್ |
ಗೆಲ್ವಾಸೆಯೊಳಧಿಕಸತ್ವಸಾಹಸದಿಂದಂ || ೯೭ ||

ಕಡುಗಿನಿಸಿಂ ಘಟಕರ್ಣಂ |
ಪಿಡಿದುಂ ಕೋತಿಗಳನೈದೆ ಕಬಳಿಸೆ ಭರದಿಂ ||
ದೊಡನೆ ನವರಂಧ್ರದೊಳ್ಪೊರ |
ಮಡುತಿರ್ದ್ದುದು ಗಣನೆಯಿಲ್ಲದದನೇವೇಳ್ವೆಂ || ೯೮ ||

ಪ್ರಳಯಮದಾದುದೊ ವಾನರ |
ಕುಳಕೆನೆ ಬರಿಗೆಯ್ದನಸುರನಾ ಸಮಯದೊಳಂ ||
ತಳುವದೆ ಬಲ್ಮರನಿಂದ |
ಪ್ಪಳಿಸಿದನಾ ಸೂರ್ಯಪುತ್ರನೇಂ ಸಾಹಸಿಯೋ || ೯೯ ||

ಸರಭಸಮುಂ ಮಗುಳೆ ಮಹಾ |
ಗಿರಿಯಂ ಕಿಳ್ತಿಟ್ಟು ಬೊಬ್ಬೆಗೆಯ್ಯಲ್ಕಸುರೇ ||
ಶ್ವರನುರುತರಕೋಪದೊಳ |
ಬ್ಬರಿಸುತ್ತಂ ದಿವ್ಯಶಕ್ತಿಯಂ ತೆಗೆದೆಚ್ಚಂ || ೧೦೦ ||

ಅನಿತರೊಳಂಜನೆಯಾತ್ಮಜ |
ನನಿಲನ ವೇಗದೊಳೆ ಬಂದು ತಚ್ಛಕ್ತಿಯನುಂ ||
ಕಿನಿಸಿಂ ಮುರಿದುಂ ಖಳನಂ |
ಘನಮುಷ್ಟಿಯೊಳೆರಗೆ ಬಿಳ್ದನಾ ದನುಜೇಂದ್ರಂ || ೧೦೧ ||

ತರಹರಿಸುತೆಳ್ದು ದನುಜಂ |
ಬರೆವರೆಸುಗ್ರೀವನವನನಿರಿದುಂ ಮೇಣ್ ವಾ ||
ನರಪತಿ ತಾನೆ ಕಣಾ ಸಂ |
ಗರದೊಳ್ನಿಲ್ಲೆನುತೆ ಪೊಯ್ದನುರುಶೈಲದೊಳಂ || ೧೦೨ ||

ಇವನಂ ಪಿಡಿದುಯ್ದೊಡೆ ಕಪಿ |
ನಿವಹಂ ಮೆಯ್ದೆಗೆವುದುಳಿವರಣುಸನ್ನಿಭಮಾ ||
ನವರವರಿರ್ವ್ವರನುಂ ಕೊ |
ಲ್ಲುವುದೇಂ ಘನಮೆನುತಮಸುರಪತಿ ಮುಂಬರಿದಂ || ೧೦೩ ||

ಬರಸೆಳೆದಿನಸುತನಂ ಪಿಡಿ |
ದುರುಕಕ್ಷದೊಳೌಂಕುತಟ್ಟಹಾಸಂಗೆಯ್ಯಲ್ ||
ಸುರರೋಡಿದರಿಳೆ ಕಂಪಿಸಿ |
ಬಿರಿದುದು ಕೋಯೆಂದು ಕೂಗಿದುದು ಕಪಿನಿಚಯಂ || ೧೦೪ ||

ಹರಿಸದೊಳಂ ದನುಜೇಶಂ ।
ಪುರಕಭಿಮುಖನಾಗಿವರ್ಪ್ಪ ಸಮಯದೊಳಂ ಜೇ ॥
ತರಿಸುತಲಿಸಜಂ ಕಡುಚೆ ।
ಚ್ಚರದಿಂ ಸೂಕ್ಷ್ಮಾಂಗನಾಗಿ ತಲೆಯನಡರ್ದ್ದಂ ॥ ೧೦೫ ॥

ಕಿವಿಗಳನೆರಡಂ ಕಯ್ಯೊಳ್ ।
ಜವದಿಂ ಪಲ್ಗಳಿನೆ ನಾಸೆಯಂ ಕಿಳ್ತಾಗಳ್ ॥
ಪವನೋಪಮಗತಿಯಿಂ ರಾ ।
ಘವನೆಡೆಗಂ ಬಂದು ಕಾಣ್ಕೆಯಿತ್ತಂ ರವಿಜಂ ॥ ೧೦೬ ॥

ಗತಜೀವಂ ಬಂದೊಲ್ ರಘು ।
ಪತಿ ತೋಷಂದಾಳ್ದು ಮನ್ನಿಸಿದನರ್ಕಜನಂ ॥
ನುತಿಸಿದರಮರರ್ ವಾನರ ।
ತತಿ ಕೊಂಡಾಡುತ್ತುಮಿರ್ದ್ದುದದನೇವೇಳ್ವೆಂ ॥ ೧೦೭ ॥

ನಾಸಾಕರ್ಣಗಳಂ ಕೀ ।
ಳ್ದೇಶಂ ಮಿಗೆ ಕಿಳ್ತು ಗಮಿಸೆ ದನುಜೇಶಂ ತಾ ॥
ಸೀಸರಿಯವೆ ಜಯಮುಖಸಂ ।
ತೋಷದೊಳೆಳ್ತಂದನಸುರನಾಥನ ಪೊರೆಗಂ ॥ ೧೦೮ ॥

ಸುಖದಿಂ ತಂದಿರ್ಪೆಂ ನಾ ।
ಯಕನಂ ನೋಡೆಂದು ಕೌಂಕುಳೆತ್ತೀಕ್ಷಿಸೆ ಮಾ ॥
ಯಕವಾಗಿರೆ ಚೋದ್ಯಂಬ ।
ಟ್ಟಕಟೆನುತ್ತೈದೆ ಮೂಗಿನೊಳ್ಬೆರಳಿಟ್ಟಂ ॥ ೧೦೯ ॥

ಬಿರಿದಿರೆ ನಾಸಿಕಮೇನ ।
ಚ್ಚರಿಯಿದು ತಾಂ ಗೆಯ್ದು ಸಮರಮೇನಾದುದೊ ಹಾ ॥
ಹರಹರ ಎನುತಂ ಕಿವಿಗಳ ।
ನೆರಡುಂ ಕಯ್ಯಿಂದೆ ಮುಟ್ಟೆ ಕಾಣದೆವೋದಂ ॥ ೧೧೦ ॥

ಶಿವಶಿವ ಘಟದಂತೊಪ್ಪುವ ।
ಕಿವಿಗಳನುಂ ದೀರ್ಘನಾಸೆಯಂ ಕುಯ್ದುವನಾ ॥
ವವನೆನ್ನಯ ಬಂಧುರನಾ ।
ಮವನಳಿಸಿದ ಭಟನನುಸೆನೆಂದಂ ದನುಜಂ ॥ ೧೧೧ ॥

ಈ ಕ್ಷಣದೊಳ್ ಕಪಿಕುಲಮಂ ।
ಭಕ್ಷಿಸುವೆಂ ಕೊಳ್ವೆನಲ್ಪಮಾನಪವಂ ಘಾ ॥

ಲಾಕ್ಷನೆ ತಾಂ ಬರ್ಕ್ಕೆಯೆಸು |
ತ್ರಕ್ಷಿಗಳಿಂ ಕೆಂಡಗೆದರ್ದು ಮುರಳ್ದಂ ದನುಜಂ ॥ ೧೧೨ ॥

ನಭಮುಂ ಸೋಂಕಲ್ ಮುಕುಟಂ |
ತ್ರಿಭುವನಮುಂ ತುತ್ತುಗೊಳ್ವ ವದನದ ಸುಭುಜ ||
ಪ್ರಭವಾದ್ಭುತಜಂಝಾನಿಲ |
ರಭಸದ ಘಟಕರ್ಣನಾಜಿಗೆಳ್ತಂದನಣಂ ॥ ೧೧೩ ॥

ಬಂದುದೆ ಮಗುಳ್ದು ಮೃತ್ಯುವಿ |
ದೆಂದುಂ ಕಪಿಸೇನೆ ಬೆರಗುಗೊಂಡೀಕ್ಷಿಸುತಂ ||
ನಿಂದಿರೆ ಘಟಕರ್ಣಂ ನಡೆ |
ತಂದುಂ ಪಿಡಿಪಿಡಿದು ಕಬಳಿಸಿದನರಿಬಲಮಂ ॥ ೧೧೪ ॥

ಒಗ್ಗಡದೋಡುವ ಕಪಿಗಳ |
ಮೊಗ್ಗರಮಂ ತಿಂದು ತೇಗಿದಂ ಪಸಿಪಿಂದಂ ||
ಬಗ್ಗಂ ತಿಸುವ್ರೊಲ್ ಮಾರಿಯ |
ಸುಗ್ಗಿಯೊ ಎಂಬಂತು ಸಮರಧರೆಯಂದೆಸೆಯಲ್ ॥ ೧೧೫ ॥

ಇಂತೊಪ್ಪಿರ್ಪಿನಮವನೀ |
ಕಾಂತಂ ದನುಜನನಿದಿರ್ಚ್ಚಿ ಪವನಾಶುಗಮಂ ||
ತಾಂ ತೆಗೆದೆಚ್ಚೊಡೆ ಬಲಗ |
ಯ್ಯಂ ತರಿದುದು ವೇಗದಿಂದೆ ದನುಜಾಧಮನಾ ॥ ೧೧೬ ॥

ಸೆಡೆಯದೆ ಕುಂಭಶ್ರವಣಂ |
ಕಡುಗಿನಿಸಿಂದೆಡದ ಕಯ್ಯೊಳಂ ಮುದ್ಗರಮಂ ||
ಪಿಡಿದೆಸೆಯಲ್ ಪುಡಿಗೆಯ್ವಂ |
ಜಡಜಾಂಬಕನೈಂದ್ರವಿಶಿಖಮುಂ ತೆಗೆದೆಚ್ಚಂ ॥ ೧೧೭ ॥

ಭರದಿಂದೆಡಗಯ್ಯಂ ಕ |
ತ್ತರಿಸಲ್ ತದ್ವಿಶಿಖಮಸುರನುರ್ಬ್ಬಿತೆ ಕಡುಪಿಂ ||
ನರಸಂ ತಿನುವೆನೆನುತ್ತಂ |
ಬರೆ ರಾಘವನರ್ಧಚಂದ್ರಶರಗಳನೆಚ್ಚಂ ॥ ೧೧೮ ॥

ಶರಮೆರಡು ಕುಂಭಕರ್ಣನ |
ಚರಣಗಳಂ ಕಡಿದು ಬಂದುದಾ ಬಳಿಕೆ ಖಳಂ ||
ಉರುಳ್ದುರುಳ್ದರೆದಂ ಮಿಗೆ ಹೂಂ |
ಕರಿಸುತ್ತಂ ಕೀಶಬಲಮನದನೇವೇಳ್ವೆಂ ॥ ೧೧೯ ॥

ಜ್ವಲಿತಕ್ರೋಧದೆ ರಘುಜಂ ।
ತಳೆದೈಂದ್ರಾಶುಗಮನೈದೆ ತೆಗೆದಿಸಲಾಗಳ್ ॥
ತಲೆಯಂ ಮಿಗೆ ಕತ್ತರಿಸುತೆ ।
ನಿಲದೊಲ್ ಪೊಳಲೆಡೆಗೆ ಬಿಸುಟು ಬಂದುದು ಶೋಣಿಗಂ ॥ ೧೨೦ ॥

ದುಂದುಭಿ ಮೊಳಗಿದುದಮರರ ।
ಬೃಂದಂ ಸುಮವೃಷ್ಟಿಗರೆದುದಾನಂದದೊಳಂ ॥
ಬಂದಂ ನಾರದಮುನಿ ನಲ ।
ವಿಂದಂ ಶ್ರೀರಾಮನೆಡೆಗೆ ಗಗನಾಂಗಣದಿಂ ॥ ೧೨೧ ॥

ದೇವ ಜಗನ್ಮಯ ಭವರಾ ।
ಜೀವಾಸನವಂದ್ಯಚರಣ ಚಿನ್ಮಯ ಮುನಿಸಂ ॥
ಭಾವಿತವಿಗ್ರಹ ನಿರುಪಮ ।
ಪಾವನ ಸುಚರಿತ್ರ ರಾಮ ಜಯಜಯ ಎಂದಂ ॥ ೧೨೨ ॥

ಮುನ್ನಮಯೋಧ್ಯಾಪುರದೊಳ್ ।
ನಿನ್ನೆಡೆಗಾಂ ಬಂದು ಬಿನ್ನವಿಸಿದಂದದೊಳಂ ॥
ರನ್ನವಸಿರವಳ ಬಲ್ಪೊರೆ ।
ಯನ್ನೀಗಿದೆ ವಧಿಸಿ ಕುಂಭಕರ್ಣಾಸುರನಂ ॥ ೧೨೩ ॥

ಸುರಪತಿರಿಪು ಸೌಮಿತ್ರಿಯ ।
ಶರದಿಂ ಹತನಪ್ಪನೈದೆ ಮಚ್ಛಿಗರಾಣ್ಮಂ ॥
ಧುರದೊಳ್ ಮಡಿವಂ ನಿನ್ನಿರು ।
ತರವಿಶಿಖದೊಳೆಂದು ನಾರದಂ ಪೋದನಣಂ ॥ ೧೨೪ ॥

ಬೀಳುತ್ತೇಳುತೆ ದಾನವ ।
ಜಾಳದೊಳಳಿದುಳಿದ ಜಾಳುರಕ್ಕಸರೆಯ್ತಂ ॥
ದಾಳಿದಗೀ ಪದನಂ ತವೆ ।
ಪೇಳಲ್ಮೆಯ್ಮರೆದು ಬಿಳ್ದನಾ ದಶಕಂಠಂ ॥ ೧೨೫ ॥

ಮಗುಳೆಳ್ದು ಕುಂಭಕರ್ಣನ ।
ಬಗೆಯಂ ನೆನೆನೆನೆದು ಪಂಬಲಿಪ ಸಮಯದೊಳಂ ॥
ದುಗುಡಮಿದೇತಕೆ ರಾಮನ ।
ಖಗಹತಿಗಾರ್ ನಿಲ್ವರೆಂದನಂದತಿಕಾಯಂ ॥ ೧೨೬ ॥

ಜಗಮಂ ಸೃಷ್ಟಿಸಿ ಪಾಲಿಸಿ ।
ಮಿಗೆ ಹರಿಸುವ ದೇವದೇವನೀ ರಘುಜನಲಾ ॥

ನಿಗಮಾವಳಿವಂದಿತಪದ |
ಯುಗಮುಂ ಮರೆವೊಕ್ಕು ಜೀವಿಪುದು ಲೇಸೆಂದಂ || ೧೨೭ ||

ಈತಂ ಮುನಿದೊಡೆ ಜೀವಿಸು |
ವಾತಂ ನರನಾಗದೇವದೈತ್ಯರೊಳಾವಂ ||
ಭೂತಗಳೊಡನಾಡದೆ ಪರಿ |
ಪೂತನ ರಘುನಾಥನಂಘ್ರಿಗಾನತನಾಗಯ್ || ೧೨೮ ||

ತಿರೆಯಣುಗಿಯನೊಪ್ಪಿಸಿ ರಘು |
ವರಗಾತನ ಕೃಪೆಯನೈದೆ ಸಂಪಾದಿಸಿ ಬಂ ||
ಧುರಸುಖದಿನಿರಲ್ ವಿಹಿತಂ |
ನರನೆಂದುಂ ತಿಳಿಯೆವೇಡವಮಾ ರಾಮನನುಂ || ೧೨೯ ||

ಅಳರಾಡದಿರೆನ್ನೊಳ್ ಕೇ |
ಳಿಳೆಯಣುಗಿಯನೀಯೆನಗಜೆಯರಸಂ ತಿಳಿಪ ||
ಲ್ಕೆಳಸೆಂ ದೈನ್ಯಮನೀ ಕೊಳು |
ಗುಳದೊಳ್ತಾನೆಂದನಸುರನಾಯಕನಾಗಳ್ || ೧೩೦ ||

ಅಗ್ರಜನಾಡಿದೊಡೇಂ ಸಮ |
ರಾಗ್ರದೊಳಂ ಕೀಶವರ್ಗಮಂ ಮಾನವರಂ ||
ಉಗ್ರಂ ಮೆಚ್ಚುವ ಪರಿಯೊಳ್ |
ನಿಗ್ರಹಿಸುವೆನೆಂದು ಮುಳಿದು ಪೇಳ್ದಂ ತ್ರಿಶಿರಂ || ೧೩೧ ||

ಇಂತೆನೆ ದಶಕಂಠಂ ಕಡು |
ಸಂತಸದಿಂ ಷಟ್ಕುಮಾರಕರ್ಗೆ ರ್ಗಪ್ಪಣೆಯಂ ||
ತಾಂ ತವಕದೊಳೀಯಲ್ಕವರು |
ಪಂಥಂಗಳನಾಡಿಕೊಳುತೆ ಪೊರಟರ್ ಮನೆಯಿಂ || ೧೩೨ ||

ತನುವಂ ರಾಮಂಗೊಪ್ಪಿಸಿ |
ಪುನರುದ್ಭವಮಿಲ್ಲದಂತು ಗೆಯ್ವೆನೆನುತ್ತಂ ||
ದನುವರಕತಿಕಾಯಂ ಸ್ಯಂ |
ದನಮಂ ತಾನೇರ್ದ್ದು ಸೇನೆವೆರಸೆಳ್ತಂದಂ || ೧೩೩ ||

ತುರಗಮನೇರ್ದ್ದು ನರಾಂತಕ |
ನುರುರಥದೊಳ್ತ್ರಿಶಿರದೇವವೈರಿಗಳೊಲವಿಂ ||
ವರಕರಿಗಳನೇರ್ದ್ದು ಮಹೋ |
ದರಯುದ್ಧೋನ್ಮತ್ತದೈತ್ಯರಾಜಿಗೆ ನಡೆದರ್ || ೧೩೪ ||

ಗಣಿಸಲಸಾಧ್ಯಂ ದಾನವ |
ಗಣಮಂ ಮಿಗೆ ಮುಂದಿವೆರಸು ರಣಭೂಮಿಗೆ ರಾ ||
ವಣಸುಕುಮಾರರ್ ಬರೆ ತ |
ಲ್ಲಣಿಸಿದುದು ನಿಲಿಂಪನಿಚಯಮವೀಕ್ಷಿಸುತದನುಂ || ೧೩೫ ||

ಸುಗ್ರೀವಾದಿ ಮಹಾವೀ |
ರಾಗ್ರಣಿಗಳ್ ಸೇನೆವೆರಸು ಸಂವರ್ತದ ಕಾ ||
ಲಗ್ರೀವನ ತೆರದೊಳ್ ವಿಪು |
ಲಗ್ರಾವಮಹಾದ್ರುಮಂಗಳಂ ಕಿಳ್ತಿಟ್ಟರ್ || ೧೩೬ ||

ಮುಂಬರಿದು ನರಾಂತಕನವಿ |
ಲಂಬದೊಳಂ ಪ್ರಾಸಪರಿಘಮಂ ಪಿಡಿದತ್ಯಾ ||
ಡಂಬರಯುದ್ಧಂಗೆಯ್ಯು |
ತ್ತಂ ಬಂದುಂ ಸದೆದನಮಿತವಾನರಬಲಮಂ || ೧೩೭ ||

ಅಳರಿಂದೋಡುವ ವಾನರ |
ಕುಳಕಭಯಂಗುಡುತಮೈದೆ ವಾಲಿಕುಮಾರಂ ||
ತಳಪಟಮಂ ಗೆಯ್ದುಂ ಖಳ |
ಕುಳಮಂ ಕೊಳುಗುಳಕಿದಿರ್ಚಿ ನಿಂದಂ ಕಿನಿಸಿಂ || ೧೩೮ ||

ಕಾಣುತ್ತೆ ನರಾಂತಕನಂ |
ಕ್ಷೋಣೀರುಹದಿಂದೆ ಪೊಡೆದು ಗರ್ಜಿಸೆಯವನಂ ||
ಪೂಣಿಗನಾದೊಡೆ ಕಪಿ ನಿಲ್ |
ಮಾಣದೆ ನೀನೆಂದು ಪೊಯ್ದನಸುರಂ ಗದೆಯಿಂ || ೧೩೯ ||

ಡೆಂಡಣಿಸಿ ಮಗುಳೆ ಸಯ್ರಿಸಿ |
ಕೊಂಡಂಗದನಧಿಕಸತ್ವಸಾಹಸದಿಂದು ||
ದ್ದಂಡಧರಾಧರಮಂ ಮುಂ |
ಕೊಂಡಾರ್ದಿಟ್ಟಂ ನಿಶಾಚರೇಶನ ಸುತನೊಳ್ || ೧೪೦ ||

ತುರಗಂಬೆರಸು ನರಾಂತಕ |
ನುರುಪರ್ವತಘಾತದಿಂದೆ ಹತನಾಗೆ ಮಹೋ ||
ದರನೆಳ್ತಂದಂ ವೈಶ್ವಾ |
ನರಜಾತಗಿದಿರ್ಚಿ ನಿಂದು ಸವಳಂ ಕರೆದಂ || ೧೪೧ ||

ಅದಕಂಜದೆ ಶಿಖಿಪುತ್ರಂ |
ಮದಗಜಮಂ ತಿವಿದು ಕೆಡೆಪಿ ತದ್ಪೃಷ್ಠಸನಂ ||

ಪದೆದಿಕ್ಕಿದನಡಬಳಮುಂ ।
ಪದುಳದೆ ವೇತಾಲಜಾಲಕದನೇವೇಳ್ವೆಂ ॥ ೧೪೨ ॥

ದೇವಾಂತಕನತಿಭರದಿಂ ।
ದಾವಾಗ್ನಿಯ ತೆರದೊಳಖಿಳಶಸ್ತ್ರಗಳಿಂ ಕೀ ॥
ಶಾವಳಿಯಂ ಬಾಧಿಸುತಿರ ।
ಲಾವಳಿಗಂ ಪವನಸೂನು ಬಂದಿದಿರಾಂತಂ ॥ ೧೪೩ ॥

ಚುನ್ನಮೆ ದಾನವರೊಳ್ನೀ ।
ನೆನ್ನೊಡನಾಹವಕೆ ನಿಲ್ಲ ಪೋಗದಿರೆಂದುಂ ॥
ಕೆನ್ನೆಯ ಮುಷ್ಟಿಯೊಳೆರಗಲ್ ।
ಕೆನ್ನೀರಂ ಕಾರ್ದುರ್ ಮುಚ್ಚೆವೋದಂ ದನುಜಂ ॥ ೧೪೪ ॥

ಬಳಿಕೆಚ್ಚತ್ತುಂ ಹನುಮನ ।
ಕೊಳುಗುಳಮುಂ ಮೆಚ್ಚಿ ಪೊಗಳ್ದು ನೆರೆ ಪರಿಘದೊಳಂ ॥
ಗಳಿಲನೆ ಪೊಯ್ಯಲ್ ಮುರಿದಂ ।
ದಿಳೆಗಪನಂ ಕೆಡೆಪಿ ಗುರ್ದ್ದಿದಂ ಪವನಸುತಂ ॥ ೧೪೫ ॥

ಕರಹತಿಯಿಂದಸುರಂ ಯಮ ।
ಪುರಕಂ ಪೋಗಲ್ ತ್ರಿಶಿರಖಳಂ ತಾಂ ಸ ॥
ಯ್ವರಿದಸ್ತ್ರಾವಳಿಯಂ ನೆರೆ ।
ಸರಿಸದೊಳಂ ಕರೆವುತಿರ್ದ್ದನತಿ ಕೋಪದೊಳಂ ॥ ೧೪೬ ॥

ವಾಲಧಿಯಂ ಚುಚ್ಚಿಸಿಕೊಂ ।
ಡೂಳುತ್ತಂ ಪೋದ ಕೋತಿ ನೀನಲ್ತೆ ಮಹಾ ॥
ಕಾಳಾಹಿಯ ಸಮ್ಮುಖದೊಳ್ ।
ಶಾಲೂರಂ ನಿಲ್ವುದುಂಟೆ ಫಡ ಪೋಗೆಂದಂ ॥ ೧೪೭ ॥

ಎನುತಂ ತ್ರಿಶಿರಂ ಶರಗಳ ।
ನನುಪಂ ತೆಗೆದೆಚ್ಚು ಬೊಬ್ಬೆಗೆಯ್ಯಲ್ಕಾಗಳ್ ॥
ಹನುಮಂ ತಾಂ ವೇಗದೊಳಾ ।
ತನ ರಥಕಂ ನೆಗೆದು ಪಿಡಿದು ಕೆಡೆಪಿವನಿಳೆಗಂ ॥ ೧೪೮ ॥

ಅಳ್ತಿಯೊಳಾ ಪವನಸುತಂ ।
ಕಿಳ್ತಿಟ್ಟಂ ತ್ರಿಶಿರದನುಜನಿಂ ತಲೆ ಮೂರಂ ॥
ಕಳ್ತಲೆಗವಿವಂತಾಸುರ ।
ರೆಳ್ತರಲೊಂದೊಂದೆ ಗುರ್ದ್ದಿನಿಂ ಕೊಂದನಣಂ ॥ ೧೪೯ ॥

ಬದ್ಧಭ್ರುಕುಟೀವದನಂ |
ಕ್ರುದ್ಧಂ ತಾಮ್ರಾಕ್ಷನತುಳಸಾಹಸಿ ರಣಸ ||
ನ್ನದ್ಧಂ ಚಲಿತಸುಕೇಶಂ |
ಯುದ್ಧಕ್ಕೆಳ್ತಂದನಂದು ಯುದ್ಧೋನ್ಮತ್ತಂ || ೧೫೦ ||

ಒರ್ವರ್ಕಪಿಗಳ್ ನಿಲ್ಲದೆ |
ಪರ್ವತಶಿರಗಹ್ವರಂಗಳಂ ಸಾರಲ್ಕಂ ||
ಗೀರ್ವಾಣರ್ ಬಾಯ್ವಿಡುತಿರೆ |
ಶರ್ವನಿಭಂ ವೃಷಭವಾನರೇಂದ್ರಂ ಬಂದಂ || ೧೫೧ ||

ಸೆಣಸಿದರೋರೊರ್ವ್ವರ್ ಮಿಗೆ |
ಕಣೆಕಲ್ಪಳೆಗರೆದು ಶಸ್ತ್ರವೃಕ್ಷಾವಳಿಯಿಂ ||
ಖಣಿಖಟಿಲುಬ್ಬುಟೆ ದಿಗ್ವಾ |
ರಣಗಳನುರೆ ಬೆಗಡುಗೊಳಿಸಿತದನೇವೇಳ್ವೆಂ || ೧೫೨ ||

ಇಪ್ಪಿನವಮಾ ವೃಷಭಂ ದಿವ |
ಖರ್ಪರವೊಡೆವಂತೆ ಗರ್ಜಿಸುತ್ತಂ ಗರುಡಂ ||
ಸರ್ಪದೊಳೆರಗುವ ಪರಿಯಿಂ |
ತೋರ್ಪಡಿಸುತೆ ಗುದ್ದಿ ಕೊಂದನಾ ರಕ್ಕಸನಂ || ೧೫೩ ||

ಮೇಣಾ ಪ್ರಮತ್ತಮತ್ತರ್ |
ಕೌಣಪರಂ ಕೂಡಿ ಬಂದು ನಿಲೆ ಬಳಿಕವರಂ ||
ಗೋಣಂ ಮುರಿದಿಟ್ಟಂ ಸಂ |
ತ್ರಾಣಿಸಿದಂ ನೊಂದ ಕೀಶಭಟಸೈನಿಕಮಂ || ೧೫೪ ||

ಸೋದರರಳಿಯಲ್ ಕಂಡುಂ |
ಕ್ರೋಧದೊಳತಿಕಾಯನಾಜಿಗಂ ಮುಂಬರಿದುಂ ||
ಪಾದಪಚರಕುಲಮಂ ಸಂ |
ಬಾಧಿಸುತಂ ಬಂದನಂತದಸವರಾಂಬಕನೊಲ್ || ೧೫೫ ||

ಗತಘಟಕರ್ಣನೊಲಸವರಾ |
ಕೃತಿಯುಂ ತಾಳ್ದಿಯ್ದುವರ್ಸನಿವನಾರೆನುತುಂ ||
ಕ್ಷಿತಿನಾಥಂ ಕೇಳೆ ಗದಾ |
ನ್ವಿತಹಸ್ತಂ ಪೇಳ್ದನವನ ಸುಗುಣಾವಳಿಯುಂ || ೧೫೬ ||

ಈತಂ ದನುಜೇಂದ್ರನ ತನು |
ಜಾತಂ ಶಕ್ರಾರಿಕುಂಭಕರ್ಣಾಗ್ರ್ಗತಿವಿ ||

ಖ್ಯಾತಂ ಶ್ರುತಿಸಂಪನ್ನಂ ।
ನೀತಿಜ್ಞಂ ಸಮರಧೀರನತಿಕಾಯಾಖ್ಯಂ ॥ ೧೫೭ ॥

ಎಂಬನಿತರೊಳತಿಕಾಯಂ ।
ಮುಂಬರಿದುರವಣಿಸಿ ತರುಬುತಟಪೀಚರರಂ ॥
ತಾಂ ಬಗೆಗಂ ತಾರದೆ ಕಮ ।
ಲಾಂಬಕನೆಡೆಗೈದೆ ಬಂದು ನೋಡಿದನವನಂ ॥ ೧೫೮ ॥

ಈತಂ ಲಕ್ಷ್ಮೀಶನಲಾ ।
ಭೂತಳಭಾರಾಪಹಾರಕೋಸುಗಮಿಳೆಯೊಳ್ ॥
ಜಾತನುಮಾದಂ ದಿಡಮೆಂ ।
ದೋತುಂ ಕಣ್ಮುಚ್ಚಿರ್ದ್ದು ಜಾನಿಸಿದನತಿಕಾಯಂ ॥ ೧೫೯ ॥

ಸಮರದೊಳೀ ರಾಮನ ಪದ ।
ಕಮಲಕ್ಕರ್ಪಿಸುವೆನೆನ್ನ ತನುವನೆಸುತ್ತುಂ ॥
ಸಮದೋಕ್ತಿಗಳಿಂ ಮಾಯಾ ।
ಭ್ರಮಿತರ್ ತಿಳಿವಂತು ಜರೆವುತವನಿದಿರಾದಂ ॥ ೧೬೦ ॥

ಗುಣಟಂಕೃತಿಗೆಯ್ದಲ್ ದಿನ ।
ಮಣಿಕುಲವರಸೈದೆ ಚಾಪಮಂ ಕಯ್ಕೊಳೆ ಲ ॥
ಕ್ಷ್ಮಣನಗ್ರಜಾತನಡಿಗಂ ।
ಮಣಿದುಂ ಬಿಲ್ಗೊಂಡು ತಿರುವನೇರಿಸಿ ನಿಂದಂ ॥ ೧೬೧ ॥

ತರುವಲಿ ನೀನೆನ್ನೊಳ್ಸಂ ।
ಗರಕಂ ಮಾರಾಂತು ನಿಲ್ಲಲಾರ್ಪ್ಪೆಯ ನೀತಾ ॥
ವರನೆತ್ತಂದುಂ ಸೆಣಸಿದೊ ।
ಡುರುಸತ್ವಂ ಕಾಣ್ಗುಮೆಂದು ಗರ್ಜಿದಂ ದನುಜಂ ॥ ೧೬೨ ॥

ತರುಣಂ ತಾನಾದೊಡದೇ ।
ನುರುಸತ್ವಕೆ ಕೊರತೆಯುಂಟೆ ಕಣೆಯುಬ್ಬಟೆಯಂ ॥
ದುರುಳನೆ ಘಡ ನೋಡೆಂದುಂ ।
ಶರಮುಂ ತೆಗೆದೆಚ್ಚು ಲಕ್ಷ್ಮಣಂ ಬೊಬ್ಬಿರಿದಂ ॥ ೧೬೩ ॥

ಇಸಲಂಬುಂ ಕತ್ತರಿಸುತೆ ।
ಬಿಸುಗಣೆಯುಂ ತುಡಿಸಿ ಸಿಂಜಿನಿಗೆ ವೇಗದೊಳಂ ॥
ದಸುರಂ ತೆಗೆದೆಚ್ಚುಂ ಗ ।
ರ್ಜಿಸೆ ಲಕ್ಷ್ಮಣನಾ ಕಳುಂಬಸುಂ ಕಡಿವಿಟ್ಟಂ ॥ ೧೬೪ ॥

ಪಸುಳೆಯದಾದೊಡೆಯುಂ ಸಾ |
ಹಸಿಯಕ್ಕುಂ ಭಳಿರೆ ಭಾಪು ಮೆಯ್ವೆಗೆಯದಿರೀ ||
ವಿಶಿಖಕ್ಕೆಸುತುಂ ಕಿಡಿಕಿಡಿ |
ಮಸಗೆ ಮಹಾಶರಮನೆಚ್ಚನಸುರೇಂದ್ರಸುತಂ || ೧೬೫ ||

ಮಸೆಗಾಣಲ್ ಮೆಯ್ಯೊಳ್ ಕಂ |
ಪಿಸಿ ಕವಲಂಬುಗಳನೆಚ್ಚು ಸಾರಥಿಯಂ ಘಾ ||
ತಿಸಿ ಗಂಧರ್ವಗಳಂ ನೋ |
ಯಿಸಿ ಧನುವಂ ಕಡಿದನೈದೆ ಲಕ್ಷ್ಮಣನಾಗಳ್ || ೧೬೬ ||

ಅಳರದೆ ಬಿಲ್ಗೊಂಡಸುರಂ |
ಮುಳಿಸಿಂ ಜೇವೊಡೆದು ಸರಳ ಸರಿಯಂ ಕರೆಯಲ್ ||
ನೆಲಸಿದುದಾ ಕಣೆವಿಂಡಿನ |
ಕುಲಜನ ಮೆಯ್ಗುತ್ತಿ ಪೇಳಲೇನದ್ಭುತಮಂ || ೧೬೭ ||

ಅಂಬುಗಳಂ ಕಿಳ್ತುಂ ಘಾ |
ಲಾಂಬಕನಿಭನಾಗಿ ಕಣೆಗಳಂ ಖಳನೊಡಲೊಳ್ ||
ತುಂಬಿಸಿದಂ ನಿರ್ಜರನಿಕು |
ರುಂಬಂ ಬೆರಗಾಗೆ ಲಕ್ಷ್ಮಣಂ ಸತ್ವರಮುಂ || ೧೬೮ ||

ಇಸುಗೆಯ ಭಟರಿರ್ವರ್ ಮೆ |
ಯ್ಮಸೆಯುಂ ಲೆಕ್ಕಿಸವೆ ಪಸಿದ ಬಗ್ಗನ ತೆರದಿಂ ||
ನಸುಗುಂದದೆ ಪೊಯ್ದಾಡಿದ |
ರಸಮಾಸ್ತ್ರಗಳಿಂದೆ ಭೂಮಿ ತಲ್ಲಣಗೊಳ್ವೊಲ್ || ೧೬೯ ||

ಇವನಳ್ಕಂ ಪುಲ್ಗಣೆಗಳ |
ನಿವಹಕ್ಕಂ ತುಡುವುದಬ್ಜಸಂಭವಶರಮಂ ||
ತವಕದೊಳೆಂದಂಬರದೊಳ್ |
ರವಮಾಗೆಕ್ಕೆಳ್ದು ಲಕ್ಷ್ಮಣಂ ಮನದಂದಂ || ೧೭೦ ||

ನೆನೆದುಂ ರಾಮನ ಚರಣಮ |
ನನುವಿಂ ಪಸಜಾಸನಾಸ್ತ್ರಮಂ ತೆಗೆದಿಸಲುಂ ||
ತನಿಗೆಂಡಂಗೆದರುತೆ ಬರೆ |
ದನುಜಂ ದಿಕ್ಪಾಲದತ್ತಶರಗಳನೆಚ್ಚಂ || ೧೭೧ ||

ವಿಶಿಖಾವಳಿಯುಂ ಕಡಿದುಂ |
ಬಿಸುಗೆದರುತ್ತುಂಬಿಸುತ್ತೆ ದಿಕ್ಪಾಲಕರಂ ||

ಅಸುರನ ಶಿರಮಂ ಸಲೆ ಖಂ |
ಡಿಸಿ ಕೆಡೆಪಿದುದಿಳೆಗೆ ಕಮಲಸಂಭವಬಾಣಂ ‖ ೧೭೨ ‖

ಘಾತಿಸಿ ದೈತ್ಯರ ಬಲಮಂ |
ಸೀತಾಪತಿಯೆಡೆಗೆ ಬಂದು ತತ್ಪದಪಂಕೇ ‖
ಜಾತಕ್ಕಭಿನಮಿಸಲ್ ಸಂ |
ಪ್ರೀತಿಯೊಳಂ ಸಂತಮಿಟ್ಟನಾ ಲಕ್ಷ್ಮಣನಂ ‖ ೧೭೩ ‖

ಉಲಿದುದು ದುಂದುಭಿ ನಾಕಿಗ |
ರೊಲವಿಂ ಫುಲ್ಲಪ್ರಸೂನಮಂ ಚೆಲ್ಲಲ್ಕಂ ‖
ಬೆಳಗಿತು ದಿಕ್ತಟಮಿನಕುಲ |
ತಿಲಕಗೆ ಜಯಲಕ್ಷ್ಮಿಯೊಲ್ದಳೆಂದಂ ಸೂತಂ ‖ ೧೭೪ ‖

# ದಶಮಾಶ್ವಾಸಂ.

ವೃತ್ತ ॥ ನೀಲಾಬ್ದೋಪಮಚಾರುಗಾತ್ರನಮರಾನೀಕಾರ್ಚಿತಾಂಘ್ರಿದ್ವಯಂ ।
ಬಾಲಾರ್ಕಾಮಿತಭಾಸನಾಸುರಕುಲಧ್ವಂಸಂ ಧರಾಕನ್ಯಕಾ ॥
ಲೀಲಾಸದ್ಗೃಹನಾನತಾವನಿಪತಿವ್ರಾತಂ ಕೃಪಾಸಾಗರಂ ।
ಕಾಲಾರಿಪ್ರಿಯಮಿತ್ರನೀಗೆ ಶುಭಮಂ ಶ್ರೀರಾಘವಂ ಸಲ್ಕೆಯಿಂ ॥ ೧ ॥

ಕಂದ ॥ ದಶಕಂಠದರ್ಪಕುಂಭೀ ।
ನಸಗರುಡಂ ತ್ರಿಶಿರದೈತ್ಯಮದವಿಧ್ವಂಸಂ ॥
ಬಿಸಜಶರಶರವಿದೂರಂ ।
ಲಸಿತಮಹಾವೀರನೀಗೆ ಸುಖಮಂ ಹನುಮಂ ॥ ೨ ॥

ಜತಿಗಳೆ ಕೇಳಿಂ ರಾಕ್ಷಸ ।
ಹತಿವೃತ್ತಶ್ರವಣವಾಗೆ ದನುಜಾಧೀಶಂ ॥
ಅತಿದುಃಖಂದಾಳ್ದಂ ಭೂ ।
ಗತನಾಗುತೆ ದುಗುಡದಿಂದೆ ಮೆಯ್ಮರೆದಿರ್ದಂ ॥ ೩ ॥

ಉಮ್ಮಳಿಸಲೇಕೆ ನಾನಿರೆ ।
ಬೊಮ್ಮನ ಕಣೆಯಿಂದೆ ಮನುಜವಾನರಕುಲಮಂ ॥
ಗಮ್ಮನೆ ಬಂಧಿಸಿ ತರ್ಪೆಂ ।
ನಿಮ್ಮಂಘ್ರಿಯ ಕೃಪೆಯೊಳೆಂದನಾ ಘನನಾದಂ ॥ ೪ ॥

ಸಲೆ ತುಳಿಲ್ಗೆಯ್ದುಯ್ಯಗೆ ।
ತಳರ್ದಂ ನಿಜಸೇನೆವೆರಸು ಮಿಸುನಿಯ ತೇರೊಳ್ ॥
ಅಳರ್ದಳೆದುಂ ಕಪಿನಿಚಯಂ ।
ತಳಿರ್ಮರೆಯೊಳ್ ನೋಡುತಿರ್ದುದಸುರನ ಬರವಂ ॥ ೫ ॥

ಈ ದಿನದೊಳ್ಪರಬಲಮಂ ।
ಬಾಧಿಸುವೆಂ ಬ್ರಹ್ಮಶರವೊಳೆಂದೆನುತಂ ಸ ॥
ವ್ಯೋಮದದೊಳೆಳ್ತಂದಂ ಘನ ।
ನಾದಂ ಸಮರಾಂಗಣಕ್ಕೆ ವಾಹಿನಿವೆರಸುಂ ॥ ೬ ॥

ನೀಲನಳವೃಷಭಜಾಂಬವ ।
ವಾಲಿಜಹನುಮಂತರವಿಜಮುಖ್ಯರ್ ಭರದಿಂ ॥

ವಾಲಧಿಯಂ ಬಿಗಿದಸುರರ ।
ಜಾಲಮನುರೆ ಧರಣಿಗಪ್ಪಳಿಸಿ ದಣಿದರಣಂ ॥ ೭ ॥

ಆನೆಗಳಂ ತಿವಿದರ್ ಸು ।
ಮ್ಮಾನದೆ ತುರಗಗಳನ್ನೈದೆ ಒಡಿದುರುಳಿಸಿದರ್ ॥
ದಾನವರಂ ಸದೆದರ್ ವೈ ।
ಮಾನಿಕರುರೆ ಮೆಚ್ಚುವಂತು ಸಮರಾಂಗಣದೊಳ್ ॥ ೮ ॥

ಅನಿತರೊಳಾ ಘನನಾದಂ ।
ತನುವಂ ಮರೆಗೆಯ್ದು ಪುಷ್ಕರಾಂತಮನೇದ್ದರ್ಗಂ ॥
ವನಜಾಸನಶರಮುಂ ಸಿಂ ।
ಜಿಸಿಯೊಳ್ಪೊಡುತ್ತೆ ವೇಗದಿಂದೆಚ್ಚಾರ್ದರ್ಗಂ ॥ ೯ ॥

ಉರಿಯಂಬಿನ ಮಳೆಯಂ ತಾಂ ।
ಸುರಿದುದೊ ಘನಮೆಂಬೊಲಬ್ಜಭವವಿಶಿಖಂ ವಾ ॥
ನರರಂ ಬಂಧಿಸಿ ಘಾತಿಸಿ ।
ಭರದಿಂ ಚಾರಿಸಿತು ತನುಗಳಿಂದಸುಗಳನುಂ ॥ ೧೦ ॥

ಅಸುರನ ಶರಹತಿಯಿಂ ಕಪಿ ।
ವಿಸರಂ ಕೆಡೆದಿರ್ಪ್ಪುದಿನ್ನು ತತ್ಕ್ಷಳಸಂ ಘಾ ॥
ತಿಸದಿದ್ದೆಯಮ್ಮಂ ಬಿಡನಿದು ।
ಪುಸಿಯಲ್ಲಮೆನುತ್ತೆ ರಘುಜನನುಜಂಗೆಂದಂ ॥ ೧೧ ॥

ಎಂಬಿನಮಾ ವಿಶಿಖಂ ನೆರೆ ।
ಮುಂಬರಿದೆಯ್ತಂದು ಮುಟ್ಟಲಂಜುತ್ತಿರೆ ಪ ॥
ದ್ಮಾಂಬಕನಭಯಂಗೊಟ್ಟಂ ।
ಕುಂಜಣಿಯೊಳ್ ಮೆಯ್ಯನಿತ್ತನನುಜಂಬೆರಸುಂ ॥ ೧೨ ॥

ಸುತನಸ್ತ್ರದ ಮಹಿಮೆಯನೀ ।
ಕ್ಷಿತಿತಳಕಂ ತೋರ್ಪ್ಪೆನೆಂದು ಸರಲೀಲೆಯೊಳಂ ॥
ಪತನಂಗೆಯ್ದಿರೆ ರಾಘವ ।
ನತಿಹರ್ಷದೊಳಿಂದ್ರವೈರಿ ಪುರಕಂ ಮರಳ್ದಂ ॥ ೧೩ ॥

ಚಾರುಂಜೀವಗಳಿಂ ಕಪಿ ।
ವಾರಂ ನಿಸ್ಸಂಜ್ಞಮಾಗಿ ಬಿಳ್ದಿರೆ ನಿಶಿಯೊಳ್ ॥
ವೀರವಿಭೀಷಣನೆಳ್ತಂ ।
ದಾರಯ್ದು ಪುಡುಂಕುತಿರ್ದ್ದನನಿಲಾತ್ಮಜನಂ ॥ ೧೪ ॥

ಬರೆವರೆ ಕಂಡಂ ಪಾವನ ।
ಚರಿತನನನಿಲಾತ್ಮಜಾತನಂ ರಾತ್ರಿಯೊಳಂ ॥
ಹರಹರ ಐನೇತರ್ಕೇ ।
ಧುರದೊಳ್ ಮೆಯ್ಮರೆದೆ ವೀರ ಶರಣಾಗೆಂದಂ ॥ ೧೫ ॥

ಸಲೆ ನಡೆತಂದಿರ್ದ್ದರ್ ಕಪಿ ।
ಬಲದೊಳ್ ವೇತಾಲಭೂತಶಾಕಿನಿಯರ ಸಂ ॥
ಕುಲಮಂ ನೋಡುತ್ತಂ ಕ ।
ಳ್ತಲೆಯೊಳ್ ನೆರೆ ಕಂಡರಚ್ಛಭಲ್ಲಾಧಿಪನಂ ॥ ೧೬ ॥

ಶರಹತಿಯೊಳ್ ಬಾಯ್ಬಿಡುತರೆ ।
ದೆರೆದಂಬಕದಿಂದಮಿರ್ದ್ದ ಋಕ್ಷೇಶ್ವರಗಂ ॥
ದೆರಗಿ ವಿಭೀಷಣನವನಂ ।
ಕರೆದುಂ ಮಾತಾಡಿಸುತ್ತುಮಿರ್ದ್ದಂ ಬಳಿಯೊಳ್ ॥ ೧೭ ॥

ಅರಿಗಳ್ಗೆ ವಿಜಯಮಾದುದು ।
ನರನಾಥಂ ಮುಚ್ಛೆಗೊಂಡು ಮಲಗಿರ್ಪ್ಪಂ ವಾ ॥
ನರರೆಲ್ಲರ್ ನೊಂದರ್ ಕಂ ।
ಡಿರೆ ನೀಮೇನಿದಕೆ ತಕ್ಕ ಕಜ್ಜಮನೆಂದಂ ॥ ೧೮ ॥

ಲೇಸಂ ಪೇಳ್ವಯ್ ದನುಜಾ ।
ಧೀಶನೆ ಮಾರುತಿಯನೀಕ್ಷಿಸಿರ್ಪ್ಪೆಯ ರವಿ ವಾ ॥
ರಾಶಿಯನೆಯ್ದಿಲ್ ಬಳಿಕಂ ।
ಕೀಶಾನೀಕದೊಳಗೆಂದು ಜಾಂಬವನುಸಿರ್ದಂ ॥ ೧೯ ॥

ಮನುಜೇಶ್ವರರವಿಸುತರಂ ।
ನೆನೆಯದೆ ಪವಮಾನಪುತ್ರನಂ ಕೇಳ್ವುದಿದೇ ॥
ನೆನುತೆ ವಿಭೀಷಣನೆಂದೊಡೆ ।
ವನಜಾಸನಸೂನು ಪೇಳ್ದನತಿವಿನಯನೊಳಂ ॥ ೨೦ ॥

ಅವನಾರೆಂದರಿದಿರ್ಪ್ಪೆಯ್ ।
ಶಿವನಂಶೀಭೂತನಖಿಳಜೀವಾಧಾರಂ ॥
ವಿವರಿಸಲಕ್ಕುಮೆ ತದ್ಗುಣ ।
ನಿವಹಮನಿನ್ನೆಂದು ಜಾಂಬವಂತಂ ಪೇಳ್ದಂ ॥ ೨೧ ॥

ಎನಲನ್ನೆಗಮನಿಲಾತ್ಮಜ ।
ನನುವಿಂ ಮೆಯ್ವೋದ್ದು ಜಾಂಬವಂತಗೆ ಮಣಿದುಂ ॥

ತನಗೂೞಿಗಮೇಂ ನೇಮಿಸೆ |
ಜನದದೊಳದನೆಸಪೆನೆಂದೊಡಜಸುತನುಸಿರ್ದಂ || ೨೨ ||

ಚಾರಯ್ ಪವನಜ ವಾನರ |
ವಾರಮನುೞಿಯಿಸಿ ಧರಾಧಿಪನ ಕಾರ್ಯಮನುಂ ||
ಪೂರಯ್ಸುವೊಡಂ ನೀನೇ |
ಕಾರಣನಾಗಿರ್ಪ್ಪೆಯೆಂಬುದಂ ನೆನೆನೆನೆದುಂ || ೨೩ ||

ಸರಳಿಸು ಕಡಲಯ್ದಂ ಪಾ |
ಲ್ಗೊರೆಯಾಣ್ಮನ ತೀರದಲ್ಲಿ ನಿರುಪಮಶೋಭಾ ||
ಕರ ಚಂದ್ರದ್ರೋಣ ಮೆನಿ |
ಪ್ಪರು ಶೈಲಂ ತೋರ್ಪ್ಪದಲ್ಲಿ ಮೂಲಿಕೆಯಿರ್ಕ್ಕುಂ || ೨೪ ||

ವರಶಲ್ಯವಿಶಲ್ಯಕರಣಿ |
ಯುರುತರಸಂಧಾನಕರಣಿಸಂಜೀವಿನಿಗಳ್ ||
ಪರಿಶೋಭಿಸೆ ನಾಲ್ಕುಂ ಬಗೆ |
ಪರಮೌಷಧಮಿರ್ಪ್ಪದಿಂದದಂ ತರೆವೇಳ್ಕುಂ || ೨೫ ||

ರವಿಯುದಯದ ಮುನ್ನಮೆ ತಂ |
ದಿವರಸು ಬರ್ಪ್ಪಂತು ಗೆಯ್ಯೆವೇಳ್ಕೆಂದುಂ ಜಾಂ ||
ಬವನೆನೆ ಕೇಳ್ದುಂ ಭರದಿಂ |
ಪವನಸುತಂ ನೆಗೆದನೈದೆ ಮಲಯಾಚಲಕಂ || ೨೬ ||

ಆ ಗಿರಿಯ ಶಿಖರದಿಂ ಮೆ |
ಯ್ವೂಗಿ ಮಹಾಸತ್ತ್ವದಿಂದ ಮುಸಿರಂ ಬಲಿದುಂ ||
ರಾಘವಸಂ ನೆನೆದುತ್ತರ |
ಭಾಗಕ್ಕಂ ಪಾರ್ದ್ದು ಗಗನಪಥದೊಳ್ ನಡೆದಂ || ೨೭ ||

ಗರುಡನ ಗತಿಯಂ ಧಿಕ್ಕರಿ |
ಪುರುಸತ್ತ್ವಮದೆನಿತೊ ಪವನಪುತ್ರಂಗೆನುತಂ ||
ಸುರನಿಕರಂ ಕೊಂಡಾಡು |
ತ್ತಿರೆ ಪಾಯ್ದಂ ಮೇರುಶೈಲನವಖಂಡಗಳಂ || ೨೮ ||

ನಲವಿಂ ಲವಣೇಕ್ಷುಸುರಾ |
ಜಲಧಿಗಳಂ ಪಾಯ್ದು ಸರ್ಪಿದಧಿಶರಧಿಗಳೊಳ್ ||
ಚಲಿಸುತೆ ತತ್ತ ದ್ವೀಪಂ |
ಗಳನುೞಿದುಂ ಕ್ಷೀರವನಧಿಯೆಡೆಯಂ ಸಾರ್ದ್ದಂ || ೨೯ ||

ಶ್ವೇತದ್ವೀಪದೊಳಂ ಸು |
ಜ್ಯೋತಿರ್ಮಯಮಾಗೆ ಶೋಭಿಸುವ ಶೈಲಗಳಂ ||
ವಾತಭವಂ ಕಂಡುಂ ಸಂ |
ಪ್ರೀತಿಯೊಳಂ ನೆಗೆದನದ್ರಿಶಿಖರಂಗಳ್ಗಂ || ೩೦ ||

ಇವನಾರಿಲ್ಲಿಗೆ ನಡೆತಂ |
ದವನೆನುತಂ ಕಾಪಿನಮರರುಂ ಗರ್ಜಿಸೆ ರಾ ||
ಘವದೂತಂ ತಾಂ ತತ್ಕಾ |
ರ್ಯವಿಶೇಷಮನೆಸಗೆ ಬಂದೆನೆಂದಂ ಹನುಮಂ || ೩೧ ||

ಪೆಳರ್ಗೊಂಡು ಕಾಪಿನಮರರ |
ಕುಳಮೆಯ್ದಿದುದಂತು ಕರಣಿಸಂಕುಳಮಾಗಳ್ ||
ಕಳೆಗುಂದಿಯಡಂಗಲ್ಕಪಿ |
ತಿಳಕಂ ನೆರೆಯರಸುತಿರ್ದ್ದನಾ ಮೂಲಿಕೆಯಂ || ೩೨ ||

ಕಾಣದಿರಲ್ ಭರದಿಂ ತ |
ತ್ಕ್ಷೋಣೀಧರಮಂ ಸಮೂಲಮೆನೆ ಕಿಳ್ತುಂ ಮೇಣ್ ||
ಪ್ರಾಣಕುಮಾರಂ ತನ್ನಯ |
ಪಾಣಿಗಳೊಳ್ ತಳೆದು ನೆಗೆದನಂಬರಪಥದೊಳ್ || ೩೩ ||

ಸರಭಸಮಾಶುಗಗತಿಯೊಳ್ |
ಬರೆವರೆ ರಾವಣನ ಮತದೊಳಸುರರ್ ಬಂದುಂ ||
ತರುಬಿದೊಡವರಂ ವಾಲದೊ |
ಳುರೆ ಬಿಗಿದುಂ ಕೆಡೆವುತಿರ್ದ್ದನಂಭೋನಿಧಿಯೊಳ್ || ೩೪ ||

ಗಾಹಿನ ನಕ್ತಂಚರರ ಸ |
ಮೂಹಮನುರೆ ವಾಲದಿಂದೆ ಸದೆದೆಳ್ತಂದಂ ||
ಊಹಿಸಲಸದಳವೀತನ |
ಸಾಹಸಮನೆನುತ್ತೆ ಪೊಗಳುತಿರ್ದ್ದರ್ ದಿವಿಜರ್ || ೩೫ ||

ಕರಧೃತಗಿರಿಶಶಿರವಿಗಳಿ |
ನುರುವೇಷ್ಟಿತವಾಲಭುವನಚಕ್ರದೆ ಚಾಮೀ ||
ಕರಮುಕುಟಸುಶೃಂಗಂ ಸುರ |
ಗಿರಿಯಂದಂಬಡೆದು ಬಂದನಾ ಕಲಿಹನುಮಂ || ೩೬ ||

ಇಳಿದಿರಿಸಿದನಚಲಮನಂ |
ದೊಲವಿಂ ಜಾಂಬವನ ಪೊರೆಯೊಳದನೀಕ್ಷಿಸುತಂ ||

ಉಳಿಸಿದೆ ವಾನರರಸುವಂ ।
ಕಲಿ ನಿನಗೆಣೆಗಾಣೆನೆಂದು ಮಿಗೆ ಮನ್ನಿಸಿದಂ ॥ ೩೭ ॥

ಗಿರಿಯೊಳ್ಗಂದಂ ಪಸರಿಸೆ ।
ನರನಾಥರ್ ಸಕಲಕೀಶಭಟರೆಲ್ಲರ್ತರ್ ॥
ಉರುತರನಿದ್ರೆಯೊಳೊರಗಿ ।
ರ್ಪುರಗಾವಳಿಯೇಳ್ವ ತೆರದೊಳಾ ಸಮಯದೊಳಂ ॥ ೩೮ ॥

ಹನುಮನನೀಕ್ಷಿಸಿ ರಾಮಂ ।
ಪುನರುದ್ಭವಮಾದುದಯ್ಸೆ ನಿನ್ನಿಂದಂ ಪಾ ॥
ವನತರಮೂರ್ತಿಯೆ ಸಂಜೀ ।
ವನರೂಪನೆ ಭಳಿರೆ ಎಂದು ಪೊಗಳ್ದಂ ನಲವಿಂ ॥ ೩೯ ॥

ರವಿಜಾದ್ಯರ್ ಕೊಂಡಾಡಿದ ।
ರವಿರಳಸಂತೋಷದಿಂದೆ ಸನ್ನುತಿಗೆಯ್ದುಂ ॥
ದಿವಿಜರ್ ಪೂವಳೆಗೆರೆದರ್ ।
ಪವಮಾನಾತ್ಮಜನ ದಿವ್ಯಮಕುಟಾಗ್ರದೊಳಂ ॥ ೪೦ ॥

ದನುಜರ್ ಕಾಣ್ಬರ್ ಸಂಜೀ ।
ವನಗಿರಿಗಳನಿರಿಸ ಮೊದಲ ತಾಣದೊಳೆಂದಾ ॥
ಇನಜಂ ಪೇಳಲೊಡಂ ಕಲಿ ।
ಹನುಮಂ ತೆಗೆದಿಟ್ಟು ಬಂದನಲ್ಲಿಗೆ ಭರದಿಂ ॥ ೪೧ ॥

ಒಡೆಯನ ಮತದಿಂ ಕಪಿಗಳ ।
ಗಡಣಂ ಕಯ್ಕೊಳ್ಳಿವೆಳಗಿನಿಂದಂ ಪುರಮಂ ॥
ಬಿಡದೊಳವೊಕ್ಕೋರೊರ್ವರ್ ।
ಗುಡಿಗೋಹುರಸೆಜ್ಜೆಮಾಡಮಂ ಪೊತ್ತಿಸಿದರ್ ॥ ೪೨ ॥

ಬಂಧುರಮಂದಿರಕುಲಮಂ ।
ಮಂದುರಮಂ ಗಂಧನಾಗಶಾಲೆಗಳಂ ಗೋ ॥
ವಿಂದಾರ್ಪಣಮೆನುತಂ ನಲ ।
ವಿಂದಂ ಕಪಿವೃಂದಮಂದು ಪೊತ್ತಿಸಿದುದಣಂ ॥ ೪೩ ॥

ವಾನರರಾರ್ಬಟೆಯಂ ಪುರ ।
ಮಾನಿನಿಜನದಾರ್ತಘೋಷಮಂ ಕೇಳುತ್ತಂ ॥
ದಾನವಪತಿಯೆಳ್ಚರುತುಮಿ ।
ದೇನದ್ಭುತಮೆಂದು ನಡೆದು ನೋಡಿದನಾಗಳ್ ॥ ೪೪ ॥

ಸರಸಿಜಭವನಸ್ತ್ರದಿನಾ |
ಸುರನಾಥಾರಾತಿ ಮನುಜವಾನರರಂ ಸಂ ||
ಹರಿಸಿದುದೇನಾಯ್ತಿದುವು |
ಚ್ಚರಿಯೆನುತುಂ ಜುದ್ದಕಟ್ಟಿದಂ ದಾನವರಂ || ೪೫ ||

ಪಿಡಿ ಪೊಡೆ ಕಡಿ ಬಡಿಯೆನುತು |
ಗ್ಗಡಿಸುತ್ತುಂ ಖಡ್ಗಖೇಟಕಗಳಂ ತಾಳ್ದುಂ ||
ನಡೆದುದು ಭರದಿಂ ರಕ್ಕಸ |
ಗಡಣಂ ಕಡುಗಿನಿಸಿನಿಂದೆ ಗರ್ಜಿಸುತಾಗಳ್ || ೪೬ ||

ಮರ್ಬಿಗರೆಲ್ಲರೆ ಕಾಣುತೆ |
ಪೆರ್ಬೆಟ್ಟುಗಳಿಂದೆ ಮರಗಳಿಂದಂ ಶಿಲೆಯಿಂ ||
ದಾರ್ಬಟಿಸುತ್ತುಂ ಕಪಿಗಳ್ |
ನಿರ್ಭಯಮುಂ ಸದೆವುತಿರ್ದ್ದರಾ ಖಳಕುಳಮಂ || ೪೭ ||

ಬೆಬ್ಬಳಮಿಲ್ಲದೆ ದಾನವ |
ರುಬ್ಬಣದೊಳ್ಕಡಿದು ಕೊಜ್ಜೆ ಕೋಲ್ವಳೆಗರೆದುಂ ||
ಬೊಬ್ಬಿರಿದೆಲ್ಬಟ್ಟಿದರಾ |
ಗಬ್ಬಿಗಳಂ ಕಿನಿಸಿನಿಂದೆ ಪಿಡಿದುಂ ಬಡಿದುಂ || ೪೮ ||

ಇನಸುದಯದ ಕಾಲದೊಳಂ |
ದನುಜೇಶನ ನೇಮದಿಂದೆ ಕುಂಭನಿಕುಂಭರ್ ||
ಅನುವರಕೆಲ್ತಂದರ್ ಕಾ |
ಲನ ಸೋದರರೆಂಬ ಪರಿಯೊಳಸುರರ್ಬೆರಸುಂ || ೪೯ ||

ದಟ್ಟಯಿಸಿ ಬರ್ಪ್ಪ ದನುಜರ |
ಬಟ್ಟೆಯನಡ್ಡಯ್ಸಿ ಕೀಶನಾಯಕರುಂ ಪೆ ||
ರ್ಬೆಟ್ಟುಗಳಂ ಪಿಡಿದುಂ ಕ |
ಟ್ಟುಬ್ಬಟೆಯಿಂ ಬೊಬ್ಬಿಡುತ್ತೆ ಕೆಣಕಿದರಾಗಳ್ || ೫೦ ||

ಕಡುಪಿಂ ಪ್ರಜಂಘದೈತ್ಯಂ |
ಕಿಡಿಗೆದರುತ್ತುಂ ಸುಲೋಚನಗಳಿಂ ಮಿಗೆ ಮುಂ ||
ಗುಡಿಯೊಳ್ ನಿಂದುಂ ಕಪಿಗಳ |
ಗಡಣಮನಸರೆದಿಟ್ಟನಖಿಳಶಸ್ತ್ರಾಸ್ತ್ರಗಳಿಂ || ೫೧ ||

ಭರದಿಂ ಪ್ರಜಂಘನಂ ಸುರ |
ವರಪೌತ್ರಂ ಕೊಂದನಂದು ಪೆರ್ವೆಟ್ಟುಗಳಿಂ ಸಂ ||

ಗರಕಂ ಯೂಪಾಕ್ಷಂ ಬರೆ |
ವರೆವೈಂದಂ ಬಡಿದು ಕೆಡೆಪಿದಂ ತತ್ಪಳನಂ || ೩೧೨ ||

ಜವದಿಂ ಶೋಣಿತಸಯನಂ |
ಬವರದೊಳಂ ಕೀಶಸುಭಟಬಲಮಂ ಸದೆಯಲ್ ||
ದ್ವಿವಿದಕಪೀಂದ್ರ ತದ್ದಾ |
ನವನಂ ಘನವೃಕ್ಷದಿಂದೆ ಬಡಿದೊರಗಿಸಿದಂ || ೩೧೩ ||

ಕುಂಭಶ್ರವಣನ ಪುತ್ರಂ |
ಕುಂಭಾಸುರನಧಿಕಗರ್ವದಿಂದೆಯ್ತಂದುಂ ||
ಕುಂಭಿನಿಚಯಮಂ ಕೇಸರಿ |
ಡಿಂಭಂ ಪೊಯ್ವಂತು ಸದೆದನಗಚರಕುಲಮಂ || ೩೧೪ ||

ಇನಸುತನಿದಿರ್ಚ್ಚಿ ದಾನವ |
ನನುವರದೊಳ್ ಶೈಲವೃಕ್ಷನಿಕರಮನೆಸೆದುಂ ||
ಕಿನಿಸಿಂದಂ ತದ್ದೈತ್ಯನ |
ತನುವಂ ಘಾತಿಸಿದನಧಿಕಸಾಹಸಸಮರದೊಳ್ || ೩೧೫ ||

ಕಂಗಿಡದಸುರಂ ಮುಳಿಸಿಂ |
ಕೆಂಗರಿಗೋಲ್ವೆಗೆದು ತುಡಿಸಿ ಬಿಲ್ವೆದೆಗಾಗಳ್ ||
ತುಂಗಪರಾಕ್ರಮಿ ವಾನರ |
ಪುಂಗವನೆರ್ದೆಗೆಚ್ಚು ನಿಂದನುದ್ಘಾರವದಿಂ || ೩೧೬ ||

ಗಿರಿಗೆರಗುವ ಸಿಡಿಲಂದದೊ |
ಳುರುಮುಷ್ಟಿಯಿನಿನಜನಸುರನೆರ್ದೆಯಂ ತಿವಿಯಲ್ ||
ಕರಿಪದದೊಳ್ ಬಿಳ್ದಾಖುವ |
ಪರಿಯೊಳ್ ಜರ್ಜರಿತಮಾದುದಾ ಖಳನಂಗಂ || ೩೧೭ ||

ಮುಳಿಸಿಂ ನಿಕುಂಭದೈತ್ಯಂ |
ಖಳಬಲಮಂ ಕೂಡಿಕೊಂಡು ಕಪಿವಾಹಿನಿಯಂ ||
ಬಲಿಯೊಲ್ ಘಾತಿಸುತೆಳ್ತರೆ |
ಕಲಿಹನುಮನಿದಿರ್ಚ್ಚಿ ನಿಂದನಾಜಿಗಮುವನೊಳ್ || ೩೧೮ ||

ಮದಮುಖ ರಿಕ್ಕಟಮೆನ್ನೊಳ್ |
ಕದನಂಗೆಯ್ವಳಿಯೆವೇಡಮೆಂದೆನುತಂ ತೀ ||
ವ್ರದೊಳಂ ಘನತರಪರಿಘಾ |
ಯುಧಮಂ ತೆಗೆದೆಚ್ಚನಮರವೃಂದಂ ಬೆದರಲ್ || ೩೧೯ ||

ಕಿಡಿಗೆದರಿ ಬರ್ಪ್ಪ ಪರಿಘದ |
ಕಡುಪಂ ಪರಿಹರಿಸಿ ಕುಂಭಕರ್ಣಾತ್ಮಜನಂ ||
ಪಿಡಿದೆಳೆದು ಕೆಡೆಪಿ ಭೂಮಿಗೆ |
ಕಡುಗಿನಿಸಿಂ ಗುರ್ದ್ದಿ ಕೊಂದನನಿಲಕುಮಾರಂ || ೬೦ ||

ಗರುಡನ ಫಣಿಗಳ ವಜ್ರದ |
ಗಿರಿಗಳ ಮಾರುತನ ಘನದ ಸಂದೋಹದ ಕೇ ||
ಸರಿಯ ಗಜಾವಳಿಯಾಜಿಯ |
ಪರಿಯಾದುದು ಹನುಮರಾಕ್ಷಸರ ಭರಯುದ್ಧಂ || ೬೧ ||

ಮಡಿದುದು ರಾಕ್ಷಸನಿಚಯಂ |
ಮೃಡಸನ್ನಿಭನನಿಲಜಾತನುರುಮುಷ್ಟಿಯೊಳಂ ||
ಬಿಡುಗಣ್ಣರ್ ಸಂತಸದಿಂ |
ಪೊಡೆದರ್ ದುಂದುಭಿಯನಮರಲೋಕದೊಳಾಗಳ್ || ೬೨ ||

ಅಸುರರ್ ಮಡಿಯಲ್ ಕೇಳ್ದಂ |
ದಶಕಂಠ ಖರತನೂಜನಂ ಬೀಳ್ಕಡೆ ಚೆ ||
ನ್ನೆಸೆವ ವರೂಥಮನೇರ್ದ್ದು |
ರಸೆ ಕುಸಿವಂದದೊಳೆ ಬಂದನಾ ಮಕರಾಕ್ಷಂ || ೬೩ ||

ಪುಲಿಕರಡಿಕಳ್ತೆಕೋಣಂ |
ಗಳ ಮುಸುಡಿನ ಘೋರದಂಷ್ಟ್ರದಸುರರ್ಬೆರಸುಂ ||
ಕೊಳುಗುಳಕೆಳ್ತರೆ ಕಪಿಗಳ |
ಬಳಗಂ ಬೆದರಿತ್ತು ದನುಜನಾಗಮನದೊಳಂ || ೬೪ ||

ಉರುಧನುವನಾಂತು ಕಟ್ಟು |
ಬ್ಬರಗಬ್ಬದೆ ದಿವ್ಯಮಾರ್ಗಣಮನೆಚ್ಚಂ ವಾ ||
ನರಕುಲಮಂ ಘಾತಿಸುತೆ |
ಳ್ತರೆ ರಾಮನಿದಿರ್ಚ್ಚೆ ಚಾಪಟಂಕೃತಿಗೆಯ್ದಂ || ೬೫ ||

ದಶರಥನೃಪನಟ್ಟಲೊಡಂ |
ವಸುಮತಿಯಂ ಬಿಟ್ಟು ಬಂದು ಕಳೆದುಂ ಸತಿಯಂ ||
ಅಸುರರ ಭಯದಿಂ ವಾನರ |
ವಿಸರದೊಳಡಗಿದ ಸದಾರನುಂ ನೀನಲ್ತೇ || ೬೬ ||

ಧುರದೊಳ್ ಮತ್ಪಿತನಂ ಸಂ |
ಹರಿಸಿದ ದುರ್ಗರ್ವದಗ್ಗಳಿಕೆಯುಂ ಮುರಿವೆಂ ||

ಭರದೊಳ್ ತಾನೆಂದೆನುತಂ |
ಶರಮಂ ತೆಗೆದೆಚ್ಚನಸುರನಾರ್ಭಟಿಸುತ್ತಂ || ೬೭ ||

ಒತ್ತರಿಸಿ ಬರ್ಪ್ಪ ಶರಗಳ |
ಮೊತ್ತಮನುರೆ ಕಡಿದು ದಿವ್ಯತೂಣೀರದೊಳಂ ||
ಮತ್ತೊಂದು ಶರಮನಾಯ್ದು ರ |
ಘೂತ್ತಮನೆಚ್ಚವನ ಚಾಪಮಂ ಖಂಡಿಸಿದಂ || ೬೮ ||

ಮುಳಿಸಿಂ ಶೂಲಾಯುಧಮಂ |
ಸಲೆ ಬೇಗಂ ಕೊಂಡು ಗರ್ವದುದ್ರೇಕದೊಳಂ ||
ಖಳನೆಸೆಯಲ್ ಖಂಡಿಸಿದಂ |
ಜಲಜಾಕ್ಷಂ ನಿಮಿಷದಿಂದೆ ದಿವ್ಯಾಸ್ತ್ರದೊಳಂ || ೬೯ ||

ತೆಗೆತೆಗೆದುಂ ಶಸ್ತ್ರಂಗಳ |
ಸುಗಿದೊಗೆಯುತ್ತಿರ್ದ್ದನಸುರನತಿವೇಗದೊಳಂ ||
ರಘುಜಂ ಕಡುಗಿನಿಸಿಂ ಶಿಖಿ |
ಖಗಮಂ ಪೂಣ್ದೆಚ್ಚು ಗರ್ಜಿಸಿದನಾಕ್ಷಣದೊಳ್ || ೭೦ ||

ಉರಿಮಳೆಗರೆವುತೆ ವಿಶಿಖಂ |
ಸರಭಸಮಂ ಪೋಗಿ ಖರನ ತನುಜನ ಶಿರಮಂ ||
ಅರೆದಿಟ್ಟಂಭೋನಿಧಿಗಂ |
ಭರದಿಂದಂ ಬಂದು ಪೊಕ್ಕುದಾ ಮೂಡಿಗೆಯಂ || ೭೧ ||

ಬಳಿಕೊಂದೆ ಬಾಣದಿಂ ಖಳ |
ಬಲಮಂ ಸಂಹರಿಸಿ ಮೆರೆದೊಡಾ ರಘುವೀರಂ ||
ನಲವಿಂ ನಿರ್ಜರರುಂ ಪೂ |
ವಳೆಗರೆದರ್ ದಾನವಾರಿ ಜಯ ಜಯ ಎಂದುಂ || ೭೨ ||

ಮಕರಾಕ್ಷಮುಖ್ಯಖಳನಾ |
ಯಕರುಂ ಹತರಾಗೆ ವಾರ್ತೆಯಂ ಮಿಗೆ ಕೇಳ್ದಂ ||
ಚಕಿತಾಂತಃಕರಣಂ ದಶ |
ಮುಖನಿಂದ್ರಾರಾತಿಯೊಡನೆ ತಾನಿಂತೆಂದಂ || ೭೩ ||

ಧುರಕಂ ತೆರಳ್ದಾಸುರರೊಳ್ |
ಮರಳ್ದವರಂ ಕಾಣ್ದುದಿಲ್ಲಮಿನ್ನೆಗಮಾ ವಾ ||
ನರಮನುಜಗರ್ಾದುದು ಸಂ |
ಗರದೊಳ್ ಜಯಮಿದಕೆ ಯತ್ನಮೇನಂ ತಿಳಿದಯ್ || ೭೪ ||

ಸುರಪತಿಯಂ ಬಂಧಿಸಿ ಮ ।
ಚ್ಚರಣದೊಳಂ ಕೆಡೆಪಿದಮಿತಸಾಹಸಿ ನಿನಗಾ ॥
ನರರೇಂ ಗಣ್ಯರೆ ಮಾಯೆಯೊ ।
ಳುರುತರರಿಪುವಿಜಯಿಯಾಗು ನಡೆ ನೀನೆಂದಂ ॥ ೭೫ ॥

ಪಿತ ನಿಮ್ಮಂ ಮೆಚ್ಚಿಸುವೆಂ ।
ಕ್ಷಿತಿಗಿದು ಪೊಸತೆಂಬ ಪರಿಯೊಳಂ ಮಾಯೆಯೊಳಂ ॥
ಹತಿಗೊಳಿಸುವೆನಾ ವಾನರ ।
ತತಿಯಂ ತಾನೆಂದು ಪೊರಟನಾ ಘನನಾದಂ ॥ ೭೬ ॥

ವಿಜನಸ್ಥಳದೊಳ್ ಶಿಖಿಯಂ ।
ಭಜಿಸುತೆ ದಿವ್ಯಾಸ್ತ್ರಶಸ್ತ್ರತತಿಯಂ ಪಡೆದುಂ ॥
ಸೃಜಿಯಿಸಿದಂ ಮಾಯಾಧರ ।
ಣಿಜೆಯಂ ನಿಜಸತ್ವದಿಂದಮದನೇವೇಳ್ವೆಂ ॥ ೭೭ ॥

ತೇರೇರ್ದ್ದಂ ಪಶ್ಚಿಮದಿ ।
ಕ್ದ್ವಾರಕ್ಕಂ ಸಕಲಸೇನೆಯೊಡನೆಳ್ತಂದುಂ ॥
ವೀರಧ್ವನಿಗೆಯ್ದುಂ ಕಪಿ ।
ವಾರಮನಂಜಿಸಿದನಸ್ತ್ರಶಸ್ತ್ರಗಳಿಂದಂ ॥ ೭೮ ॥

ಪವನಜನೆಳ್ತಂದುಂ ಖಳ ।
ನಿವಹಮನಸಿಬಡಿದು ಕೊಲ್ವುದಂ ಕಾಣುತ್ತಂ ॥
ಜವದಿಂ ಮಾಯಾನಿರ್ಮಿತ ।
ಯುವತಿಯ ಮುಡಿಪಿಡಿದು ನಿಂದನಾರ್ಬಟಿಸುತ್ತಂ ॥ ೭೯ ॥

ಕಂದಿದ ವದನದ ನೇತ್ರಗ ।
ಳಿಂದೊಗೆವಾ ವಾರಿಕಣದ ಮಲಿನಾಂಬರದಾ ॥
ಕುಂದಿದ ದೇಪದ ಧರಣೀ ।
ನಂದನೆಯಂತೆಸೆವ ಪತಿಯಸವನೀಕ್ಷಿಸಿದಂ ॥ ೮೦ ॥

ಜನಕನ ಜಠರದೊಳುದಯಿಸಿ ।
ಜನಪಂಗರ್ಧಾಂಗಮೆನಿಸಿ ಬಳಿಕೀ ದೇಹಂ ॥
ದನುಜನಿನಳಿವಂತಾಯ್ತೆಂ ।
ದೆನುತಂ ರೋದಿಸುವ ರಮಣಿಯಂ ಕಂಡಸವಂ ॥ ೮೧ ॥

ಕ್ಲೇಶಾಂತಃಕರಣಂ ವರ ।
ಕೇಸರಿಸುಕುಮಾರನಾಜಿಗೆಯ್ವುದನುಳಿದುಂ ॥

ಭೂಸುತೆ ನಿಜಪುವಳೆಂದೆಸು |
ತಾ ಸುರಪಾರಾತಿಯೆಡೆಗೆ ಬಂದಿಂತೆಂದಂ || ೮೨ ||

ವಿಧಿಕುಲಸಂಭವನೆನಿಸುತೆ |
ಮದಿತೀತನುಜರನೆ ಗೆಲ್ದ ಧೀರನೆ ನಾರೀ ||
ವಧೆಯಂ ಗೆಯ್ವುದು ವಿಹಿತಮೆ |
ಬುಧರುಂ ಮೆಚ್ಚುಗುಮೆ ಪಾಪಕೃತ್ಯಮನಸುರಾ || ೮೩ ||

ಕಡುಬಳಲ್ದಳಂ ದೈನ್ಯಂ |
ಬಡುವಳನತಿದುಃಖದಿಂದಮಿರ್ದ್ದಪಳಂ ನೀಂ ||
ಕಡಿದಪಯಶಮಂ ಧರೆಯೊಳ್ |
ಪಡೆಯದಿರೆಂದೆನುತೆ ಪೇಳ್ದನನಿಲಕುಮಾರಂ || ೮೪ ||

ನಿಮ್ಮವರೆಸಗಿದುದೇಂ ಬುಧ |
ಸಮ್ಮತಮೇ ಘೋರತಾಟಕೆಯನಬಲೆಯನುಂ ||
ಸುಮ್ಮನೆ ಕೊಲಲಿಲ್ಲಮೆ ನೀ |
ನೆಮ್ಮೊಳ್ ನೆರೆ ನೀತಿಶಾಸ್ತ್ರಮಂ ಪೇಳ್ವೆಯಲಾ || ೮೫ ||

ಅರಿಕುಲದವರೊಳ್ ಬಾಲಾಂ |
ಕುರಗಳನುಳಿಸಿದೊಡೆ ವೃದ್ಧಿಯಕ್ಕುಮದೆಂದುಂ ||
ದೊರೆತನಮಂ ಮಾಳ್ಪರ್ ಸಂ |
ಹರಿಪರ್ ನೀನರಿಯದಾದೆ ನೃಪನೀತಿಗಳಂ || ೮೬ ||

ಇಂತೆಂದಸುರಂ ಮಾಯಾ |
ಕಾಂತೆಯ ಮುಂದಲೆಯನೆಳೆದು ಕೊರಲಂ ಕುಯ್ದಂ ||
ಮುಂತೆಯ್ದಿ ವಾನರರ್ಕ್ಕಳ |
ತಿಂತಿಣಿಯಂ ಸದೆದನಖಿಳಶಸ್ತ್ರಾಸ್ತ್ರಗಳಿಂ || ೮೭ ||

ಮರವೊರಡಿಕಲ್ಗಳಿಂ ಪೊ |
ಯ್ದೊರಸಿದರಾ ಕಪಿಗಳರಸುರಬಲಮಂ ಬಳಿಯಂ ||
ಬರಿದೇತಕೆ ಕಾದುವುದಯ್ |
ಬರಿದಾದುದು ನಮ್ಮ ಕಜ್ಜಮೆಂದಂ ಹನುಮಂ || ೮೮ ||

ಇಂತೆಂದು ನಿಲಿಸಿ ರಣಮಂ |
ಚಿಂತೆಯೊಳಂ ಸೇನೆವೆರಸು ಬರಲಿತ್ತಲ್ ಮಾ ||
ಕಾಂತಂ ಕೇಳದೆ ಕಪಿಗಳ |
ಸಂತತರವಮಂ ಸಮಂತು ಚಿಂತೆಯೊಳೆಂದಂ || ೮೯ ||

ಪಡೆವೆರಸು ಪೋಗು ಪವನಜ ।
ನೆಡೆಗೆಂದುಂ ಜಾಂಬವಂಗೆ ನೇಮಿಸಲವನುಂ ॥
ಗುಡುಗುಡಿಸುತ್ತಂ ಬರೆ ಕಂ ।
ಡಡಗಿದನಸುರೇಂದ್ರತನುಜನತಿಭೀತಿಯೊಳಂ ॥ ೯೦ ॥

ಹುತವಹನಂ ಭಜಿಸಿ ಮಹಾ ।
ರಥಶಸ್ತ್ರಾಸ್ತ್ರಗಳನೈದೆ ಪಡೆವೆನೆನುತ್ತಂ ॥
ಪ್ರಥಿತನಿಕುಂಭಿಲೆಗಂ ಬಂ ।
ದತಿಯಾಗಮನೆಸಗುತಿರ್ದ್ದನದನೇವೇಳ್ವೆಂ ॥ ೯೧ ॥

ಕಾವಲ್ಗಂ ಪಟುಭಟದನು ।
ಜಾವಳಿಯಂ ನಿಲಿಸಿ ಕುಂಡಮಂ ವಿರಚಿಸಿ ಮೇಣ್ ॥
ಕಾವಳಗೋಳಿಯ ಮಾಂಸದೆ ।
ಪಾವಕಗಾಹುತಿಯನೀಯಲುದ್ಯೋಗಿಸಿದಂ ॥ ೯೨ ॥

ಗುರುಮತದಿಂದಧ್ವರಮಂ ।
ವಿರಚಿಸಿದಂ ದನುಜವಿಪ್ರಮಂತ್ರಗಳಿಂದಂ ॥
ಅರುಣಜಲಾಜ್ಯಾದಿನಾಮಿಷ ।
ಚರುವಿಂದಾಹುತಿಯನಿತ್ತನಾ ರಾವಣಜಂ ॥ ೯೩ ॥

ಅನಿತರೊಳಿತ್ತಲ್ ಬೊಮ್ಮನ ।
ತನುಜಂ ಗಮಿಸುತ್ತುಮಿರ್ಪ್ಪ ಸಮಯಂ ಮ್ಲಾನಾ ॥
ನನನಂ ಜಲಪೂರಿತಲೋ ।
ಚನನಂ ಪವಮಾನಪುತ್ರನಂ ಕಂಡನಣಂ ॥ ೯೪ ॥

ಏನಿದು ಪವನಾತ್ಮಜ ದು ।
ಮ್ಮಾನಂ ನಿನಗೆಂದು ಜಾಂಬವಂ ತಾಂ ಕೇಳಲ್ ॥
ಭೂನಂದನೆಯಂ ರಾವಣ ।
ಸೂನು ವಿಘಾತಿಸಿದ ಕತೆಯನೊರೆದಂ ಹನುಮಂ ॥ ೯೫ ॥

ಮಗುಳ್ದಿರ್ವ್ವರ್ ದುಗುಡದೊಳಂ ।
ರಘುವರನೆಡೆಗಂ ಸಗಾಢದಿಂದೆಳ್ತಂದುಂ ॥
ಜಗತೀತನುಜೆಯ ವಾರ್ತೆಯ ।
ನಗಜಾರಮಣಂಗೆ ಬಿತ್ತರಿಸಿದರ್ ಭರದೊಳ್ ॥ ೯೬ ॥

ಆ ಮಾತಂ ಕೇಳುತ್ತಂ ।
ರಾಮಂ ಮೂರ್ಛಿತನುಮಾಗಿ ಮಲಗಿದನಿಳೆಯೊಳ್ ॥

ಸೌಮಿತ್ರಿ ನಿಜಾಂಕದೊಳಂ |
ತಾಮರಸಾಂಬಕನನೆತ್ತಿ ಕುಳ್ಳಿರಿಸಲ್ಕಂ || ೯೭ ||

ಹರಹರ ತಳಪಟವಾದುದೆ |
ತರಣಿಕುಲೋದ್ಭೂತನಾಸೆ ಭರತಂಗಿನ್ನುಂ ||
ಸ್ಥಿರವಾದುದೆ ರಾಜ್ಯಂ ಬಂ |
ಧುರಸತ್ಯಂ ಪೋದುದೆಂದು ರೋದಿಸಿದನವಂ || ೯೮ ||

ಪಿರಿಯರ ಸದ್ವಾಕ್ಯಮನನು |
ಸರಿಸುತೆ ನಡೆವಂಗೆ ಸೌಖ್ಯಮೆಂದೆನುತಂ ಭೂ ||
ಸುರರಾಡಿದ ನುಡಿ ಪುಸಿಯಂ |
ಬೆರೆದುದೆ ಹಾ ಎನುತೆ ಲಕ್ಷ್ಮಣಂ ಚಿಂತಿಸಿದಂ || ೯೯ ||

ಆ ಸಮಯದೊಳೆಯ್ತಂದು ವಿ |
ಭೀಷಣನಿಂತೆಂದನರಸ ಚಿಂತಿಸಲೇಂ ಡೊ ||
ಳ್ಳಾಸಮಿದಲ್ಲದೆ ಸೀತೆಗೆ |
ನಾಶಂ ತಾಂ ಬರ್ಪುದುಂಟೆ ದನುಜರಿನೆಂದುಂ || ೧೦೦ ||

ಬಳಲ್ದ ಸಸ್ಯಾವಳಿಗಂ |
ಜಳಸೇಚನವಾದ ಪರಿಯೊಳಾಗಲ್ಕಾಗಳ್ ||
ನಳಿನಾಕ್ಷಂ ಕಣ್ದೆರೆದುಂ |
ಬಳಿಕೆ ವಿಭೀಷಣನೀಕ್ಷಿಸುತ್ತಿಂತೆಂದಂ || ೧೦೧ ||

ಏನಯ್ ನೀನಾಡಿದ ನುಡಿ |
ಮಾನಸಕನುಮಾನಮಾಗೆ ತೋರ್ಪುದದೆನುತಂ ||
ಭಾನುಕುಲೋತ್ತಂಸನೆನಲ್ |
ದಾನವಪತಿ ಪೇಳ್ದನಸುರಮಾಯೆಯ ಪರಿಯಂ || ೧೦೨ ||

ದೇವರ ಶರಕಳಗೋರ್ಂಡುಂ |
ರಾವಣಿಯಟಮಟಮನೆಸಗಿ ವಾನರಬಲಮಂ ||
ಬೇವಸಗೊಳಿಸಿ ನಿಕುಂಭಿಳೆ |
ಗಾವರಣಂಗೆಯ್ದು ಯಜ್ಞಮಂ ಸಮೆದಿರ್ಪಂ || ೧೦೩ ||

ಅನಲಂಗಾಹುತಿಗೊಟ್ಟುಂ |
ಘನರಥಶಸ್ತ್ರಾಸ್ತ್ರನಿಚಯಮಂ ಪಡೆದುಂ ತಾ ||
ನನುವರದೊಳ್ ನೆರೆದಪೆನೆಂ |
ದನುವಿಂ ಮಾಡುತ್ತುಮಿರ್ಪನುರುಹೋಮಗಳಂ || ೧೦೪ ||

ಪೂರ್ಣಾಹುತಿಯೊಳ್ ಬರ್ಕ್ಕುಂ |
ಸ್ವರ್ಣವರೂಥಾಶ್ವವಿಶಿಖಸಂಕುಲಮುದರಿಂ ||
ನಿರ್ಣಾಮಂಗೆಯ್ವಂ ಪ್ಲವ |
ಗಾರ್ಣವಮಂ ಸುರಪವೈರಿ ವಾಡಬನ ತೆರಂ || ೧೦೫ ||

ಕಿಡಿಸುಗುಮನಿತರೊಳಂ ಸುರ |
ರಡಬಳಮೆನಿಸಿರ್ಪ್ಪ ಕಬಳಗಳನೆಂದೆಸುತಂ ||
ನುಡಿದ ವಿಭೀಷಣಗಂ ಜಗ |
ದೊಡೆಯಂ ಗಂಭೀರವಾಣಿಯಿಂ ಪೇಳ್ದನಣಂ || ೧೦೬ ||

ಅನಲಾಸ್ತ್ರದೊಳಂ ರಾವಣ |
ತನುಜನಮಸ್ತಕಮನಿಂದು ಕೆಡೆವುವೆನೆಂದುಂ ||
ವನಜಾಕ್ಷಂ ಪೇಳ್ಕುಂ |
ದನುಜೋತ್ತಮನೆಂದನೈದೆ ರಘುನಾಥನೊಳಂ || ೧೦೭ ||

ಜಿತಕಾಮಂ ನಿದ್ರಾವಿರ |
ಹಿತನಶನವಿಹೀನನಾಗೆ ಪನ್ನೆರಡಬುದಂ ||
ಜತಿಯಂದದೊಳಿರ್ಪ್ಪವನಿಂ |
ಹತನಪ್ಪಂ ಬ್ರಹ್ಮದತ್ತವರದಿಂ ದನುಜಂ || ೧೦೮ ||

ಇನಿತುಂ ಸದ್ಗುಣಮುಂ ನಿ |
ಮ್ಮನುಜಾತನೊಳಿರ್ಪ್ಪುದಾತನಂ ಕಳಿಪಲ್ಕುಂ ||
ದನುಜಂ ಹತನಪ್ಪಂ ನೀ |
ಮನುಮಾನಂಗೆಯ್ಯವೇಡಿಮೆಂದಂ ಭರದಿಂ || ೧೦೯ ||

ಅಸುರಾಧಿಪನಿಂತೆನೆ ಸಂ |
ತಸದಿಂ ಭೂವಿನಾಶನನುಜನಂ ಬೀಳ್ಕೊಟ್ಟಂ ||
ಸಸಿನೆ ಶರಚಾಪಮಂ ಪೂ |
ರಿಸಿ ಪೊರಟಂ ರಾಮಗೆರಗಿ ಲಕ್ಷ್ಮಣನಾಗಳ್ || ೧೧೦ ||

ಹನುಮಂತಾಂಗದಜಾಂಬವ |
ದನುಜೇಶರ್ಬೆರಸು ಲಕ್ಷ್ಮಣಂ ನಡೆತಂದಂ ||
ಘನನಾದನಿರ್ಪ್ಪ ಧರಣಿಗೆ |
ವನಚರರಂ ಮೇಳಗೊಂಡು ಸತ್ವರದಿಂದಂ || ೧೧೧ ||

ಭೇದಿಸಲಸದಳಮಾದ ಪ |
ಲಾದರ ಚತುರಂಗಬಲಮನೀಕ್ಷಿಸಿ ಹನುಮಂ ||

ಪಾದಪಪಿಂ ಸದೆದುಂ ಘನ |
ನಾದಂ ವಿರಚಿಸುವ ಯಾಗಮುಂ ಪಾಳ್ಗೆಯ್ದಂ || ೧೧೨ ||

ರಾವಣಿ ಕಡುಗಿನಿಸಿಂದಂ |
ಪಾವಕಗಾಹುತಿಯನಿಡುವುದಂ ನಿಲಿಸುತೆ ಚಾ ||
ಣಾವಳಿಧನುವಂ ಕೊಂಡುಮು |
ತೀವ್ರೋನ್ನತರಥಮನೇರ್ದ್ದು ಸಮರಕೆ ಬಂದಂ || ೧೧೩ ||

ಗಣಿಸಲ್ಬಾರದ ದಾನವ |
ಗಣದೊಡನೆಯ್ತಂದು ವಾನರಾವಳಿಯಂ ಕೆಂ ||
ಗಣಿಗಳನೆಚ್ಚುಂ ಕೆಡೆಪಿದ |
ನಣಿಯರಮೊಪ್ಪಿಂದೆ ರಾವಣಾತ್ಮಜನಾಗಳ್ || ೧೧೪ ||

ಅಂಗದಜಾಂಬವಹನುಮರ್ |
ಮುಂಗುಡಿಯೊಳ್ ಶಕಟತುರಗಹರಿಕಿರಿವರಮಾ ||
ತಂಗಾರೋಹಕ ದಾನವ |
ಪುಂಗವರಂ ಸದೆವುತಿರ್ದ್ದರಚಲಾಗಗಳಿಂ || ೧೧೫ ||

ಘನನಾದಂ ಕಡುಮುಳಿಸಿಂ |
ಘನನಾದಂಗೆಯ್ವುತಾರ್ದ್ದು ಬರೆವರೆ ಬಳಿಕಂ ||
ದನುವರದೊಳ್ ಮಿಗೆ ಲಕ್ಷ್ಮಣ |
ನನುವರಿತುಂ ನಿಂದು ವಿಶಿಖಮುಂ ತೆಗೆದೆಚ್ಚಂ || ೧೧೬ ||

ಇಸಲಂಬಂ ಕತ್ತರಿಸುತೆ |
ಪೊಸಗಣೆಯಂ ತುಡಿಸಿ ತಿರುವಿಗಸುರಂ ಸುತ್ತಲ್ ||
ಪಸರಿಸೆ ಪೂರ್ವದೊಳಂ ತಾ |
ನೆಸಗಿದ ಸಾಹಸದೊಳೆಚ್ಚನತಿವೇಗದೊಳಂ || ೧೧೭ ||

ಛೇದಿಸಿ ಶರಮುಂ ರಾಘವ |
ಸೋದರನತಿವೇಗದಿಂದೆ ಮುಂಬರಿಯಲ್ಕಂ ||
ಕ್ರೋಧಾನ್ವಿತವದನಂ ಘನ |
ನಾದಂ ನಿಜಜನಕನನುಜನಂ ಕಂಡೆಂದಂ || ೧೧೮ ||

ದಾನವಕುಲದೊಳ್ ಜನಿಸುತೆ |
ಮಾನವನಾಳಾಗಿ ನಿಂದು ನಿಜಮರ್ಮಗಳಂ ||
ನೀನವರೊಳ್ ಸೂಚಿಸಿ ಕುಲ |
ಧೇನುಗೆ ಶಾರ್ದೂಲನಾದೆಯಲೆ ಬಾಪಿರನೇ || ೧೧೯ ||

ಜಳ್ಳುನುಡಿಗಳಂ ಪೇಳ್ದಂ ।
ಪೊಳ್ಳಿಸಿ ರಾಜಾರ್ಥಮೆಲ್ಲಮಂ ರಿಪುಭಯಮಂ ॥
ಚೆಲ್ಲಿ ದಶಾನನನಿದಿರೊಳ್ ।
ಬಲ್ಲಿದರಿವರೆಂದು ಬಂದೆ ನೀಚರ ಮರೆಗಂ ॥ ೧೨೦ ॥

ತನ್ನಯೆ ಕಾರ್ಯನಿಮಿತ್ತಂ ।
ನಿನ್ನಂ ಸಲೆ ಮನ್ನಿಸುತ್ತುಮಿರ್ಪ್ಪಂ ರಾವಂ ॥
ಬನ್ನಂಬಡಿಪಂ ನಿಜಕಾ ।
ರ್ಯೋನ್ನತಿ ಕಯ್ಗೂಡೆ ಸನ್ನಿಯೆಂದರಿ ಮನದೊಳ್ ॥ ೧೨೧ ॥

ಎನೆ ಗಹಗಹಿಸಿ ವಿಭೀಷಣ ।
ನನುವಿಂ ಸುರಪಾರಿಯೊಡನೆ ತಾನಿಂತೆಂದಂ ॥
ದನುಜಾಧಮಕುಲದೊಳ್ ಸಂ ।
ಜನಿಸಿದೊಡೇಂ ನಡೆದುದಿಲ್ಲಮಾ ಕುಲಪಥದೊಳ್ ॥ ೧೨೨ ॥

ಸಲ್ಲದ ಕೃತ್ಯಮನೆಸಗುವು ।
ದೊಳ್ಳಿತೆ ಬಿಡು ಭೂಮಿಸುತೆಯನೆನೆ ನಿಮ್ಮಯ್ಯಂ ॥
ಖುಲ್ಲರ ನುಡಿಗೇಳ್ದಂ ಕುಲ ।
ವಲ್ಲಿಯ ಬೇರ್ವೆರಸು ಕಿಳ್ತನೆಲೆ ಘನನಾದಾ ॥ ೧೨೩ ॥

ಕುಲಗಿಡುಕಮಕ್ಕಳುದಯಿಸೆ ।
ಬಳೆವುದೆ ತದ್ವಂಶವಲ್ಲಿ ಕೇಳೆಲವೋ ನೀ ॥
ನಲಸದೆ ನಡೆ ನಿಮ್ಮಯ್ಯಗೆ ।
ತಿಳಿಪಿನ್ನಾದೊಡಮುಮುದ್ಧರಿಸು ನಿಜಕುಲಮಂ ॥ ೧೨೪ ॥

ಸೆಣಸದಿರೆಂದೆನುತೆ ವಿಭೀ ।
ಷಣನಾಡಿದ ಕಠಿನವಾಣಿಯಂ ಕೇಳ್ದಂ ರಾ ॥
ವಣಿ ಕಡುಗಿನಿಸಿಂ ವರಮಾ ।
ರ್ಗಣಮಂ ತೆಗೆದೆಸೆಯೆ ಕಂಡು ಲಕ್ಷ್ಮಣನೆಳ್ದಂ ॥ ೧೨೫ ॥

ಆ ಸರಳಂ ಕತ್ತರಿಸುತೆ ।
ರೋಷದೊಳಿಂತೆಂದನೆಲವೊ ಖಳನಿನ್ನಯೆ ಡೊ ॥
ಳ್ಳಾಸದ ಬಗೆಯಂ ಬಲ್ಲೆಂ ।
ವಾಸವನಂ ಗೆಲ್ದ ಗರ್ವಮಂ ತೋರದಿರಾ ॥ ೧೨೬ ॥

ಅಂಜೆಂ ನಿನ್ನಸ್ತ್ರಕ್ಕಂ ।
ಕಂಜಭವಂ ಬಂದು ನಿಂದೊಡಂ ಬಿಡೆನವನಂ ॥

ಕುಂಜರಕಳ್ಕುವುದೇ ಹರಿ |
ನಂಜಿಗೆ ನಗರಾರಿ ಬಿಗುರ್ವನೇ ಬೆರ್ಚುವನೇ || ೧೨೭ ||

ಎಂದೆನುತಿದಿರ್ಚಿ ದಶರಥ |
ನಂದನನುರುಬಾಣಪಂಚಕಮನುಗಿದುಂ ಬ ||
ಲ್ಪಿಂ ಧನುಗಂ ತುಡಿಸುತೆ ಸಂ |
ಕ್ರಂದನಶಾತ್ರವನೊಳೆಚ್ಚು ನೆರೆ ಬೊಬ್ಬಿರಿದಂ || ೧೨೮ ||

ಕೂರ್ಗಣೆಗಳ್ ಬಂದುಂ ಮಿಗೆ |
ತೇರ್ಗುರ್ದುರೆಗಳದಟನ್ಬೈದೆ ನಿಲಿಸಲ್ಬಳಿಕಂ ||
ಭಾರ್ಗವಶಿಷ್ಯಂ ಘನತರ |
ಮಾರ್ಗಣಗಳನೆಚ್ಚು ಗರ್ಜಿಸಿದನಾ ಕ್ಷಣದೊಳ್ || ೧೨೯ ||

ಖಂಡಿಸಿ ತದ್ಬಾಣಗಳಂ |
ಚಂಡಪರಾಕ್ರಮಿ ಸುಮಿತ್ರೆಯಾತ್ಮಭವಂ ಕೋ ||
ದಂಡಕೆ ತುಡಿಸುತೆ ನಿಶಿತೋ |
ದ್ದಂಡಾಸ್ತ್ರಮನೆಸೆದನಸುರಕವಚಂ ಪರಿಯಲ್ || ೧೩೦ ||

ತರುವಲಿ ನೀನೆನ್ನೊಳ್ ಸಂ |
ಗರಕಂ ನಿಲಲಾರೆ ಬರಿಸು ನಿನ್ನಗ್ರಜನಂ ||
ಪುರಹರಕಮಲಾಸನಸುರ |
ವರರಂ ಮೆಚ್ಚಿಸುವೆನೆಂದು ಖಳನಾರ್ದೆಚ್ಚಂ || ೧೩೧ ||

ಅಸುರನ ಕೋಲುರಮಂ ಘಾ |
ತಿಸೆ ಲಕ್ಷ್ಮಣನುಗ್ರಕೋಪದಿಂದಾರ್ದು ಮಹಾ ||
ವಿಶಿಖಮನಿರದೆಚ್ಚಂ ಕಂ |
ಪಿಸಿದುದು ತದ್ಬಾಣರಭಸಕಂ ಖಳನಿಚಯಂ || ೧೩೨ ||

ಕೆಂಗರಿಗಣೆ ಘನನಾದನ |
ಬೆಂಗಡೆ ಮೂಡಿದುದು ವಕ್ಷಮಂ ಭೇದಿಸಿ ನೇ ||
ತ್ರಂಗಳ್ ಕದಡಲ್ ಮೂರ್ಛಾ |
ಸಂಗತನಾಗಿರ್ದನೊಂದು ಘಟಿಕಾಮಾತ್ರಂ || ೧೩೩ ||

ಇಸು ಲಕ್ಷ್ಮಣ ಬೇಗನೆ ನೀ |
ನಸುರನನವನೆಳ್ದೊಡುಳಿಸನೆಮ್ಮನೆನುತೆ ಕೈ ||
ಕಸೆಯಣುಗಂ ಭರದಿಂ ಸೂ |
ಚಿಸೆ ದಿವ್ಯಂ ಶರಮನೊಂದನುಗಿದಾರ್ದೆಚ್ಚಂ || ೧೩೪ ||

ಉರಿಯಂ ಸೂಸುತೆ ಸರ್ಪದ |
ಮರಿಯೊಲ್ ಮೊರೆಯುತ್ತೆ ಬಂದು ಸವಗಮನುಂ ಕ ||
ತ್ತರಿಸಲ್ಕೆಳ್ಚತ್ತುರ್ಗಂ ಖಳ |
ನುರೆ ಕೋಪದೊಳಮಿತಕಪಿಗಳಂ ಘಾತಿಸಿದಂ || ೧೩೫ ||

ಏಳಂಬೂರ್ಮಿಳೆಯರಸಗೆ |
ವಾಲಿಜಗೊಂಬತ್ತು ಪವನಜಗೆ ಪತ್ತುಂ ಮೂ ||
ರೇಳಯ್ವತ್ತು ವಿಭೀಷಣ |
ಗಾಲಸ್ಯಂಗೆಯ್ಯದಂತು ನೋಯಿಸಿದುವಣಂ || ೧೩೬ ||

ಹನುವಾಂಗದರೊಂದೆಸೆಯೊಳ್ ||
ದನುಜೇಶ್ವರನೊಂದು ಕಡೆಯೊಳಿದಿರೊಳ್ ಶ್ರೀರಾ ||
ಮನ ತಮ್ಮಂ ಪರ್ವತತರು |
ಘನಶರಗಳನಿಟ್ಟು ಘಾತಿಸಿದರಾ ಖಳನಂ || ೧೩೭ ||

ಬೆರ್ಚದೆ ರಾವಣಿ ಶರದಿಂ |
ಕೊರ್ಚಿದನಸ್ತ್ರಾದ್ರಿವೃಕ್ಷಚಯಮಮಂ ಬಳಿಕಂ ||
ಕಿರ್ಚಿನ ಮಳೆ ಸುರಿವಂದದೊ |
ಳುಚ್ಚರ್ತೆ ವೈಶ್ವಾನರಾಸ್ತ್ರಮಂ ತೆಗೆದೆಚ್ಚಂ || ೧೩೮ ||

ವೀರೋದ್ಧತಲಕ್ಷ್ಮಣನುರು |
ವಾರುಣಮಾರ್ಗಣದಿನೈದೆ ತಣ್ಪಿಸಿಯದನುಂ ||
ತೀರುಡಿವಂದದೊಳಂ ಘನ |
ನಾರಾಚಮನೆಚ್ಚನಮರಸಂತತಿ ಪೊಗಳಲ್ || ೧೩೯ ||

ಸರ್ರನೆ ಸರಳೆರಗಲೊಡಂ |
ತಿರ್ರನೆ ತಿರುಗಿದುದು ತಿಗುರಿಯಂತು ವರೂಥಂ ||
ಬಿರ್ರನೆ ದನುಜನ ವದನಂ |
ಕರ್ರನೆ ಕಂದಿದುದು ಶರದ ಸತ್ವಮದೆನಿತೋ || ೧೪೦ ||

ತುದಿಗಯ್ದು ಶರಗಳಿಂದಂ |
ಕುದುರೆಗಳಂ ಕಡಿದು ಸೂತನಂ ಕೆಡೆಪಿ ಮಹಾ ||
ಯುಧಚಾಪವರೂಥಗಳಂ |
ಸದೆದಂ ನಿಮಿಷಾರ್ಧದಲ್ಲಿ ರಾಘವನನುಜಂ || ೧೪೧ ||

ತೀರುಡಿಯೆ ರಾವಣನ ಸುಃಕು |
ಮಾರಂ ಮಗುಳ್ದೊಂದು ತೇರನಡರ್ದುಂ ಶಸ್ತ್ರಾ ||

ಸಾರಮನುರೆ ಕರೆವುತ್ತಂ |
ಘೋರೆನೆ ಗರ್ಜಿಸುತಿದಿರ್ಚಿದಂ ಲಕ್ಷ್ಮಣನಂ || ೧೪೨ ||

ಪಡೆದವರಂ ಸ್ಮರಿಸಾ ನಿ |
ನ್ನೊಡಲಂ ಬಗಿದಡಗನೀವೆನಸುರಗ್ಗೆನುತುಂ ||
ಕಿಡಿಗೆದರುತುಗ್ರಶರಮುಂ |
ತುಡಿಸುತೆ ಬಿಲ್ವೆದೆಗೆ ಕಡುಪಿನಿಂದೆಚ್ಚಾರ್ದ್ದಂ || ೧೪೩ ||

ಬಾರಣೆಗೋಲೆಳ್ತಂದುಂ |
ಪೇರುರಮಂ ಭೇದಿಸಲ್ಕೆ ಮೆಯ್ಮರೆದೆಳ್ದ ||
ತಾಂ ರಾವಣಿಯಂ ಪೊಗಳುತೆ |
ಕೂರಂಬುಗಳಿಂದೆ ಛಿದ್ರಿಸಿದನವನೊಡಲಂ || ೧೪೪ ||

ಅಸುರರ್ ನಾನಾಶಸ್ತ್ರ |
ಪ್ರಸರಗಳಿಂ ಕೀಶಬಲಮನಸಿಬಡಿಯಲ್ಕಂ ||
ಪಿಸದನಿಲಾತ್ಮಜವಾಲಿಜ |
ರಸಮಾಚಲವೃಕ್ಷದಿಂದೆ ಬಡಿದೊರಗಿಸಿದರ್ || ೧೪೫ ||

ಗಜದಂತಗಳಂ ಕಿಳ್ತಜಿ |
ಗಿಜಿಗೆಯ್ದರ್ ವಾರುವಗಳನಪ್ಪಳಿಸಿದರಾ ||
ರಜನೀಚರರಂ ಸೂರಾ |
ತ್ಮಜನೂರ್ಗೆಳ್ಪಟ್ಟುತಿರ್ದ್ದರದನೇವೇಳ್ವೆಂ || ೧೪೬ ||

ಪುಗ್ಗಾಯ್ಲರ್ ಕಡೆಗಾಲದ |
ಬಗ್ಗನ ಪರಿಯಿಂದೆ ಖಳರನರೆಯಲ್ ಪೆಣಗಳ್ ||
ನೆಗ್ಗಡಲೊಳ್ ಬೆಂಡೇಳ್ವುವು |
ಸುಗ್ಗಿಯದಾದುದು ಪಿಶಾಚಸಂಕುಲಕಾಗಳ್ || ೧೪೭ ||

ಹೂಂಕೃತಿ ರಣಧೀರರ ಗುಣ |
ಟಂಕೃತಿ ಕಾರ್ಮುಕವಿಮುಕ್ತಮಾರ್ಗಣದ ಮಹಾ ||
ಝೇಂಕೃತಿ ಜಗತೀತಳಕಂ |
ಭೀಂಕೃತಿಗೆಯ್ದತ್ತು ಲಕ್ಷ್ಮಣಾಸುರರ ರಣಂ || ೧೪೮ ||

ಗಿರಿವಿಶಿಖಮನೆಚ್ಚಂ ಖಳ |
ನುರುಪವಿಶರದಿಂದೆ ಕಡಿದು ಲಕ್ಷ್ಮಣನಾಗಳ್ ||
ಶರದಸ್ತ್ರಮನುಗಿದೆಚ್ಚೊಡೆ |
ಮರುದಸ್ತ್ರಮನೆಚ್ಚು ಖಂಡಿಸಿದನಾ ದನುಜಂ || ೧೪೯ ||

ಜಂಭೇಂದ್ರರ ಯುದ್ಧಮೊ ಮಿಗೆ ।
ಶಂಬರಮನ್ಮಥರ ರಣಮೊ ತಾರಕಗಿರಿಜಾ ॥
ಡಿಂಭರ ವರಸಮರಮೊ ತಾ ।
ನೆಂಬೊಲ್ ಕಣ್ಗೆಸೆದುದಾಜಿಯದನೇವೇಳ್ವೆಂ ॥ ೧೫೦ ॥

ರಿಸಿಗಳಿರ ಕೇಳ್ದುಮೇಕಾ ।
ದಶಿಯಾರಬ್ಧಂ ದಿನತ್ರಯಂ ಪಗಲಿರುಳುಂ ॥
ಅಸುರನೊಳಂ ಯುದ್ಧಂ ಸಮ ।
ಸಿಸಿದುದು ಲಕ್ಷ್ಮಣಗೆ ಪೇಳ್ವೊಡಗ್ಗಳಮಕ್ಕುಂ ॥ ೧೫೧ ॥

ಹನುಮವಿಭೀಷಣಜಾಂಬವ ।
ರನುವರಕಂ ನಿಂದು ಶೈಲತರುಗದೆಯಿಂದಂ ॥
ದನುಜೇಶನ ತನುಜಾತನ ।
ಘನರಥಶೂತಾಶ್ವನಿಕರಮಂ ಸದೆಬಡಿದರ್ ॥ ೧೫೨ ॥

ವಿರಥಂ ತಾನಾದೊಡಮುಂ ।
ಧುರಕಂಜದೆ ವಿಮುಖನಾಗದಸುರಂ ಬಳಿಕಂ ॥
ದುರುಶಕ್ತಿಯನುಗಿದುಂ ತಾ ।
ನಿರದೆಚ್ಚಂ ದೈತ್ಯರಾಜನನುಜನೊಳಾಗಳ್ ॥ ೧೫೩ ॥

ಕಂಡುಂ ಲಕ್ಷ್ಮಣನದನುಂ ।
ಖಂಡಿಸಿ ಮೇಣೈಂದ್ರವಿಶಿಖಮಂ ತೆಗೆದುಂ ಕೋ ॥
ದಂಡಕ್ಕಂ ತುಡಿಸಲ್ ಬ್ರ ।
ಹ್ಮಾಂಡಂ ಬಿಗುರಾಂತುದಸುರರುಂ ಭಯಗೊಂಡರ್ ॥ ೧೫೪ ॥

ಭೂಮಿಜೆ ಹದಿಬದೆಯಾದೊಡೆ ।
ರಾಮಂ ಸೂನೃತಚರಿತ್ರನಾದೊಡೆ ತನಗಂ ॥
ತಾಮರಸಪದದೊಳಂ ಸು ।
ಪ್ರೇಮಾನ್ವಿತಭಕ್ತಿಯಿರ್ದೊಡರಿವೆಂ ಖಳನಂ ॥ ೧೫೫ ॥

ಕೊಲಲಿಂ ಶರಮೆನುತೆಚ್ಚೊಡೆ ।
ಸಲೆಬೇಗಂ ವಿಶಿಖಮುರಿಯನುಗುಳುತೆ ಬಂದುಂ ॥
ಖಳಶಿರಮಂ ಖಂಡಿಸಿ ಬಾಂ ।
ದಳಕಿಟ್ಟುದು ಚಂದ್ರಸೂರ್ಯರುಮ್ಮಳಿಸಲ್ಕಂ ॥ ೧೫೬ ॥

ಸಿಡಿಲಂತಾರ್ಬಟಿಸುತೆ ತಲೆ ।
ಪೊಡವಿಯೊಳಂ ಬಿಳ್ದು ಕಪಿಗಳಂ ಘಾತಿಸೆ ಕಂ ॥

ಡೊಡನೆ ಮಹಾವೃಕ್ಷದೊಳಂ |
ಬಡಿದರ್ ಕಪಿನಾಥರಧಿಕಸಾಹಸದಿಂದಂ || ೧೫೭ ||

ವಾನರನಾಥರ್ ಕಡುಪಿಂ |
ದಾನವರಂ ಸದೆದು ಭೂತನಿಕರಮನುಂ ಸು ||
ಮ್ಮಾನಂಗೊಳಿಸಿದರಮರವಿ |
ತಾನಂ ಸಂತೋಷದಿಂದೆ ಜಯಜಯಮೆನಲುಂ || ೧೫೮ ||

ನುತಿಸುವ ವಾನರನಾಯಕ |
ತತಿಯಂ ಸಲೆ ಕೂಡಿಕೊಂಡು ಲಕ್ಷ್ಮಣನವನೀ ||
ಪತಿಯೆಡೆಗೆ ಬಂದು ಮಣಿಯ |
ಲ್ಕತಿಹರ್ಷದೊಳಪ್ಪಿ ಮನ್ನಿಸಿದನಾ ರಘುಜಂ || ೧೫೯ ||

ದೇವರ್ಕಳ್ ಸಂತಸದಿಂ |
ಪೂವಳೆಯಂ ಕರೆದು ವಾದ್ಯಮಂ ಮೊಳಗಿಸಿದರ್ ||
ಭೂವಲಯಕ್ಕಾದುದು ಸೌ |
ಖ್ಯಾವಳಿಯೆಂದೆನುತೆ ಸೂತಮುನಿಪಂ ಪೇಳ್ದಂ || ೧೬೦ ||

# ಏಕಾದಶಾಶ್ವಾಸ.

ವೃತ್ತ || ಶ್ರೀರಾಮಂ ಧರಣೀಸುತಾವರಮುಖಾಬ್ಜೇಂದಿಂದಿರಂ ದಾನವಾ |
ಘೋರಣ್ಯಾಗ್ನಿ ದಿವಾಕರಾನ್ವಯಸಮುದ್ರಾಬ್ಜಂ ಸುಖವ್ರಾತದಂ ||
ವೀರಂ ಸರ್ವಸುರೇಶ್ವರಂ ಕದನನಿಸ್ಸೀಮಂ ಸರಿನ್ನಾಥಗಂ |
ಭೀರಂ ಸಂತತವೀಗೆ ನಿತ್ಯಶುಭಮಂ ರಕ್ತಾಂತದೀರ್ಘೇಕ್ಷಣಂ || ೧ ||

ಕಂದ || ಶಂಬೋಜ್ವಲಿತಶರೀರಂ |
ತ್ರ್ಯಂಬಕನಪರಾವತಾರನನಿಲಕುಮಾರಂ ||
ಅಂಬುಧಿಲಂಘನಧೀರಂ |
ಜಂಭಾಹಿತವಿನುತನೀಗೆ ಶುಭಮಂ ಶೂರಂ || ೨ ||

ಮುನಿಗಳೆ ಕೇಳಿಂ ರಾವಣಿ |
ಯನುವರದೊಳ್ಮಡಿದ ವಾರ್ತೆಯಂ ಕೇಳುತ್ತಂ ||
ದನುಜೇಂದ್ರಂ ದುಃಖದೊಳಂ |
ತನುಜನ ಸುಗುಣಗಳನ್ನೆದೆ ನೆನೆನೆನೆದೆಂದಂ || ೩ ||

ಸುರಪಾದಿ ದಿಕ್ಪತಿಗಳಂ |
ಸೆರೆವಿಡಿದುಂ ಸಕಲಭಾಗ್ಯಮಂ ಸಾಧಿಸಿ ಮ ||
ಚ್ಚರಣಕ್ಕೊಪ್ಪಿಸಿದತುಳನೆ |
ನರವಾನರರಿಂದೆ ಮಡಿಯಲಾದುದೆ ಮಗನೇ || ೪ ||

ನಿನ್ನತ್ರಣಿನಾದುದು ತನ |
ಗುನ್ನತಸೌಭಾಗ್ಯಮಲ್ತೆ ಜಗತೀತಳದೊಳ್ ||
ಚೆನ್ನಿಗ ಹಾ ಹಾ ಗುಣಪಂ |
ಪನ್ನನೆ ಹಾ ಎನುತೆ ಮುಚ್ಛೆವೋದಂ ದನುಜಂ || ೫ ||

ಬಳಿಕೆಚ್ಚರುತುಂ ಕೋಪದೊ |
ಳಿಳೆಯಣುಗಿಯ ತಲೆಯನರಿವೆನೆನುತಸುರೇಂದ್ರಂ ||
ಜಳಪಿಸಿ ಶಶಿಹಾಸಮನುಂ |
ಗೞಲನೆ ನಡೆತಂದನಸುಗೆಬನದೆಡೆಗಾಗಳ್ || ೬ ||

ದೇವರ್ಕ್ಳನುಂ ಗೆಲ್ವಂ |
ಸ್ತ್ರೀವಧೆಯಿದು ಯೋಗ್ಯಮಲ್ತು ನರವಾನರರಂ ||

ಜೀವಂಗಳಿವೊಡೆ ನಡೆ ಸವು |
ರಾವನಿಗೆಂಡಾ ಸುಪಾರ್ಶ್ವಕಂ ತಡೆದನಣಂ ॥ ೭ ॥

ಬರಿಸಿದನಾ ಬಳಿಯಂ ಸಂ |
ಗರಕಂ ನಿಜಮೂಲಬಲಮನಸುರಾಧೀಶಂ ॥
ನರರಂ ಸಂಹರಿಸುತೆ ವಾ |
ನರರಂ ಬರಿಕೆಯ್ದು ಬರ್ಪುದೆಂದುಂ ಪೇಳ್ದಂ ॥ ೮ ॥

ಚಿರಕಾಲಂ ನಿಮ್ಮಂ ತಾಂ |
ಪೊರೆದುದಕಂ ತೋರ್ಪುದಿಂದು ಸಾಹಸಮಂ ಶಂ ॥
ಕರಕಾಲಾದ್ಯರ ಗರ್ವಮು |
ನೊರಸಿದ ಭಟರಲ್ತೆ ನಿಮಗೆ ಸರಿಯಾರಿರ್ಪರ್ ॥ ೯ ॥

ಮನುಜರ್ ಗಣ್ಯರೆ ನೀಪಿಂ |
ದನುವರಕಂ ಪೋಪುದೆಂದು ಕಯ್ಮುಗಿದುಂ ಸ ॥
ದ್ವಿನಯದೊಳಂ ಬೀಳ್ಕುಡೆ ಚೆ |
ನ್ನನೆ ಮದಮಾತಂಗಹಯಮನೇರ್ದುಂ ನಡೆದರ್ ॥ ೧೦ ॥

ಪತ್ತು ಪದಿನಯ್ದು ಮಿಗೆ ಮೂ |
ವತ್ತೈಪ್ಪತ್ತಯ್ದು ನಾಡೆ ನೂರ್ನಾಲ್ನೂರ ॥
ಯ್ವತ್ತುಂ ನೂರುಂ ಸಾಸಿರ |
ಬಿತ್ತರದಾನನದ ದಾನವರ್ ನಡೆತಂದರ್ ॥ ೧೧ ॥

ಪ್ರಳಯದ ಕಾಲಾಂತಕನು |
ಜ್ವಲಮೋ ಮಿಗೆ ಕಾಲಕೂಟಶರಧಿಯೊ ಎಂಬೊಲ್ ॥
ನೆಲಮೊಡೆವಂದದೆ ಗರ್ಜಿಸು |
ತಳವಿಗೆ ನಡೆತರ್ಪ ಖಳರನರಿದಂ ರಾಮಂ ॥ ೧೨ ॥

ಮುಂಜಿರಗಂ ಬಲಿದುಂ ಕರ |
ಕಂಜಗಳೊಳ್ ಚಾಪಬಾಣಮಂ ಕಯ್ಕೊಂಡುಂ ॥
ಸಿಂಜಿನಿಟಂಕೃತಿಗೆಯ್ದು ಧ |
ನಂಜಯಲೋಚನನ ಪರಿಯೊಳಾಜಿಗೆ ಬಂದಂ ॥ ೧೩ ॥

ಒಂದೊಂದೆ ಕೋಲ್ಗಳಿಂದಂ |
ಸಿಂಧುರಗಂಧರ್ವಶಕಟವೀರರನೆಲ್ಲಂ ॥
ಕೊಂದಂ ಮಿತಿಯಿಲ್ಲದೆ ರಘು |
ನಂದನನೇಂ ಸಮರಧೀರನೋ ಭೂತಲದೊಳ್ ॥ ೧೪ ॥

ಇವನಾವನಾಶುಗಗಳಂ |
ಕವಿಸುವನೆನುತಸುರಸುಭಟರುಂ ಗರ್ಜಿಸುತಂ ||
ತವಕದೊಳೆ ಶಸ್ತ್ರಮಾರ್ಗಣ |
ನಿವಹಮನೆಚ್ಚಾಡುತಿರ್ದ್ದರದನೇವೇಳ್ವೆಂ || ೧೫ ||

ಗಾಂಧರ್ವಾಸ್ತ್ರದೊಳಂ ಖಳ |
ವೃಂದಮನರಿದಂ ವಿಲಾಸದಿಂ ರಘುವೀರಂ ||
ಬಂಧುರವಿಶ್ವಾಕೃತಿದಳೆ |
ದಂದೊರ್ವ್ವಂಗೊರ್ವ್ವರಾಮನಾಗೆ ನಿತಾಂತಂ || ೧೬ ||

ಕರಿತುರಗವರೂಥಂಗಳ್ |
ಧುರದೊಳ್ ಶತಕೋಟಿಲಕ್ಷಸಂಖ್ಯೆಯೊಳಳಿಯಲ್ ||
ಪರಿನರ್ತಿಸಲೊಂದಟ್ಟಂ |
ಮಿರುಪಟ್ಟಂ ಕೋಟಿಗೊಂದು ತಲೆ ನಭಕಡರ್ಗುಂ || ೧೭ ||

ಶಿರಮೊಂದು ಕೋಟಿಯುಂ ಪು |
ಷ್ಕರದೊಳ್ ಕುಣಿದಾಡೆ ರಾಮಕರಕೋದಂಡೋ ||
ತ್ಕರಘಂಟಾಸಪ್ತಕದೊಳ್ |
ಸರಗುಡುಗುಮದೊಂದು ಗಂಟೆಯುಂ ಕ್ಷಣಮಾತ್ರಂ || ೧೮ ||

ಬಿಡದೊಂದುಂ ಯಾಮಾಂತಂ |
ಕಡುದನಿಗುಡುತಿರ್ದ್ದುವಾಗಳೇಳ್ಗಂಟೆಗಳುಂ ||
ಮಡಿದವರಂ ಲೆಕ್ಕಿಪೊಡಂ |
ಜಡಜಭವಾದ್ಯರ್ಗೆ ಸಾಧ್ಯಮಲ್ತೆನಲಾಗಳ್ || ೧೯ ||

ಪವನನ ಹತಿಯಿಂದಂ ಘನ |
ನಿವಹಂ ಜರ್ಜರಿತಮಪ್ಪ ಮಾಳ್ಕೆಯೊಳಂ ರಾ ||
ಘವನುರುಮಾರ್ಗಣದಿಂ ಖಳ |
ನಿವಹಂ ಮಡಿದುದು ಚತುರ್ದಶಿಯ ಸಂಜೆಯೊಳಂ || ೨೦ ||

ಒರಿಕೆಯ್ದುಂ ಖಳರಂ ರಘು |
ವರನತಿಸಂತೋಷದಿಂದೆ ಪಾಳಯಕಂ ಬಂ ||
ದಿರಲಮರರ್ ಪೂವಳೆಯಂ |
ಕರೆದರ್ ಸುಗ್ರೀವಹನುಮರುನ್ನುತಿಸಲಣಂ || ೨೧ ||

ಏನಾದರೆಂದು ಚರನಂ |
ದಾನವಪತಿ ಯುದ್ಧಭೂಮಿಗಂ ಕಳಿಪಲೊಡಂ ||

ಬಾನೆಡೆಯೊಳ್ ನಿಂದುಂ ದು |
ವ್ಮಾನದೊಳೀಕ್ಷಿಸಿದನ್ನೆದೆ ರಣಭೂತಗಳಂ || ೨೨ ||

ಕಾಲ್ವನ ಬಾಣಸವನೆಯೋ |
ಕಾಳಿಯ ಬಳಗಂಗಳಿರ್ಕ್ಕೆಯೋ ಪ್ರಳಯದ ಕಾ ||
ಪಾಲಿಯ ರಣಭೂಮಿಯೊ ಎನೆ |
ಪಾಲಿತವೇತಾಲಧರಣಿಯಂ ಕಂಡನವಂ || ೨೩ ||

ಕರಿಶಿರಗಳ ಭಾಂಡಗಳೊಳ್ |
ಕರುಳ್ಗಳನುರೆ ತಾಳಿಸಿದುದು ಬಸೆಯಿಂ ನೆರೆ ಜೆ ||
ರ್ಜ್ಜರದಿಂ ನರಶಾಕಗಳಂ |
ವಿರಚಿಸಿದುದು ಮೋದಗೂಡಿ ಶಾಕಿನಿನಿವಹಂ || ೨೪ ||

ಕಿವಿಗಳೆ ಚಕ್ಕುಲಿ ಪಲ್ಗಳ |
ನಿವಹಮೆ ಪುರಿಗಡಲೆ ನಾಲಗೆಯೆ ದೋಸೆ ಸುಮಾಂ ||
ಸವೆ ಬೋನಂ ಕೀಲಾಲಮೆ |
ತವೆ ಪಾನಕಮಾದುದ್ದೆದೆ ಭೂತಾವಳಿಗಂ || ೨೫ ||

ಕರಿಕರ್ಣಪರ್ಣದೊಳ್ಸುರಿ |
ಸುರಿದಡಗಂ ತಿಂದು ತೇಗಿ ರಕ್ತಂಗುಡಿದುಂ ||
ಉರೆ ರಿಂಗಣಗುಣಿದುಂ ಕ |
ಯ್ವರೆಗುಟ್ಟುತ್ತಿರ್ದ್ದುದಂದು ಮರುಳ್ಗಳ ಬಳಗಂ || ೨೬ ||

ನರಯಂತ್ರದ ತಂಬೂರಿಯ |
ನುರುಕರಿಕರದಂಗವಾಜಿಖುರತಾಳಗಳಂ ||
ವರಗಜಕುಂಭಸ್ಥಳದಿಂ |
ಮುರಜಗಳಂ ಸಮೆದು ನರ್ಚ್ಚಣಂಗೆಯ್ದುದಣಂ || ೨೭ ||

ನರಿನಾಯಿಪದ್ದುಕಾಗೆಯ |
ನೆರವಿಗಳಿಂ ಬೊಮ್ಮರಕ್ಕಸರಿನತಿಭೀತಿಂ ||
ಕರವೂದ ರಣಮನೀಕ್ಷಿಸಿ |
ಚರನೊಡೆಯನ ಪೊರೆಗೆ ಬಂದು ಪೇಳ್ದಂ ಕತೆಯಂ || ೨೮ ||

ಅನುಚರನಾಡಿದ ನುಡಿಯಂ |
ದನುಜೇಂದ್ರಂ ಕೇಳ್ದು ಕೋಪದಿಂದಾ ಕ್ಷಣದೊಳ್ ||
ಅನುವರಕೆಳ್ತಂದಂ ಸ್ಯಂ |
ದನಮಂ ತಾನೇರ್ದ್ದು ದೈತ್ಯವಾಹಿನಿವೆರಸುಂ || ೨೯ ||

ಭರದೆ ವಿರೂಪಾಕ್ಷಮಹೋ |
ದರಸುಮಹಾಪಾರ್ಶ್ವದುರ್ಮದರ್ ಮೇಣರಿಕೇ ||
ಸರಿಯೆನಿಪ ಸುಪಾರ್ಶ್ವಂ ಸಿಂ |
ಧುರರಥವಾಜಿಗಳನೇರ್ದು ರಣಕೆಯ್ತಂದರ್ || ೩೦ ||

ಪಡೆಯಂ ನಡೆಯಿಸುತಾಸುರ |
ರೊಡೆಯಂ ಸತ್ವರದೊಳಮಿತಶಸ್ತ್ರಾಸ್ತ್ರಗಳಂ ||
ಇಡುತಿತುತುಂ ವಾಸರರಂ |
ಕೆಡೆಪುತ್ತಿರೆ ಕಂಡು ಸೂರ್ಯಸುತನಿದಿರಾದಂ || ೩೧ ||

ದನುಜ ವಿರೂಪಾಕ್ಷಂ ಕಡು |
ಗಿಸಿಸಿಂ ಮುಂಬರಿದು ಬಂದು ಬಾಣಾವಳಿಯಂ ||
ವನದಂ ವರ್ಷಿಪುದೆಂಬ ವೊ |
ಲಿನಜಾತನೊಳಂದು ಕವಿಸಿದಂ ವೇಗದೊಳಂ || ೩೨ ||

ಗತ್ರದನುಜರ ಪರಿಘಮುಸಿಸ |
ಸುತನುಂ ಕಯ್ಕೊಂಡು ವೇಗದಿಂದಪ್ಪಳಿಸಲ್ ||
ಕ್ಷಿತಿತಳಕಂ ಬಿಳ್ದಂ ಮೂ |
ರ್ಛಿತನಾಗಿ ಬಳಿಕ್ಕಮೆಳ್ದು ಧುರಕಿದಿರಾಂತಂ || ೩೩ ||

ಮುಷ್ಟಾಮುಷ್ಟಿಯೊಳಿರ್ವರ್ |
ಕಾಷ್ಠಾಧಿಪರಕ್ಕನಂತೆ ಯುದ್ಧಂಗೆಯ್ದರ್ ||
ವಿಷ್ಟಪನಾಥನ ಕೃಪೆಯಿಂ |
ದುಷ್ಟಾಸುರನಂ ಪಘಾತಿಸಿದನಾ ರವಿಜಂ || ೩೪ ||

ನಿಲದೆ ಮಹೋದರದಾನವ |
ನಳವಿಗೆ ನಡೆತಂದು ನಿಶಿತಘನಶಸ್ತ್ರಾಸ್ತ್ರಾ ||
ವಳಿಯಂ ಕರೆದಂ ಮೋಡದ |
ಒಳಗಂ ಮಳೆಗರೆದು ಸೂರ್ಯನಂ ಮುತ್ತುವವೊಲ್ || ೩೫ ||

ತರಿತರಿದಸುರನ ಶರಪಂ |
ಜರಮಂ ಕಯ್ಕೊಂಡು ಖಡ್ಗಮಂ ರವಿಜಂ ಕ ||
ತ್ತರಿಸಿದನಾ ದೈತ್ಯೇಂದ್ರನ |
ಶಿರಮಂ ನಿಮಿಷಾರ್ಧದಲ್ಲಿ ನಾಕಿಗರುಲಿಯಲ್ || ೩೬ ||

ಮಗುಳೆ ಮಹಾಪಾರ್ಶ್ವಂ ಸಂ |
ಯುಗಕಂ ನಡೆತಂದು ದಾನವೇಶನ ಮತದಿಂ ||

ಜಗಮುಂ ಬಾಯ್ಬಿಡುವಂದದೊ |
ಳಗಣಿತಶಸ್ತ್ರಾಸ್ತ್ರವರ್ಷಮುಂ ಕರೆದಸುರಂ || ೩೭ ||

ಸತ್ವರದಿಂ ರವಿಜಂ ನಿಜ |
ಸತ್ವದೊಳೊಂದದ್ರಿಯಿಂದೆ ತಡೆದಿಡೆ ಕಿನಿಸಿಂ ||
ಸತ್ವಾಧಿಕದನುಜಂ ತಿ |
ಗ್ಮತ್ವಿಟ್ಸುತನಂ ಸರಾಗದಿಂದಂ ಪಿಡಿದಂ || ೩೮ ||

ಕಾಣುತೆ ಜಂಭಾಹಿತಸುತ |
ಮಾಣವಕಂ ರೋಷದಿಂದೆ ಒಂದೊಂದು ಮಹಾ ||
ಕ್ಷೋಣೀಧರದಿಂ ಸದೆದಂ |
ಕೌಣಪನಂ ರವಿಜನಂಗದನನಪ್ಪುವಿನಂ || ೩೯ ||

ದನುಜರ್ ಮುಡಿಯಲ್ ನಿಟ್ಟಿಸಿ |
ಕನಲುತೆ ತಾಂ ತೇರನೇರ್ದು ಭರದಿಂದಂ ರಾ ||
ಮನ ಸಮ್ಮುಖದೊಳ್ನಿಂದುಂ |
ಘನನಾದಂಗೆಯ್ದನಸುರನಾಯಕನಾಗಳ್ || ೪೦ ||

ಇದಿರಾಂತು ಲಕ್ಷ್ಮಣಂ ಜೆ |
ಚ್ಚರದೆ ಕಡುಪಿಂದಂ ಶಿಲೀಮುಖಗಳಂ ಕಯ್ಕೊಂ ||
ಡುದಿತಕ್ರೋಧದೊಳಂ ದಶ |
ವದನನನೆಚ್ಚಾರ್ದ್ದನಸುರರುಂ ತಲ್ಲಣಿಸಲ್ || ೪೧ ||

ಅವನಂ ನೋಯಿಸಿ ಶರದಿಂ |
ಜವದೊಳ್ ರಾಘವನ ಮೇಲ್ಗೆ ಮಾರ್ಗಣಕುಲಮಂ ||
ಕವಿಸಿದನಾಕಾಶಂ ಭೂ |
ಭುವನಂ ಕಂಪಿಸುವ ತೆರದೊಳಸುರಾಧೀಶಂ || ೪೨ ||

ಬೆಚ್ಚರದೆ ತದ್ಬಾಣಗಳಂ |
ಚುಚ್ಚುವ ರೌದ್ರಾಸ್ತ್ರದಿಂದೆ ಜಾನಕಿಯರಸಂ ||
ಕೊಚ್ಚಿದನತ್ಯಾಘಾತಕೆ |
ನುಚ್ಚುನೂರಾಗೆ ಕೋಪಕಲಿತಂ ರಾಮಂ || ೪೩ ||

ಆ ಶರಮಂ ಖಂಡಿಸಿ ಮೇ |
ಘಾಸುರನಾಥಂ ಸರೋಷಮುಂ ಕಾರ್ಮುಕದಿಂ ||
ದಾಸುರಗರ್ವದೊಳಂ ತಾ |
ನಾಸುರಮಾರ್ಗಣಮನೆಯ್ದೆ ತೆಗೆದಾರ್ದ್ದೆಚ್ಚಂ || ೪೪ ||

ಪುಲಿಕರಡಿಸಿಂಗಚಾಯಿಲ |
ಗಳ ರೂಪದೊಳಂ ಮುಸುಂಕೆ ಮಾರಂಬುಗಳಿಂ ||
ತೊಲಗಿಸಿ ದೈತ್ಯಾಧೀಶನ |
ತಲೆಗಳನೊಡೆಯೆಚ್ಚನಬ್ಜಲೋಚನನಾಗಳ್ || ೪೫ ||

ಮಯದತ್ತರೌದ್ರಶರಮಂ |
ರಯದಿಂ ದನುಜೇಂದ್ರನೆಚ್ಚೊಡಾಯುಧಗಳ ಸಂ ||
ಚಯಮೊಗೆದೆಳ್ತರೆ ಸರಸಿಜ |
ನಯನಂ ಗಾಂಧರ್ವವಿಶಿಖದಿಂ ಖಂಡಿಸಿದಂ || ೪೬ ||

ಖತಿಯಿಂ ಲಕ್ಷ್ಮಣನುಂ ಖಳ |
ಪತಿಯುರುಕಾರ್ಮುಕಶಿಲೀಮುಖಗಳಂ ಮಿಗೆ ಸಾ ||
ರಥಿಯಂ ಕಡಿದುಂ ಧ್ವಜಮಂ |
ತತಿಯಂ ಖಂಡಿಸಿದನುಗ್ರಶರವೊಂದರೊಳಂ || ೪೭ ||

ಗದೆಯಿಂ ಸರವಾರಮಣಂ |
ಕುದುರೆಗಳಂ ಸದೆಯೆ ಕಂಡು ಧರೆಗಂ ದುಮ್ಮಿ ||
ಕ್ಕಿದನಾ ದನುಜಂ ಸಿನ್ನಂ |
ಸದೆಯದೆ ಬಿಡೆನೆಂದು ಶಕ್ತಿಯಂ ಪೂಣ್ದೆಚ್ಚಂ || ೪೮ ||

ಉರಿಯನುಗುಳುತ್ತೆ ಬರೆವರೆ |
ಶರದಶಶತದಿಂದೆ ಕಡಿದು ಲಕ್ಷ್ಮಣನದನುಂ ||
ಮೊರೆಯುತ್ತಿರೆ ರಾವಣನುರು |
ತರಮಯಸಂಭೂತಶಕ್ತಿಯಂ ತೆಗೆದಿಟ್ಟಂ || ೪೯ ||

ಸಿಡಿಲೊರ್ಬುಳಿ ಪರ್ವತಮಂ |
ಪೊಡೆವಂದದೊಳಂ ಸಗಾಢಮುಂ ಜ್ವಲಿಸುತ್ತುಂ ||
ಕಡುಪಿಂ ಲಕ್ಷ್ಮಣವಕ್ಷಮ |
ನೊಡೆದುಚ್ಚಳಿಸಲ್ಕೆ ಬಿಳ್ದನವನಿಯೊಳಾತಂ || ೫೦ ||

ಅನುಜನನೀಕ್ಷಿಸಿ ರಾಘವ |
ನನಿಲಾತ್ಮಜಸೂರ್ಯಪುತ್ರರಂ ಕಾಪಿಡುತುಂ ||
ಧನುವಂ ಜೇವಡೆಗೆಯ್ದುಂ |
ಕನಲುತೆ ಕೆಡೆಯೆನುತೆ ವಜ್ರವಿಶಿಖಮನೆಚ್ಚಂ || ೫೧ ||

ದಗದಗಿಸುತೆ ದಳ್ಳುರಿಗಿಡಿ |
ಯುಗುಳುತ್ತುಂ ಬರ್ಪ ಶರಕೆ ಭಯಮಾಂತುಂ ಸಂ ||

ಯುಗಧರೆಯಂ ಬಿಟ್ಟುಂ ನಿಜ |
ನಗರಕ್ಕೆಯ್ತಂದನಸುರನಾಥಂ ಭರದಿಂ || ೫೨ ||

ಇದಿರಾಂತ ಸುಪಾರ್ಶ್ವಕದು |
ರ್ಮದರಂ ತದ್ವಿಶಿಖವಾರ್ಯನಪ್ಪಣೆಯಿಂದಂ ||
ಸದೆದುಂ ಪಿಂದುಳಿದಸುರರ |
ವಧೆಗೆಯ್ದಂತಕನ ಪುರಕೆ ಕಳಿಪಿದುದಾಗಳ್ || ೫೩ ||

ಸೀತಾಪತಿ ನಡೆತಂದನು |
ಜಾತನ ಮೊಗಮಂ ನಿರೀಕ್ಷಿಸುತೆ ದುಃಖದೊಳಂ ||
ಭೂತಳದಾಸೆಯದಿನ್ನುಂ |
ಬೀತುದೆ ಹಾ ತಮ್ಮ ಲಕ್ಷ್ಮಣಾ ತನಗೆಂದಂ || ೫೪ ||

ಜನನೀಜನಕರನುಳಿದುಂ |
ವನಕೆಳ್ತಂದೆನ್ನ ದೆಸೆಯೊಳನಿಶಂ ವ್ಯಥೆಯಿಂ ||
ತನುವಂ ಶೋಷಿಸಿ ರಣಮೇ |
ದಿನಿಯೊಳ್ ನೀಂ ಮಡಿದುದಾಯ್ತೆ ಮದ್ಬಾಲಕನೇ || ೫೫ ||

ತನ್ನಂ ರಕ್ಷಿಸುವವರಾ |
ರಿನ್ನೆಂದಳಲಲ್ ಮಹೀಶನೊಡನೆ ಸುಷೇಣಂ ||
ಬನ್ನಮಿವಗಿಲ್ಲ ತರಿಸುಗು |
ಮುನ್ನತ ಸಂಜೀವನೌಷಧಮನೆನಲೆಂದಂ || ೫೬ ||

ಬಾರಯ್ ಮತ್ಪ್ರಾಣಸ |
ಮೀರಣಸುಕುಮಾರ ಧೀರ ಮುನ್ನೊಲ್ ನೀನುಂ ||
ಭೋರೆನೆ ಸಂಜೀವನಮುಂ |
ಕ್ಷೀರಾಬ್ಧಿಗೆ ಪೋಗಿ ತಪ್ಪದೆಂದಂ ರಾಮಂ || ೫೭ ||

ಎನೆ ಹನುಮಂ ರಾಮನ ಪದ |
ವನಜಕೆ ತಲೆವಾಗಿ ಪಾರ್ದನಂಬರಪಥದೊಳ್ ||
ಅನಿತರೊಳೊರ್ವ ಚರಂ ಬಂ |
ದನುವಿಂ ರಾವಣಗೆ ಪೇಳ್ದನಾ ವಿವರಗಳಂ || ೫೮ ||

ಅಸುರೇಂದ್ರಂ ಮನದೊಳ್ ಯೋ |
ಚಿಸುತ್ತುಂ ಖಳಕಾಲನೇಮಿಯೆಡೆಗಂ ಬಂದೀ ||
ಕ್ಷಿಸಿ ತದ್ರಾಕ್ಷಸನೊಳ್ ವಾ |
ಚಿಸಿದಂ ತಾಂ ಬಂದ ಕಾರ್ಯಗೌರವದಿರವಂ || ೫೯ ||

ಧುರದೊಳ್ ಲಕ್ಷ್ಮಣನಂ ಸಂ |
ಹರಿಸಿದೆನಯ್ ಮಾರುತಾತ್ಮಭವನೌಷಧಮುಂ ||
ತರುವೊಡೆ ಚಂದ್ರದ್ರೋಣಾಶಿ |
ಖರಿಗಂ ಗಮಿಪಂ ವಿರೋಧಮುಂ ಗೆಯೆನೇಳ್ಕುಂ || ೬೦ ||

ಡೊಳ್ಳಾಸದ ವಿದ್ಯೆಗಳೊಳ್ |
ಬಲ್ಲಿದನೆನಿಸಿರ್ಪ್ಪ ವೇಗದಿಂ ನಡೆದಪನಂ ||
ಸಿಲ್ಲಿಸಿದೊಡೆ ಮತ್ಕಾರ್ಯ್ಯಂ |
ತಲ್ಲಣಿಸೆ ಕಾಲನೇಮಿ ತಾನಿಂತೆಂದಂ || ೬೧ ||

ಪದಿನಾಲ್ಕು ಲೋಕದೊಳ್ ನಿನ |
ಗಿದಿರಪ್ಪರುಮೊಳರೆ ನಿನ್ನ ಬಲಸಾಗರಮುಂ ||
ನಡೆವೊಡಮಾರ್ಗಳವಕ್ಕುಂ |
ತ್ರಿದಶರೆ ಕಪಿವಿತತಿ ವಿಷ್ಣುವೇ ರಾಮನಲಾ . || ೬೨ ||

ಹನುಮಂ ಸಾಕ್ಷಾದ್ರುದ್ರಂ |
ಮುನಿದೊಡೆ ಮಾರಾಂತು ನಿಲ್ವನಾವನೊ ಜಗದೊಳ್ ||
ದನುಜಾಧೀಶ್ವರ ನೀನ |
ಜ್ಞನೆ ತೊರೆ ತವ್ವೈರಲಬ್ಧದುರ್ವ್ಯರ್ಥೆಯುಂ ಮಾಣಾ || ೬೩ ||
ಅನಸಿಂತೆನಲೆಂದಂ ದಾ |
ನವ ನಿನ್ನಂ ಗೆಲ್ವರುಂಟೆ ತೊರೆ ಚೇಪನಮುಂ ||
ತವಸಿಯ ವೇಷಂದಾಳ್ದುಂ |
ಪವನಜನಂ ತಡೆಗುಮಬ್ಜಸಖನುದಯಾಂತಂ || ೬೪ ||

ಎಂದುಂ ಜೇಳ್ಕೊಡೆ ದನುಜಂ |
ಬಂದು ತದ್ಗಿರಿನಿತಂಬಭೂಮಿಯೊಳಂ ಸಂ ||
ಕ್ರಂದನನಂದನನೋ ಎಂ |
ಬಂದದೆ ಮನದಂದು ನಿರ್ಮಿಸಿದನುಪವನಮಂ || ೬೫ ||

ಉಟಜದೊಳಂ ಮಂಟಪಿಸಿ ವರ |
ಪಟುತಿಷ್ಟ್ಯಾಂಕೃತನುಮಾಗೆ ಕಿತ್ತ್ರಟಯೊನ್ನಂ ||
ಘಟಯಿಸಿ ಖಳತನುಮಂ ಧೂ |
ರ್ಜಟಿಯಂ ಜಾನಿಸುತುಮಿರ್ದ್ದನಟವಿಯ ಮಟದೊಳ್ || ೬೬ ||

ಅನ್ಯಗಮನಿಲಕುಮಾರಂ |
ಮುನ್ನೀರ್ಗಳ್ ನೈದೆ ದಾಂಟಿ ಬೆಚ್ಚರದಿಂದಂ ||

ಮುನೀಶ್ವರ್ ಬರೆಸರೆ ಬಳಿಕಂ ।
ಬಿನ್ನಣದಿಂದೊಪ್ಪುತ್ತಿರ್ಪ ವನಮುಂ ಕಂಡಂ ॥ ೬೭ ॥
ಮೊದಲೆಲ್ಲವರ್ಪಗಳ್ ಕಾ ।
ಣದ ವನಮುಂ ಕಂಡೆಸಿಂಪು ಪಥಪರ್ಯಯನಾ ॥
ದುವೊ ಎನುತುಂ ಚಿಂತಿಸಿ ಕಪ ।
ಟದ ವನಕಂ ಬಂದು ಕಂಡನಾ ಕಿತ್ರುಡಿಯಂ ॥ ೬೮ ॥

ವಂದಿಸಿ ಮುನಿಗಂ ತಾನೆ ।
ಲ್ತಂದುತ್ತಮಕಾರ್ಯಬರಮುಸುಸಿದರ್ಪ್ಪಂ ಕ್ರಮದಿಂ ॥
ಬಂದಿರ್ಪ್ಪೆಂ ಬಲಮುಂ ತೆಱ ।
ರೆಂದೆನೆ ದಾನವಮುನೀಶನಿಂತೆಂದನಣಂ ॥ ೬೯ ॥

ನಿನ್ನಂ ಬಲ್ಲೆಂ ಸಿರಿಮನ ।
ದನ್ನಂ ರಾಮನಾಜ್ಞೆಗೊಂಡು ಬಂದುದನರಿದೆಂ ॥
ಚೆನ್ನಾಗಿರ್ಪಂ ಲಕ್ಷ್ಮಣ ।
ನಿನ್ನುಮವನಿಸಪೆ ಮಿತ್ರಮಿನ ನೀನೆಂದಂ ॥ ೭೦ ॥

ಕರಗದ ನೀರಂ ಕುಡಿದೊಡ ।
ಮೊರೆವೆಂ ರಾಕ್ಷಸರ ಬಾಧೆ ಬಾರದ ಮಂತ್ರೋ ॥
ತ್ಕರಮುಂ ನಿನಗೆಂದುಂ ಕು ।
ಣ್ಯಿರಿಸುತೆ ನುಡಿಯಲ್ಕೆ ಪವನಸುತನಿಂತೆಂದಂ ॥ ೭೧ ॥

ದಗೆ ಬಹುಳವಾದುದೆನಗಂ ।
ನಿಗರದ ಕೊಳನಿದ್ರ್ಪವಲ್ಲಿಗಂ ಕಳಿಪಿನೊಡಂ ॥
ಸೊಗಸಿಂ ನೀರ್ಗುಡಿದುಂ ಬಂ ।
ದುಗಿವೆಂ ನೀವೀವ ಮಂತ್ರಮುಂ ತಾನೆಂದಂ ॥ ೭೨ ॥

ಎನೆ ವಟುವನೊಡನೆ ಕಳಿಪಿದೊ ।
ಡನುವಿಂ ನಡೆತಂದು ತೊಳಪ ಕೊಳನಂ ನಾಡ್ದರ್ಪಂ ॥
ವನಮುಂ ಸೇವಿಸಲಾ ಕೋ ।
ಕನದದ ಪರ್ಣಮಿರೆ ಜಾನುದಘ್ನಂ ನಡೆದಂ ॥ ೭೩ ॥

ಮುಂಬರಿಯೆ ಮಕರಿ ಕಾಲ್ಪಿಡಿ ।
ದುಂ ಬಲ್ಪಿಂ ನುಂಗಲೆಳಸಲನಿಲಕುಮಾರಂ ॥
ಶಂಬೋಪಮಮುಷ್ಟಿಯೊಳಂ ।
ತಾಂ ಭಯಗೊಳದೈದೆ ಗುದ್ದಿ ಕೊಂದಂ ಕ್ಷಣದೊಳ್ ॥ ೭೪ ॥

ಮಕರಿಯ ದೇಹಮನುಳಿದುಂ |
ಸುಕರವಿಮಾನದೊಳೆ ದಿವ್ಯವನಿತಾಕೃತಿಯುಂ ||
ಪ್ರಕಟಿಸಿ ಸಭದೊಳ್ನಿಂದುಂ |
ಸಕಳಾತ್ಮಕ ಶರ್ವರೂಪ ಜಯ ಜಯ ಎಂದಳ್ || ೭೫ ||

ಗಂಧರ್ವಾಂಗನೆ ತಾಂ ಮು |
ನ್ನೊಂದು ದಿನಂ ಭೂಮಿತಳಕೆ ಬರೆ ಮುನಿಯೊರ್ವ್ವಂ ||
ಕಂಡೆರೆದುಂ ಕಾಮಾತುರ |
ದಿಂದೀಕ್ಷಿಸಿ ಪಿಡಿಯಲುಪ್ಪಳಿಸಿದಂ ತನ್ನೊಳ್ || ೭೬ ||

ತಾಂ ಪುಷ್ಪಿಣಿಯಾಗಿರ್ಪ್ಪೆಂ |
ನೀಂ ಪುರುಷರ್ಷಭನುಮತ್ತೆ ಶುದ್ಧಿಯದಾಗಲ್ ||
ಸಂಪರ್ಕಕ್ಕೀ ತನುವುಂ |
ಸಂಪೂಜ್ಯಂ ತಾನೆನುತ್ತೆ ಪೇಳ್ದೆಂ ಮುನಿಯೊಳ್ || ೭೭ ||

ಅಂತಾಗಲೆಂದು ಶಮಧನ |
ಕಾಂತಂ ತಪಮಿರ್ದ್ದೊಡೈದೆ ನಿಶೆ ಮೂರಾಗಲ್ ||
ತಾಂ ತಪ್ಪದೆ ಬಂದುಂ ಮೆ |
ಯ್ಯಂ ತೊಳೆವುತ್ತಿರ್ದ್ದೆನೊಂದು ಕಾಸಾರದೊಳಂ || ೭೮ ||

ಅಸಿತರೊಳೆ ದಶಮುಖಂ ಬಂ |
ದಿನಿವಿಲ್ಲಸ ಕೇಳಿಗೆಳಸಿ ಬಲ್ಪಿಂ ಕೂಡಲ್ ||
ಜನಿಸಿದನತಿಕಾಯನಿವಂ |
ತನಗಾದವನೆಂದು ಕೊಂಡು ಪೋದಂ ಖಳನುಂ || ೭೯ ||

ನಿಲದಾಂ ಮಿಂದುಟ್ಟುಂ ನಿ |
ರ್ಮಲಚೇಲಮುನಾ ಮುನೀಶನೆಡೆಗೆಳ್ತರೆ ತಾಂ ||
ಮುಳಿದಿತ್ತಂ ಶಾಪಮನೀ |
ಕೊಳದೊಳ್ ನೀಂ ಮಕರಿಯಾಗೆ ಜೀವಿಪುದೆಂದುಂ || ೮೦ ||

ನಿಷ್ಕಾರಣಮುಂ ಶಪಿಸಿದೆ |
ದುಷ್ಕರಜಲಜಂತುವಾಗಿ ಜೀವಿಪೆನೆಂತೋ ||
ದುಷ್ಕೃತಿಯಿದು ತಾನೆಂದಿಗೆ |
ನಿಷ್ಕೃತಿಯಕ್ಕುಮೊ ಮುನೀಶ ಮನ್ನಿಪುದೆಂದೆಂ || ೮೧ ||

ತ್ರೇತಾಯುಗದೊಳ್ ರಾಮನ |
ದೂತಂ ತಾಂ ಬರ್ಪ್ಪನಿಲ್ಲಿಗಾತನ ಪೆಸೆಯಿಂ ||

ಪೂತಾತ್ಮಳಾಗೆ ಮುನ್ನಿನ ।
ರೀತಿಯೊಳಂ ಪೋಪೆಯೆಂದನಾ ಮುನಿನಾಥಂ ॥ ೮೩ ॥

ನಿನ್ನತ್ತಣಿನಾಯ್ತೆನಗಾ ।
ಮುನ್ನಿನ ಪರಿ ಧಾನ್ಯಮಾಲಿನಿಯ ರೂಪದೊಳಂ ॥
ಇನ್ನಾಂ ಪೋಪೆಂ ಜವದಿಂ ।
ಚೆನ್ನಿಗ ನಿನ್ನಾಜ್ಞೆಯಿಂದೆ ಮನ್ನಿಸವೇಳ್ಕುಂ ॥ ೮೪ ॥

ದಶಮುಖನಾಣತಿಯಿಂದಂ ।
ಋಷಿಯಾದಂ ಕಾಲನೇಮಿಯೆಂಬ ಮಹಾರಾ ॥
ಕ್ಷಸನಿವನಂ ಸದೆಯೆಂದುಂ ।
ಶಶಿಮುಖಿಯುವನೊಡನೆ ಪೇಳ್ದು ಪೋದಳ್ ಭರದಿಂ ॥ ೮೫ ॥

ಚೆಕ್ಕಸವಟ್ಟುಂ ಹನುಮಂ ।
ಗಕ್ಕನೆ ನಡೆತಂದು ಕಪಟಮುನಿಯಾಶ್ರಮಕಂ ॥
ಅಕ್ಕರವಾದುದು ನಿಮಗಾ ।
ನಿಕ್ಕುವೆನತಿಭಕ್ತಿಯಿಂದೆ ಗುರುದಕ್ಷಿಣೆಯಂ ॥ ೮೬ ॥

ಎಂದುಂ ಕಾಲ್ವಿಡಿದೆಳೆಯಲ್ ।
ಕಂದದೆ ಮಾಯಾವಿ ಸಿಂಹಕರಿಸೈರಿಭರೂ ॥
ಪಂದಾಳ್ದುಂ ಗರ್ಜಿಸೆ ಹರಿ ।
ನಂದನನುರುಕೋಪದಿಂದೆ ಸೆಳೆದಸಿ ಬಡಿದಂ ॥ ೮೭ ॥

ತಪ್ಪಿಸಿಕೊಂಡುಂ ದನುಜಂ ।
ನಿಪ್ಪಸರದಿನಸುರವೃಂದಮಂ ನಿರ್ಮಿಸಿ ಮೇ ॥
ಣಪ್ಪಳಿಸೆ ಕಪಿದೊಡಂ ತಾಂ ।
ಸಪ್ಪುಳ್ ಕೇಳಿಸದೊಲೆರಗಿದಂ ಬಲ್ಮರನಿಂ ॥ ೮೮ ॥

ನಿಜರೂಪದೊಳಂ ದನುಜಂ ।
ಗಜರುತೆ ಮೇಲ್ವಾಯ್ದು ಕುಪ್ಪಳಿಸಿ ಬರೆ ಪವಮಾ ॥
ನಜನೊರಸೊರಸಿಂ ಪಿಡಿದುಂ ।
ರಜನೀಚರನಂ ವಿಘಾತಿಸಿದನಾ ಕ್ಷಣದೊಳ್ ॥ ೮೮ ॥

ಬಳಿಯಂ ಚಂದ್ರದ್ರೋಣಾ ।
ಚಲಕೆಳ್ತಂದುಂ ತದದ್ರಿಯಂ ನೆರೆ ಕಿಳ್ತುಂ ॥
ಗಳಿಲನೆ ಕರತಳದೊಳಗಾಂ ।
ತಲರ್ವಟ್ಟೆಗೆ ನೆಗೆದು ಬಂದನನಿಲಕುಮಾರಂ ॥ ೮೯ ॥

ದ್ವೀಪಗಳಂ ಕಳಿದುಂ ರು |
ದ್ರೋಪಮನಕಲಂಕನಮಲದೇಹಂ ಶ್ರೀಸೀ ||
ತಾಪತಿಯೆಡೆಗಂ ನಡೆತಂ |
ದಾ ಪರ್ವತಮಂ ಸರೇಶ್ವರನ ಮುಂದಿಟ್ಟಂ || ೯೦ ||

ಭರದಿಂದೆ ಸುಷೇಣಂ ತ |
ದ್ಗಿರಿಯಂ ತಾನೇರ್ದ್ದು ಪುಡುಕಿ ಸಂಜೀವನಮಂ ||
ಧರಣಿಗೆ ತಂದುಂ ರಘುಜಾ |
ವರಜನ ನಾಸಿಕದೊಳೆರೆದನದರಿಂ ರಸಮಂ || ೯೧ ||

ಕಡುಸಿದ್ಧೆ ತಿಳಿದ ಪರಿಯೊಳಾ |
ದೃಢಗಾತ್ರನುಮಾಗಿ ಲಕ್ಷ್ಮಣಂ ಕಣ್ದೆರೆದುಂ ||
ಜಡಜಾಕ್ಷಗೆ ನಮಿಸಲಾ ವೆ |
ಯ್ದಪಿ ಮಹಾನಂದದಿಂದೆ ರಘುವರನೆಂದಂ || ೯೨ ||

ಗತಜೀವಂ ಮರಳ್ವುದಿದಂ |
ಕ್ಷಿತಿಯೊಳ್ತಾಂ ಕಾಣೆನೆಮ್ಮ ಸಯ್ಪನಿತೋ ಮಾ ||
ರುತಜನಿನಸು ಬಂದುದು ನೀಂ |
ಮೃತಿಯೊಳ್ತಾಳ್ ಪ್ರಾಣದಾತನಿವನೆಂದನುಗಾ || ೯೩ ||

ಇವನೆಮಗೆಸಗಿದುಪಕೃತಿಗೆ |
ಭುವನದೊಳೀಡಿಲ್ಲಮೆಂದು ಚಿಂತಿಸಿ ರಾಮಂ ||
ಜವದಿಂ ಭಾವಿಬ್ರಹ್ಮಪ |
ದವಿಯಿಂ ಮಾನಿಸಿದನೊಲ್ದು ಪವಮಾನಜನಂ || ೯೪ ||

ಅಳಿದ ಬಲಂ ಸಂಜೀವನ |
ದೆಲರ್ಸೋಂಕಲ್ ವೇಗದಿಂದೆ ಮೆಯ್ಮುರಿದೆಳ್ದಂ ||
ಗಱಿಲನೆ ನಡೆತಂದುಂ ರಘು |
ಕುಲತಿಲಕಗೆ ನಮಿಸಿ ಹನುಮನಂ ನುತಿಗೆಯ್ದರ್ || ೯೫ ||

ಸಲೆ ಮೊಳಗಲ್ ದುಂದುಭಿಯುಂ |
ಕುಲಿಶಧರಾದ್ಯಮರರಮಿತಸುಮಮಂ ಸುರಿದರ್ ||
ಕಲಿಹನುಮನೆ ನಿರ್ಮೋಹನೆ |
ಕಲುಷವಿದೂರನೆ ಜಯಜಯಜಯಮೆಂದೆಂದರ್ || ೯೬ ||

ಮಾಯಾದಾನವಭಂಜನ |
ಕಾಯಜಶರದೂರ ಧೀರ ಭಯಹರ ವಿಪ್ರಾ ||

ದಾಯಕ ನತಮಂದಾರಾ |
ವಾಯುಕುಮಾರಾ ಜಯಜಯಮೆಂದರ್ ದಿವಿಜರ್ ॥ ೯೭ ॥

ಸಾಂದ್ರಾನಂದದೊಳಂ ರಘು |
ಚಂದ್ರಂ ಸೌಮಿತ್ರಿಪವನಸುತ ಜಾಂಬವಕೀ ॥
ಶೇಂದ್ರವಿಭೀಷಣರೊಡನೆಯು |
ತಂದ್ರಂ ತಾನಿರ್ದ್ದನೆಂದು ಪೇಳ್ದಂ ಸೂತಂ ॥ ೯೮ ॥

# ದ್ವಾದಶಾಶ್ವಾಸ.

ವೃತ್ತ || ಶ್ರೀಮತ್ಪೂರ್ಣಸುಧಾಂಶುಧಿಕ್ಕೃತಲಸನ್ಮಂದಸ್ಮಿತಾಸ್ಯಂ ಮುನಿ |
ಸ್ತೋಮಾಭೀಷ್ಟಫಲಪ್ರದಂ ಸುಮನಸವ್ರಾತಾರ್ಚಿತಾಂಘ್ರಿದ್ವಯಂ ||
ಶ್ಯಾಮಾಂಗೋಜ್ವಲಚಾರುದೀಧಿತಿನಿರಸ್ತಾಂಭೋದನೀಕಂ ರಘೂ |
ದ್ಧಾಮಂ ಸದ್ಗುಣಧಾಮನೀಗೆ ಶುಭಮಂ ಶ್ರೀರಾಘವಂ ಸಂತತಂ || ೧ ||

ಕಂದ || ಕಪಿಕುಲದೀಪಂ ದಾನವ |
ಕಪಟಾಚಲವಜ್ರಿ ಕಾಮರೂಪಂ ವಿಮಲಂ ||
ವಿಪುಲಾಕಾರಂ ದುಷ್ಕೃತಿ |
ವಿಪಿನಾನಲನೊಲ್ದು ಕುಡುಗೆ ಹನುಮಂ ಶುಭಮಂ || ೨ ||

ರಿಸಿಗಳಿ ಕೇಳಿಂ ಲಕ್ಷ್ಮಣ |
ಗಸು ಬಂದುದನಂತೆ ಕೇಳ್ದು ದಶಕಂಠಂ ಚಿಂ ||
ತಿಸುತಂ ಮಹಿರಾವಣನಂ |
ಬಸುರಸನುರೆ ನೆನೆಯೆ ಬಂದನವನತಿಭರದಿಂ || ೩ ||

ಬರಲೆಳ್ದಾಸನಮಂ ಕೊ |
ಟ್ಟುರುತರಸನ್ಮಾನದಿಂದೆ ಸತ್ಕರಿಸುತೆ ತ ||
ನ್ನಿರವಂ ಸೂಚಿಸಿ ನರವಾ |
ನರರಂ ಕೊಲ್ವುದಕೆ ಮಾರ್ಗಮಿಕ್ಕುಮೆಯೆಂದಂ || ೪ ||

ಏತಕೆ ಚಿಂತಿಪೆ ದನುಜ |
ವ್ರಾತಾಧಿಪ ನಿಮಿಷದಲ್ಲಿ ನರವಾನರರಂ ||
ಘಾತಿಸದೆ ಬಿಡೆನೆನುತ್ತುಂ |
ಪ್ರೀತಿಯೊಳಂ ಪೋದನೈದೆ ಮಹಿರಾವಣನುಂ || ೫ ||

ಆ ರಾತ್ರಿಯೊಳೊಂದೆಡೆಯೊಳ್ |
ವೈರಾವಣನಿರ್ಪ್ಪ ಪರಿಯನರಿದುಂ ಭರದಿಂ ||
ವೀರವಿಭೀಷಣನೆಡೆಗಂ |
ಚಾರನನಾ ಸರಮೆಯಟ್ಟಿದಳ್ ಪೋಗೆಂದುಂ || ೬ ||

ಚರನೆಯ್ತಂದಾ ವಾರ್ತೆಯ |
ನೊರೆಯಲ್ಕಾಳೋಚಿಸುತ್ತೆ ಸರಮಾರಮಣಂ ||

ತರಣಿಜನನುಮಗ್ರ್ರಂ ಬಿ |
ತ್ತರಿಸುತೆ ಜಾಗ್ರತೆಯೊಳಿರ್ದ್ದನಾ ರಾತ್ರಿಯೊಳಂ || ೭ ||

ಗಳಿಲನೆ ಚಂದ್ರದ್ರೋಣಾ |
ಚಲಮಂ ಕ್ಷೀರಾಬ್ಧಿತೀರದೊಳ್ ಬೀಸಿಡುತುಂ ||
ಬಳೆಯಿಸಿ ನಿಜವಾಲಮನಾ |
ಬಳಿಯಂ ಪೆರ್ಗೋಂಟೆಗೆಯ್ವನದರಿಂ ಹನುಮಂ || ೮ ||

ಅವನೀತಳದಿಂ ಮೇಲಕೆ |
ಧ್ರುವನಿಳಯಂಮುಟ್ಟೆ ಕೋಂಟೆ ಸುತ್ತುಂ ಮುತ್ತುಂ ||
ಪವಿಯೊಲ್ ದೃಢಮಾದತ್ತಾ |
ಪವಿಕಾಯನ ವಾಲಭಿತ್ತಿ ಸಪ್ತಕಮಾಗಳ್ || ೯ ||

ನರಪತಿಗಳ್ ನಿರ್ಭಯರಾ |
ಗಿರಲೆಂದುಂ ಘೋರರೂಪನಾಂತನಿಲಸುತಂ ||
ಗಿರಿಯಂ ಮರನಂ ಧರಿಸುತೆ |
ಕರಗಳೊಳಂ ಮೆರೆವುತಿರ್ದ್ದನಾ ದ್ವಾರದೊಳಂ || ೧೦ ||

ಮೈರಾವಣನತ್ತಲ್ ಕಪಿ |
ವಾರದ ಬಗೆಯಂ ವಿಚಾರಿಸಲ್ ದಧಿಮುಖನಂ ||
ಭೋರನೆ ಕಳಿಪಿದೊಡಂ ನೆರೆ |
ನಾರುತ್ತುಂ ನೋಡುತಿರ್ದ್ದನೆತ್ತಂ ಸುತ್ತಂ || ೧೧ ||

ಒಳವುಗುವೊಡೆ ಪಥಮಿಲ್ಲದ |
ಕುಲಿಶೋಪಮಮಾದ ಕೋಂಟೆಯಂ ನೋಡುತ್ತಂ ||
ನೆಲನಂ ಬಗಿದಿಳಿದು ರಸಾ |
ತಳದೊಳ್ ಪಡಿಸಣಿಸಿ ಮರಳ್ದು ಬಂದಂ ಧರೆಗಂ || ೧೨ ||

ನೆಸೆದಂಬರತಳಕಂ ಧ್ರುವ |
ವಸಥದ ಪರ್ಯಂತಮರಸಿ ಕಾಣದೆ ಪಥಮಂ ||
ಬಸವಳಿದೆಳ್ತಂದುಂ ರಾ |
ಕ್ಷಸನಾಥಗೆ ಪೇಳೆ ಕೇಳ್ದು ವಿಸ್ಮಿತನಾದಂ || ೧೩ ||

ಯೋಚಿಸಿ ಮಹಿರಾವಣನಾ |
ಸೂಚೀಮುಖನೆಂಬ ದೈತ್ಯನಂ ಕಳಿಪಲ್ಕಂ ||
ಖೇಚರನೊಲ್ ಬಂದುಂ ನಾ |
ರಾಚೋಪಮಮಾಗೆ ನಾಸೆಯಂ ಬಳೆಯಿಸಿದಂ || ೧೪ ||

ಭರದಿಂ ಬಾಲದ ಕೋಂಟೆಯ |
ಸರೆಕೊರೆದುಂ ನೋಡೆ ಸಾಧ್ಯವಾಗದೆ ಗೋಣಾಂ ||
ಜರಿಯಲ್ ಕೊರಗುತೆ ಕುಂದುತೆ |
ಪರಿತಂದಾಳ್ದಂಗೆ ಪೇಳ್ದನಾ ವೃತ್ತಮುಮಂ || ೧೫ ||

ಏನದ್ಭುತಮೆಂದೆನುತಂ |
ದಾನವಪತಿ ವಜ್ರದಂಷ್ಟ್ರನೆಂಬಾಸುರನಂ ||
ಸೇನತಿವೇಗಂ ಪೋಗಿ ಸಿ |
ದಾನಿಸಿ ನಡೆತರ್ಪುದೆಂದು ಕಳಿಪಿದನವನಂ || ೧೬ ||

ಅವನೆತ್ತಂದುಂ ಗರ್ವದೆ |
ನವಿದಂಷ್ಟ್ರಗಳಿಂದೆ ಛಿದ್ರಿಸುವೆನೆಂದೆನುತುಂ ||
ಜವದಿಂ ಕೊರೆದುಂ ತರಿದುಂ |
ತಿವಿಯುತ್ತುಂ ಮುರಿದುವಸುರನುರುದಂಷ್ಟ್ರಂಗಳ್ || ೧೭ ||

ಕರ್ಕಶಮಿದೆಂದು ದನುಜಂ |
ಗಕ್ಕನೆ ನಡೆತಂದು ಬಲ್ಲಹಂಗರಿಪಲ್ಕಂ ||
ಚಿಕ್ಕನವಬ್ಬಂ ಬಳಿಯಂ |
ದಕ್ಕಿನಲೇಗೆಯ್ವೆನೆಂದು ಯೋಚಿಸುತಿರ್ದ್ದಂ || ೧೮ ||

ಹನುಮನ ಸಾಹಸಮಿದು ಸ |
ದ್ವಿನಯೋಪಾಯದೆ ಪ್ರಯತ್ನಮಂ ಗೆಯ್ಯುವೆನೆಂ ||
ದೆನುತಂ ಮಹಿರಾವಣನುಂ |
ಮನದೊಳ್ತಿಳಿದೊಂದುಪಾಯಮಂ ನೆನೆದನವಂ || ೧೯ ||

ಆ ಸೇನೆಗಾಪ್ತನತ್ತೆ ವಿ |
ಭೀಷಣನಾಸವನ ಪರಿಯೊಳತಿವೇಗದೊಳಂ ||
ವೇಷಂದಾಳ್ದುಂ ಪೋದಪೆ |
ನೀ ಸಮಯದೊಳೆಂದು ತಾಳ್ದನವನಾಕೃತಿಯಂ || ೨೦ ||

ನಡೆತಂದೊಯ್ಯನೆ ದುಃಖಂ |
ಬಡುವಾಪಾಯಿಯ ವಿಭೀಷಣಾಸುರನಂ ಕಂ ||
ಡೊಡನೇಕಯ್ ದುಃಖಿಪೆ ನಿನ |
ಗಡಸಿದ ಭಯಮೇನೆಂದನನಿಲಕುಮಾರಂ || ೨೧ ||

ಪಾತಾಳಲಂಕೆಯಿಂ ವಿ |
ಖ್ಯಾತಂ ಮಹಿರಾವಣಾಖ್ಯದನುಜಾಧೀಶಂ ||

ಭೂತಳಕನ್ಯನ ಒಳಗಂ |
ಪ್ರೀತಿಯೊಳೆಲ್ತಂದನೆಂಬುದಂ ತಾಂ ಕೇಳ್ದಂ || ೨೨ ||

ಅವನತಿಮಾಯೋದ್ಧತನಜ |
ಭವಹರಿದಿವಿಜೇಶಮುಖ್ಯರಂಜುವರವನೊಳ್ ||
ಭುವನಗಳಂ ಸೃಜಿಸುತೆ ನುಂ |
ಗುವ ಸಾಹಸಮುಷ್ಪ್ರದಾತನೊಳ್ ಕಲಿಹನುಮಾ || ೨೩ ||

ಏಂಗೆಯ್ವನೊ ಕಾಣೆಂ ರಘು |
ಪುಂಗವರೇನಪ್ಪರೆಂತುಮಿರ್ಪ್ಪರೊ ಕೀಶರ್ ||
ಮುಂಗುಡಿಯೊಳ್ನಿಲ್ಲದೆ ಸಮ |
ರಾಂಗಣಮಂ ಬಿಟ್ಟು ಪೋಗೆ ನಾಣ್ಕಂ ನಿನಗಂ || ೨೪ ||

ಸೇನೆನೊರ್ವರ್ಗಂ ಬೇರಾದೊಡೆ |
ದಾನವನಂ ಕೊಲ್ಲಲಕ್ಕುಮೆತ್ತಿವರ್ಪ್ಪ ವಂ ||
ಥಾನಮನೀಕ್ಷಿಸಿ ಪೇಳ್ವಂ |
ಭೂನಾಥಗಪ್ಪುದಕುಳಸುಖಜಯಮೆಂದಂ || ೨೫ ||

ನಿಜಮೆಂದು ತಿಳಿದು ಪವಮಾ |
ನಜನಲ್ಪತರಿಯಾಗಿ ತಾನಿರ್ದ್ದು ಮಹಾ ||
ಕುಜದೆಸೆಯೊಳ್ ಮೆಯ್ಗರೆದಿರೆ |
ರಜನೀಚರನೈದೆ ಪೊಕ್ಕನಾ ಕಪಿಬಲಮಂ || ೨೬ ||

ಬೇಳುವೆಯ ಬೂದಿಯುಂ ಕಪಿ |
ಪಾಳಯಕಂ ಚೆಲ್ಲಿ ನಿಲದೆ ಬಂದುಂ ಭೂಮೀ ||
ಪಾಳಕರಂ ಕೊಂಡುಂ ಪಾ |
ತಾಳದ ನಿಜಗೇಹಕಂದು ನಡೆತಂದನವಂ || ೨೭ ||

ಮನೆಯೊಳಗವರಂ ಮಲಗಿಸಿ |
ಘನನಿದ್ರಾಸಕ್ತನಾಗಿ ಮರೆದೊರಗಿರಲಾ ||
ತನ ಸತಿ ಕಂಡವರಿರ್ಪ್ಪರ |
ನನುವಿಂ ಸೌಭಾಗ್ಯದೇವಗೆ ಕೊಂಡುಯ್ವಳಣಂ || ೨೮ ||

ನರರತ್ತಿವರುಂ ಪಾವನ |
ಪುರುಷರೆನುತ್ತಿರಿದು ನಿಷ್ಠೆ ತಿಳಿಯದ ಪೊಲ್ ಜೆ ||
ಷ್ಟರದಿಂ ಮಲಗಿಸಿದಳ್ ಶ್ರೀ |
ಹರಿ ರಕ್ಷಿಪುದೆನುತುಮೆಂದಳಾ ರಾತ್ರಿಯೊಳಂ || ೨೯ ||

ಅಸಿತರೊಳಿತ್ತಲ್ ಕಪಿವಾ |
ಹಿನಿಯೊಳ್ತಂತಮಗೆ ಭೀತಿದಳೆದೆಳ್ದರುತುಂ ||
ಇನಸುತಜಾಂಬವಮುಖ್ಯರ್ |
ಮನುಜೇಂದ್ರರನಂದು ಕಾಣದಿರೆ ಚಿಂತಿಸಿದರ್ || ೩೦ ||

ಏನಾದರ್ ಭೂಪರ್ ಪವ |
ಮಾನಾತ್ಮಜನೆಲ್ಲಿ ಪೋದನೆನುತಂ ಕಡುದು ||
ಮ್ಮಾನದೊಳಂ ಬರೆ ವಿಧಿ |
ಸೂನು ನಿರೀಕ್ಷಿಸಿದನನಿಲಪುತ್ರನನಾಗಳ್ || ೩೧ ||

ಮರಸಡಿಯೊಳ್ ಬಿನ್ನನೆ ಕುಳಿ |
ತಿರಲೀಕ್ಷಿಸಿ ಕೇಳ್ದನವನೊಳೇನಯ್ ಭೂಪಿಗಾ ||
ಶ್ವರರೇನಾದರ್ ನೀಂ ಮೊ |
ಗ್ಗರೆದಿರ್ಪುದವೇತರಿಂದಮೆಂದುಂ ವಿಧಿಜಂ || ೩೨ ||

ಎನಲಚ್ಚರಿಗೊಂಡಾ ಕ್ಷಣ |
ಮನಿಲಾತ್ಮಜನೈದೆ ಜಾಂಬವಂತಗೆಂದಂ ||
ವನಜಭವಾತ್ಮಜ ಕೇಳಯ್ |
ದನುಜಾಧಮನೆನಗೆ ವಂಚಿಸಿದನೇವೇಳ್ವೆಂ || ೩೩ ||

ಅವನಂ ಕೊಂದುಂ ತತ್ಸದ |
ಭವನಂ ಸಂಹರಿಸಿ ದೈತ್ಯನಿಚಯಮನರೆದುಂ ||
ಭುವನಮನುಂ ಕಿಳ್ತಿಟ್ಟುಂ |
ರವಿಕುಲಜರನೈದೆ ತರ್ಪೆನೆಂದಾರ್ದನವಂ || ೩೪ ||

ಅನ್ನೆವರಂ ಸರಮೆಯ ಮನ |
ದನ್ನಂ ನಡೆತಂದು ಕೋಪಮೇಂ ಕಾರಣಮು ||
ತ್ಪನ್ನಮದಾದುದು ನಿನಗಂ |
ತನ್ನೊಳ್ ಸೂಚಿಸುಗುಮೆಂದೊಡನಿಲಜನುಸಿರ್ದಂ || ೩೫ ||

ಈ ದನುಜಂ ತಾನೆನ್ನೊಳ್ |
ಮೇದಿನಿಗಂ ವಿತಳದಿಂದೆ ಮಹಿರಾವಣಮಾಂ ||
ಸಾದಂ ಬಂದಿರ್ಪಂ ನೀ |
ನಾ ದನುಜನ ಕಣ್ಗೆ ಬೀಳದಿರ ಎಂದೆಂದಂ || ೩೬ ||

ಇವನಾಡಿದ ನುಡಿ ದಿಡಮೆಂ |
ದವಿವೇಕದಿನಿಲ್ಲಿಗೈದೆ ನಡೆತಂದೆಂ ಕೈ ||

ತ್ರವದಿಂದಂ ಸ್ವಾಮಿದ್ರೋ |
ಹವನೆಸಗಿದನಿವನನೀ ಕ್ಷಣಂ ಸಂಹರಿಪೆಂ || ೩೭ ||

ಎನೆ ಜಾಂಬವದೇವಂ ಸ |
ದ್ವಿನಯದೊಳಂ ಕೇಳೆ ಪೇಳ್ದನಾ ದನುಜೇಂದ್ರಂ ||
ಇನಿತರೊಳೊಂದಂ ತಿಳಿಯೆಂ |
ತನಗಿಂದಪವಾದಮಡಸಿದುದೆ ಹಾ ವಿಧಿಯೇ || ೩೮ ||

ಧೀಮಂತನೆ ಕೇಳ್ಗಂ ತಾಂ |
ಸ್ವಾಮಿದ್ರೋಹಮನೆ ಗೆಯ್ವ ಧೂರ್ತನೆಯಮವಾ ||
ರಾಮನ ಚರಣಮೆ ಬಲ್ಲುದು |
ಭೀಮಾತ್ಮಕನೀತನೆನ್ನ ಗುಣಮಂ ಬಲ್ಲಂ || ೩೯ ||

ದಶಕಂಠಂ ಪಾತಾಳದಿ |
ನೊಸೆದುಂ ಮೈರಾವಣಾಖ್ಯನಂ ದಾನವನಂ ||
ವಸುಧೆಗೆ ಬರಿಸಿರ್ದ್ದಪನೆಂ |
ದುಸಿರ್ದೆಂ ನಾಂ ಮೊದಲೆ ನಿಮಗೆ ಮಾಯಾವಿಯವಂ || ೪೦ ||

ಮೊದಲೊಳ್ ಮಹಿರಾವಣದಶ |
ವದನಘಟಶ್ರವಣರೊಡನೆ ತಾನುಂ ವಿದ್ಯಾ ||
ಸದನದೊಳೋದುವ ತತ್ಕಾ |
ಲದೊಳಂ ಸಂಭವಿಸಿತಾತನೊಳ್ ಸುಸ್ನೇಹಂ || ೪೧ ||

ಅಟಮಟದೊಳ್ಮಾಯೆಯೊಳಂ |
ಪಟುಗಳ್ ನಾಂ ನಾಲ್ವರಖಿಳಜೀವರ ರೂಪಂ ||
ದಿಟಮೆನೆ ಧರಿಸಲ್ಬಲ್ಲೆವು |
ಘಟಿಸಿದುದಾ ಖಳಗೆ ಕಪಟವಿದ್ಯಾಧಿಕ್ಯಂ || ೪೨ ||

ಧರಿಸುತಮೆನ್ನೊಲ್ ರೂಪಂ |
ಮರೆಯೊಳ್ ಕೊಂಡುಯ್ವನವನಿಯೊಡೆಯರನಾತಂ ||
ಮರೆನುಡಿಯಲ್ಲಮಿದುಂ ದೇ |
ವರ ಚಿತ್ತಕೆ ತೋರ್ಕ್ಕುಮವನೊಲಿಂತಾನಪ್ಪೆಂ || ೪೩ ||

ಈಕ್ಷಿಪುದೆಂದೆನುತಂ ತ |
ದ್ವಾಕ್ಷಸನಾಕೃತಿಯನಾಂತು ಕಣ್ಗೆಸೆಯಲ್ಕಂ ||
ಋಕ್ಷಾಧೀಶಂ ಕಂಡು ಜಿ |
ತಾಕ್ಷಂಗುಂ ತೋರ್ದ್ದನಸುರಮಾಯೆಯ ಪರಿಯಂ || ೪೪ ||

ಸಾಕಯ್ ಕಂಡೆಂ ನೀನಿ ।
ನ್ನೀ ಕಪಟದ ರೂಪನಡಗಿಸಯ್ ದೈತ್ಯಂ ನಿ ॥
ನ್ನಾಕಾರಂದಾಳ್ದಂ ನಿಜ ।
ಮಾ ಕಪಟಿಯ ತಾಣವಾವುದೆಂದಂ ಹನುಮಂ ॥ ೪೫ ॥

ಆನಾಡಿದ ನಿಷ್ಠುರಮಂ ।
ನೀನಿಡದಿಯೆ ಮನದೊಳಸುರನುರುನಗರಕೆ ಪಂ ॥
ಥಾನಮುಮಂ ತೋರಲ್ ತ ।
ದ್ದಾನವನಂ ಸದೆದು ತಪ್ಪೆನವನೀಶ್ವರರಂ ॥ ೪೬ ॥

ನಿನ್ನಯ ನೆಲೆಯಂ ಗುಣಸಂ ।
ಪನ್ನನೆ ತಿಳಿದೆಂ ಸುರಾರಿವರನಸಭೆಯೊಳಂ ॥
ನಿನ್ನಂ ಸೋಂಕದು ಪಾಪಂ ।
ಸನ್ನುತ ದಯೆಗೆಯ್ದು ತೋರ ಮಾರ್ಗಮನೆನಗಂ ॥ ೪೭ ॥

ಇಂತನಿಲಜನೆನೆ ಕೇಳ್ದಂ ।
ಸಂತಸದಿಂ ಪೂರ್ವರೂಪಮಂ ತಾಳುತ್ತುಂ ॥
ತಾಂ ತಳ್ವದೆ ಮಾರುತಿಗಂ ।
ಪಂಥಾನಮನೈದೆ ತೋರ್ದ್ದನಾ ಪರಮೇಶಂ ॥ ೪೮ ॥

ಲಂಕೆಗೆ ದಕ್ಷಿಣದಿಶೆಯೊಳ ।
ಗಂ ಕಡುಸೊಬಗಾಂತು ಮೆರೆವ ಕೊಳನಂ ತೋರ್ದಂ ॥
ಪಂಕಜನಾಳದೊಳಿಳಿಯುತೆ ।
ಭೋಂಕನೆ ನಡೆಯೆಂದು ಪೇಳ್ದನವನೊಳ್ ಭರದಿಂ ॥ ೪೯ ॥

ಪಂಚಾಣುರೂಪದಿಂದಂ ।
ಚಂಚಲಿಸದೆ ಪದ್ಮನಾಳಪಥದೊಳಗಿಳಿದುಂ ॥
ಕಾಂಚನಮಣಿಮೆಳಗಿನೊಳಂ ।
ಮಿಂಚುವ ತತ್ಪುರಮನೈದೆ ಕಂಡಂ ಹನುಮಂ ॥ ೫೦ ॥

ಸರಭಸಮುಂ ಪೋಗುವ ಕಪಿ ।
ವರನಂ ಕಂಡೊರ್ವ್ವ ಮತ್ಸ್ಯವಾನರನಾಗಳ್ ॥
ಭರದೆ ತಡುಪಿದಂ ನಿಲ್ ಮುಂ ।
ಬರಿಯದಿರೆನುತಂ ಸರೋಷಮುಂ ಮಾರುತಿಯಂ ॥ ೫೧ ॥

ನೀನೇತಕೆ ತಡೆದಪೆ ಝಷ ।
ವಾನರ ನಿನಗೇಕತದಿನಾದುದೀ ಜನ್ಮಂ ಮೇ ॥

ಣೀ ನರರೂಪಮನೀಕ್ಷಿಸೆ |
ಮಾನಸಕಂ ಚೋದ್ಯಮಾದುದೆಂದಂ ಹನುಮಂ || ೩೧೨ ||

ನಿನಗೇತಕ್ಕೆಱಲವೋ ಮ |
ಜ್ಜನಪದ ಸಂಗತಿ ಸರಾಗದಿಂ ನಿನ್ನನುಮಂ ||
ಇನಜನ ಪೊರೆಗಂ ಕಳಿಪುವೆ |
ನೆನುತಂ ಕಡುಗಿನಿಸಿನಿಂದೆ ಗರ್ಜಿಸಿ ನಿಂದಂ || ೩೧೩ ||

ಕೊಂದಪೆನೆಂದೊಡೆ ಕಯ್ಗಳ್ |
ಮುಂದಕ್ಕಂ ಬರ್ಪುದಿಲ್ಲಮಿನ್ನೀ ಚಿತ್ತಂ ||
ಪೊಂದರೆ ದಯೆಯಂ ಗಮಿಸುವೊ |
ಡಂ ದಾರಿಯನೀಯೆವೇಳ್ಕುಮೆನಗಂ ಭರದಿಂ || ೩೧೪ ||

ಪ್ರತಿಭಟರಾಮಲ್ಲಂ ನೀಂ |
ಖತಿಗೊಳದೆನ್ನೊಡನೆ ಪೇಳ ಜನ್ಮಸ್ಥಿತಿಯಂ ||
ಅತಿಸಂತೋಷಂಬಡುವೆಂ |
ಮತಿ ನೇಹಮನಾಶಿಸುವುದದೆಂದಂ ಹನುಮಂ || ೩೧೫ ||

ಆಲಿಪುದಾದೊಡೆ ಬಲ್ಲಯ್ |
ಕಾಲೋಪಮಪವನಪುತ್ರನಂ ಪೂರ್ವದೊಳಂ ||
ಬಾಲತ್ವದೊಳರ್ಕನ ಸುಪಿ |
ಶಾಲಂ ಮಂಡಲಮನೈದೆ ತುಡುಕಿದ ಭಟನಂ || ೩೧೬ ||

ಅವನ ಸುತಂ ತಾನೆಂತೆನೆ |
ವಿವರಿಸುವೆಂ ಋಷ್ಯಮೂಕಗಿರಿಶಿಖರದೊಳಂ ||
ರವಿಸಂಭವನಿರಲಲ್ಲಿಗೆ |
ಜವದಿಂ ಶ್ರೀರಾಮನೈದೆ ಬಂದಂ ಗಡ ಕೇಳ್ || ೩೧೭ ||

ಆತನೆ ಹರಿ ಗಡ ತತ್ಸತಿ |
ಸೀತೆಯೆ ರಮೆ ಗಡ ನಿಶಾಚರಾವಳಿಯಂ ಸಂ ||
ಘಾತಿಪೊಡಂ ಬಂದಂ ಗಡ |
ಭೂತಳಪತಿ ದಶರಥನ ತನುಜಂ ಗಡ ಕೇಳ್ || ೩೧೮ ||

ಆ ನರನಾಥನ ಸತಿಯಂ |
ದಾನವಪತಿ ಲಂಕೆಗುಯ್ದನೆಂಬುದನರಿದುಂ ||
ಭಾನುಸುತಂ ಕಳಿಪಲ್ ಪವ |
ಮಾನಾತ್ಮಜನಂಬುರಾಶಿಯಂ ನೆಗೆದನಣಂ || ೩೧೯ ||

ಹನುಮಂತನ ಬೆಮರ್ವನಿಯುಂ ।
ವನನಿಧಿಯೊಳ್ ಪತಿತಮಾಗೆ ಪೆಣ್ಮೀನ್ ನುಂಗಲ್ ॥
ಘನಗರ್ಭಂ ಬಳೆಯುತ್ತಿರೆ ।
ಯಸಿತರೊಳಂ ಸೂತನ್ಸೈದೆ ಝುಷೆಯಂ ಪಿಡಿದಂ ॥ ೬೦ ॥

ವೈಸಾರಿಣಿಯಂ ವ್ಯಾಧಂ ।
ನೈಶಾಚರಪತಿಗೆ ತಂದುಕೊಡಲಾ ಕ್ಷಣದೊಳ್ ॥
ಮೆಯ್ವಿಸ್ಸಾಳಲ್ಕಾನಿರ್ದಂ ।
ಶೈಶವರೂಪದೊಳೆ ಅದರ ಜಠರಾಂತರದೊಳ್ ॥ ೬೧ ॥

ಈಕ್ಷಿಸುತಂ ವೈರಾವಣ ।
ರಾಕ್ಷಸಪತಿ ತೋಷದಿಂದಮನುದಿನಮೆನ್ನಂ ॥
ರಕ್ಷಿಸಿ ನಗರದ್ವಾರದೆ ।
ರಕ್ಷಕನಾಗಿರ್ಪುದೆಂದು ನೇಮಮನಿತ್ತಂ ॥ ೬೨ ॥

ಅಂದುಮೊದಲ್ ನಾನೀ ಅರ ।
ವಿಂದದ ನಾಳಮನೆ ಕಾವ ಕಾರ್ಯದೊಳಿರೆ ಸಂ ॥
ಕ್ರಂದನಮುಖ್ಯರ್ ಬೆದರ್ದಪ ।
ರಿಂದಿಲ್ಲಿಗೆ ಬಂದು ಬದುಕಿ ಪೋಪುದುಮುಂಟೇ ॥ ೬೩ ॥

ಇಂತೆನೆ ಪವನಜನತಿಶಯ ।
ಸಂತೋಷದೆ ಹನುಮನೆಂಬವಂ ತಾನೆ ಕಣಾ ॥
ನೀಂ ತಿಳಿಯದಾದೆ ಬಿಡು ಬಿಡು ।
ಪಂಥಾನಮನಸುರಪತಿಯನಗರಕ್ಕೆಂದಂ ॥ ೬೪ ॥

ಆತಂ ಭುವನಖ್ಯಾತಂ ।
ಪಾತಾಳಾಕಾಶವಿಸ್ತೃತಂ ಹನುಮಂತಂ ॥
ಭೂತೇಶಾಕಾರಂ ಬಿಡು ಬಿಡು ।
ಮಾತಿನ ಬನ್ನಣೆಯನೆಂದನನಿಲನ ಪೌತ್ರಂ ॥ ೬೫ ॥

ನಸುನಗುತಂ ಹನುಮಂತಂ ।
ಪ್ರಸರಿಸಿದಂ ತನುವನಂತಕಾಲದ ಹರನೊಲ್ ॥
ಶಶಿಸೂರ್ಯಗ್ರಹತಾರಾ ।
ವಿಸರಾಂಕದೊಳೆಸೆಯೆ ಕಂಡನಾ ಸುಕುಮಾರಂ ॥ ೬೬ ॥

ಬೆದರುತೆ ಬಂದುಂ ತಂದೆಯ ।
ಪದಪದ್ಮಕೆಮಣಿದು ನಿಂದು ಸದ್ಭಕ್ತಿಯೊಳಂ ॥

ತ್ರಿದಶಾರ್ಚಿತ ವೇದಾತ್ಮಕ ।
ಸದಮಲ ಜಯಜಯತು ಎಂದೊಡೆಂದಂ ಹನುಮಂ ॥ ೬೭ ॥

ತನುಜನೆ ಕೇಳಯ್ ವಂಚಿಸಿ ।
ದನುಜಂ ರಾಘವರಸಿಲ್ಲಿಗಂ ತಂದಿರ್ಪ್ಪಂ ॥
ಹನನಂಗೊಳಿಸುತೆ ದೈತ್ಯನ ।
ನನುವಿಂ ಕೊಂಡುಯ್ಯೆವೇಳ್ಕುಮಾ ಭೂಮಿಪರಂ ॥ ೬೮ ॥

ತಿಳಿಯದು ಬಟ್ಟೆಯದೆಸಗಿ ।
ನ್ನೊಳಪ್ಪುಗುವೊಡೆ ಯತ್ನಮೇನೊ ಅಸುರನ ಚಾತು ॥
ಬರ್ಲಮೆನಿತಿರ್ಕ್ಕುಮೊ ಮಾಜದೆ ।
ತಿಳಿಪೆನೆ ಪೇಳ್ದಂ ಭಯಾವಹಂ ಪುರದಿರವಂ ॥ ೬೯ ॥

ಪುಗುವೊಡಸಾಧ್ಯಂ ದನುಜನ ।
ನಗರಮನಾ ಕೋಂಟೆಸುತ್ತಿನೊಳಗಿರ್ದ್ದಪರಯ್ ॥
ವಿಗಡರ್ ಕಾಲನ ಭಟರಂ ।
ಮಿಗೆ ಲೆಕ್ಕಿಸದತುಳದೈತ್ಯರೆಲ್ಲಂ ಕಡೆಯೊಳ್ ॥ ೭೦ ॥

ದ್ವಾರದೊಳೊಂದಿರ್ದ್ದಪುದು ಸ ।
ರೋರುಹಭವನಿತ್ತ ತುಲೆಯದರೊಳಂ ನಿತ್ಯಂ ॥
ಆರಯ್ದುಂ ತೂಗುವರಾ ।
ಪೌರಭಟರ್ ಪೋಗಿವರ್ಪ್ಪ ನಾಗರಜನರಂ ॥ ೭೧ ॥

ಪೊಸಬರ್ ಬರೆ ತುಲೆಯುಂ ಕಂ ।
ಪಿಸಲೊಡಮದನರಿದು ದೈತ್ಯಭಟರವರಂ ಘಾ ॥
ತಿಸುವರ್ ತನ್ನಗರಮನೀ ।
ಕ್ಷಿಸುವೊಡೆ ಭಯಗೊಳ್ವರಮರಮನುಜೋರಗರುಂ ॥ ೭೨ ॥

ದನುಜನ ಸೋದರಿಯೊರ್ವ್ವಳ್ ।
ಮನೆದೇವತೆಯಂ ಸರಾಗದಿಂ ಪೂಜಿಸಲೆಂ ॥
ದನುರಾತ್ರಿಯೊಳೆಯ್ತರ್ಪ್ಪಳ್ ।
ಮಿನುಗುತೆ ಪುರಮಧ್ಯಮಿರ್ಪ್ಪ ದೇವೀಗೃಹಕಂ ॥ ೭೩ ॥

ಆ ದೇವಗೃಹದೊಳಂ ನ್ಯ ।
ಗ್ರೋಧಕುಜಂ ರಮ್ಯಮಾಗೆ ಶೋಭಿಸುತಿರ್ಕ್ಕುಂ ॥
ಸಾದರದಿಂ ಮರನೇರಿರೆ ।
ಯಾ ದೈತ್ಯನ ತಂಗೆಯಿಂದೆ ಕಾರ್ಯಂ ಸಾಧ್ಯಂ ॥ ೭೪ ॥

ಎಂದೊರೆಯಲ್ ಮಾರುತಿ ಮನ |
ದಂದುಂ ಸೂಕ್ಷ್ಮಾಂಗನಾಗಿ ತದ್ದ್ರುಮದೆಡೆಗಂ ||
ಬಂದೇರ್ದುಂ ಕುಳ್ಳಿರಲರ |
ವಿಂದಾನನೆ ಮಧ್ಯರಾತ್ರಿಯೊಳ್ಚೆತಂವಳ್ || ೭೫ ||

ದೇವಿಯನರ್ಚಿಸಿ ನೆರೆ ಪರಿ |
ದೇವನದಿಂದಿರ್ಪ್ಪ ಸಮಯಮಂ ಕಂಡುಂ ಸಂ ||
ಜೀವಂ ತಾಂ ಮೆಲ್ಲನೆ ರಾ |
ಜೀವಾಕ್ಷಿಯ ಬಳಿಗೆ ಒಂದು ನುಡಿಸಿದನವಳಂ || ೭೬ ||

ಏನಾದುದಮ್ಮ ರಾತ್ರಿಯೊ |
ಳೀ ನೆಲಕಂ ಬಂದು ದುಃಖಿಸುವುದೇತಕೆ ಚಂ ||
ದ್ರಾನನೆ ಪೇಳೆನಲೀಕ್ಷಿಸಿ |
ವಾನರ ನೀನಾರ್ಗ್ಗೆ ಬಂದುದೇತಕೆ ಎಂದಳ್ || ೭೭ ||

ಪವಮಾನನ ಕುವರಂ ತಾ |
ನವನಿಪರಂಕಳ್ಪ ತಂದನಸುತಂ ನಿಶೆಯೊಳ್ ||
ಅವನಂ ಕೊಂದುಂ ತದ್ರಘು |
ಭವರಂ ಕೊಂಡುಯ್ವೆನೆಂದು ಬಂದಿರ್ದ್ದಪೆನೌ || ೭೮ ||

ಇಂತೆನೆ ಮಾನಿನಿ ತಾಂ ಕಡು |
ಸಂತಸದಿಂ ಪೇಳ್ದಳನಿಲಸಂಭವ ಕೇಳಾ ||
ನೆಂತೊರೆವೆಂ ಮದ್ದುಃಖಮ |
ನೆಂತೆಂತೋ ದುಷ್ಟದನುಜನಿಂ ನೊಂದೆನಣಾ || ೭೯ ||

ಈ ದನುಜಾಧಮನೆನ್ನಯ |
ಸೋಪರನೆನಗೊರ್ವ್ವ ಕುವರನಿರ್ದ್ದಪನವನೀ ||
ಮೇದಿನಿಗರಸಪ್ಪನೆನು |
ತ್ತಾ ದೈವಜ್ಞರ್ ನಿಶಾಚರೇಶಗೆ ಪೇಳ್ದರ್ || ೮೦ ||

ಕಿನಿಸಿಂದಂ ಮತ್ಸುತನಂ |
ಧನಸಂಗೊಳಿಸುವೊಡೆ ಭಟರ ಕಯ್ಯೊಳ್ಗೊಪ್ಪಿಸೆಯಾ ||
ತ್ರಸ ಸತಿ ಸಂಧ್ಯೆ ವಿವೇಕಮ |
ನಿನಗುಸಿರ್ದ್ದಂ ಕೊಲೆಯನುಳಿಸೆ ನೆರೆಯೊಳಗಿಟ್ಟಂ || ೮೧ ||

ಸುತನಂ ಪಾಲಿಪರಿಲ್ಲದ |
ಬೆತೆಯಿಂದಾನಿರ್ಪ್ಪೆನೆಂದು ಕಯ್ಮುಗಿದುಂ ತ ||

ಕ್ಸತಿ ದುಃಖದಿಂದಾಳ್ದಿರೆ ವನಾ |
ರುತಪುತ್ರಂ ಸಂತಮಿಟ್ಟನತಿಶ್ವೈರ್ಯದೊಳಂ || ೮೨ ||

ದುರುದುಂಡಿ ಕೇಳ್ದು ಮುನ್ನಂ |
ಕರೆದುಯ್ದೊಡೆ ದನುಜನೆಡೆಗೆ ತತ್ತ್ವಳಸಂ ಸಂ ||
ಹರಿಸುತೆ ತವಪುತ್ರಗೆ ತ |
ದ್ಧರಣಿಯುನೊಲ್ದೀವೆನೆಂದೊಡೆಂದಳ್ ದನುಜೇ || ೮೩ ||

ದ್ವಾರದೊಳಂ ಶೋಧಿಸುವರ್ |
ಘೋರಾಸುರರೆಂತು ಬರ್ಪೆ ನೀನೆನಲಾಗಳ್ ||
ನಾರೀಮಣಿ ಬೆದರವಿರಾಂ |
ಮೇರೂಪಮನಾಗೆ ಬಲ್ಲೆನೆಂದಂ ಹನುಮಂ || ೮೪ ||

ಅತಿಸೂಕ್ಷ್ಮನಾಗಿ ಮಾರುತ |
ಸುತ ನೀಂ ನೀಗೊರ್ಡದೊಳಿರ್ದೊಡಾಂ ಕೊಂಡುಯ್ವೆಂ ||·
ಧೃತಿಯಿಂ ನಿನ್ನನೆನುತ್ತಂ |
ಸತಿ ಪೇಳಲ್ಕೈದೆ ಪೊಕ್ಕನಾ ಜಲಘಟಮಂ || ೮೫ ||

ಕೊಡನಂ ತಾಳ್ದುಂ ರಕ್ಕಸಿ |
ನಡೆತರೆ ತದ್ವಾರದೆಡೆಗೆ ನಸುವಾತ್ರಂ ತ ||
ಕ್ಕಡಿ ತೊನೆಯಲ್ ಶೋಧಿಸುತಂ |
ಕಡುಗಿನಿಸಿಂ ದನುಜರವಳನೊಳವುಗಲಿತ್ತರ್ || ೮೬ ||

ಘಟದಿಂದಂ ಪೊರಟಂ ಪಟು |
ಭಟನಾ ದುರುದುಂಡಿವೆರಸು ನಡೆತಂದು ಮಹಾ ||
ಪುಟಭೇದನಮಂ ನೋಡುತೆ |
ಕುಟಿಲಾಸುರನಾಲಯಕ್ಕೆ ಬಂದಂ ಭರದಿಂ || ೮೭ ||

ಅವನಿವರಿರ್ಪರ್ ಸೌಧದೊ |
ಳವರಂ ವಶಗೆಯ್ದು ಬಳಿಕೆ ದನುಜಾಧಮನಂ ||
ಜವನಂ ಕಾಣಿಪುದೆಂದಾ |
ಯುವತಿಯ ನುಡಿಯಂತು ಸೌಧದೆಡೆಗಂ ನೆಗೆದಂ || ೮೮ ||

ಎಚ್ಚರದೊಳ್ ಭೂಮಿವನಂ |
ಚೆಚ್ಚರದಿಂ ತಂದು ಮೋಸವಿಲ್ಲದ ನೆಲನೊಳ್ ||
ಅಚ್ಚುತರಂ ಮಲಗಿಸಿ ತಾಂ |
ಬೆಚ್ಚದೆ ಪೆರ್ಚಿಸಿದನಂಗವಂ ಹನುಮಂತಂ || ೮೯ ||

ಇಡಿಕಿರಿದ ದನುಜಕುಲಮಂ ।
ಬಡಿದುಂ ದಧಿವಕ್ತ್ರನೆಂಬ ಖಳನಂ ಸದೆದುಂ ॥
ಕಡುಪಿ ಸೂಚೀಮುಖನಂ ।
ಪಿಡಿದುಡಿದುಂ ಗುರ್ದ್ದಿ ಕೊಂದನತಿವೇಗದೊಳಂ ॥ ೯೦ ॥

ಅಸುರರನೊಂದೇ ಕ್ಷಣದೊಳ ।
ಗಸಿಯರೆದುಂ ವಜ್ರದಂಷ್ಟ್ರನೆಂಬಾಸುರನಂ ॥
ರಸೆಯೊಳ್ಕೆಡೆವುತೆ ಮೆಟ್ಟಿದ ।
ನಸಮಾಂಬಕಸದೃಶನಾಗೆ ಸತ್ವರದಿಂದಂ ॥ ೯೧ ॥

ಅನಿತರೊಳಸುರನ ಮಾನಿನಿ ।
ಕನಸಂ ಕಂಡೆಳ್ದು ಬಂದು ನಿಜನಾಥನೊಳಂ ॥
ವಿನಯದೊಳೆಂದಳ್ ಕೇಳ್ಗಂ ।
ತನಗಂ ದುಃಸ್ವಪ್ನಮೊಂದು ಸಂಘಟಿಸಿರ್ಕ್ಕುಂ ॥ ೯೨ ॥

ಸರಸಿಜನಾಳದೊಳಿಳಿದೀ ।
ಧರಣಿಗೆ ನಡೆತಂದು ಹನುಮನೆಂಬ ಕಪೀಶಂ ॥
ತರಿದುಂ ನಿಮ್ಮಂ ಸಿರಿಯಂ ।
ದುರುದುಂಡಿಯ ತನುಜಗಿತ್ತನೆಂದಾಂ ಕಂಡೆಂ ॥ ೯೩ ॥

ನರನಾಥಂ ಹರಿ ಗಡ ವಾ ।
ನರನಿಕರಂ ದೇವವಿತತಿ ಗಡ ಖಳರಂ ಸಂ ॥
ಹರಿಸಲ್ ಬಂದರ್ ಗಡ ಕೇಳ್ ।
ಪರಿಯರಿಯದೆ ತಂದೆ ಭೂಮಿಪಾಲರನಿವರಂ ॥ ೯೪ ॥

ಇನ್ನಾದೊಡೆಯುಂ ಹನುಮನ ।
ನುಂ ನೆರೆ ಮನ್ನಿಸುತೆ ಭೂಮಿಪಾಲರನುಳಿದುಂ ॥
ಚೆನ್ನಾಗಿರೆ ಸುಖಮೆಂದುಂ ।
ಜನ್ನಯ್ಸಿದಳವನ ಪತ್ನಿ ಸಂಧ್ಯೆಯೆನಿಪ್ಪಳ್ ॥ ೯೫ ॥

ಭ್ರಾಂತಿಯ ಕನಸಿದು ಮನದೊಳ್ ।
ಚಿಂತಿಸದಿರ್ ಮಾಯೆಯಿಂದೆ ಬಂಧಿಸುವೆಂ ಕಾ ॥
ಲಾಂತಕವಿಧಿಸುರಪಾದ್ಯರ ।
ಸಂತೆಯನೆನೆ ಕೇಳಿಸಿತ್ತು ಘನಘನನಾದಂ ॥ ೯೬ ॥

ಏನಿದೊ ಎನುತಂ ಭಯದಿಂ ।
ದಾನವನತಿವೇಗದಿಂದೆ ರಾಜಾಂಗಣಕಂ ॥

ತಾನೆಲ್ಲರೆ ಕಂಡಂ ಪವ |
ಮಾನಕುಮಾರಕನ ಘೋರತರದಾಕೃತಿಯಂ || ೯೭ ||

ವಾನರ ಕೇಳ್ ನಿನ್ನಂ ನ |
ವಿನ್ಮಾನಗರಕೆ ಬಿಟ್ಟನಾವನವನಂ ಕ್ಷಣದೊಳ್ ||
ಕೀನಾಶನ ಪುರಕಟ್ಟುವೆ |
ನಾನಾರೆಂದರಿಯಾದೆ ಪೋ ನೀನೆಂದಂ || ೯೮ ||

ಎನೆ ಖತಿಯಿಂದಂ ಮಾರುತಿ |
ದನುಜನ ಪೇರುರಮನೈದೆ ತಿವಿಯಲ್ಕಸುರಂ ||
ಕಿನಿಸಿಂ ಭುಜಮಂ ಪೊಡೆದುಂ |
ಹನುಮಂತನ ಮೇಲ್ಗೆ ಕರೆದನಸ್ತ್ರದ ಸರಿಯಂ || ೯೯ ||

ಕವಿಸಿದನಾ ಮಾಯಾಮೃಗ |
ನಿವಹಮನತಿವೃಷ್ಟಿಶೈಲತರುಸಂಕುಲಮಂ ||
ಪವನಸುತಂ ಬೆದರದೆ ರಾ |
ಘವನಂ ನೆನೆವುತ್ತೆ ದೈತ್ಯನಂ ಘಾತಿಸಿದಂ || ೧೦೦ ||

ನೆತ್ತರ್ಕಾರ್ದುರ್ಗಂ ಖಳನ |
ತ್ತಿತ್ತಲ್ ನೋಡುತ್ತುಮನಿಲಸುತನಂ ಪಿಡಿದುಂ ||
ಕುತ್ತುವ ಸಮಯದೊಳಂ ಖತಿ |
ವೆತ್ತುಂ ಹನುಮಂತನಸುರನಂ ಸದೆಬಡಿದಂ || ೧೦೧ ||

ನ್ಯಾಯದ ಯುದ್ಧಮನುಳಿದುಂ |
ಮಾಯೆಗೆ ಮನಗೊಟ್ಟು ದನುಜನತಿ ಬೇಗದೊಳಂ ||
ದಾಯದೆ ಸರಮಾರಮಣನ |
ಮಾಯಾಕೃತಿಧಾರಿಯಾಗುತಲ್ಲಿಗೆ ಬಂದಂ || ೧೦೨ ||

ಬರೆ ನೀನಿಲ್ಲಿಗೆ ದಶಕಂ |
ಧರನರಿದುಂ ತಾನೆ ಬಂದು ವಾನರಕುಲಮಂ ||
ಹರಿಪೊಡಮುಬ್ಬುಗಿಸಿಪ್ಪಂ |
ಮರಳಯ್ ನೀನಲ್ಲಿಗೆಂದು ಹನುಮನೊಳೊರೆದಂ || ೧೦೩ ||

ಅವನಿವನೊಂದಾದೊಡೆ ನಿ |
ನ್ನವರಂ ಕೊಲ್ವರ್ ಪೋಣರ್ದಂ ಜಿಡು ಖಳನೊಳ್ ||
ಅವನೀಪಾಲಕರಂ ಕೊಂ |
ಡವಿಳಂಬದೆ ಬಾರ ತನ್ನೊಡನೆ ಬಲವೆನೆಗಂ || ೧೦೪ ||

ಎನಲಚ್ಚರಿವಡುತುಂ ಸು |
ಮ್ಮನೆಯಿರೆ ದುರುದುಂಡಿ ಸನ್ನೆಗೆಯ್ಯಲ್ಕಾಗಳ್ ||
ಹನುಮಂ ಕಿನಿಸಿಂ ಪೊಡೆದಂ |
ದನುಜಂ ಸುಗ್ರೀವನಾಗಿ ನಿಂದಂ ಮುಂದುಂ || ೧೦೫ ||

ಏನಯ್ ನಿನ್ನವಿವೇಕಂ |
ದೀನತೆಯೊಳ್ ಬಂದು ರಾಮನಂ ಮರೆವೊಕ್ಕಾ ||
ದಾನವಪತಿಯಂ ಕೊಂದವ |
ಮಾನವನುಂ ತಂದೆಯಕಟ ತನ್ನೃಪಪತಿಗಂ || ೧೦೬ ||

ಇಂತೆನೆ ಕೇಳ್ವಂ ಮನದೊಳ್ |
ಚಿಂತಿಸೆ ದುರುದುಂಡಿ ಭಾನುಸುತನಿವನಲ್ಲಂ ||
ನೀಂ ತಳ್ವದೆ ಕೊಲ್ಲೆನೆ ಹನು |
ಮಂತಂ ಪೊಡೆಯಲ್ಕೆ ಮಗುಳೆ ಜಾಂಬವನಾದಂ || ೧೦೭ ||

ಅಕಟಕಟ ಕೊಂದೆಯಾ ರವಿ |
ಸುಕುಮಾರನನ್ನೆದೆ ಬರಿದೆ ಮಾತುಲವಧೆಯುಂ ||
ಸುಕರಮದಪ್ಪುದೆ ಬಹುಪಾ |
ತಕಮಂ ನೀಂ ಗೆಯ್ದೆಯೆಂದು ಮೂದಲೆ ನುಡಿದಂ || ೧೦೮ ||

ದನುಜನ ಮಾಯೆಯದೆನುತುಂ |
ಕಿನಿಸಿಂ ಮೇಲ್ವಾಯ್ದು ಪಿಡಿದು ನೆಲಕಪ್ಪಳಿಸ ||
ಲ್ಕನಿಮಿಷದಾನವಪನ್ನಗ |
ಮನುಜಾಕೃತಿದಳೆದು ಯುದ್ಧದೊಳ್ ಸರಿಮೊರೆದಂ || ೧೦೯ ||

ಒಂದೊಂದಾಕೃತಿಯಂ ಕಡು |
ಪಿಂದಂ ಸಲೆ ಕೊಂದುಕೊಂದು ಕಯ್ದಣಿದಣಿಯಲ್ ||
ನಿಂದಿರೆ ಖಳಸೋದರಿ ತಾ |
ನೆಂದಳ್ ಕೇಳಯ್ಯ ಹನುಮ ನಿನಗಾನೊರೆವೆಂ || ೧೧೦ ||

ಉದರದ ಪಂಚಪ್ರಾಣಂ |
ಮಧುಕರರೂಪದೊಳೆ ಬೇರೆ ನೆಲಸಿಪ್ಪಂತುಂ ||
ವಿಧಿಯಂ ಮೆಚ್ಚಿಸಿ ತಪದೊಳ್ |
ಮುದದಿಂ ಪಡೆದಿರ್ಪನೆಂದೆ ವರಮಂ ದನುಜಂ || ೧೧೧ ||

ಬೇರಿಪ್ಪುದಿವನ ಜೀವಂ |
ತೋರುವ ಗಿರಿತಟದೆ ಶಿಲೆಯ ಮಧ್ಯಸ್ಥಲದೊಳ್ ||

ಘೋರನೆ ತುಳಿದೊಡನವನಂ |
ಹೀರೋಪಮ ಶಿಲೆಯನೈದೆ ಕಿಳ್ತಿಡೆವೇಳ್ಕುಂ || ೧೧೨ ||

ಆ ಶಿಲೆಯಂ ಚೂರ್ಣಿಸಿ ಬಳಿ |
ಕಾಸುರನಸುರೂಪವಾದ ಪರಮೆಗಳಯ್ದುಂ ||
ಓಸರಿಸದೆ ಮರ್ದಿಸಿದೊಡೆ |
ನಾಶಂ ತಾನಪ್ಪುದೆಂದಳಾ ದುರುದುಂಡೀ || ೧೧೩ ||

ಎನೆ ಬಳಿದುಂ ಮಾರುತಿಯಾ |
ದನುಜನನೊಂದಂಘ್ರಿಯಿಂದೆ ಮೆಟ್ಟುತ್ತಂ ಮೇಣ್ ||
ಕಿನಿಸಿಂದೊಂದಘ್ರಿಯೊಳಂ |
ಘನಶೈಲಮನೊದೆದು ಕೆಡೆಪಿದಂ ಭೂಮಿಯೊಳಂ || ೧೧೪ ||

ಕಡುಪಿಂ ಶಿಲೆಯಂ ನುಚ್ಚುಂ |
ಪುಡಿಗೆಯ್ದುಂ ಬಂಭರಂಗಳಂ ಮರ್ದ್ದಿಸಿ ಕಾ ||
ಲಡಿಯೊಳಗಿಪ್ಪಾಸುರನಂ |
ಪೊಡೆದುಂ ನೆಲಕಿಟ್ಟು ತಿಕ್ಕಿ ಕೊಂದು ಹನುಮಂ || ೧೧೫ ||

ಹರುಸದಿನನಿಲಕುಮಾರಂ |
ದುರುದುಂಡಿಸುತಂಗೆ ಮೇಘವರ್ಣಾಖ್ಯಂಗಂ ||
ಧರಣಿಯನಿತ್ತುಂ ಮಿಗೆ ರಘು |
ವರರಂ ಕರೆತಂದನಂದು ನಿಜವಾಹಿನಿಗಂ || ೧೧೬ ||

ಏಂ ಸಾಹಸಿಯೋ ಹನುಮಂ |
ಮಾಂಸಾದನನೈದೆ ಕೊಂದು ಮಿಗೆ ರಘುವಂಶೋ ||
ತ್ತಂಸರನೆಚ್ಚರದಂದದೊ |
ಳಂಸದೊಳಂ ತಾಳ್ದು ತಂದನೊರ್ವನೆ ನಿಶೆಯೊಳ್ || ೧೧೭ ||

ಮೊದಲಂದದೊಳಂ ಮಲಗಿಸೆ |
ವಿಧಿಸುತರವಿಜಾತನೀಲನಳಮುಖ್ಯರ್ ಸ ||
ಮ್ಮದದಿಂ ಪವನಜನಂ ನುತಿ |
ಸಿದರಾ ಸಮಯಕ್ಕೆ ಸೂರ್ಯನುದಯಂಗೆಯ್ದುಂ || ೧೧೮ ||

ಇನನುದಿಸಲೆಳ್ದು ರಘುವರ |
ನನುದಿನದೊಲ್ ನಿತ್ಯಕರ್ಮಮಂ ವಿರಚಿಸಿ ಸೂ ||
ರ್ಯನ ಸುತನಂ ಕರೆದು ದಶಾ |
ನನನಂ ಮಥಿಸುವೊಡೆ ಯತ್ನಮಂಯೋಚಿಸುದಂ || ೧೧೯ ||

ದೇವರ ಶರದಿದಿರಿನೊಳಂ |
ರಾವಣನೇಂ ನಿಲ್ಲಲಾರ್ಪ್ಪನೀ ದಿವಸದೊಳಂ ||
ಜೀವಿಸಿ ಪೋಪನೆ ತವಪದ |
ಸೇವಕನೀ ಹನುಮನೆಸಕಮಂ ನೀನರಿಯಾ || ೧೨೦ ||

ಈ ರಾವಣದಾನವನಾ |
ಮೈರಾವಣನೆಂಬ ದನುಜನಂ ಕಳಿಪಲ್ಕಂ ||
ಕಾರಿರುಳೆ ವಿಭೀಷಣನಾ |
ಕಾರದೊಳಂ ಬಂದು ಮಾಯೆಯಿಂದೊಳವೊಕ್ಕಂ || ೧೨೧ ||

ಎಮ್ಮಂ ವಂಚಿಸಿ ದೈತ್ಯಂ |
ನಿಮ್ಮಂ ಸೌಮಿತ್ರಿವೆರಸು ಪಾತಾಳಕ್ಕಂ ||
ಗಮ್ಮನೆ ಕೊಂಡುಯ್ಯಲ್ಕಾಂ |
ದುಮ್ಮಾನದೊಳಿರ್ದ್ದೆನಾತ್ಮಮಿಲ್ಲದ ತನುವೊಲ್ || ೧೨೨ ||

ಅನಿತರೊಳೀ ಹನುಮಂ ಕಮ |
ಲನಿಯ ಸುನಾಳದೊಳವೊಕ್ಕು ನಡೆದಾ ಪುಟಭೇ ||
ದನಮಂ ಸಾರ್ದ್ದುಂ ತದ್ದೈ |
ತ್ಯನನುರೆ ಸಂಹರಿಸಿ ನಿಮ್ಮನಿಲ್ಲಿಗೆ ತಂದಂ || ೧೨೩ ||

ಈತನ ದೆಸೆಯಿಂ ಪ್ಲವಗ |
ವ್ರಾತಂ ಜೀವಿಸಿದುದೆಂದು ರವಿಜಂ ಪೊಗಳಲ್ ||
ಸೀತಾನೇತಂ ಪರಮ |
ಪ್ರೀತಿಯೊಳಂ ವಾತಸುತನನಪ್ಪಿದನಾಗಳ್ || ೧೨೪ ||

ಇವನ ಸಹಾಯಮದಿಲ್ಲದೊ |
ಡವಿರಳಜಯಮೆಮಗದೆಂತು ಸಾಧ್ಯಂ ನತತಂ ||
ರವಿವಂಶಜರಂ ಪಾಲಿಪೊ |
ಡವತರಿಸಿದನಲ್ತೆ ಗಿರಿಶನೀ ರೂಪದೊಳಂ || ೧೨೫ ||

ಈ ಮಹಿಮನ ಪಾವನತರ |
ನಾಮಗಳಂ ಜಪಿಸುವಂಗೆ ಸಂಪದಮುಕ್ಕುಂ ||
ಕ್ಷೇಮಂಕರನಿವನೆನುತಂ |
ರಾಮಂ ಪೊಗಳುತ್ತುಮಿರ್ದ್ದನೆಂದಂ ಸೂತಂ || ೧೨೬ ||

# ತ್ರಯೋದಶಾಶ್ವಾಸ.

ವೃತ್ತ || ಕೌಸಲ್ಯೋಜ್ವಲಗರ್ಭವಾರಿಧಿನಿಶಾನಾಥಂ ದಯಾಮಾನಸೋ |
ದ್ಭಾಸಂ ನಿರ್ಮಲಕೌಮುದೀರುಚಿರಭಾನ್ಯಕ್ಕೃತ್ಸುಮಂದಸ್ಮಿತಂ ||
ಕೀಶಾಧೀಶಸುಪೂಜಿತಾಂಘ್ರಿಯುಗಳಂ ಕೋದಂಡಹಸ್ತಂ ನರಾ |
ಧೀಶಂ ಸಂತತಮೀಗೆ ಸರ್ವಶುಭಮಂ ಕ್ಷೋಣೀಸುತಾವಲ್ಲಭಂ || ೧ ||

ಕಂದ || ಕೇಸರಿತನುಜಂ ರಿಪುಗಜ |
ಕೇಸರಿ ಕಮನೀಯಕಾಯಜಿತಸುರಶೈಲಂ ||
ವಾಸವವಿನುತಂ ನತಪ್ರ |
ದ್ಭಾಸಂ ಶ್ರೀಹನುಮನೊಲ್ದು ಕುಡುಗೆಮಗೊಳ್ಪಂ || ೨ ||

ಧೀರಯಮಿಗಳಿರ ಕೇಳ್ಗಂ |
ವೈರಾವಣನಳಿದ ವಾರ್ತೆಯಂ ಮಿಗೆ ತಿಳಿದುಂ ||
ಭೂರಿಸುಚಿಂತೆಯೊಳಂ ತ್ರಿದ |
ಶಾರಿವರಂ ಭಾವಿಕಾರ್ಯಮಂ ಯೋಚಿಸಿದಂ || ೩ ||

ಅಪಜಯಮುಡಸಿದುದೆನಗಂ |
ವಿಪರೀತಮುಮಾದುದಯ್ಯೊ ಮಾಡಿದ ಕಜ್ಜಂ ||
ತ್ರಿಪುರಾಸುರಸಂಹಾರನ |
ಕೃಪೆ ತಪ್ಪಿದುದೆಂದು ಗುರುವಿನೆಡೆಗೆಳ್ತಂದಂ || ೪ ||

ವಂದಿಸಿ ಭಾರ್ಗವಗಂ ಭಯ |
ದಿಂದಂ ಕಯ್ಮುಗಿದು ಪೇಳ್ದನೆಲೆ ದೇಶಿಕನೇ ||
ನಂದನಸಹಜಾತಾದ್ಯರ್ |
ಸಂದರ್ ನರಕೀಶರಿಂದೆ ಸಮರಾಂಗಣದೊಳ್ || ೫ ||

ನರವಾನರರಂ ಗೆಲ್ವಾ |
ಪರಿಯಂ ಕರುಣಿಸುಗುಮೆಂದು ದಶಕಂಠಂ ತ ||
ಚ್ಚರಣಕ್ಕಂ ಮಗುಳೆರಗಿದೊ |
ಡೊರೆದಂ ಕರ್ಣದೊಳೆ ದಿವ್ಯಮಂತ್ರಮನಾತಂ || ೬ ||

ಈ ಮಂತ್ರದೊಳಂ ಶುಚಿಗಂ |
ಹೋಮಮನೆಸಗಿದೊಡೆ ದಿವ್ಯರಥಶಸ್ತ್ರಾಸ್ತ್ರ ||

ಸ್ತ್ರೋಮುಂ ಸಂಭವಿಪುದು ನೀ |
ನಾ ಮರ್ಕಟನರರನ್ನೈದೆ ಗೆಲ್ವುದು ಸುಲಭಂ || ೭ ||

ಎನೆ ಬೀಳ್ಕೊಂಡುಂ ಭರದಿಂ |
ದನುಜೇಂದ್ರಂ ಗುಹೆಯೊಳಿೞಿದು ಪಾತಾಳದೊಳಂ ||
ಅನಲನನರ್ಚ್ಚಿಸಿ ಕುಂಡಮ |
ನನುವಿಂ ತಾಂ ಗೆಯ್ದು ಕಾವಲಿಟ್ಟಂ ಖಳರಂ || ೮ ||

ಪರಿಶುಭ್ರವಸ್ತ್ರಗಳನುಂ |
ಧರಿಸಿ ಶುಚಿರ್ಭೂತನಾಗಿ ಸಾಮಗ್ರಿಗಳಂ ||
ತರಿಸುತೆ ನಲವಿಂ ವೈಶ್ವಾ |
ನರನಂ ಹುತಿಗೊಳಿಸಿ ಹೋಮಕಾರಂಭಿಸಿದಂ || ೯ ||

ಜವದಿಂದೀ ವಾರ್ತೆಯನುಂ |
ಧವನೆಡೆಗಂ ಸರಮೆ ಪೇಳ್ದು ಕಳಿಪಲ್ಕಾ ರಾ ||
ಘವಗಂ ಸೂಚಿಸಿದಂ ತ |
ದ್ವಿವರಂಗಳನಾ ವಿಭೀಷಣಂ ಸತ್ವರಮುಂ || ೧೦ ||

ಆರರಿಯದಂತೆ ರಾವಣ |
ನೂರೊಳಗಂ ವರಗುಹಾಂತರಾಳದೊಳಿೞಿದುಂ ಸಂ ||
ಭಾರಗಳಂ ತರಿಸುತ್ತಂ |
ಘೋರೆನೆ ತಾಂ ಮಾಳ್ಪನಾಭಿಚಾರಾಧ್ವರಮಂ || ೧೧ ||

ಅನಲನ ಮುಖದಿಂ ಪಡೆದುಂ |
ಘನಶಸ್ತ್ರಾಸ್ತ್ರಗಳನಿಂದು ಬಂದಾ ಕ್ಷಣದೊಳ್ ||
ಹನನಂಗೊಳಿಸುವನೆಲ್ಲರ |
ನನುವೇಗದೆ ಕಿಡಿಸೆವೇಳ್ಕುಮಾ ಯಾಗಮನುಂ || ೧೨ ||

ಇಂತೆನೆ ರಘುವೀರಂ ಹನು |
ಮಂತಾಂಗದಜಾಂಬವಾದಿ ಕಪಿನಾಯಕರಂ ||
ತಾಂ ತಳ್ವದೆ ಪೇಳ್ವುಡೆ ಬಿಲ |
ಮಂ ತಿಳಿದೊಳವೊಕ್ಕು ದನುಜರಂ ಘಾತಿಸಿದರ್ || ೧೩ ||

ಘೋರಧ್ವನಿಯಿಂ ಖಳಪರಿ |
ವಾರಮನರೆದರೆದು ಮೇಲ್ಗೆ ಒರೆವರೆ ಕಂಡರ್ ||
ದಾರುಣಹೋಮಮನೆಸಗುವ |
ವೀರನನೇಕಾಗ್ರಚಿತ್ತನಂ ಸತ್ವರಮುಂ || ೧೪ ||

ಕಿಡಿಸುತೆ ಹೋಮಮುನಾತನ |
ಮಡದಿಯ ಮುಂದಲೆಯನಂಗದಂ ಪಿಡಿದೆಳೆದುಂ ||
ಕಡುಪಿಂ ತಂದುಂ ಕೂಗಿಡೆ |
ನಡುಗುತ್ತಂ ಕಾಂತನೆಡೆಯೊಳಂ ಮೊರೆಯಿಟ್ಟಳ್ || ೧೫ ||

ಪತಿಯಿಲ್ಲದ ಸಮಯದೊಳಂ |
ಕ್ಷಿತಿಸುತೆಯಂ ತಂದೆ ಮೊದಲೆ ಮದದಿಂದಿದಿರೊಳ್ ||
ಖತಿಯಿಂದೆಳೆವರ್ ತನ್ನಂ |
ಮತಿಶೂನ್ಯತೆಯಾಯ್ತೆ ಸತ್ವಮಳಿದುದೆ ನಾಥಾ || ೧೬ ||

ಕಂದೆರೆದೀಕ್ಷಿಸಲಾಗದೆ |
ಕುಂದಲ್ಲಮೆ ನಿನ್ನ ಪತ್ನಿ ತಾನಲ್ಲಮೆ ಎಂ ||
ದೆಂದುಂ ಮೊರೆಯಿಡುತಿರೆ ದಶ |
ಕಂಧರನುರುಕೋಪದಿಂದೆ ಗರ್ಜಿಸಿ ನಿಂದಂ || ೧೭ ||

ಅಸಿಯಂ ಜಳಪಿಸೆ ವಾನರ |
ವಿಸರಂ ಪರಿತಂದುದ್ಯೆದೆ ನಿಜವಾಹಿನಿಗಂ ||
ದಶವದನಂ ಬಳಿಕಂ ಶೋ |
ಚಿಸಿ ಸತಿಯಂ ಮನ್ನಿಸಲ್ಕಮವಳಿಂತೆಂದಳ್ || ೧೮ ||

ಶ್ರುತಿಚೋರನನುಂ ಮತ್ಸ್ಯಾ |
ಕೃತಿಯಿಂ ಸಂಹರಿಸಿದಾತನೀ ರಘುವೀರಂ ||
ದಿತಿಜಾಮರರುಂ ಕಡಲಂ |
ಮಥಿಸಲ್ಮಂದರಮನಾಂತ ಕೂರ್ಮನೆ ರಾಮಂ || ೧೯ ||

ಧರೆಯಂ ಕೊಂಡುಯ್ವಸುರನ |
ನೊರಸಿದ ಸೂಕರನೆ ರಾಮನೆಂದರಿ ನೀನುಂ ||
ದುರುಳ ಹಿರಣ್ಯಾಕಶಿಪುವಂ |
ತರಿದ ನೃಕೇಸರಿಯೆ ರಘುಜನೆಂದುಂ ತಿಳಿಯಾ || ೨೦ ||

ಬಲಿಯಂ ಪಾತಾಳಕ್ಕಂ |
ದಿಳಿಪಿದ ವಾಮನನೆ ಭೂಮಿಜಾತೆಯ ರಮಣಂ ||
ಚಲದೊಳ್ ಕೃತವೀರ್ಯಾತ್ಮಜ |
ಕುಲಮಂ ತರಿದಿಟ್ಟ ಪರಶುಧರನೇ ರಾಮಂ || ೨೧ ||

ನಿಮ್ಮಟಳದಿಂ ಸುರರುಂ |
ಬೊಮ್ಮನನೊಡಗೊಂಡು ದೂರೆ ಕೇಳ್ದಂ ಹರಿ ತಾಂ ||

ಗಮ್ಮನೆ ಮಾನುಷರೂಪದೊ |
ಳಮ್ಮಹಿಗೆಳ್ತಂದನಲ್ತೆ ರಾವಣಾಖ್ಯೆಯೊಳಂ || ೨೨ ||

ಸುತಸಹಜಾತಾದಿಗಳುಂ |
ಹತರಾದರ್ ರಾಮನಿಂದಮಿನ್ನಾದೊಡಮುಂ ||
ಕ್ಷಿತಿಜಾತೆಯನೊಪ್ಪಿಸಿ ರಘು |
ಪತಿಯಂ ಸಾರ್ದ್ದೊಡಲಸುಳಿಸಿಕೊಳ್ವುದು ವಿಹಿತಂ || ೨೩ ||

ಹರಿಯೊಡನೆ ವಿರೋಧಂ ಸುಖ |
ಕರಮಕ್ಕುಮೆ ಕಳೆಗುಮಸುರವೃತ್ತಿಯನೆನುತುಂ ||
ಚರಣದೊಳೆರಗಿದ ಮಂದೋ |
ದರಿಯಂ ಪಿಡಿದೆತ್ತಿ ಪೇಳ್ದನಾ ದಶಕಂಠಂ || ೨೪ ||

ತಿಳಿವೆಂ ಹರಿಯೆಂದುಂ ರಘು |
ತಿಲಕನನವನೊಡನೆ ಸೆಣಸಿ ಸಮರಾಂಗಣದೊಳ್ ||
ಖಲತನುವಂ ಬಿಸುಟುಂ ನಿ |
ರ್ಮಲತರಸಾರೂಪ್ಯಪದವಿಯಂ ತಾಂ ಪಡೆವೆಂ || ೨೫ ||

ನರನಾದೊಡೆ ಮರ್ದಿಸಿ ಜಯ |
ಸಿರಿಯಂ ಕಯ್ಕೊಳ್ವೆನಿಂದು ಚಿಂತಿಸವೇಡಂ ||
ದುರುತರಮೋಹದೊಳಂ ನಿಜ |
ತರುಣಿಯನುರೆ ಸಂತಮಿಟ್ಟು ರಣಕೆಳ್ತಂದಂ || ೨೬ ||

ಷೋಡಶಚಕ್ರದ ರಥಮಂ |
ಗಾಡದೊಳೇರ್ದುಂ ಸುಶಸ್ತ್ರಚಾಪಗಳಂ ಕ ||
ಯ್ಗೊಡಿಸಿ ಧೀರಧ್ವನಿಯಂ |
ಮಾಡುತೆ ನಡೆತಂದನಮರವೃಂದಂ ಬೆದರಲ್ || ೨೭ ||

ಭಟಹುಂಕೃತಿಯುಂ ಸಾಮಜ |
ಘಟಬೃಂಹಿತಮುಂ ವರೂಥಚೀತ್ಕೃತಿಯುಂ ಮೇಣ್ ||
ಪಟುಹಯಹೇಷಿತಮುಂ ದಿ |
ಕ್ತಟಮಂ ತೀವಿದುದು ವಾದ್ಯಘೋಷಂ ಮೆರೆಯಲ್ || ೨೮ ||

ವೀರಾದ್ಭುತಭಯರಸದೊಳ್ |
ವೀರಾಸುರಸೇನೆವೆರಸು ರಾವಣದನುಜಂ ||
ದಾರುಣರೂಪದೊಳಂ ರಣ |
ಧಾರಿಣಿಯೊಳ್ ಕರೆದನಸ್ತ್ರವರ್ಷಮನಾಗಳ್ || ೨೯ ||

ನರದೇವಂ ಕಾಣುತೆ ವಾ |
ನರದೇವರ್ಕ್ಳ್ಗೆ ನೀಡುತಭಯಯಮುದಾಗಳ್ ||
ಶರಚಾಪಂಗಳಂ ತಾಳ್ದಾ |
ಶರಚಾತುರ್ಬಲಕಿದಿರ್ಚ್ಚಿ ಗರ್ಜಿಸಿ ನಿಂದಂ || ೩೦ ||

ಗುಣಮಂ ತೀಡುತ್ತುಂ ಸ |
ದ್ಗುಣಮಣಿ ಕಡುಗಿನಿಸಿನಿಂದೆ ಕನಕಾಂಕಿತಮಾ ||
ರ್ಗಣಮಂ ತುಡಿಸುತೆ ಮಿಗೆ ದಿ |
ಗ್ಗಣಮುಡಿವಂತೆಚ್ಚನಸುರನಂ ರಘುರಾಮಂ || ೩೧ ||

ಇಸುಗೆಯ ಬಿಲ್ಲಾಳ್ಸರಿಯೆಂ |
ದೆಸೆವಂಬಂ ಕಡಿದು ಬಳಿಯವಮಾ ದಶಕಂಠಂ ||
ಬಿಸುಗಣೆಯಂ ಕವಿಸಲ್ಕಂ |
ಬಿಸಜಾಕ್ಷಂ ಕಡಿದನೆಲ್ಲಮಂ ವಿಶಿಖಗಳಂ || ೩೨ ||

ದಶಕಂಠಂ ರಥಿಕಂ ಮೇಣ್ |
ದಶರಥಜಂ ವಿರಥನಾತನಂ ಮದ್ರಥದೊಳ್ ||
ಒಸೆದೇರಿಸ ಮಾತಲಿ ರಣ |
ವಸುಧೆಯೊಳೆಂದಾ ಬಿಡೌಜನಟ್ಟಿದನವನಂ || ೩೩ ||

ದಿವಿಜೇಶಂ ಕಳಿಪಿದನೀ |
ದಿವಸಂ ಮಣಿರಥಮನೇರ್ದ್ದು ದನುಜಾಧಮನಂ ||
ಅವಿಲಂಬಂ ಮರ್ದಿಪುದೆಂ |
ದವನೀಶಗೆ ಮಣಿದನಮರನಾಥನ ಸೂತಂ || ೩೪ ||

ಬಳರಿಪುಗೆಮ್ಮೊಳ್ ನೇಹಂ |
ಬಳೆದುದೆ ತಾನೆಂದು ರಾಮನಾ ಮಣಿರಥಮಂ ||
ಬಲವಂದೇರ್ದ್ದಂ ರಾಕ್ಷಸ |
ಬಲದಧಿನಾಥನನಿದಿರ್ಚಿದಂ ಸಂತಸದಿಂ || ೩೫ ||

ಸುರನಾಥಂ ಕಳಿಪಿದನೇ |
ಸುರಥಮನೇಂ ಕಂಡನೆನ್ನ ಸತ್ವದ ತಿರುಳಂ ||
ನರ ನೀನೇಸರವಂ ವಾ |
ನರರೇಂ ಸಾಹಸಿಗಳೆಂದು ದನುಜಂ ಗಜರ್ದಂ || ೩೬ ||

ಗರದುರಗಾಸ್ತ್ರಮನುಗಿದುಂ |
ಗರುವದೊಳಂದಸುರನೆಚ್ಚೊಡಂಬೆತ್ತರಲಾ ||

ಗರುಡಾಸ್ತ್ರದೆ ಖಂಡಿಸಿ ಸಂ |
ಗರಧರೆಯೊಳ್ಮೆರೆದನಂದು ರಾಘವದೇವಂ || ೩೭ ||

ಕಲಿಯಪ್ಪುದು ನೀಂ ಮಾನವ |
ಕುಲದೊಳ್ನಿನ್ನೊರೆಗೆ ಬರ್ಪರಾರೆಂದೆನುತಂ ||
ಕಲಿತವಿಶೂಲಮನುಗಿದುಂ |
ಖಲನಾಥ ಕಿನಿಸಿನಿಂದಮಿಟ್ಟಂ ದಿಟ್ಟಂ || ೩೮ ||

ಕಿಡಿಗೆದರುತ್ತಂ ಬರೆವರೆ |
ಕಡಲುಕ್ಕಿರ್ತು ಕಂಪಿಸಿತ್ತು ಧರೆ ಕಂಗೆಟ್ಟರ್ ||
ಬಿಡುಗಣ್ಣರ್ ಕಪಿಗಳ್ ಬಾ |
ಯ್ವಿಡುತಿರ್ದರ್ ಪೇಳ್ವೆನೇನನದರುಬ್ಬಟೆಯಂ || ೩೯ ||

ತುಡು ಮಾರಂಬಂ ನೀನೆಂ |
ದೊಡನಾ ಮಾತಳಿ ಸತೀವ್ರಮುಸಿರಲ್ಕಾಗಳ್ ||
ಕಡಿದಂ ಶೂಲಾಯುಧಮಂ |
ಕಡುಪಿಂದಂ ದಿವ್ಯಶಕ್ತಿಯಿಂ ರಘುವೀರಂ || ೪೦ ||

ವಾಮಕರದಶಕದೊಳ್ ವರ |
ತಾಮಸಚಾಪಗಳನಾಂತು ಬಲಗಯ್ಗಳೊಳಂ ||
ತೋಮರಗಳನುಂ ಪಿಡಿದುಂ |
ತಾಮರಸಾಂಬಕನೀಕ್ಷಿಸುತಮಿಂತೆಂದಂ || ೪೧ ||

ಧರಣಿಜೆ ನಿನ್ನಂ ಸೇರ್ವಳೆ |
ಧುರಮೇಂ ಪರಿಣಯದ ಮನೆಯೆ ಮನುಜಾಧಮ ನೀಂ ||
ಶರವಿದ್ಯೆಯೊಳಧಿಕನೆ ಕೀ |
ಶರ ಬಲಮೇಂ ನಿಲ್ಲಲಾರ್ಪುದೇ ಸಮರದೊಳಂ || ೪೨ ||

ಇನಿತೆಂದುಂ ರಾಕ್ಷಸಪತಿ |
ಯಿನವಂಶೋತ್ತಂಸನೆಡೆಗೆ ಕಳಿಪಿದನಾಗ ||
ಳ್ಗನಲಾಸ್ತ್ರಮನತಿವೇಗದೊ |
ಳನಿಮಿಷರುಂ ಬೆಚ್ಚುತಿರ್ದರಭ್ರಾಂಗಣದೊಳ್ || ೪೩ ||

ತನಿಗೆಂಡಮನುಗುಳುತ್ತುಂ |
ತನಗಾಹುತಿಯಾದನಿಂದು ರಾಘವನೆನುತಂ ||
ಜನಿತಜ್ವಾಲೆಯೊಳೆಳ್ತರೆ |
ಜನಪತಿ ವಾರುಣಮಹಾಸ್ತ್ರಮಂ ತೊಟ್ಟೆಚ್ಚಂ || ೪೪ ||

ಶರಧಿಗಳೇಳೊಂದಾದುವೊ |
ಶರದಾವಳಿ ವರ್ಷಿಸುತ್ತುಮಿರ್ದ್ದುದೊ ಎಂಬೊಲ್ ||
ಶರಮೆಳ್ತಂದುಂ ಮೇಣಾ |
ಸುರನಾಥನ ವಹ್ನಿವಿಶಿಖಮುಂ ನಂದಿಸಿತಯ್ || ೪೫ ||

ಕರ್ಬುರನಾಥಂ ಕಿನಿಸಿಂ |
ಕರ್ಬೊಗೆಯಂ ಸೂಸುತಕ್ಷಿನಿಕರಂಗಳೊಳಂ ||
ಪರ್ಬತವಿಶಿಖಮನೆಸೆಯೆ ಸು |
ಪರ್ಬಾವಳಿ ನಡುಗುತಿರ್ದ್ದುದದನೇವೇಳ್ವೆಂ || ೪೬ ||

ಎಡೆಗುಡದಸ್ತ್ರಂ ರಘುಪತಿ |
ಯಡಿಗೆ ಮಹಾಶೈಲವರ್ಷಮುಂ ಕರೆವುತೆ ಮುಂ ||
ಗುಡಿಗಂ ಬರೆವರೆ ರಘುಜಂ |
ಗುಡುಗುಡಿಸುತ್ತಶನಿವಿಶಿಖಮುಂ ತೆಗೆದನಣಂ || ೪೭ ||

ಮೂಡಿಗೆಯಿಂದುಗಿವಾಗಳೆ |
ಮೂಡಿದುದುರುರೋಷಮವನಿ ಕಂಪಿಸಿತಾಗಳ್ ||
ಬಾಡಿದುದಸುರನ ವದನಂ |
ಬಾಡಬಮಾಯ್ತುಲಗು ದನುಜವಾರಾಂನಿಧಿಗಂ || ೪೮ ||

ತಿರುಪುತ್ತಂಬಂ ತುಡಿಸುತೆ |
ತಿರುವಿಗೆ ಕಡುಗಿನಿಸಿನಿಂದಮಾಕರ್ಣಾಂತಂ ||
ಸರಭಸಮುಮೆಚ್ಚೊಡಂದಾ |
ಸರಕಂ ಕತ್ತರಿಸಿ ಘಾತಿಸಿದುದದು ಖಳನಂ || ೪೯ ||

ಬಲಗಯ್ಬಂಟನೆನುತ್ತಂ |
ಬಲುಬಗೆಯಿಂ ಕೇಳ್ಬ ಬಲ್ಲೆನಿಂದೆನ್ನಿದಿರೊಳ್ ||
ಚಲಿಸದೆ ನಿಂದೊಡೆ ಮಿಗೆ ಕ |
ಜ್ಜಳಿಯಂ ನಿನಗೀವೆನೆಂದನಾ ದಶಕಂಠಂ || ೫೦ ||

ಚೋರರ ಗುರು ನೀನಲ್ತೆ ವಿ |
ಚಾರಿಸಿ ಕೊಂಡಾಡ ಪಿಂತೆ ಮಾಡಿದ ಪರಿಯಂ ||
ಧೀರಂ ನೀನಾದೊಡೆ ರಣ |
ಧಾರಿಣಿಯೊಳ್ ತೋರ ಕಡುಪನೆಂದಂ ರಾಮಂ || ೫೧ ||

ಎನೆ ಕೋಪಾಟೋಪದೊಳಂ |
ದನುಜೇಶಂ ಶರದಶರಮನೆಸೆಯಲ್ಕಂ ಮೇ ||

ದಿನಿಪುಷ್ಕರಕಕುಭಗಳೆ |
ಳ್ದನಿತುಂ ತಾಂ ತೋರದಾದುವಾ ಸಮಯದೊಳಂ || ೫೨ ||

ಒತ್ತರಿಸುತೆ ಕವಿಯಲ್ ಮನು |
ಜೋತ್ತಮನತಿ ಕೋಪದಿಂದೆ ಪವನಾಶುಗಮಂ ||
ಬತ್ತಳಿಕೆಯಿಂದಮುಗಿಯಲ್ |
ಬಿತ್ತರದಿಂ ಬೀಸಿದತ್ತು ಜಂಝಾನಿಲನೊಲ್ || ೫೩ ||

ಅಂಬಂ ತಿರುವಿಗೆ ತುಡಿಸುತೆ |
ಕುಂಭಿನಿಯಧಿನಾಥನೆಚ್ಚೊಡಾ ಶರಮಾಗ ||
ಳ್ಗಂಬುದಶರಮಂ ಕಡಿದುಂ |
ಮುಂಬರಿದುಂ ತಿರುಗಿಸಿತ್ತು ಖಳನುರುರಥಮಂ || ೫೪ ||

ಡೆಂಡಣಿಸುತೆ ದಶಕಂಠಂ |
ದಂಡಧರಾಶುಗಮನುಗಿದು ಬಿಲ್ಗೊಳಿಸುತೆ ಮುಂ ||
ಕೊಂಡೆಚ್ಚಾರ್ದ್ದಂ ನಿಜದೋ |
ರ್ದಂಡಗಳಂ ಮೆಲಕೆತ್ತಿ ಸತ್ವರದಿಂದಂ || ೫೫ ||

ಆಟವಿಕನೆಚ್ಚ ಶರಮುಂ |
ಕೋಟಿಕೃತಾಂತಾಭರೂಪದಿಂದೆಯ್ತಂದುಂ ||
ಸೂಟಿಯೊಳಂ ಕವಿಯಲ್ಕಂ |
ಘಾಟಕಮಾಹೇಶಶರಮನುಗಿದಂ ರಾಮಂ || ೫೬ ||

ಚಂಡಪರಾಕ್ರಮದಿಂ ಕೋ |
ದಂಡಕ್ಕಂ ತುಡಿಸಿ ವೇಗದಿಂದೆಚ್ಚೊಡಮುಂ ||
ಖಂಡಿಸಿ ದೈತ್ಯನ ಮಕುಟದ |
ತಂಡಮನರೆಗಳಿಗೆಯಲ್ಲಿ ಬಂದುದು ಪೊರೆಗಂ || ೫೭ ||

ಪೂತುರೆ ತುಳಿಲಾಳಪ್ಪುದು |
ಮೀ ತೋಮರಕಾಂತು ನಿಂದು ಬದುಕಿದೊಡೆ ಪುನ ||
ರ್ಜಾತಂ ನೀನಪ್ಪೆಯೆನುತೆ |
ಕಾತಿಯೊಳಸುರಂ ತಮಿಸ್ರಬಾಣಮನೆಚ್ಚಂ || ೫೮ ||

ಮಾರ್ಗಣಮೆಳ್ತರೆ ಜಗಮಂ |
ಕಾರ್ಗಳ್ತಲೆ ಕವಿದುದಮಮ ರವಿಯೇನಾದಂ ||
ಭಾರ್ಗವನಂತೇವಾಸಿಯ |
ನಾರ್ಗೆಲ್ವರೆನುತ್ತಮಳ್ಕಿತಮರಾನೀಕಂ || ೫೯ ||

ತುಡು ಸೌರಾಶುಗಮಂ ಜಗ |
ದೊಡೆಯನೆ ತಾಮಸಮಿದೇಕೆ ನಿರ್ಜರನಿಜಯಂ ||
ಸೆಡೆದುದೆನುತ್ತಂ ಮಾತಳಿ |
ನುಡಿಯಲ್ಕಂ ರಘುಜನೆಚ್ಚನರ್ಯಮಶರಮಂ || ೬೦ ||

ಕಿರಣಗಳಂ ಪಸರಿಸುತಿಡಿ |
ದಿರುವ ಮಹಾಧ್ವಾಂತನಿಚಯಮಂ ನುಂಗಿ ನಿಶಾ ||
ಚರಪತಿಯಂಗಮನುಚ್ಚ |
ಳ್ಕರಣಂಗಳ್ ಕದಡೆ ಮುರ್ಚ್ಛೆಯಾಂತೆಚ್ಚರ್ತಂ || ೬೧ ||

ಜಾಣಾಯ್ಲನಿರ್ಪೆ ಗುಣಕಂ |
ಕೇಣಮೆ ನೀನೆಸ್ನೊಳಿಂದು ಸಮಸತ್ವದೊಳಂ ||
ಹಾಣಾಹಾಣಿಯನೆಸಗಿದೆ |
ಬಾಣಮಿದೊಂದಿದೆಕೊ ತಾಳಿಕೊಳೆ ತಾಂ ಕಾಸ್ಗೆಂ || ೬೨ ||

ಎಂದಾಸುರಶರವಂ ದಶ |
ಕಂಧರನೆಚ್ಚಾಡೆ ಕೋಟಿಸಿಡಿಲುಬ್ಬಟೆಯೊಳ್ ||
ಬಂದುದು ಸಿಂಹಚಮೂರಕ |
ಸಿಂಧುರ ಕಿಟಿಶರಭರೂಪಗಳನಾಂತಾಗಳ್ || ೬೩ ||

ಕವಿಕವಿದೆಳ್ತರೆ ವಾನರ |
ನಿವಹಂ ಕಾಲ್ದೆಗೆಯೆ ಬೆರ್ಚ್ಚೆ ಸುರಪತಿಸೂತಂ ||
ದಿವಿಜರ್ ಕಂಗಿಡೆಯಾ ರಾ |
ಘವನರಿದುಂ ವೈಷ್ಣವಾಸ್ತ್ರಮಂ ತೆಗೆದೆಚ್ಚಂ || ೬೪ ||

ಪೊಂಗರಿಗದಿರಿಂ ಪಳಿದು ಪ |
ತಂಗನ ಕಿರಣಗಳನ್ನೆದೆ ಸತ್ವರದಿಂದಂ ||
ನುಂಗುತ್ತಸುರನ ಮಾಯೆಯ |
ಜಂಗುಳಿಯುಂ ಮಗುಳೆ ಬಂದು ಸಾರ್ದುದು ಡೊಣೆಯಂ || ೬೫ ||

ಅಚ್ಚರಿವಟ್ಟಸುರೇಂದ್ರಂ |
ಚೆಚ್ಚರದಿಂ ಚಾಪದಶಕದೊಳ್ಶಿಶಿಖಗಳಂ ||
ನಿಚ್ಚಟಮುಂ ತುಡಿಸುತೆ ತಾ |
ನೆಚ್ಚಂ ಘನಮಂಬುವೃಷ್ಟಿಯಂ ಸುರಿದ ವೊಲುಂ || ೬೬ ||

ಅದಕಂಜುವನೇಂ ರಾಘವ |
ನುದಿತಕ್ರೋಧಾಗ್ನಿಯಿಂದೆ ಬಾಣಾವಳಿಯಂ ||

ಪೊದೆಯಿಂ ತೆಗೆತೆಗೆದುಂ ದಶ |
ವದನನನೆಚ್ಚೆಚ್ಚು ಗಾಯಮಂ ಕಾಣಿಸಿದಂ || ೬೭ ||

ತುಡುವಂಬುಗಳೆನಿತೋ ಕಡಿ |
ವಡೆದಂಬುಗಳೆನಿತೊ ಮೆಯ್ಗಳೊಳ್ ಕೀಲಿಸಿದು ||
ಗ್ಗಡದಂಬುಗಳೆನಿತೆನಿತೋ |
ಕಡುಪಿಂ ಕಾಯ್ವೇರಿ ಕಾದಿದರ್ ಕಲಿವೀರರ್ || ೬೮ ||

ಅಣಿಯುರವುದಟಿನೊಳಿರ್ವ್ವರ್ |
ಕಣೆಯಂ ಡೊಣೆಯಿಂದೆ ತೆಗೆದು ಪೆದೆಯೇರಿಸಿದರ್ ||
ಮಣಿಯಲ್ ತನು ಕುಂಡಲಮಣಿ |
ಕುಣಿಯಲ್ ಕಯ್ದಣಿಯೆ ಕೋಪದಿಂದೆಚ್ಚಾರ್ದ್ದರ್ || ೬೯ ||

ತಳಿರಿಡಿದಸುಗೆಯ ಪಾದಪ |
ಗಳೊ ಪೂವಾಂತಿರ್ಪ್ಪ ಮುಳ್ತುಗವೊ ಎಂಬೊಲ್ ಕಂ ||
ಗೊಳಿಸಿದರುರು ಮಾರ್ಗಣಹತಿ |
ಗಳಿತಕ್ಷತರಕ್ತಕಲಿತಗಾತ್ರರ್ ಧುರದೊಳ್ || ೭೦ ||

ಸಮಸತ್ವದೊಳಾ ಸುಭಟರ್ |
ಸಮರಂಗೆಯ್ವುತ್ತು ಮಿರ್ಪ್ಪುದಂ ಕಾಣುತ್ತಂ ||
ದಮರರ ಸಭೆಯಿಂ ಕುಂಭಜ |
ನಮಲಾಬ್ಜಾಂಬಕನ ಪೊರೆಗೆ ಬಂದಿಂತೆಂದಂ || ೭೧ ||

ಅಜಹರಿರುದ್ರಾತ್ಮಕನಂ |
ತ್ರಿಜಗತ್ಪೂಜಿತನನಬ್ಜಬಾಂಧವನಂ ನೀಂ ||
ಭಜಿಸಲ್ ಸಮರಾಂಗಣದೊಳ್ |
ವಿಜಯಂ ನಿನಗಕ್ಕುಮೆಂದುಮುಪದೇಶಿಸಿದಂ || ೭೨ ||

ಆ ಮಂತ್ರದ ಸಂಗತಿಯಂ |
ಪ್ರೇಮದೊಳಂ ತಿಳಿಪಿ ರಘುಜಗಂ ಗಮಿಸಿದನಾ ||
ಧೀಮಂತಂ ಕಲಶಭವಂ |
ತಾಮರಸಪ್ರಿಯನನ್ನೈದೆ ನೆನೆಯೆನುತಾಗಳ್ || ೭೩ ||

ಮುನಿಯುಪದೇಶಿಸಿದಂದದೊ |
ಳಿನನಂ ತನ್ಮೂಲಮಂತ್ರದಿಂ ಜಪಿಸುತ್ತಂ ||
ದಿನಮಣಿ ಮೆಯ್ದೋರೆಂದೆನು |
ತನುವಿಂ ನುತಿಗೆಯ್ದನೆಯ್ದೆ ರಾಘವನಾಗಳ್ || ೭೪ ||

ಕಲಿಯೊಳಗಿಂದುಂ ಖಳದಶ |
ಗಳನಂ ಸಂಹರಿಪೆಯೆಂದು ನಿಂದಂಬರದಿಂ ||
ದಿಳೆಗೆಳ್ತಂದುಂ ವರಮುಂ |
ನಳಿನಾಕ್ಷಂಗಿತ್ತು ಪೋದನಾ ದಿನನಾಥಂ || ೭೫ ||

ವರಶಾರ್ಙಧನುಸ್ಸಂ ತಾಂ |
ಧರಿಸುತೆ ಸಿಂಜಿನಿಯನುಗಿದು ಟಂಕೃತಿಗೆಯ್ದಂ ||
ಉರುತರಶರಮುಂ ತುಡಿಸುತೆ |
ಹರಿನಾದಂಗೆಯ್ವುತೆಚ್ಚನಸುರನ ಶಿರಮಂ || ೭೬ ||

ಕತ್ತರಿಸಿದುದಾತನ ತಲೆ |
ಪತ್ತುಂ ಮೇಣ್ ಮಗುಳೆ ಚಿಗುರ್ದುದದು ಮುನ್ನಿನ ವೊಲ್ ||
ಮತ್ತೆಚ್ಚಂ ತರಿದೊಡಮೊಗೆ |
ವುತ್ತಿರ್ದ್ದುವು ಮಸ್ತಕಂಗಳದನೇವೇಳ್ವೆಂ || ೭೭ ||

ದಶಶಿರನೆಚ್ಚ ಶರಂಗಳ್ |
ಬಿಸಜಾಕ್ಷನ ತನುವನೈದೆ ಭೇದಿಸುತ್ತಿರಲುಂ ||
ಮಸಗಿ ರಘುಕ್ಷಿತಿನಾಯಕ |
ನಿಸೆ ಶರಮಂ ತರಿದುದಸುರಸುರುಮೂರ್ಧಗಳಂ || ೭೮ ||

ಪುಟ್ಟಲ್ಕಸುರನ ತಲೆಗಳ್ |
ತಟ್ಟನೆ ತದ್ದನುಜನಾಥನತಿಕೋಪದೊಳಂ ||
ಬಿಟ್ಟಂ ನಡೆ ಕಣಸಂ ಕ |
ಯ್ಗೊಟ್ಟಂ ನೀನಳಿಯೆವೇಡಮೆಂದಾರ್ದ್ದೆಚ್ಚಂ || ೭೯ ||

ಇಸಲಂಬಂ ಕತ್ತರಿಸುತೆ |
ನಸುನಗುತಂ ರಾಮನೆಂದನೆಲವೊ ದನುಜನೇ ||
ಅಸಮಸಮರ್ಥಂ ನಿನಗಾ |
ಬಿಸಜಾಸನದತ್ತವರದ ಬಲ್ಮೆಯದಿಕ್ಕುಂ || ೮೦ ||

ಎಂದೆನುತಂ ರಾಮಂ ಶರ |
ವೊಂದಂ ಬರಸೆಳೆದು ಪೂಡಿ ಪೂಣ್ದೆಚ್ಚಂ ಬ ||
ಲ್ಪಿಂದಂ ತರಿತರಿದೊಟ್ಟಿದ |
ನಂದಾ ದಶಶಿರನ ತಲೆಗಳಂ ಚೆಚ್ಚರದಿಂ || ೮೧ ||

ನೂರೊಂದು ಬಾರಿ ತಲೆಗಳ |
ನೇರುಂಗೊಳಿಸಿದೊಡೆ ಮುನ್ನಿನಂತಿರೆ ಕಂಡುಂ ||

ಭೂರಿಸುಚಿಂತೆಯೊಳಂ ಸರ |
ಮಾರಮಣನೊಳಂದು ಕೇಳ್ದನೇಸಿದೊ ಎಂದುಂ || ೮೨ ||

ಖಳನೀತಂ ಪೂರ್ವದೊಳಂ |
ತಲೆಯಂ ಕುಯ್ಯ್ಕುಯ್ದು ವಹ್ನಿಗಾಹುತಿಗುಡಲೊಂ ||
ದುಳಿಯಲ್ಕೆಳ್ತಂದುಂ ತಾ |
ನೊಲಿದೆಂ ನಿನಗೀವೆನಿಷ್ಟಮೆಂದಂ ಬೊಮ್ಮಂ || ೮೩ ||

ತನ್ನಯೆ ತಲೆಗಳನರಿದೊಡೆ |
ಮುನ್ನಿನ ವೋಲ್ ಪುಟ್ಟುವಂತೆ ಕರುಣಿಪುದೆನುತಂ ||
ಬಿನ್ನಪಮಂ ಮಾಡಿದೊಡಿವ |
ಗನ್ನಲವಿಂ ಕೊಟ್ಟನಮೃತಕಲಶಮನಾಗಳ್ || ೮೪ ||

ಆ ಸುಧೆಯ ಕುಂಭಮಿರ್ಪುದು |
ಭಾಸುರತರಮಾಗೆ ನಾಭಿದೇಶದೊಳದರಿಂ ||
ನಾಶಂಬಡೆಯನೆನುತೆ ವೈ |
ಭೀಷಣನವನೀಶನೊಡನೆ ಪೇಳ್ವಂ ಭರದಿಂ || ೮೫ ||

ಏಂಕಾರಣಮಾಳೋಚಿಪೆ |
ಶಂಕರಹರಿರೂಪನಲ್ತೆ ತುಡು ವಿಧಿಶರಮಂ ||
ಕೊಂಕದೆ ರಾಘವ ಮನದೊಳ್ |
ಭೊಂಕನೆ ನೀನೆಂದು ಪೇಳ್ದನಿಂದ್ರಸ ಸೂತಂ || ೮೬ ||

ಎನೆ ಮಾಯಾಯವನಿಕೆಯಂ |
ಜಿನದದೆ ಪರಿದಿಟ್ಟು ತನ್ನ ನೆಲೆಯಂ ತಿಳಿದುಂ ||
ಅನುವಿಂ ಹರಿಹರರೂಪವ |
ನನುಕರಿಸುತೆ ಮೆರೆದನಿಂದ್ರರಥದೊಳ್ ರಾಮಂ || ೮೭ ||

ಖಲನಾಥನ ಜಠರಸುಧಾ |
ಕಲಶಮನನಲಾಸ್ತ್ರದಿಂದೆ ಶೋಷಿಸಿ ಬಳಿಕಂ ||
ಜಲಜಭವಾಸ್ತ್ರಮನುಗಿದುಂ |
ಸಲೆಬೇಗಂ ತುಡಿಸಿದಂ ತಿರುವಿಗೆಂ ರಾಮಂ || ೮೮ ||

ಅಭಿಮಂತ್ರಿಸಿ ಭರದಿಂ ಖಲ |
ವಿಭುವಂ ತಲೆಗಡಿದು ಬರ್ಪುದೆಂದ್ವೈದೆ ರಘು ||
ಪ್ರಭವಂ ತೆಗೆನೆರೆದದನುರು |
ರಭಸದೊಳೆಚ್ಚಾರ್ದ್ದನಬ್ಜಜಾಂಡಂ ಬಿರಿಯಲ್ || ೮೯ ||

ನಡುಗಿದರಮರರ್ ದೈತ್ಯರ ।
ಪಡೆ ಬೆಚ್ಚಿರ್ತು ಕುದಿದುದಬ್ಧಿ ಭುವನಾನೀಕಂ ॥
ಸೆಡೆದುದು ಗಿರಿಗಳ್ ಸಿಡಿದುವು ।
ಪೆಡೆಯಂ ತಗ್ಗಿಸಿದನಹಿಪನದನೇವೇಳ್ವೆಂ ॥ ೯೦ ॥

ಬೆಂದುದೊ ಭುವನತ್ರಯಮೆಂ ।
ಬಂದದೊಳಂ ಕಿಡಿಯನುಗುಳುತಂ ವೇಗದೊಳಂ ॥
ಬಂದೆರಗಿತು ಸಿಡಿಲೊಲ್ ದಶ ।
ಕಂಧರನುರುಹೃದಯದೇಶದೊಳ್ ದಿವ್ಯಾಸ್ತ್ರಂ ॥ ೯೧ ॥

ಭೇದಿಸಿ ಪೇರುರಮಂ ಬಳಿ ।
ಕಾದರದಿಂ ಮರಳ್ದು ಬಂದು ಸೇರ್ದುದು ತೊಣೆಯಂ ॥
ಆ ದನುಜೇಶನ ದೇಹಂ ।
ಭೂಧರಮುಡಿವಂತೆ ಬಿಳ್ದುದಾ ರಣಧರೆಯೊಳ್ ॥ ೯೨ ॥

ಆತನ ಜೀವಂ ಭರದೊಳ್ ।
ಜ್ಯೋತಿರ್ಮಯಮಾಗೆ ಬಂದು ಧರಣೀತನುಜಾ ॥
ನೇತನೊಳಂ ಬೆರೆದುದು ಸುರ ।
ಜಾತಂ ಕಡುವೆರಗುವಟ್ಟು ನೋಡಿದರದನುಂ ॥ ೯೩ ॥

ರವಿಜೈವಾತೃಕಸಂಗಮ ।
ದಿವಸದ ಸಾಯಾಹ್ನದಲ್ಲಿ ರಾವಣನಳಿಯ ॥
ಲ್ಕವನೀಭಾರಂ ಪರಿದುದು ।
ಭುವನಾವಳಿಗಾಯ್ತು ಸೌಖ್ಯಮದನೇವೇಳ್ವೆಂ ॥ ೯೪ ॥

ದುಂದುಭಿಯಂ ಮೊಳಗಿಸಿ ಸುರ ।
ವೃಂದಂ ಚೆಲ್ಲಿದುದು ದಿವ್ಯಪುಷ್ಪಾವಳಿಯಂ ॥
ಬಂಧುರದಾರತಿಗಳನೊಲ ।
ವಿಂದಂ ಸುಳಿಸಿದರಮರ್ತ್ಯನಾರಿಯರಾಗಳ್ ॥ ೯೫ ॥

ಅರುಣಾನ್ವಿತನೇತ್ರದ ಸುರು ।
ಚಿರವರಕೋದಂಡಕಾಂಡಯುತಕರಯುಗದಾ ॥
ತರುಣಾರ್ಯಮಭಾಸುರಬಂ ।
ಧುರದೇಹದರಾಮನೆಸೆದನಿಂದ್ರನ ರಥದೊಳ್ ॥ ೯೬ ॥

ಜಯಜಯ ಜಗದಾರಾಧ್ಯಾ ।
ಜಯಜಯ ಜಿತದೈತ್ಯಸಂಕುಲಾ ಮಾಲೋಲಾ ॥

ಜಯಜಯ ರಾವಣಸೂದನ |
ಜಯಜಯಜಯವೆಂದು ನುತಿಸಿತಮರಾನೀಕಂ || ೯೭ ||

ರವಿಜಾತಾಂಗದ ನಳಜಾಂ |
ಬವಪವನಜನೀಲಶರಭಕೇಸರಿಮೈಂದ ||
ದ್ವಿವಿದವಿಭೀಷಣಮುಖ್ಯರ್ |
ಜವದಿಂ ರಾಮಂಗೆ ಮಣಿದು ನುತಿಸಿದರಾಗಳ್ || ೯೮ ||

ರಾವಣಸಂಹಾರಕ ರಾ |
ಜೀವಾಂಬಕ ರಘುಕುಲೇಶ ರಾಕ್ಷಸಹರ ಭ ||
ಕ್ತಾವಳಿಪೋಷಕ ನಿರುಪಮ |
ಪಾವನತರದಿವ್ಯನಾಮ ಶರಣಾಗೆಂದರ್ || ೯೯ ||

ಇಂತೆಂದುಂ ನುತಿಸೆ ದಯಾ |
ಸ್ವಾಂತಂ ಕಮನೀಯಕಾಯನತುಳಂ ಸೀತಾ ||
ಕಾಂತಂ ಕೃಪೆಯಿಂದೀಕ್ಷಿಸೆ |
ಸಂತಯ್ಸಿದನವರನಧಿಕವಿನಯದೊಳಾಗಳ್ || ೧೦೦ ||

ಸುರಪವರೂಥಮನಿಳಿದುಂ |
ಕರೆದುಂ ಮಾತಲಿಯನೈದೆ ನಿನ್ನಿಂದೆಮಗಿಂ ||
ದರಿವಿಜಯಮದಾದುದು ಸುರ |
ಪುರಕಂ ಪೋಗೆಂದು ರಘುವರಂ ಬೀಳ್ಕೊಟ್ಟಂ . || ೧೦೧ ||

ಹನುಮಂತನ ಕಯ್ವಿಡಿದೊ |
ಯ್ಯನೆ ನಡೆತಂದಮಲಭೂಮಿಯೆಡೆಯೊಳ್ ಕುಳಿತುಂ ||
ಅನುಜನ ವದನಮನೀಕ್ಷಿಸ |
ಲನುವಿಂ ಮೆಯ್ಮಸೆಯ ರಕ್ತಮಂ ತೊಳೆದನಣಂ || ೧೦೨ ||

ಮೂಲಿಕೆಯಿಂದೆ ಸುಷೇಣಂ |
ಸೀಲಾಂಗನ ಮೆಯ್ಯ ಮಸೆಯನಡಗಿಸಿದಂ ಸ ||
ಜ್ಜೀಲಮನುಟ್ಟುಂ ತದ್ಭೂ |
ಪಾಲಂ ಸಂತಸದಿನಿರ್ದನಾ ದಿವಸದೊಳಂ || ೧೦೩ ||

ದಶಕಂಠಂ ಮಡಿದುದನೀ |
ಕ್ಷಿಸುತಂ ಬಹುದುಃಖದಿಂದೆ ಸರಮಾರಮಣಂ ||
ಬಸವಳಿದಣ್ಣನ ಪೊರೆಯೊಳ್ |
ಜಸುನೇತ್ರರ ಮೇಲ್ಗೆ ಬಿಳ್ದು ಮರುಗಿದನಾಗಳ್ || ೧೦೪ ||

ಹಾಹಾ ರಾಕ್ಷಸನಾಯಕ |
ಹಾಹಾ ರಣಧೀರ ವೀರ ದಿವಿಜವಿದಾರಾ ||
ಹಾಹಾ ಸರ್ವನೃಪೇಶ್ವರ |
ಹಾಹಾ ಕಡುದಿಟ್ಟ ಮಡಿದೆಯಾ ನೀನೆಂದಂ || ೧೦೫ ||

ವರಸತಿಗೋಸುಗಮೊಡಲಂ |
ಧುರದೊಳ್ ಬಲಿಗೊಟ್ಟೆ ದುಷ್ಟಬೋಧೆಗಳಿಂದಂ ||
ನಿರತಂ ಬಂದೋಲಗಿಸುವ |
ಸುರಪಾದ್ಯರ ಬಯ್ಕೆ ತೀರ್ದುದೆ ಹಾ ಎಂದಂ || ೧೦೬ ||

ಕ್ಷಿತಿನಾಥನೊಡನೆ ಬೆರೆದುಂ |
ಹತಿಗೊಳಿಸಿದೆನಗ್ರಭವನನೆಂದೆನಗೊಂದು ||
ಸ್ಥಿತಮಪವಾದಂ ಬಂದುದೆ |
ಶತಪತ್ರಾಹಿತದಿನೇಶರುಳ್ಳನ್ನೆಬರಂ || ೧೦೭ ||

ಎಂದುಂ ಬಹುವಿಧದಿಂ ದಶ |
ಕಂಧರನುರುಗುಣಗಣಂಗಳಂ ನೆನೆನೆನೆದುಂ ||
ನೊಂದಾಯೆಡೆಯೊಳಗಿರೆ ನಡೆ |
ತಂದರ್ ತದ್ವಾರ್ತೆಗೇಳ್ದು ದನುಜನ ಸತಿಯರ್ || ೧೦೮ ||

ಪರಿದಿಡುತಂ ಭೂಷಣಮುಂ |
ಮೊರೆಯಿಡುತುಂ ಕೋಡಿವರಿಸುತುಂ ಕಣ್ಬನಿಯಂ ||
ಉರಮಂ ತಾಡನಗೆಯ್ಯುತೆ |
ಪರಿತಂದರ್ ಮಯಸುತಾದಿ ಲಲನೆಯರೆಲ್ಲರ್ || ೧೦೯ ||

ಕ್ಷಿತಿತಳದೊಳ್ಬಿಳ್ದಂ ನಿಜ |
ಪತಿಯಂಗದ ಮೇಲ್ಗೆ ಪೊರಳ್ದು ಪಲಪಂಗೆಯ್ದರ್ ||
ವಿತತಸುತಲ್ಪಮನುಳಿದೇಂ |
ಖತಿಯಿಂ ಮಲಗಿರ್ಪೆ ಸಮರಧರಣಿಯೊಳರಸಾ || ೧೧೦ ||

ಏಳಯ್ ಮನ್ನಾಯಕ ನಿ |
ನ್ನೋಲಗಕಂ ಬಂದರ್ಪೆದೆ ವಿಧಿಸುರಪಾದ್ಯರ್ ||
ಫಾಲಾಕ್ಷಂ ಕುಳಿತಿರ್ಪ |
ಬಾಲಕನಿಂದ್ರಾರಿ ಬಂದು ಬಾಗಿಲೊಳಿರ್ಪಂ || ೧೧೧ ||

ಎರಡೇಳ್ ಲೋಕಗಳಧಿಪರ್ |
ಕರೆದುಂ ತಂದಿರ್ಪರಮರನಾರಿಯರಂ ಮೇಣ್ ||

ಪರಿಶೋಭಿಸುವಾರತಿಯುಂ |
ಕರದೊಳ್ ಪಿಡಿದಿರ್ಪ್ಪರವದಿರೀಕ್ಷಿಸ ರಮಣಾ || ೧೨ ||

ಎಂದುಂ ನಾನಾವಿಧದಿಂ |
ಮಂದೋದರಿಮುಖ್ಯನಾರಿಯರ್ ತಂತಮಗಂ ||
ಸಂದಣಿಸಿ ನೋಡಿ ಮೂರ್ಚ್ಛೆಗೆ |
ಸಂದರ್ ಬಹುದುಃಖದಿಂದಮದನೇವೇಳ್ವೆಂ || ೧೩ ||

ನಿಲಿಸವರ ದುಃಖಮಂ ನೀಂ |
ತಿಳಿಸೆನುತಂ ರಾಮನನುಜಗಂ ನೇಮಿಸಲುಂ ||
ಸಲೆ ನಡೆತಂದು ವಿಭೀಷಣ |
ಗೊಲವಿಂ ಕ್ಲೇಶೋಪಶಾಂತಿಯಂ ಗೆಯ್ದನವಂ || ೧೪ ||

ಆರಿಂಗಳಲ್ವೆ ಸುಮ್ಮನೆ |
ಶಾರೀರ್ಯಂ ಸ್ಥಿರಮೆ ದೇವದಾನವನರರೊಳ್ ||
ವೀರಸ್ವರ್ಗಂಬಡೆದಂ |
ಧಾರಿಣಿಯೊಳ್ ಸೆಣಸಿ ಮಡಿದು ದನುಜಾಧೀಶಂ || ೧೫ ||

ದಂದುಗಕೊಳಗಾಗದೆ ಭರ |
ದಿಂದೆಸಗಿ ಪರೇತಕೃತ್ಯಮಂ ವಿನಯದೊಳಂ ||
ಮಂದೋದರಿಯಂ ಮನ್ನಿಸಿ |
ಬಂದಪುದವನಿಪನ ನಿಕಟಕೆಂದುಂ ಮರಳ್ದಂ || ೧೬ ||

ಸಿಲದೆ ವಿಭೀಷಣನಬಲಾ |
ಕುಲಮಂ ಸಂತಯ್ಸಿ ವಿಧಿತವೇದಕ್ರಮದಿಂ ||
ಕಲಿತಾಹಿತಾಗ್ನಿಯಂ ಪ್ರ |
ಜ್ವಲಿಸುತೆ ತತ್ತನುವನೈದೆ ಚಿತೆಯೊಳಗಿಟ್ಟಂ || ೧೭ ||

ಮಿಸುಗುವ ತಚ್ಚಿಖಿಯಂ ಯೋ |
ಜಿಸಿ ದಹನಂಗೆಯ್ದು ಮಗುಳೆ ವಿಧ್ಯುಕ್ತಿಯೊಳಂ ||
ಲಸಿತಮಹಾಸಂಸ್ಕಾರಮ |
ನೆಸಗಿ ಶುಚಿರ್ಭೂತನಾದನಾ ಸರಮೇಶಂ ||೧೮||

ವನಿತೆಯರಂ ಬೀಳ್ಕೊಟ್ಟುಂ |
ಮನೆಗಳ್ಗೆ ವಿಭೀಷಣಾಸುರೇಂದ್ರಂ ಬಳಿಕಂ ||
ಮನುಜಾಧಿಪನೆಡೆಗೆಳ್ತಂ |
ದನುವಿಂ ಪದಕೆರಗೆ ಮನ್ನಿಸಿದನಾ ರಾಮಂ || ೧೯ ||

ಈ ದನುಜೇಶ್ವರನಿಂದೆಮ |
ಗಾದುದು ರಿಪುವಿಜಯಮೀತನಂ ಭರದಿಂ ಲಂ ||
ಕಾಧಿಪತಿತ್ವಕೆ ನಿಲಿಸೆಂ |
ದಾದರದಿಂ ಲಕ್ಷ್ಮಣಂಗೆ ರಾಘವನೆಂದಂ || ೧೨೦ ||

ಕೇಳಯ್ಯ ವಿಭೀಷಣನೀ |
ನಾಲಸ್ಯಂಗೆಯ್ಯದಿಂದು ಲಂಕಾಪುರಕಂ ||
ಪಾಲಕನಾಗುತ್ತುಂ ಪರಿ |
ಪಾಲಿಸು ಕುಲಧರ್ಮಮೆಂಬ ಕಲ್ಪದ್ರುಮಮಂ || ೧೨೧ ||

ಧರಣಿಪನಿಂತೆನೆ ಲಕ್ಷ್ಮಣ |
ನುರುವೇಗದೊಳಾ ವಿಭೀಷಣಂಬೆರಸುಂ ಸಾ ||
ಗರನಾಲ್ಕರ ಜಲಮಂ ವಾ |
ನರರಿಂ ತರಿಸಿದನತೀವಸತ್ವರದಿಂದಂ || ೧೨೨ ||

ಪುರಮಂ ಸಿಂಗರಿಸುತೆ ವರ |
ತರುಣಿಯರಿಂ ತರಿಸಿ ಮಂಗಲದ್ರವ್ಯಗಳಂ ||
ಸ್ಥಿರಲಗ್ನದೊಳೇರಿಸಿದಂ |
ಹರಿಪೀಠಮನಾ ವಿಭೀಷಣಾಸುರಪತಿಯಂ || ೧೨೩ ||

ವಿಧ್ಯುಕ್ತಿಯೊಳಂ ದನುಜಾ |
ರಾಧ್ಯಗೆ ಪಟ್ಟಾಭಿಷೇಕಮಂ ಮಾಡಿದರಾ ||
ವಿದ್ಯಾಧಿಕರುಂ ಮಂಗಲ |
ವಾದ್ಯಂ ತೀವಿದುದು ಭುವನಭವನಾವಳಿಯಂ || ೧೨೪ ||

ಸರಮಾಭಾಮಿನಿವೆರಸುಂ |
ಹರಿಪೀಠದೊಳೊಪ್ಪುತಿರ್ಪ ದನುಜಾಧಿಪಗಂ ||
ತರುಣಿಯರಾರತಿಯೆತ್ತಿದ |
ರುರುಸಂಭ್ರಮಮಾದುದಂದುಮದನೇವೇಳ್ವೆಂ || ೧೨೫ ||

ನಗರದ ಜನಮೆಳ್ತಂದೊಗು |
ಮಿಗೆ ಕಾಣ್ಕೆಯನಿತ್ತು ರಾಜದರ್ಶನಗೆಯ್ದರ್ ||
ಪೊಗಳಲ್ಕಾನೆಂದದೊಳಂ |
ರಘುಪತಿಯಂ ನಾಕಲೋಕದಿವಿಜಾನೀಕಂ || ೧೨೬ ||

ತನಗಾದುದು ನಿಮ್ಮತ್ತಣಿ |
ನನುಪಮಸೌಭಾಗ್ಯಮೆಂದು ಲಕ್ಷ್ಮಣನಂ ಸ ||

ದ್ವಿನಯದೊಳುಪಚರಿಸುತೆ ತ ।
ನ್ಮನುಜಾಧಿಪನೊಡನೆ ಬಂದನಾ ಸರಮೇಶಂ ॥ ೧೨೭ ॥

ಕಾಣಿಕೆಯಂ ಕೊಟ್ಟೆರಗಿದ ।
ಕೌಣಪನಾಯಕನನ್ನೆದೆ ಮನ್ನಿಸಿ ಮುದದಿಂ ॥
ಕ್ಷೋಣೀಶಂ ಮಿಗೆ ಭುವನ ।
ಪ್ರಾಣಕುಮಾರಕನೊಳೆಂದನತಿವಿನಯದೊಳಂ ॥ ೧೨೮ ॥

ಶರನಿಧಿಯಂ ಬಂಧಿಸಿ ದಶ ।
ಶಿರನಂ ಸಂಹರಿಸಿ ಸರಮೆಯರಸಂಗೊಲ್ದುಂ ॥
ಸ್ಥಿರಪದವಿಯನಿತ್ತುದನಾ ।
ಧರಣಿಜೆಯೊಡನರಿಪಿಪವ್ವುದೆಂದಂ ರಾಮಂ ॥ ೧೨೯ ॥

ಎನಲತಿವೇಗಂ ಮಾರುತ ।
ತನುಜಾತಂ ಬಂದಶೋಕವನಕಂ ಸೀತಾ ॥
ವನಿತೆಯನೀಕ್ಷಿಸಿ ತತ್ಪದ ।
ವನರುಹಕಂ ಮಣಿದು ನಿಂದು ಮೇಣಿಂತೆಂದಂ ॥ ೧೩೦ ॥

ದೇವಿಯೆ ಕೇಳಾ ರಾಘವ ।
ದೇವಂ ಸುಕ್ಷೇಮಿ ಕುಶಲಿ ಲಕ್ಷ್ಮಣನುಂ ಸು ॥ .
ಗ್ರೀವಾದ್ಯರ್ ಸೊಗಮಿರ್ಪ್ಪರ್ ।
ರಾವಣನುಳಿದಂ ಸಪುತ್ರಬಾಂಧವಮಿತ್ರಂ ॥ ೧೩೧ ॥

ಎಂತೇಂಪೇಳ್ವೆಂ ಧರಣೀ ।
ಕಾಂತನ ಸನ್ನಿಧಿಗೆ ನಿನ್ನೊಳಪ್ಪಣೆಗೊಂಡುಂ ॥
ತಾಂ ತಳ್ವದೆ ಪೋಗಿ ದಯಾ ।
ಸ್ವಾಂತನೊಳಂ ಪೇಳ್ವೆನಸುರಬಾಧೆಯ ಪರಿಯಂ ॥ ೧೩೨ ॥

ನಿರುಪಮಚೂಡಾಮಣಿಯಂ ।
ಭರದಿಂ ಕುಡೆ ಕಂಡು ರಾಘವೇಂದ್ರಂ ಮನದೊಳ್ ॥
ಮರುಗಿ ಸರಾಗದೊಳಂ ಮೇಣ್ ।
ಪೊರಮಟ್ಟಂ ವಾನರೌಘಮನುಜಂಬೆರಸುಂ ॥ ೧೩೩ ॥

ವನನಿಧಿಗೆಯ್ತರೆ ರಾವಣ ।
ನನುಜಂ ನಡೆತಂದು ಕಂಡನಂಘ್ರಿಯನಾಗಳ್ ॥
ವಿನಯದೊಳವನಂ ಮನ್ನಿಸಿ ।
ಜನಪತಿ ಕಟ್ಟಿಸಿದನಬ್ಧಿಯಂ ನಳನಿಂದಂ ॥ ೧೩೪ ॥

ವಾನರಬಲವೆರಸುಂ ಬಂ ।
ದೀ ನಗರಮನ್ನೈದೆ ಮುತ್ತಿ ಘಟಕರ್ಣಘನ ॥
ಧ್ವಾನಾದ್ಯಸುರಾವಳಿಯುಂ ।
ಕೀನಾಶನ ಪುರಕೆ ಕಳಿಪಿದಂ ರಘುವೀರಂ ॥ ೧೩೫ ॥

ಸುರಪಂ ಕಳಿಪಲ್ ರಥಮುಂ ।
ಕರುಣದೊಳೇರ್ದುರ್ವ್ವಂ ಸರಾಗದಿಂ ದಶಶಿರನಂ ॥
ಉರುತರಮಾರ್ಗಣದಿಂ ಸಂ ।
ಹರಿಸಿದನಾ ರಾಮನಮರತತಿ ಕೊಂಡಾಡಲ್ ॥ ೧೩೬ ॥

ನಿಲದವನನುಜ ವಿಭೀಷಣ ।
ಗೊಲಿವುತೆ ಲಂಕಾಧಿಪತ್ಯಮಂ ಪಾಲಿಸುತಂ ॥
ನಲವಿಂದೀ ವಿವರಮನುಂ ।
ತಿಳಿಪೆಂದುಂ ನಿಮ್ಮ ಪೊರೆಗೆ ಕಳಿಪಿದನೆನ್ನಂ ॥ ೧೩೭ ॥

ಲೋಕವಿದಾರಕನಳಿದಂ ।
ನಾಕನಿವಾಸಿಗಳ್ಗಮಾದುದಾ ಮಸದಿಷ್ಟಂ ॥
ಕಾಕುತ್ಸ್ಥಂಗೆಂ ಭವದಾ ।
ಲೋಕನದಭಿಲಾಷೆಯಾದುದೆಂದಂ ಹನುಮಂ ॥ ೧೩೮ ॥

ಇಂತೆನೆ ಕೇಳ್ದುಂ ಸೀತಾ ।
ಕಾಂತೆ ಮಹಾನಂದ ಬಾಷ್ಪಪೂರಿತಶುಭನೇ ॥
ತ್ರಾಂತದೊಳೀಕ್ಷಿಸಿ ಕರುಣಾ ।
ಸ್ವಾಂತದಿನನಿಲಾತ್ಮಭವನೊಳೆಂದಳ್ ನಲವಿಂ ॥ ೧೩೯ ॥

ನಿನ್ನತ್ರಣಿನಾದುದು ಪತಿ ।
ಗುನ್ನತಮಭ್ಯುದಯಮೆನಗೆ ಪೋದುದು ದುಃಖಂ ॥
ಎನ್ನಂ ಪಡೆದಾ ಜನಕಂ ।
ಗನ್ನಿಂ ಮಿಗಿಲೆಂದು ಪೇಳ್ದ ಮೇಣಿಂತೆಂದಳ್ ॥ ೧೪೦ ॥

ನೀನೆ ಕಪಿರೂಪನಾಂತೀ ।
ಶಾಸನಲಾ ತಿಳಿಯೆ ಸತ್ವಸಾಹಸದಿರವಂ ॥
ಭೂನಾಥಗೆ ಗೆಲ್ವೆಣ್ಣಂ ।
ನೀನೇ ಪೆತ್ತಿತ್ತನೆಂದೊಡೇನತಿಶಯಮೋ ॥ ೧೪೧ ॥

ಧರಣಿಪನ ಚಿತ್ತಕಂ ಬೇ ।
ಸರದಾಗದ ತೆರದೊಳರಿಪಿ ಶೀಘ್ರದೊಳೆನ್ನಂ ॥

ಬರಿಪಂತೆಸಗೆಂದವನಿಜೆ |
ಕರುಣದೆ ಬೀಳ್ಕೊಟ್ಟಳಂದು ಪವನಾತ್ಮಜನಂ || ೧೪೨ ||

ವಿನಮಿತನಾಗಿ ಧರಾಸುತೆ |
ಗನಿಲಾತ್ಮಜನೈದೆ ಬಂದು ಭಯಭಕ್ತಿಯೊಳಂ ||
ಮನುಜಾಮರನಾಥನ ಪದ |
ವನಜದೊಳಭಿನಮಿಸಿ ಪೇಳ್ದನಾ ವಿವರಗಳಂ || ೧೪೩ ||

ಅಂದಾನೀಕ್ಷಿಸಿದುದರಿಂ |
ಕುಂದಿದೆ ತನು ನಿಮ್ಮ ನಾಮದೊಳ್ ದೃಢಚಿತ್ತಂ ||
ಪೊಂದಿದೆ ದೇವಿಗೆ ಸುದಯಾ |
ಸಿಂಧುವೆ ಕೃಪೆಗೆಯ್ಯೆವೇಳ್ಕುಮಾ ಜಾನಕಿಯೊಳ್ || ೧೪೪ ||

ಹನುಮನ ವಚನಮನಾಲಿಸು |
ತನುವಿಂದಾನಂದಭರಿತನಾಗುತ್ತಂ ಮೇ ||
ದಿನಿಯಾತ್ಮಜೆಯಂ ಬರಿಸುವೆ |
ನೆನುತಂ ರಘುವೀರನಿರ್ದ್ದನೆಂದಂ ಸೂತಂ || ೧೪೫ ||

# ಚತುರ್ದಶಾಶ್ವಾಸ.

ವೃತ್ತ ॥ ಶ್ರೀಕಾಂತಂ ನತಕಲ್ಪವಲ್ಲಿ ಕರುಣಾವಾರಾಶಿ ಸೌಖ್ಯಪ್ರದಂ ।
ಪಾಕಾರಾತಿಮುಖಾಮರಾಳಿವಿನುತಂ ದೈತ್ಯೇಂದ್ರವಿಧ್ವಂಸಕಂ ॥
ಭೂಕಾಂತಂ ಭರತೇಷ್ಟದಾಯಕನಜಂ ಸನ್ಮಂಗಲಾಂಗಂ ವರಂ ।
ಸಾಕೇತಾವನಿಪಾಲಕಂ ಕುಡುಗೆ ಸಂತೋಷಂಗಳಂ ರಾಘವಂ ॥ ೧ ॥

ಕಂದ ॥ ಕರುಣಾಸಾಗರ ಮಂಗಲ ।
ಕರದಿವ್ಯಮಹಾಶರೀರನಿರ್ಜಿತಚಾಮಿಾ ॥
ಕರಪರ್ವತ ಸದ್ಭಕ್ತನಿ ।
ಕರಪೋಷಕ ವಿಶ್ವವಿನುತ ಪೊರೆ ಪವನಭವಾ ॥ ೨ ॥

ಪರಮರ್ಷಿಗಳಿರ ಕೇಳ್ವುಂ ।
ಪರಿತೋಷಾನ್ವಿತನುಮಾಗೆ ರಾಘವದೇವಂ ॥
ಧರಣಿಜೆಯಂ ಬರಿಪುದು ಸಾ ।
ದರದಿಂದೆಂದುಂ ವಿಭೀಷಣಗೆ ತಾನುಸಿರ್ದಂ ॥ ೩ ॥

ಮಂಗಲೆ ತಾಂ ಬರಲಿಂ ಸೀ ।
ತಾಂಗನೆಯೊ ಎಡೆಗೆಸುತ್ತೆ ಮುದದಿಂ ಕರುಣಾ ॥
ಪಾಂಗಂ ಪವನಜದಾನವ ।
ಪುಂಗವರಂ ಕಳಿಪೆ ಬಂದರಸುಗೆಯ ಬನಕಂ ॥ ೪ ॥

ಬಿಜಯಂಗೆಯೆವೇಳ್ಕುಂ ಭೂ ।
ಮಿಜೆ ನಿಮ್ಮಧಿನಾಥನಂಘ್ರಿದರ್ಶನಕೆನುತಂ ॥
ರಜನೀಚರನಾಯಕಪವ ।
ನಜರುಂ ತತ್ಪದಕೆ ಮಣಿದು ಕಯ್ಮುಗಿದೆಂದರ್ ॥ ೫ ॥

ಮಜ್ಜನಮಂ ಗೆಯ್ದುಂ ಮಿಗೆ ।
ಪಜ್ಜಳಿಸುವ ವಸನಭೂಷಣಗಳಂ ತಾಳ್ದುಂ ॥
ಕಜ್ಜಳಮಂ ಧರಿಸಲ್ ತ್ರಿಜ ।
ಗಜ್ಜನನಿ ಸರಾಗದಿಂದೆ ಬರೆವೇಳ್ಕೆಂದರ್ ॥ ೬ ॥

ಬರಲೇಂ ತಾನಿರ್ದ್ದಂದೊ ।
ಳೆರೆಯನ ಸನ್ನಿಧಿಗೆ ಬಳಿಕೆ ನಿರ್ಮಲೆಯಪ್ಪೆಂ ॥

ಬರಲಪ್ಪಣೆಯಾಗಿದ್ದೊಡ |
ಮರೆ ಕರೆದುಯ್ಯೆಂದು ಪೇಳ್ದಳವನೀಜಾತೇ || ೭ ||

ಒಡೆಯನನುಜ್ಞೆಯೊಳಂ ನಿ |
ಮ್ಮೊಡೆಗಂ ಬಂದಿರ್ಪೆಮಮ್ಮ ಮಂಗಳೆ ಮೀಯಾ ||
ಮಡಿಯಂ ಧರಿಯಿಸೆವೇಳ್ಕುಂ |
ದಡಿಗಂ ಮುಗುಳೆರಗಿ ಪೇಳ್ದನಾ ದನುಜೇಶಂ || ೮ ||

ಪರಿಪರಿ ಮಿರುಪ ದುಕೂಲಾ |
ಭರಣಂಗಳಂ ತರಿಸಿ ತ್ರಿಜಟೆಸರಮೆಯರೊಳ್ಸಿಂ ||
ಗರಿಸಲ್ವೇಳ್ಕೆಂದೆನೆ ತ |
ತ್ತರುಣಿಯರವನಿಜೆಗೆ ಮಜ್ಜನಂಗೆಯ್ಸಿದರ್ || ೯ ||

ದುಗುಲಮುಸುಡಿಸುತೆ ಪೊಸದೊಡ |
ವುಗಳಂ ತುಡಿಸುತ್ತೆ ವೇಣಿಯಂ ಹದಗೆಯ್ದುಂ ||
ಮಗಮಗಿಪಲರಂ ಮುಡಿಸುತೆ |
ತಿಗುರಿದರನುಲೇಪನಗಳನವನಿಜೆಗಾಗಳ್ || ೧೦ ||

ಪಣೆಗಂ ಕತ್ತುರಿಬೊಟ್ಟಂ |
ನೆನೆದಿಟ್ಟುಂ ನೇತ್ರಯುಗಕೆ ಕಜ್ಜಳಮಂ ಬಿ ||
ನ್ನಣದೊಳಲಂಕರಿಸುತೆ ಸ |
ದ್ಗುಣಸಾಗರೆಗೆರಗಿ ನಿಂದರಾ ಮಾನಿನಿಯರ್ || ೧೧ ||

ಶಿಬಿಕಾರೋಹಣಗೆಯ್ಸಿದ |
ನಬುಜಾಕ್ಷಿಯನಸುರನಾಯಕಂ ಕೆಲಬಲದೊಳ್ ||
ಅಬಲಾಜನಮೆಯ್ತಂದುದು |
ವಿಬುಧಾವಳಿ ನೋಡುತಿರ್ದುದಭ್ರಾಂಗಣದೊಳ್ || ೧೨ ||

ಎರಡುಂ ಪಾರ್ಶ್ವದೊಳಂ ಮುಂ |
ಬರಿದೀಕ್ಷಿಪ ಕಾಂಕ್ಷೆಯಿಂದೆ ಸಂದಣಿಸುವ ವಾ ||
ನರರಂ ಕಂಚುಕಿಗಳ್ ನಿ |
ಷ್ಠುರದಿಂದೆಳ್ಬಟ್ಟುತೆಯ್ದಿದರ್ ಮುಂಗುಡಿಯೊಳ್ || ೧೩ ||

ಅವನಿಪನೀಕ್ಷಿಸಿ ರಾಕ್ಷಸ |
ಧವನಂ ನಿಕಟಕ್ಕೆ ಬರಿಸಿ ಪೇಳ್ದಂ ಸತಿಯಂ ||
ಪ್ಲವಗರ್ ನೋಡುಗೆ ಸೀತಾ |
ಯುವತಿಯುಮೆಳ್ತರ್ಕೆ ಚರಣಗತಿಯಿಂದನುತುಂ || ೧೪ ||

ಎನೆ ಜೀಯ ಹಸಾದಮೆನು |
ತ್ತನುವೇಗಂ ಬಂದು ದನುಜನಾಥಂ ಸೀತಾ ||
ವನಿತೆಗೆ ಬಿನ್ನವಿಸಲ್ ಮೇ |
ದಿನಿಗಂ ದುಮ್ಮಿಕ್ಕಿ ದುಗುಡದಿಂದೆಯ್ತಂದಳ್ || ೧೫ ||

ನೋಡದೊಳೊಪ್ಪುವ ಮಿಂಚಿನ |
ಗಾಡಿಯೊ ಎನೆ ದನುಜಸತಿಯರೋಳಿಯೊಳಿಸನಂ ||
ನೋಡುವ ಬಾಕುಳದಿಂದೆ ಸ |
ಗಾಢಮುಮೆಳ್ತಂದಳವನಿಸುತೆ ಪತಿಯೆಡೆಗಂ || ೧೬ ||

ಮೆಲ್ಲನೆ ನಡೆತಂದುಂ ನಿಜ |
ವಲ್ಲಭನಡಿಗೆರಗಿ ನಿಂದು ಕಯ್ಮುಗಿದುಂ ಸಂ ||
ಫುಲ್ಲಸುನೇತ್ರದ್ಯುತಿಯಂ |
ಚೆಲ್ಲಿದಳಾ ರಾಮನಾಸ್ಯದೊಳ್ ಭೂಜಾತೇ || ೧೭ ||

ಸತಿಯಿವಳುಂ ತಚ್ಛಾಯಾ |
ಪ್ರತಿಮೆಯದಾಗಿರ್ಪ್ಪಳನಲನೊಳ್ನಿಲ್ಲಿಸಿ ಭೂ ||
ಸುತೆಯಂ ಕಯ್ವಿಡಿವುದು ಸ |
ಮ್ಮತಮೆಂದುಂ ತಿಳಿದು ಸುಮ್ಮನಿರ್ದ್ದಂ ರಾಮಂ || ೧೮ ||

ಇನಜವಿಭೀಷಣಜಾಂಬವ |
ಹನುಮಾದ್ಯರ್ ಭೀತಿಯಿಂದೆ ಕಯ್ಮುಗಿದುಂ ಭೂ ||
ತನುಜೆಯಸೀಕ್ಷಿಪುದೆಂದೆನೆ |
ವನಜಾಕ್ಷಂ ನಿಷ್ಠುರತೆಯೊಳೆಂದಂ ಸತಿಗಂ || ೧೯ ||

ನಿನಗೋಸುಗಮೆಳ್ತಂದೀ |
ವನನಿಧಿಯಂ ಕಟ್ಟಿ ಕೊಂದುದಿಲ್ಲಂ ಖಳನಂ ||
ಅನರಣ್ಯಕ್ಷಿತಿಪತಿಯಂ |
ಹನನಂಗೊಳಿಸಿರ್ದ್ದನಂದುಮುದರಿಂ ಕೊಂದೆಂ || ೨೦ ||

ಬರಿಸಮುಮೊಂದಾ ದೈತ್ಯನ |
ಪೊರೆಯೊಳಗಿರ್ದ್ದವಳನೈದೆ ಕಯ್ವಿಡಿಯಲೊಡಂ ||
ಜರೆಯದೆ ಲೋಕಂ ಮಾಯಾ |
ಸರಣಿಗೆ ಮೆಯ್ಗುಡುವನಲ್ಲಮಾಂ ಸಾರೆಂದಂ || ೨೧ ||

ಪತಿಯಿಂತೆನೆ ಕಣ್ಬನಿಗರೆ |
ವುತೆ ಲಜ್ಜೆಯನುಳಿದು ವದನಮಂ ನೋಡುತ್ತಂ ||

ಬೆರೆಯಿಂ ತಾನೆಂದಳ್ ಭೂ ।
ಸುತೆ ವಾನರರದನುಜಸಭೆಯೊಳವನೀಶನೊಳಂ ॥ ೨೨ ॥

ವಿಪಿನದೊಳಂ ತನ್ನಂ ದಶ ।
ಲಪನಂ ಕಡುಬಲ್ಪಿನಿಂದೆ ಕೊಂಡುಯ್ದಿಟ್ಟಂ ॥
ಉಪವನದೊಳ್ ನಿಮ್ಮನೆ ತಾಂ ।
ಜಪಿಸುತುಮಿರ್ದೆಂ ನಿಶಾಚರೆಯರುಪಹತಿಯಿಂ ॥ ೨೩ ॥

ಅವನಾನನಗಳನೀಕ್ಷಿಸಿ ।
ದವಳಲ್ಲಂ ಸಾಕ್ಷಿಯಿರ್ಪನೀ ಪವನಸುತಂ ॥
ತವನಾಮಾಮೃತಮಂ ಸವಿ ।
ಸವಿದುಂ ಜೀವಿಸಿದುದಲ್ಲದನ್ಯಮನರಿಯೆಂ ॥ ೨೪ ॥

ಜನಪತಿ ಕೇಳ್ಗಂ ತವಪದ ।
ವನರುಹಮಂ ಸೇರ್ದ ಮೊದಲಿನಿಂದಿನ್ನೆಗೆ ನಿ ॥
ಮ್ಮನೆ ಪರದೈವಮೆನುತ್ತಂ ।
ಮನದೊಳ್ನೆನೆವುತ್ತುಮಿರ್ಪೆನನ್ಯರನರಿಯೆಂ ॥ ೨೫ ॥

ಸತಿಗಂ ನಿಜದೈವಂ ನಿಜ ।
ಪತಿಯಲ್ಲಮೆ ತಿಳಿಯದಿರ್ಪುದೇ ತವಚಿತ್ತಂ ॥
ಇತರಾಪೇಕ್ಷೆಯೊಳೆನ್ನಯ ।
ಮತಿ ಬೆರೆಯದು ಕುಂದನೆಸಗೆನಿನವಂಶಕ್ಕಂ ॥ ೨೬ ॥

ಅನುಮಾನಮಿದೇತಕೆ ತಾ ।
ನನಲನ ಜಠರಮನೆ ಪೊಕ್ಕು ಪಾವನೆಯಪ್ಪೆಂ ॥
ತನುವುಂ ಕುಂದದೆ ಕಂದದೆ ।
ಸನಿಹಕ್ಕಂ ಬಂದೊಡೆನ್ನನುಂ ಕಯ್ಪಿಡಿಯಯ್ ॥ ೨೭ ॥

ಗಂಡನ ಚಿತ್ತಮನೊಲಿಸಲ್ ।
ಕುಂಡಂಗೆಯ್ದಿಂಧನಂಗಳಂ ತರಿಸುತೆ ಭರದಿಂ ॥
ಕೆಂಡಗಳಂ ಮಾಡಿಸು ಮಾ ।
ರ್ತಾಂಡಂ ಸಲೆ ಮೆಚ್ಚಲೆಂದು ಲಕ್ಷ್ಮಣಗುಸಿರ್ದಳ್ ॥ ೨೮ ॥

ಧರಣಿಜೆಯಿಂತೆನೆ ಲಕ್ಷ್ಮಣ ।
ನರವಿಂದಾಂಬಕನ ಮೊಗಮನೀಕ್ಷಿಸೆ ತಿಳಿದುಂ ॥
ವಿರಚಿಪುದವಳೆಂದಂದದೊ ।
ಳುರಿಯಂ ಸತ್ವರಮುಮೆಂದನಾ ರಘುವೀರಂ ॥ ೨೯ ॥

ಸ್ವಾಮಿಯ ಸಮ್ಮತದಿಂದಂ |
ಸೌಮಿತ್ರಿ ವಿಭೀಷಣಂಗೆ ಪೇಳಲ್ಕತ್ತಲ್ ||
ನೇಮದೊಳಾದುದು ನಿರ್ಮಲ |
ಭೂಮಿಯೊಳುರುಕುಂಡಮುದರೊಳಂ ತನಿಗೆಂಡಂ || ೩೦ ||

ಉರಿ ನೆಗೆದುದು ನಭಕಂ ಸುರ |
ತರುಣಿಯರಚ್ಚರಿಯೊಳೀಕ್ಷಿಸುತುಮಿರ್ದ್ದರ್ ವಾ ||
ನರರಾಕ್ಷಸರುಂ ಚಿಂತಾ |
ತುರದಿಂ ನೋಡುತ್ತುಮಿರ್ದ್ದರದನೇವೇಳ್ವೆಂ || ೩೧ ||

ಆ ಸಮಯದೊಳವನಿಜೆ ಸಂ |
ತೋಷದೊಳಂ ರಾಮಚಂದ್ರನಂಘ್ರಿಗೆ ಮಣಿದುಂ ||
ಲೇಶಂ ಕಂದಿದೊಡೀ ಸುಮ |
ಕೇಶಂ ಕುಂದಿದೊಡೆ ನಿನ್ನ ಸತಿಯಲ್ತೆಂದಳ್ || ೩೨ ||

ಪರಮಪತಿವ್ರತೆಯಾದೊಡೆ |
ಚರಣಕ್ಕನುಕೂಲಪತ್ನಿಯಾದೊಡೆ ತನಗೀ ||
ಉರಿ ಹಿಮಮಕ್ಕುಮೆನುತ್ತಂ |
ಪರಿತಂದಳ್ ಕುಂಡದೆಡೆಗೆ ನಿಶ್ಚಿಂತೆಯೊಳಂ || ೩೩ ||

ಸುರನಿಕರಕೆ ವಂದಿಸಿ ಭೂ |
ಸುರರ್ಗಂ ತಲೆವಾಗಿ ವಹ್ನಿಗಂ ಬಲವಂದುಂ ||
ಕರಮಂ ಮುಗಿದುಂ ವೈಶ್ವಾ |
ನರನಂ ನೋಡುತ್ತುಮೆಂದಳುಚ್ಚಸ್ವರದಿಂ || ೩೪ ||

ಪತಿಪಾದಾಂಬುಜಸೇವಾ |
ರತಿಯೊಳ್ತಾನಿರ್ದ್ದೊಡಿಂದು ಕೃಪೆಯಿಂದಂ ನೀ ||
ನತಿಶೀತಲನಾಗೆನುತುಂ |
ಕ್ಷಿತಿಸುತೆ ದುಮ್ಮಿಕ್ಕಿದಳ್ ಸುಕುಂಡದೊಳಾಗಳ್ || ೩೫ ||

ಮೊರೆಯಿಟ್ಟರ್ ಸುರಸತಿಯರ್ |
ಮರುಗಿದರಾಸುರರ ತರುಣಿಯರ್ ಕಣ್ಬನಿಯಂ ||
ಕರೆದರ್ ವಾನರರುಂ ರಘು |
ವರನೀಕ್ಷಿಸುತಿರ್ದ್ದನಗ್ನಿಕುಂಡಮನಾಗಳ್ || ೩೬ ||

ಬಂದರ್ ಶಶಿಶೇಖರಸಂ |
ಕ್ರಂದನಪರಮೇಷ್ಟಿವಾಯುಕಾಲಕುಬೇರರ್ ||

ಸಿಂಧುಪಸಿಖ್ಯುತಿಚಾರಣ |
ಗಂಧರ್ವಾಮರಮುನೀಶಕಿನ್ನರರಾಗಳ್ || ೩೭ ||

ವಸುರುದ್ರಾದಿತ್ಯರ್ ವರ |
ಋಷಿಗಳ್ ಮನುಸಿದ್ಧಸಾಧ್ಯವಿದ್ಯಾಧರರಾ ||
ಕ್ಷಸಕಿಂಪುರುಷಮಹೋರಗ ||
ಶಶಿತಾರಾಗ್ರಹಮರುದ್ಗಣಂ ಬಂದುದಣಂ || ೩೮ ||

ಜಯಜಯ ಎನುತೆಳ್ತಂದರ್ |
ದಯೆಯಿಂ ಶ್ರೀರಾಮಸಂಘ್ರಿಯೆಡೆಗಂ ನಲವಿಂ ||
ಭಯಭರಿತಶ್ರದ್ಧೆಯೊಳಂ |
ನಯದಿಂ ಸುತಿಗೆಯ್ದನಬ್ಜಸಂಭವನಾಗಳ್ || ೩೯ ||

ಪಾವನತರವಿಗ್ರಹ ಮುನಿ |
ಪಾವನಸೌಗುಣ್ಯಶೀಲ ಕರುಣಾಪಾಂಗಾ ||
ಭಾವೋದ್ಭವಪಿತ ಧೀರ ವಿ |
ಭಾವಸುಶಶಿನೇತ್ರಯುಗಳ ಜಯಜಯ ಎಂದಂ || ೪೦ ||

ದಶಶಿರನುಪಟಳದಿಂ ಸುರ |
ವಿಸರಂ ಕಂಗೆಟ್ಟು ಬಂದು ದೂರಲ್ಕಂ ನೀ ||
ನೊಸೆದವತರಿಸುತೆ ತದ್ರಾ |
ಕ್ಷಸನಂ ಸಂಹರಿಸಿ ಕಾಯ್ದೆ ಭುವನತ್ರಯಮಂ || ೪೧ ||

ಹರಿ ನೀನೆಯಲಾ ಸೀತಾ |
ತರುಣೀಮಣಿ ಲಕ್ಷ್ಮಿಯಲ್ತೆ ನರನಾಟಕವಂ ||
ಧರಿಸುತೆ ಮೆರೆವಯ್ ಪಾವನ |
ತರಗಾತ್ರೆಯೊಳೊಲ್ದು ರಕ್ಷಿಪುದು ದಯೆಯಿಂದಂ || ೪೨ ||

ಎನಲನಲಂ ಕೇಳ್ದಂ ಸ |
ದ್ವಿನಯದೊಳಾ ಕುಂಡದಿಂದವೊಗೆದುಂ ಸೀತಾ ||
ವನಿತೆಯನಾಂತುಂ ಕರಗಳೊ |
ಳನುವಿಂ ತಂದಿತ್ತನೈದೆ ರಘುನಾಥಂಗಂ || ೪೩ ||

ಪುಟಕಿಕ್ಕಿದ ಬಂಗಾರದ |
ಪಟುತರವಿಗ್ರಹವೊ ಎಂಬೊಲವನಿಜೆ ಹರ್ಷೋ ||
ತ್ಕಟವದನದಿನೆಳ್ತಂದುಂ |
ವಿಟಸಂಘ್ರಿಗೆ ಮಣಿದು ಸಾರ್ದ್ದಳಾತನ ತೊಡೆಯಂ || ೪೪ ||

ನಲವಿಂದಂ ದಿನಕರಕುಲ ।
ತಿಲಕಂ ಭೂಸುತೆಯನ್ನೈದೆ ಮುದ್ದಿಡುತೆ ಧರಾ ॥
ವಲಯದೆ ನಿನಗೆಣೆಯಪ್ಪಾ ।
ಲಲನೆಯರಂ ಕಾಣೆನೆಂದು ಪೊಗಳ್ದಂ ಮುದದಿಂ ॥ ೪೫ ॥

ವನದೊಳಗಂದೆನ್ನೊಳ್ ಸ ।
ದ್ವಿನಯದೊಳಿಟ್ಟವನಿಸುತೆಯನಿಂದೊಪ್ಪಿಸಿದಂ ॥
ದನುಜೇಶಂ ತಚ್ಛಾಯಾ ।
ವನಿತೆಯ ದೆಸೆಯಿಂದೆ ಮಡಿದನೆಂದಂ ಜ್ವಲನಂ ॥ ೪೬ ॥

ಇನ್ನೆವರಂ ಸುರತತಿಗಂ ।
ಜನ್ನದೊಳಾಹುತಿಯನುಯ್ದೊಡಂಜುತುಮಿರ್ದೆಂ ॥
ನಿನ್ನಿಂದಾದುದು ನಿರ್ಭಯ ।
ಮಿನ್ನೆನಗೆನುತಲನ್ನೈದೆ ನುತಿಸಿದನಾಗಳ್ ॥ ೪೭ ॥

ನಿಲದೆ ಸುರೇಂದ್ರಂ ತಾಂ ಬಂ ।
ದೊಲವಿಂ ಕಯ್ಮುಗಿದು ನಿಂದು ನುತಿಸಿದನಾಗಳ್ ॥
ಜಲರುಹಲೋಚನ ಸುಪ್ರ ।
ಜ್ವಲಿತಾರ್ಯಮಕೋಟಿಭಾಸ ಜಯಜಯ ಎನುತುಂ ॥ ೪೮ ॥

ಶಶಿರವಿಲೋಚನ ಶಾಶ್ವತ ।
ಶಶಲಾಂಛನಮೌಳಿವಿನುತ ಪಾಲಿತಮೌನಿ ॥
ಪ್ರಸರಾಂಬುಜಭವವಂದ್ಯ ।
ಪ್ರಸವಾಸ್ತ್ರತಿರಸ್ಕೃತಾಂಗ ಜಯಜಯ ಎಂದಂ ॥ ೪೯ ॥

ದರಹಸಿತಾನನ ನಂದಕ ।
ಧರ ಚಕ್ರಾಂಭೋಜಹಸ್ತ ದಿನಮಣಿವಂಶೋ ॥
ದ್ಧರಣ ಸುದಾರುಣ ದಶಕಂ ।
ಧರಹರ ನತಪಾರಿಜಾತ ಜಯಜಯ ಎಂದಂ ॥ ೫೦ ॥

ಅದ್ವಯಪದಾರ್ಥ ಕೃಪೆಯಿಂ ।
ಮದ್ವಚನಮನ್ನೈದೆ ಕೇಳ್ದು ದನುಜಾವಳಿಯಂ ॥
ವಿಧ್ವಂಸನಗೆಯ್ದಂ ವಿ ।
ಪ್ರಾಧ್ವರಮಂ ಕಾಯ್ದು ಪೊರೆದೆ ಸುರಸಂತತಿಯಂ ॥ ೫೧ ॥

ಇಂತೆನುತಿಂದ್ರಂ ನುತಿಸಲ್ ।
ಕಂತುಹರಂ ಗೌರಿವೆರಸು ಬಂದುಂ ಸೀತಾ ॥

ಕಾಂತನನತಿಮುದದಿಂದಂ |
ತಾಂ ತಳ್ಕಿಸಿ ನುತಿಸಿ ಪೇಳ್ದನಾ ಸಮಯದೊಳಂ || ೪೩೧ ||

ವಿಧಿಸುರಪಾದ್ಯರ ನುಡಿಯಂ |
ಪದುಳಂಗೆಯ್ದವನಿಯಲ್ಲಿ ನರರೂಪದೊಳಿಂ ||
ದುದಯಿಸಿ ದಶಕಂಧರನುಂ |
ಸದೆದುಂ ಪಾಲಿಸಿದೆ ಪರಮಪೂರುಷ ಜಗಮಂ || ೪೩೨ ||

ಭರತಂ ಕಾದಿರ್ಪ್ಪಂ ನಡೆ |
ಪುರಕಂ ಪಟ್ಟಾಭಿಷಿಕ್ತನಾಗಿ ತುರಂಗಾ ||
ಧ್ವರಮುಖಮುಖಗಳನಾಗಿಸಿ |
ಧರಣೀಸುತೆವೆರಸು ರಾಜ್ಯಮಂ ಪೊರೆಯೆಂದಂ || ೪೩೩ ||

ತವಪಿತದಶರಥನೃಪಪುಂ |
ಗವನೆಳ್ತಂದಿರ್ಪ್ಪನಾತನಂ ಸತ್ಕರಿಸೆಂ ||
ದವಿಲಂಬದೊಳಂಭೋರುಹ |
ಭವವೆರಸುಂ ಪೋದನಭವನಭ್ರಾಧ್ವದೊಳಂ || ೪೩೪ ||

ಮಿಸುಪ ವಿಮಾನದೊಳಂ ರಂ |
ಜಿಸುವಂಗಚ್ಚವಿಯ ಬೆಡಗಿನಿಂದಾ ಧರೆಗಂ ||
ದಶರಥನೆಳ್ತರೆ ಕಾಣುತ |
ಮೊಸೆದೆಳ್ದಿಂ ರಾಮನೆರಗಿದಂ ತತ್ಪದಕಂ || || ೪೩೫ ||

ರಾಮನನಾಲಿಂಗಿಸಿ ಸು |
ಪ್ರೇಮದೊಳಂ ಬಲದ ತೊಡೆಯನೇರಿಸಿ ಬಳಿಕಂ ||
ಭೂಮಿಜೆಯಂ ನೇವರಿಸುತೆ |
ಸೌಮಿತ್ರಿಯನೆಡದ ತೊಡೆಯನೇರಿಸಿದನವಂ || ೪೩೬ ||

ನೀನೆಸಗಿದ ಸುಕೃತಿಗಳಿಂ |
ಜಾನಕಿ ತಾಂ ಗೆಯ್ದ ಪುಣ್ಯಚಾರಿತ್ರ್ಯಗಳಿಂ ||
ದಾನಿಂತಿರ್ಪ್ಪೆಂ ದಿವದೊಳ್ |
ಭಾನುಕುಲೋದ್ಭವರ್ಗವಾಯ್ತು ಸದ್ಗತಿ ಮಗನೇ || ೪೩೭ ||

ಅನುದಿನಮಗಲದೆ ಲಕ್ಷ್ಮಣ |
ನನುವಿಂ ತವಚರಣಸೇವೆಯಲ್ಲಿದ್ದುದರಿಂ ||
ಮನಮತಿಹರ್ಷಂಗೊಂಡುದು |
ಮುನಿವೇಷಮನುಳಿದು ರಾಜ್ಯಮಂ ಪೊರೆ ಮಗನೇ || ೪೩೮ ||

ಭರತಾದಿಗಳುಂ ನಿನ್ನಯ |
ಬರವಂ ಪಾರ್ದಿರ್ಪ್ಪರಲ್ತೆ ನೀನುಂ ಪುರಕಂ ||
ಭರದಿಂ ಗಮಿಸುತೆ ಧರೆಯಂ |
ಪರಿಪಾಲಿಸ ಧರ್ಮದಿಂದೆ ರಾಘವದೇವಾ || ೬೦ ||

ನರರೂಪದ ಹರಿಯೆಂಬುದ |
ನರಿದೆಂ ಸುರಲೋಕದಲ್ಲಿಯೆನ್ನಯ ವಂಶಂ ||
ಪರಿಪೂತಮದಾಯ್ತೆಂದುಂ |
ಪರಮಾನಂದದಿನೆ ಮರಳ್ದನಾ ಪಂಕ್ತಿರಥಂ || ೬೧ ||

ದನುಜಹರ ತನ್ನಿನಪ್ಪುದ |
ನನುವಿಂ ತಾಂ ಮಾಳ್ಪೆನೆಂದು ಭಯಭಕ್ತಿಯೊಳಂ ||
ದನಿಮಿಷನಾಥಂ ಕೇಳಲ್ |
ವನಜಾಂಬಕನೆಂದನೈದೆ ಸದ್ವಿನಯದೊಳಂ || ೬೨ ||

ಅಳವಿಯೊಳಳಿದಾ ವಾನರ |
ಬಳಮಂ ನೀಂ ಕರುಣದಿಂದಮೆಳ್ಚಿಪುದಿವರುಂ ||
ಚಳಿಸುವ ನೆಲನಂ ಸತ್ಫಳ |
ಜಳಸಂಭೃತಮಪ್ಪ ತೆರದೆ ಗೆಯ್ವುದುಮೆಂದಂ || ೬೩ ||

ಇನಿದಿಟ್ಟಿಯೊಳಂ ಸುರಪಂ |
ವಿನಯದಿನೀಕ್ಷಿಸೆ ಸರಾಗದಿಂ ಮಲಗಿರ್ದ್ದರ್ ||
ಇನನುದಯದೊಳೇಳ್ವಂದದೊ |
ಳನುವಿಂದೆಳ್ದಂ ಧರೇಶನೆಡೆಗೆಳ್ತಂದರ್ || ೬೪ ||

ಇವರಿರ್ದೆಡೆಯೊಳ್ ಜಲಫಲ |
ನಿವಹಂ ಸಂಭರಿತಮಾಗಲೆಂದುಂ ವರಮಂ ||
ದಿವಿಜಾಧಿಪನಿತ್ತುಂ ರಾ |
ಘವನಂ ಬೀಳ್ಕೊಂಡು ಪೋದನಮರಾವತಿಗಂ || ೬೫ ||

ಸುರಮುನಿ ದಿಕ್ಪಾಲಾದ್ಯರ್ |
ಸರಿದರ್ ನುತಿಗೆಯ್ದು ರಘುಜನಂ ಭವನಕ್ಕಂ ||
ಹರಿಸದೆ ರಘುಜಂ ಸೀತಾ |
ತರುಣಿಯನೊಡಗೊಂಡು ಮೆರೆದನತಿವಿಭವದೊಳಂ || ೬೬ ||

ಆ ಸಮಯದೊಳಂ ದನುಜಾ |
ಧೀಶಂ ರಾಮಂಗೆ ಮಣಿದು ತಾನಿಂತೆಂದಂ ||

ಆಸೆಯೆನಗಿರ್ಪುದಯ್ ಕರು |
ಣಾಸಾಗರನನ್ನೊಳಿಂದು ಕೃಪೆಗೆಯೆವೇಳ್ಕುಂ || ೬೭ ||

ಕರುಣದೊಳೆನಗಿತ್ತ ಮಹಾ |
ಪುರಕಂ ನಡೆತಂದು ಮಂಗಳದ ಮಜ್ಜನಮಂ ||
ವಿರಚಿಸಿ ಸುಭೂಷಣಗಳಂ |
ಧರಿಸಲ್ವೇಳ್ಕೆಂದು ಪೇಳೆ ರಾಘವನೆಂದಂ || ೬೮ ||

ಭರತಂ ಮುನಿವೇಷದೊಳಂ |
ಪುರಬಾಹಿರನಿರ್ಪನಾತನಂ ಮನ್ನಿಸದಾಂ ||
ಧರಿಸೆಂ ಮಂಗಲಮಂ ವಾ |
ನರರಂ ಸತ್ಕರಿಸಲೆನಗೆ ಸಂತಸಮೆಂದಂ || ೬೯ ||

ಸಲೆ ತರಿಸುತೆ ಸುಫಲಾವಳಿ |
ಗಳನನುಪಮರತ್ನವಸ್ತ್ರಭೂಷಂಗಳನುಂ ||
ಕಲಿಸುಗ್ರೀವಾದ್ಯರ್ಗ್ಗಂ |
ನಲವಿಂ ತಾನಿತ್ತು ಮನ್ನಿಸಿದನಸುರೇಂದ್ರಂ || ೭೦ ||

ಭವದೀಯೋದ್ಧತಬಲದಿಂ |
ಸವಿಶೇಷಂ ಸೌಖ್ಯಮಾದುದೆನಗಂ ಪುರಕಂ ||
ಜವದಿಂ ಪೋಪುದೆನುತ್ತಂ |
ರವಿಜವಿಭೀಷಣರ್ಗೆ ಪೇಳ್ದನಾ ರಘುವೀರಂ || ೭೧ ||

ಆವೇಗಂ ತುಂಬಿರ್ಪುದು |
ದೇವರ ಪಟ್ಟಾಭಿಷೇಕಮಂ ನೋಳ್ಪೊಡಮೆಂ ||
ದಾ ವೀರವಿಭೀಷಣಸು |
ಗ್ರೀವರ್ ಬಿನ್ನವಿಸೆ ಕೇಳ್ದು ರಾಘವನೆಂದಂ || ೭೨ ||

ಮುಡಿಮಾಡಿದ ಪಗಲಂತ |
ಕ್ಕೊಡನಾಂ ಮೆಯ್ದೋರದಿರ್ದೊಡೊಡಲಂ ಭರತಂ ||
ಬಿಡುವಂ ನಿರ್ಮ್ಮೊಡಗೊಂಡುಂ |
ನುಡಿಗೆಡರಿನಿಸಡಸದಂತೆ ಮಾಡುವುದುಚಿತಂ || ೭೩ ||

ಅಂತಾಗಲೆಂದು ದಾನವ |
ಕಾಂತಂ ವಿತ್ತಪನ ಪುಷ್ಪಕಮನಣಿಗೆಯ್ಯಲ್ ||
ಸಂತಸದಳೆದಾ ಸೀತಾ |
ಕಾಂತಂ ಪೊವಡಿಯನಿಟ್ಟನಾಗಸಮಣಿ ವೊಲ್ || ೭೪ ||

ನಿಲದರ್ಯಮಸುತಲಕ್ಷ್ಮಣ |
ಕಲಿಹನುಮಾಂಗದವಿಭೀಷಣಾದಿಗಳೇರ್ದರ್ ||
ಬಲವಂದಾ ಪುಷ್ಪಕಮಂ |
ನಲಿನಾಯತನೇತ್ರೆ ಸೀತೆಯಿನನಂ ಸಾರ್ದರ್ಳ್ || ೭೫ ||

ವಾನರರುಂ ದಾನವರುಂ |
ಭೂನಾಥನ ನೇಮದಿಂದಮೇರ್ದೊಡವಾಗಳ್ ||
ಆನಂದದೊಳಾ ಧನದವಿ |
ಮಾನಂ ಗಗನಾಗ್ರದಲ್ಲಿ ಬರುತಿರ್ದುದಣಂ || ೭೬ ||

ದುಂದುಭಿಯಂ ಮೊಳಗಿಸಿ ಸುರ |
ವೃಂದಂ ಸುಮವೃಷ್ಟಿಗರೆದುದಾನಂದದೊಳಂ ||
ಚೆಂದದೊಳವನಿಜೆಗಂ ರಘು |
ನಂದನನಾ ದನುಜನಗರಮಂ ತೋರಿಸಿದಂ || ೭೭ ||

ಇದು ಲಂಕಾನಗರಂ ಮೇ |
ಣಿದು ಘಟಕರ್ಣೇಂದ್ರಜಿತ್ಪ್ರಮುಖದಾನವರಂ ||
ಸದೆದ ನೆಲಂ ಬಳಿಕಿದು ದಶ |
ವದನಂ ಮಡಿದವನಿ ಜನಕನಂದನೆ ನೋಡಾ || ೭೮ ||

ನಿರುಪಮಸೇತುವಿದಂ ತಾಂ |
ವಿರಚಿಸೆ ಪೂಜಿಸಿದ ಲಿಂಗಮಿದುಮೆಂದುಂ ಪು ||
ಷ್ಕರದಿಂದಂ ಪುಷ್ಪಕಮಂ |
ಧರಣೀತಳಕಿಳಿಪಿ ಸೀತೆವೆರಸೆಳ್ತಂದಂ || ೭೯ ||

ಅನುವಿಂ ತಲ್ಲಿಂಗಮನುಂ |
ವನಿತಾಮಣಿವೆರಸು ಪೂಜಿಸುತ್ತಿರಲಾಗಳ್ ||
ದನುಜೇಶಂ ಕಯ್ಮುಗಿದುಂ |
ವಿನಯದೊಳಿಂತೆಂದನಸುರಸಂಹಾರಕನೊಳ್ || ೮೦ ||

ನರರೀ ಸೇತುವಿನೊಳ್ಸಂ |
ಚರಿಸದ ವೊಲ್ ಗೆಯ್ಯೆವೇಳ್ಕುಮೆನೆ ರಘುರಾಮಂ ||
ಕರುಣದೊಳಂ ಬಿಲ್ಗೊಪ್ಪಿನೊ|
ಳರಿದುಂ ಮುಕ್ಕಡಿಯನೆಸಗಿ ಮೇಣಿಂತೆಂದಂ || ೮೧ ||

ಈ ಸೇತುವಿನೊಳಗಂಶ್ರ |
ದ್ಧಾಸಕ್ತಿಯೊಳಾವನಾದೊಡಂ ಸ್ನಾನಮನುಂ ||

ಓಸರಿಸದೆ ವಿರಚಿಸಿ ರಾ |
ಮೇಶನನರ್ಚಿಸಿದೊಡಕ್ಕುಮುರುಸದ್ಗತಿಯುಂ || ೮೨ ||

ಇಂತೆಂದು ವರಮನಿತ್ತುಂ |
ತಾಂ ತಳ್ವದೆ ಸೀತೆವೆರಸು ರಥಮನಡದ್ರ್ದಂ ||
ಸಂತಸದಿಂ ಶ್ರೀಮದ್ರಘು |
ಕಾಂತಂ ಗಗನಾಧ್ವದಲ್ಲಿ ನಡೆತಂದನಣಂ || ೮೩ ||

ಶರಣವಿಭೀಷಣನೆಮ್ಮಯ |
ಚರಣಗಳಂ ಕಂಡ ತಾಣಮಿದು ಕಿಷ್ಕಿಂಧಾ ||
ಗಿರಿಯಿದು ಸುಗ್ರೀವನ ಪುರ |
ವರಮೆನೆ ಕಯ್ಮುಗಿದು ಪೇಳ್ದಳಾ ಭೂಮಿಸುತೇ || ೮೪ ||

ವಾನರರಬಲೆಯರಂ ಮೇಣ್ |
ತಾನೀಕ್ಷಿಸವೇಳ್ಕುಮೆಂದೊಡಾ ರಘುಜಂ ತ ||
ನ್ಮಾನಿನಿಯರನತಿಭರದಿಂ |
ಭಾನುಜ ನೀನಿಲ್ಲಿಗೆಯ್ದೆ ಕರೆತರವೇಳ್ಕುಂ || ೮೫ ||

ಎಂಬಿನಮಿಳಿದುದು ಭಾಸ್ಕರ |
ಬಿಂಬದ ವೊಲ್ ಧನದಪುಷ್ಪಕಂ ಭೂತಳಕಂ ||
ಕುಂಬಿಟ್ಟುಂ ರಘುಪತಿಗಂ |
ತಾಂ ಬಂದಂ ರವಿಜನೈದೆ ನಿಜಮಂದಿರಕಂ || ೮೬ ||

ತಾರಾರುಮಾದಿ ವಾನರ |
ನಾರಿಯರೆಲ್ಲಂದರಿನನ ಸುತನೊಡನಾಗಳ್ ||
ಸಾರುತೆ ಪುಷ್ಪಕಮಂ ಪದ |
ಸಾರಸಕಭಿನಮಿಸಿ ನಿಂದರವನೀಸುತೆಯಾ || ೮೭ ||

ಅಂದಿರಿಸಿದ ಭೂಷೆಗಳಂ |
ತಂದಿಟ್ಟಂ ರವಿಜನೈದೆ ರಾಘವನಿದಿರೊಳ್ ||
ಅಂದದೊಳಾಂತುಂ ಧರಣೀ |
ನಂದನೆ ಮನ್ನಿಸಿದಳಂದು ತಾರಾದಿಗಳಂ || ೮೮ ||

ಪುರಕೆನ್ನೊಡನೀ ಸತಿಯರ್ |
ಬರುವೊಡೆ ನೇಮಿಸುಗುಮೆಂದು ಧರಣಿಜೆಯೆನೆ ಭೂ ||
ವರನಂತಾಗಲೆನುತ್ತಂ |
ತರಣಿಜಗಂ ಪೇಳೆ ನೇಮಗೆಯ್ದಂ ನಲವಿಂ || ೮೯ ||

ಅಂಬರಪಥದೊಳ್ ಬರೆವರೆ ।
ಕುಂಭಿನಿಯ ಕುಮಾರಿಗೈದೆ ತೋರ್ದಂ ರಾಮಂ ॥
ಅಂಬುಜಲೋಚನೆ ನೋಡಿದೊ ।
ಶಂಭುವಿರಾಜಿತವಿಲಾಸಪಂಪಾಕ್ಷೇತ್ರಂ ॥ ೯೦ ॥

ಪಕ್ಷೀಶಂ ನಿನಗೋಸುಗ ।
ಮೀ ಕ್ಷಿತಿಯೊಳ್ ತನುವನಿತ್ತನೆನಲಾ ನೆಲನಂ ॥
ಈಕ್ಷಿಸಿ ಧರಣೀಜಾತೆ ನಿ ।
ಜಾಕ್ಷಿಯಿನಶ್ರುವರ್ಷಮಂ ಕರೆದಳಣಂ ॥ ೯೧ ॥

ಖರಮುಖ್ಯಾಸುರರಂ ಸಂ ।
ಹರಿಸಿದುದೀ ತಾಣವೈದೆ ರಾಜಿಪ ಗೋದಾ ॥
ವರಿಯೆಂಬ ಮಹಾನದಿಯಿದು ।
ಸರಸದೊಳಾಮಿರ್ದ್ದ ಪರ್ಣಕುಟಿಯಿದು ನೋಡಾ ॥ ೯೨ ॥

ಇದು ಕುಂಭೋದ್ಭವನಾಶ್ರಮ ।
ಮಿದು ತತ್ಸೋದರನ ಶಾಲೆ ಶರಭಂಗಂ ಸ ॥
ತ್ವದವಿಯನೆಯ್ದಿದ ಧಾರಿಣಿ ।
ಯಿದುಮತ್ರಿಮುನೀಶಕುಟಜಮಿಾಕ್ಷಿಪುದಬಲೇ ॥ ೯೩ ॥

ಭರತಂ ಬಂದೆಮ್ಮಂ ಕಂ ।
ಡುರುತರಕಾರ್ಪಣ್ಯವಚನದಿಂ ಪಾದುಕೆಯಂ ॥
ಭರದಿಂ ಕಯ್ಕೊಂಡ ಮಹಾ ।
ಗಿರಿಯಿದು ನೋಡಬಲೆ ಚಿತ್ರಕೂಟಾಚಲಮಂ ॥ ೯೪ ॥

ಯಮುನಾಗಂಗಾತೀರದೊ ।
ಳಮಿತಮಹಾಪುಷ್ಪಸುಫಲಪೂಗಾನ್ವಿತಮಾ ॥
ಶ್ರಮಮುದು ಪಾವನಗಾತ್ರಂ ।
ಯಮಿಪಭರದ್ವಾಜನಿರ್ಪ್ಪ ತಾಣಂ ನೋಡಾ ॥ ೯೫ ॥

ಅದು ಗುಹನಿರ್ಪ್ಪ ಗೃಹಂ ಮೇ ।
ಣದರಾಚೆಯೊಳಮಿತದಿವ್ಯರತ್ನಪ್ರಭೆಯಿಂ ॥
ದುದಯದ ರವಿವೊಲ್ ಶೋಭಾ ।
ಸ್ಪದಮೆನಿಸುವ ನಗರಮದುವೆ ಸಾಕೇತಾಖ್ಯಂ ॥ ೯೬ ॥

ವಂದಿಸು ತತ್ಪುರಕೆನೆ ಭೂ ।
ನಂದನೆ ಕಯ್ಮುಗಿಯೆ ಕಾಣುತೆಲ್ಲರ್ ಮಣಿದರ್ ॥

ಬಂದುದು ಪುಷ್ಪಕಮಾ ಗುಣ |
ಸಿಂಧುಭರದ್ವಾಜನುಟಜದೆಡೆಗಂ ಭರದಿಂ ‖ ೯೭ ‖

ನಿಲದಿಳಿಸುತೆ ರಥಮಂ ರಘು |
ಕುಲಜಂ ಸೌಮಿತ್ರಿಸೀತೆವೆರಸುಂ ಮಿಗೆ ತ ‖
ನ್ನಿಲಯಮನೊಳವೊಕ್ಕಂ ಮುನಿ |
ತಿಲಕನ ಚರಣಕ್ಕೆ ಮಣಿದು ನಿಂದಂ ಸಲವಿಂ ‖ ೯೮ ‖

ಕಾಣಾತಿದಿರೆಳ್ವ ಭುವನ |
ತ್ರಾಣಾ ನೀಂ ಬಂದುದಿಂದು ಮದ್ಭಾಗ್ಯಮಲಾ ‖
ಕ್ಷೋಣಿಯೊಳವತರಿಸಿ ಮುನಿ |
ಶ್ರೇಣಿಯನುರೆ ಕಾಯ್ದ ಹರಿಯೆ ಶರಣಾಗೆಂದಂ ‖ ೯೯ ‖

ನೀನೇ ಶುದ್ಧಬ್ರಹ್ಮಂ |
ನೀನೇ ಸಚರಾಚರಾತ್ಮಕಂ ತ್ರಿಗುಣಯುತಂ ‖
ನೀನೇ ಮಾಯಾರಹಿತಂ |
ನೀನೇ ಪರದೈವಮೆಂದು ನುತಿಸಿದನಾಗಳ್ ‖ ೧೦೦ ‖

ರವಿಸುತನಂ ಕಂಡುಂ ಕಪಿ |
ನಿವಹಮನೊಡಗೊಂಡು ವಾರ್ಧಿಯಂ ಕಟ್ಟಿ ಮಹಾ ‖
ಹವದೊಳ್ ರಾವಣಮುಖದಾ |
ನವರಂ ಸಂಹರಿಸಿ ಬಂದುದಂ ತಾಂ ಬಲ್ಲೆಂ ‖ ೧೦೧ ‖

ಭೂಭಾರಮದಳಿದುದರಿಂ |
ಸೌಭಾಗ್ಯಂಬಡೆದುದ್ಧೈದೆ ದಿವಿಜಾನೀಕಂ ‖
ಶೋಭಾನ್ವಿತಮೆಂದೆನಿಸಿದು |
ದೀ ಭಾರತವರ್ಷಮೆಂದೊಡೆಂದಂ ರಾಮಂ ‖ ೧೦೨ ‖

ಮುನಿಪಾ ತವಕೃಪೆಯಿಂದಂ |
ದನುಜಾಳಿಯನ್ನೈದೆ ಕೊಂದು ಬಂದೆಂ ಭರದಿಂ ‖
ದನುಜರ್ ಪದುಳಿಗರೇ ಮ |
ಜ್ಜನನಿಯರುಂ ಸೌಖ್ಯದಿಂದಮಿರ್ಪ್ಪರೆ ಪೇಳಾ ‖ ೧೦೩ ‖

ಲೇಸಿಂದಿರ್ಪ್ಪರವರ್ ಮುನಿ |
ವೇಷದೊಳಂ ಭರತನಿರ್ಪ್ಪನೀ ದಿವಸಂ ನೀಂ ‖
ವಾಸಂಗೆಯ್ವುದೆಂದೆನು |
ತಾ ಶಮದಮುವರ್ಯನುಸಿರ್ದೊಡೆಂದಂ ರಾಮಂ ‖ ೧೦೪ ‖

ಪದಿನಾಲ್ಕು ವರ್ಷವಾದುದು ।
ಮಧುಮಾಸದ ಶುಕ್ಲಪಕ್ಷಪಂಚಮಿಗಿಂದುಂ ॥
ಸದಮಲ ನಾಮಿಂದುಂ ಪೋ ।
ಗದೊಡನಲನನ್ನೈದೆ ಪುಗುವನಾ ಭರತಾಂಕಂ ॥ ೧೦೫ ॥

ಎನಲನಿಲಜನಂ ಭರತನ ।
ಸನಿಹಕ್ಕೆ ಕಳಿಪೆಂದು ಮುನಿಪನುಸಿರಲ್ ರಾಮಂ ॥
ಅನುಜಗೆ ಪೋ ತಿಳಿಪೆಂದುಂ ।
ಹನುಮಂತನನ್ನೈದೆ ಕರೆದು ಬೀಳ್ಕೊಟ್ಟನವಂ ॥ ೧೦೬ ॥

ಮುನಿಪಂ ಸುರಭಿಯ ದೆಸೆಯಿಂ ।
ಜನಕಜೆಯಂ ರಾಘವೇಂದ್ರಸೌಮಿತ್ರಿಯರಂ ॥
ವನಚರರಂ ದಾನವರಂ ।
ವಿನಯದೊಳುಪಚರಿಸುತಿರ್ದ್ದನದನೇವೇಳ್ವೆಂ ॥ ೧೦೭ ॥

ನಾನಾಫಲಭಕ್ಷ್ಯಗಳಿಂ ।
ನಾನಾವಿಧಮನ್ನಸೂಪಶಾಕಾದಿಗಳಿಂ ॥
ನಾನಾವಸ್ತ್ರಾಭರಣವಿ ।
ತಾನದಿನಾ ಮುನಿಪನಂದು ಮನ್ನಿಸಿದನಣಂ ॥ ೧೦೮ ॥

ಮುನಿಪತಿಯಂ ಬೀಳ್ಕೊಂಡುಂ ।
ವನಜಾಕ್ಷಂ ಸೀತೆಲಕ್ಷ್ಮಣಾದ್ಯರ್ವೆರಸುಂ ॥
ಧನದನ ಪುಷ್ಪಕಮಂ ಸ ।
ದ್ವಿನಯದಿನೇರುತ್ತುಮಿರ್ದ್ದನಾನಂದದೊಳಂ ॥ ೧೦೯ ॥

ರಾಮನಕುಶಲಗಳಂ ಸು ।
ಪ್ರೇಮದೊಳಂ ಗುಹಗೆ ಪೇಳ್ದು ನಿರುಪಮನಂದಿ ॥
ಗ್ರಾಮಕ್ಕಂ ನಡೆತಂದಂ ।
ವ್ಯೋಮಾಧ್ವದೊಳನಿಲಪುತ್ರನತಿವೇಗದೊಳಂ ॥ ೧೧೦ ॥

ಬರಿಸಂ ಪದಿನಾಲ್ಕಾದುದು ।
ಬರಲಿಲ್ಲಂ ರಾಮನಿಲ್ಲಿಗೆಂದುಂ ಭರದಿಂ ॥
ಉರಿಯಂ ಪುಗುತಿರಲಿಳಿದುಂ ।
ಭರದಿಂ ತತ್ಕರಮನ್ನೈದೆ ಪಿಡಿದಂ ಹನುಮಂ ॥ ೧೧೧ ॥

ಬಂದಂ ಶ್ರೀರಾಮಂ ನೀ ।
ನಿಂದನಲನನೇಕೆ ಪುಗುವೆ ನುಡಿಯೆಂ ಪುಸಿಯಂ ॥

ಎಂದೆನೆ ಭರತಂ ಸಂತಸ ।
ದಿಂದಂ ನೀನಾರ್ಗೆ ರಾಮನೆಲ್ಲಿದನೆಂದಂ ॥ ೧೧೨ ॥

ಹನುಮಂತನೆಂಬ ನಾಮಂ ।
ತನಗಾಂ ಮಾರುತನ ಪುತ್ರನಿನಜನ ಸಚಿವಂ ॥
ಮನುಜೇಶನ ದೂತಂ ವರ ।
ಮುನಿಪಭರದ್ವಾಜನಲ್ಲಿ ರಾಘವನಿರ್ಪ್ಪಂ ॥ ೧೧೩ ॥

ಸೀತಾಲಕ್ಷ್ಮಣವಾನರ ।
ನಾಥಾದ್ಯರ್ ಕ್ಷೇಮದಿಂದೆ ನಡೆತಂದಿರ್ಪ್ಪರ್ ॥
ಪ್ರೀತಿಯೊಳಂ ಮುನಿಪುಂಗವ ।
ನಾತಿಥ್ಯಮನೆಸಗೆ ನಿಂದು ಕಳಿಪಿದನೆನ್ನಂ ॥ ೧೧೪ ॥

ಏನಯ್ ನೀನೆಂಬುದು ಮ ।
ನ್ಮಾನಸಕಂ ತೋರುತಿರ್ಪ್ಪುದುರುಸಂದೇಹಂ ॥
ವಾನರಪತಿಯೊಳ್ ನೇಹಂ ।
ಭಾನುಜಗೆಂತಾದುದೆಂದು ಕೇಳ್ದಂ ಭರತಂ ॥ ೧೧೫ ॥

ಕರಮೆಸೆವ ಚಿತ್ರಕೂಟದ ।
ಗಿರಿಯಿಂ ನೀಂ ಬಂದ ಬಳಿಯಮಾ ರಘುವೀರಂ ॥
ದುರುಳವಿರಾಧನನರೆದುಂ ।
ವರಮುನಿಶಾರ್ದೂಲಯತಿಯ ಕುಟಿಗಂ ಬಂದಂ ॥ ೧೧೬ ॥

ತನ್ಮುನಿಯಂ ಬೀಳ್ಕೊಂಡುಂ ।
ಚಿನ್ಮಯಶರಭಂಗಮುನಿಗೆ ಮುಕ್ತಿಯನಿತ್ತುಂ ॥
ಸನ್ಮುನಿಕುಲನಾಥನ ಘಟ ।
ಜನ್ಮನ ಪರಮಾಶ್ರಮಕ್ಕೆ ನಡೆತಂದರಣಂ ॥ ೧೧೭ ॥

ಆ ಮುನಿಯಪ್ಪಣೆವಡೆದುಂ ।
ಪ್ರೇಮದೊಳಂ ಪಂಚವಟಿಗೆ ನಡೆತಂದೆಲೆಯಿಂ ॥
ಧಾಮಂಗೆಯ್ದುಂ ಧರಣಿಜೆ ।
ಸೌಮಿತ್ರಿಯರೊಡನೆಯಧಿಕಸೌಖ್ಯದಿನಿರ್ದ್ದಂ ॥ ೧೧೮ ॥

ಅಸುರೆಯ ಮೂಗಂ ಕುಯ್ದುಂ ।
ತ್ರಿಶಿರಖರಾದಿಗಳನ್ನೈದೆ ಸದೆದಂ ರಾಮಂ ॥
ಮಿಸುನಿಯ ಮೃಗಮೆಳ್ತರೆ ಧರ ।
ಣಿಸುತೆಯ ನುಡಿಗೇಳ್ದು ಪಿಡಿಯಲೆಯ್ದಿದರಿರ್ವ್ವರ್ ॥ ೧೧೯ ॥

ಆ ಸಮಯದೊಳಂ ತಾಪಸ |
ವೇಷದೊಳಂ ಬಂದು ಪಂಕ್ತಿಕಂಧರನುಂ ಭೂ ||
ಮೀಸುತೆಯಂ ಕೊಂಡುಂ ವಾ |
ರಾಶಿಯ ಮಧ್ಯದೊಳಗೆಸೆವ ಲಂಕೆಯೊಳಿಟ್ಟಂ || ೧೨೦ ||

ಎನೆ ಕೇಳ್ದಂ ಭರತಂ ಕ |
ಣ್ಣನಿಗರೆದುಂ ಮುಗುಳೆ ಸೀತೆಯೆಂತೆಯ್ತಂದ ||
ಳ್ಗೆನಗದನುಸಿರೆಂದುಂ ಸ |
ದ್ವಿನಯದೊಳಂ ಕೇಳೆ ಪೇಳ್ದನಾ ಹನುಮಂತಂ || ೧೨೧ ||

ಬಳಿಕವರಿರ್ವರ್ ಬಂದುಂ |
ತಿಳಿದುಂ ಪಕ್ಷೀಶನಿಂದೆ ತದ್ವೃತ್ತಮನುಂ ||
ಗಳಿಲನೆ ಬಂದ ಕಬಂಧನ |
ನಿಳೆಗೊರಗಿಸಿ ಶಬರಿಗೊಲ್ದು ಮುಕ್ತಿಯನಿತ್ತರ್ || ೧೨೨ ||

ತರಣಿಜನಂ ಕಂಡುಂ ಸುರ |
ವರಸುತನಪ್ಪ ವಾಲಿಯಂ ಸದೆದುಂ ವಾ ||
ನರಪದವಿಯನೊಲ್ದಿತ್ತುಂ |
ಶರನಿಧಿಯಂ ಕಟ್ಟಿ ದೈತ್ಯರಂ ಮರ್ದಿಸಿದಂ || ೧೨೩ ||

ದಶಕಂಠಮುಖ್ಯದಾನವ |
ವಿಸರಮನುರೆ ವಧಿಸಿ ದೇವತತಿಯಂ ಕಾಯ್ದುಂ ||
ಒಸೆದು ವಿಭೀಷಣಗಂ ರಾ |
ಕ್ಷಸರಾಜ್ಯಮನಿತ್ತನೈದೆ ವಿಬುಧರ್ ಪೊಗಳಲ್ || ೧೨೪ ||

ಸೀತಾದೇವಿಯರಂ ಸಂ |
ಪ್ರೀತಿಯೊಳಂ ವರಿಸಿ ಭರದಿನಾ ಕಪಿದನುಜ ||
ವ್ರಾತಂ ಬರೆ ಸೋದರನೊಡ |
ನಾತಂ ಪುಷ್ಪಕವಿಮಾನದೊಳ್ ಬರುತಿರ್ಪಂ || ೧೨೫ ||

ಇಂತೆನೆ ಭರತನೃಪಂ ಕಡು |
ಸಂತಸದಿಂ ಪವನಜಾತನಂ ಮನ್ನಿಸಿ ಮಾ ||
ಕಾಂತನಲಾ ರಾಘವನೆಂ |
ದಂತಸ್ಸ್ಥದೊಳರಿದು ಪಾರ್ವರಂ ಕರೆಯಿಸಿದಂ || ೧೨೬ ||

ಧನಧೇನುತುರಗವಾರಣ |
ಕನಕಾವನಿವಸ್ತ್ರಕನ್ಯಕಾದಾನ ಮನಂ ||

ದನುವಿಂದಂ ಭೂಮಿಸುರ |
ಜನಕತತಿಮುದದಿಂದೆ ಕೊಟ್ಟು ಸತ್ಕರಿಸಿದನಯ್ || ೧೨೭ ||

ಪುರಮಂ ಸಿಂಗರಿಸುತೆ ರಘು |
ವರನಂ ನೋಡುವೊಡೆ ಸಚಿವಸೇನಾನಿಗಳಂ ||
ಬರಿಸಯ್ ವೇಗದೊಳೆಂದುಂ |
ಭರತಂ ಶತ್ರುಘ್ನನೊಡನೆ ಪೇಳ್ದಂ ಮುದದಿಂ || ೧೨೮ ||

ಆದುದು ಸಿಂಗರಮಾ ಪುಟ |
ಭೇದನದೊಳ್ ಶತ್ರುಹರನ ನೇಮದೊಳಂದುಂ ||
ಮೋದದಮಂಗಲವಾದ್ಯದ |
ನಾದಂ ತೀವಿದುದು ನೆರೆದುದಾ ನಗರಜನಂ || ೧೨೯ ||

ಅನಿತರೊಳಂಬರದೊಳ್ ಮಿನು |
ಮಿನುಗುತುಮೆಳ್ತಂದುದೈದೆ ರಜತಾಚಲಮೋ ||
ಎನೆ ಧನದವಿಮಾನಂ ಶ್ರೀ |
ಹನುಮಂ ಕಂಡಿದೆಕೊ ಬಂದನವನಿಪನೆಂದಂ || ೧೩೦ ||

ತೊಳಪ ವಿಮಾನದ ಮಧ್ಯದೊ |
ಳೊಲವಿಂದಂ ಮಿಂಚಿನೊಲ್ ವಿರಾಜಿಪ ಸೀತಾ ||
ಲಲನೆಯನೊಡಗೊಂಡೊಪ್ಪುವ |
ಜಲಧರನಿಭಕಾಯನಾತನೇ ರಘುವೀರಂ || ೧೩೧ ||

ಶರಚಾಪಸುಖಡ್ಗಗಳಂ |
ಧರಿಸುತೆ ನಿಂದಿರ್ಪನವನೆ ಲಕ್ಷ್ಮಣದೇವಂ ||
ಕರಮಂ ಮುಗಿದುಂ ಭಕ್ತಿಯೊ |
ಳಿರುವಾತನೆ ಸೂರ್ಯಪುತ್ರನವನಂ ನೋಡಾ || ೧೩೨ ||

ನಲವಿಂದಂ ರಾಮನ ಪದ |
ನಲಿನಮನೀಕ್ಷಿಸುತೆ ಕಾಲಮೇಘಾಕೃತಿಯೊಳ್ ||
ಬಲದೊಳಗಿರ್ಪನೆ ರಾಕ್ಷಸ |
ಕುಲತಿಲಕಂ ರಾವಣಾನುಜಾತಂ ನೋಡಾ || ೧೩೩ ||

ಅವನಂಗದನವನನಿಲಜ |
ನವನಜಸುತನವನೆ ವೃಷಭನವನೆ ಸುಷೇಣಂ ||
ಅವನಂಜನೆಯಧಿನಾಯಕ |
ನವನೇ ನಳನವನೆ ಮೈಂದನವನೇ ಋಕ್ಷ || ೧೩೪ ||

ಆತನೆ ಶರಭಂ ಶತಬಲಿ |
ಯಾತನೆ ದಧಿವಕ್ತ್ರಗಂಧಮಾದನರವರುಂ ||
ಆತನೆ ತಾರಂ ಗವಾಕ್ಷ |
ನಾತನೆ ಗಜಗವಯರವರನುಂ ನೀಂ ನೋಡಾ || ೧೩೫ ||

ಈತಂಗಳ್ ದೇವಾಂಶೀ |
ಭೂತರ್ಕಳ್ ರಾಮಕಾರ್ಯಕೋಸುಗಮಿಳೆಯೊಳ್ ||
ಜಾತರ್ ತಾಮೆನಿಸಿದರೆನೆ |
ಯೋತುಂ ಪ್ರೀತಿಯೊಳೆ ಭರತನೀಕ್ಷಿಸಿದನಣಂ || ೧೩೬ ||

ಕಂಗಳೊಳಮುರ್ಚ್ಚಿ ರಾಮನ |
ಮಂಗಳತರದಿವ್ಯಮೂರ್ತಿಯಂ ಸಲವಿಂದಂ ||
ರಿಂಗಣಗುಣಿದುಂ ಮಿಗೆ ಸಾ |
ಷ್ಟಾಂಗಪ್ರಣತಪ್ರಪದ್ಯನಾದಂ ಭರತಂ || ೧೩೭ ||

ಮುದದಿಂ ಕೌಸಲೆಕೇಕಯ |
ಸುದತಿಸುಮಿತ್ರಾದಿ ಮುಖ್ಯರಾಜಾಂಗನೆಯರ್ ||
ಪದೆಪಿಂದೆಳ್ತಂದರ್ ಸ |
ದ್ಬುಧತಿಲಕವಸಿಷ್ಠವಾಮದೇವರ್ ಬಂದರ್ || ೧೩೮ ||

ನಿರುಪಮತುರಗಸ್ಯಂದನ |
ಕರಿಘಟೆಗಳ್ ವರಪದಾತಿಸೈನ್ಯಂ ಸೇರಲ್ ||
ಪುರಜನಪರಿಜನಭೂಮಿಾ |
ಸುರಜನಮುರುತೋಷದಿಂದೆ ನಡೆತಂದುದಣಂ || ೧೩೯ ||

ಸಚಿವಸುಮಂತನ ಮತದಿಂ |
ರಚಿಸಿದರಿರ್ಕ್ಕೆಲದೆ ಮಾರ್ಗದೊಳ್ ಸುಮಕದಳೀ ||
ಖಚಿತಸುತೋರಣಗಳನುಂ |
ಖಚರಾಂಗಣಮೆಂಬೊಲಾದುದಾ ಭೂಮಿತಳಂ || ೧೪೦ ||

ನೆಲೆಯಿಂ ಭರತಂ ಪಾದುಕೆ |
ಗಳನಾಂತುಂ ಶಿರದೆ ಸೋದರರ್ಬೆರಸುಂ ಮೇಣ್ ||
ಕಲಿತಮಹಾವಾದ್ಯದ ಮಂ |
ಗಳರವದಿಂ ತ್ರಾಹಿಯೆಂದು ನಡೆತಂದನಣಂ || ೧೪೧ ||

ಭರತಾದ್ಯರ್ ನಡೆತಂದುದ |
ನರಿಪಲ್ಕೆಂದನಿಲಸೂನು ನೆಗೆದಂಬರಕಂ ||

ದರಮಂ ಬಿನ್ನವಿಸಲ್ ರಘು ।
ವರನಿಳಿಪಿದನಿಳೆಗೆ ರಾಜರಾಜನ ರಥಮಂ ॥ ೧೪೨ ॥

ಒಸವರ್ಸಾನಂದಾಶ್ರುಗಳಂ ।
ಬಿಸಜೋಪಮಪಾದಗಳ್ಗೆ ಸೇಚನಗೆಯ್ವುಂ ॥
ಕುಸುಮಾಕ್ಷತೆಗಳನೊಸೆದ ।
ರ್ಪಿಸಿ ವಂದನಗೆಯ್ದು ನುತಿಸಿದಂ ಭರತನೃಪಂ ॥ ೧೪೩ ॥

ತೆಗೆದಪ್ಪಿ ಮೆಯ್ದಡವಿ ಬಗೆ ।
ಬಗೆಯಿಂ ಮುದ್ದಿಡುತೆ ಮೂರ್ಧ್ನಿಯಂ ಘ್ರಾಣಿಸುತಂ ॥
ದೊಗುಮಿಗೆಯಾನಂದದೆ ದೃಗು ।
ಯುಗಳದೆ ಜಲಮುಡಿಯೆ ಸುಡಿದನಾ ರಘುರಾಮಂ ॥ ೧೪೪ ॥

ಎನ್ನಿಂದಾಯಸವಾದುದು ।
ನಿನ್ನೊಡಲ್ಗೆ ಪಿರಿದು ನೊಂದೆ ವಿಧಿಕೃತಮೆನುತಂ ॥
ಮನ್ನಿಸೆ ಶತ್ರುಘ್ನಂ ಸುರ ।
ಸನ್ನುತನಡಿಗಳ್ಗೆ ಮಣಿದನತಿಭಕ್ತಿಯೊಳಂ ॥ ೧೪೫ ॥

ಅವನಂ ತಳ್ಕಿಸಿ ಮುದ್ದಿಸಿ ।
ನವೆದೆಯಲಾ ಮೌನಿವೃತ್ತಿಯೊಳ್ ನೀನೆನುತಂ ॥
ದವಿರಳಮುದದಿಂ ಮನ್ನಿಸ ।
ಲವನಿಜೆಗಂ ಮಣಿದು ಮುಗುಳೆ ನಿಂದರ್ ನಲವಿಂ ॥ ೧೪೬ ॥

ನೀನೇ ಕೃತಪುಣ್ಯಂ ಜಗ ।
ತೀನಾಥನ ಪಾದಪದ್ಮಸೇವೆಯೊಳಂ ಸ ॥
ನ್ಮಾನಿತನಾದೆಯಲಾ ಎಂ ।
ದಾನಂದದೆ ಭರತನಪ್ಪಿದಂ ಲಕ್ಷ್ಮಣನಂ ॥ ೧೪೭ ॥

ಚರಣಕ್ಕೆರಗಿದನಾತನೊ ।
ಳುರುತರಸದ್ಭಕ್ತಿಯಿಂದೆ ಶತ್ರುಘ್ನಂ ವಾ ॥
ನರನಾಥವಿಭೀಷಣಮು ।
ಖ್ಯರನೊಲವಿಂ ಮನ್ನಿಸುತ್ತುಮಿರ್ದ್ದಂ ಭರತಂ ॥ ೧೪೮ ॥

ವಿಧಿಪುತ್ರವಾಮದೇವರ ।
ಪದದರ್ಶನವಾಗಲೆಳ್ದು ರಾಘವದೇವಂ ॥
ಸದಮಲಭಕ್ತಿಯಿನೆರಗಲ್ ।
ಮುದದಿಂ ಪರಸಿದರಯೋನಿಜಾರಾಘವರಂ ॥ ೧೪೯ ॥

ನಿಲದಾ ನಿಜಮಾತೆಯ ಪದ |
ನಲಿನಕ್ಕಂ ಭಕ್ತಿಯಿಂದೆ ವಂದಿಸಲುಂ ಕೌ ||
ಸಲೆ ನೆತ್ತಿಯನಾಘ್ರಾಣಿಸಿ |
ನಲವಿಂ ಮೆಯ್ದಡವಿ ಮುದ್ದಿಸಿದಳಾ ಮಗನಂ || ೧೫೦ ||

ಎನಗಂ ಸುತನೆನಿಸುತೆ ಮ |
ತ್ತಸುವಂ ಪೂತತೆಯನೆಯ್ದಿಸಿದೆ ನೀಂ ಸಾಕ್ಷಾ ||
ದ್ವಸಜಾಸನಜನಕನಲಾ |
ಎನುತಾನಂದಾಶ್ರುಪೂರಿತೇಕ್ಷಣೆಯಾದಳ್ || ೧೫೧ ||

ಮಗುಳೆರಗುತೆ ಕೈಕಯೆಗಂ |
ಮಿಗೆ ವಂದಿಸಿ ಮಗಧಪುತ್ರಿಗಭಿನಮಿಸುತೆ ಕ ||
ಯ್ಮುಗಿದಿತರಮಾತೃಗಳ್ಗಂ |
ಮಿಗೆ ಮಣಿಯುತ್ತುಂ ಸರಾಗದಿಂದಂ ನಿಂದಂ || ೧೫೨ ||

ಚರಣಕ್ಕೆರಗಲ್ ಲಕ್ಷ್ಮಣ |
ನುರುಮುದದಿಂ ಕುಶಲವಾರ್ತೆಯಂ ಕೇಳುತ್ತುಂ ||
ಪರಸುತ್ತುಂ ತನ್ಮಾತೆಯ |
ರುರುತರಸಂತೋಷಯುಕ್ತಮಾನಸರಾದರ್ || ೧೫೩ ||

ಚರಣಕ್ಕೆರಗಿದ ಸೀತಾ |
ತರುಣಿಯನಮರ್ದಪ್ಪಿ ನೇಹದಿಂ ಮುಡಿಯಂ ನೇ ||
ವರಿಸುತೆ ತರುಣಿಯರೊಳ್ ನೀ |
ನುರುಸಾಧ್ವಿಯೆನುತ್ತೆ ಪರಸಿದಳ್ ಕೌಸಲೆಯುಂ || ೧೫೪ ||

ಅತ್ತೆವಿರೆಲ್ಲರ್ಗಂ ಮುದ |
ವೆತ್ತುಂ ಭೂಜಾತೆ ವಂದಿಸಲ್ ಪರಕೆಗಳಂ ||
ಇತ್ತರ್ ಬಳಿಯಂ ಸುಪ್ಲವ |
ಗೋತ್ರಮನಾರಿಯರನ್ನೈದೆ ಮನ್ನಿಸಿದರಣಂ || ೧೫೫ ||

ಎಲ್ಲರನುಂ ಮನ್ನಿಸಿ ರಘು |
ವಲ್ಲಭನೇದ್ಧರ್ಭವಮಿತ್ರನುರುಪುಷ್ಪಕಮಂ ||
ಉಲ್ಲಾಸದೊಳೆಯ್ತಂದಂ |
ಬುಲ್ಲಯ್ಸಲ್ ಸಕಲರೈದೆ ಭರತಾಶ್ರಮಕಂ || ೧೫೬ ||

ಇಳೆಯೆಣುಗಿವೆರಸು ರಾಘವ |
ನೊಲವಿಂ ಪುಷ್ಪಕಮನಿಳಿದನೆಲ್ಲರ್ ಬಳಸಲ್ ||

ನಲವಿಂದಂ ಪಾದುಕೆಗಳ |
ನೆಳವಡಿಸಿದನ್ನೆದೆ ರಾಮನಂಘ್ರಿಗೆ ಭರತಂ || ೧೫೭ ||

ಮಣಿಪೀಠಮನೇರ್ದ್ದರ್ಗಂ ದಿನ |
ಮಣಿಕುಲಜಂ ರಾಮನೊಪ್ಪೆ ಕಾಣ್ಕೆಯನಿತ್ತುಂ ||
ಮಣಿದರ್ ಪುರಜನರುಂ ಮೇಣ್ |
ಮಣಿಯಾರತಿಯೆತ್ತಿ ತಳಿದರಂದಕ್ಷತೆಯಂ || ೧೫೮ ||

ಚರಣಾಜ್ಞೆಯೊಳಂ ಪ್ರಜೆಯಂ |
ಪರಿಪಾಲನಗೆಯ್ದೆನವನಿಸುರರಂ ಪೊರೆದೆಂ ||
ನೆರೆಪಿರ್ಪ್ಪೆಂ ಬಹುಧನಮಂ |
ದೊರೆತನಮಂ ವಹಿಸಿ ರಕ್ಷಿಸೆಂದಂ ಭರತಂ || ೧೫೯ ||

ರಾಜರ್ಷಿಯಲ್ಲಮೇಂ ನೀ |
ನೀ ಜಗತಿಯೊಳೆಂದು ಭರತನಂ ಪೊಗಳುತ್ತುಂ ||
ರಾಜೀವಾಕ್ಷಂ ಪ್ಲವಗಸ |
ಮಾಜಮನತಿಮೋದದಿಂದೆ ಮನ್ನಿಸಿದನಣಂ || ೧೬೦ ||

ಇನಜವಿಭೀಷಣಮಾರುತ |
ತನುಜಾಂಗದಮುಖ್ಯ ಕೀಶದನುಜರ್ಗ್ಗಂ ಸ ||
ದ್ವಿನಯದೆ ಮಂಗಲದಭ್ಯಂ |
ಜನಮಾಗಲ್ ತಾಳ್ದರಂಬರಾಭರಣಗಳಂ || ೧೬೧ ||

ನಿಲದಾದುದು ನಾಲ್ವರ್ಗ್ಗಂ |
ದೊಲವಿಂದೆ ಜಟಾವಿಸರ್ಜನಂ ನಿರುಪಮಮುಂ ||
ಗಲಸುಸ್ನಾನಂ ಧರಿಸಲ್ |
ನಲವಿಂ ವರವಸ್ತ್ರಭೂಷಣಂಗಳನಾಗಳ್ || ೧೬೨ ||

ಜನಕಸುತಾಮುಖ್ಯಮಹಾ |
ವನಿತೆಯರ್ಗಂ ಕೀಶಮಾನಿನಿಯರ್ಗಂ ಶುಭಮ ||
ಜ್ಜನಮಾದುದು ಸುವಸನಕಾಂ |
ಚನಮಣಿಭೂಷಣಗಳಿಂದೆ ಶೋಭಿಸಿದರಣಂ || ೧೬೩ ||

ವನಜಾಕ್ಷನ ನೇಮದೊಳಂ |
ವನಚರರುಂ ಮನುಜರೂಪನಾಂತರ್ಭರದಿಂ ||
ಅನಿಮಿಷರೆಳ್ತಂದರೊ ಮೇ |
ದಿನಿಗೆಂಬೊಲ್ ತೊಳಪ ಕಾಂತಿಯಿಂ ಕಣ್ಗೆಸೆದರ್ || ೧೬೪ ||

ಮುನ್ನಿನ ವೊಲ್ ಧನನಾಥನ |
ಸನ್ನಿಧಿಯಿಂದೊಪ್ಪುತಿರ್ಪುದೆನುತಂ ಜಗತೀ ||
ಸನ್ನುತನಾ ಪುಷ್ಪಕಮಂ |
ಮನ್ನಿಸಿ ಬೀಳ್ಕೊಟ್ಟನಮರನಿಚಯಂ ನಲಿಯಲ್ || ೧೬೫ ||

ಸಕಲರ್ಬೆರಸುಂ ರಘುನಾ |
ಯಕನತಿಸಂತೋಷದಿಂದೆ ರಾಜಿಸುತಿರ್ದ್ದಂ ||
ಸುಕರಂ ತಾನೆನುತಂ ಮುನಿ |
ನಿಕರಕ್ಕಂ ನಲ್ಮೆಯಿಂದೆ ಪೇಳ್ದಂ ಸೂತಂ || ೧೬೬ ||

# ಪಂಚದಶಾಶ್ವಾಸ.

ವೃತ್ತ ॥ ರಂಗದ್ರತ್ನಗಣಾಂಚಿತೋಜ್ವಲಕಿರೀಟಾಲಂಕೃತಂ ನಿರ್ಮಲೋ ।
ತ್ತುಂಗಸ್ವರ್ಣಮಯಪ್ರಭಾಕಲಿತಹರ್ಯಕ್ಷಾಸನಸ್ಥಂ ಮನೋ ॥
ಜ್ಞಾಂಗೋದ್ಭಾಸಜಿತಾರ್ಕಕೋಟಿವಿಲಸದ್ಭೂಷಾಸುತಾಶೋಭಿತೋ ।
ತ್ಸಂಗಂ ಮಾಳ್ಕೆಮಗಿಷ್ಟಮಂ ಕರುಣದಿಂ ಸೀತಾಧವಂ ರಾಘವಂ ॥ ೧ ॥

ಕಂದ ॥ ಅಲರ್ಗಣೆಯನ ಕಣೆಯುಂ ಗೆ ।
ಲ್ವೆಲರ್ಗುವರನೆ ಸೊನ್ನವೆಟ್ಟಮೆಯ್ಯನೆ ನಿನ್ನಂ ॥
ಸಲೆ ತುಳಿಲ್ಗೆಯ್ವಂ ಕುಡು ನೀಂ ।
ತಳಿರ್ಗೆಯ್ಯಿಂದೆನಗೆ ಬೇಳ್ಪುದೆಲ್ಲಮನನಿಶಂ ॥ ೨ ॥

ವರತಾಪಸರಿರ ಕೇಳ್ದುಂ ।
ಭರತಪ್ರಾರ್ಥನೆಯನೈದೆ ಕಯ್ಕೊಂಡುಂ ಸ ॥
ದ್ಗುರುಗಳ ಮತದಿಂ ರಘುಜಂ ।
ಪುರಕಂ ಬರೆ ಸಜ್ಜುಗೆಯ್ದು ಮಂತ್ರಿಯೊಳುಸಿರ್ದಂ ॥ ೩ ॥

ತರಿಸ ಮಹಾರಥಮಂ ಗಜ ।
ತುರಗಾವಳಿಶಕಟನಿಚಯಮಂ ವೇಗದೊಳಂ ॥
ಬರಿಸಯ್ ಸೂತರನೆಲ್ಲಂ ।
ಬರುವೆಂ ನಿಜನಗರಕೆಂದನಾ ರಘುವೀರಂ ॥ ೪ ॥

ರಾಮಾಜ್ಞೆಯೊಳಂ ನಗರದೆ ।
ನೇಮದೊಳಂ ತೋರಣಂಗಳಳವಟ್ಟುವು ಸ ॥
ದ್ಧಾಮಾವಳಿಗಳ್ ಸುರಭಿ ।
ಸ್ತೋಮಾನ್ವಿತಮಾದುವಂದು ಪೇಳ್ವೆನದೇನಂ ॥ ೫ ॥

ತಂದಂ ಸುಮಂತ್ರನತುಳ ।
ಸ್ಯಂದನಮಂ ಬಂದುದಮಿತವಾಹನನಿಚಯಂ ॥
ಸಂದಣಿಸಿತ್ತುರುವಾದ್ಯದ ।
ಗೊಂದಣಮಾ ಪುರದ ಗಣಿಕೆಯರ್ ನಡೆತಂದರ್ ॥ ೬ ॥

ಮುನಿಪವಸಿಷ್ಠನ ಮತದಿಂ ।
ವನಜಾಕ್ಷಂ ಸೀತೆವೆರಸು ಬಂದು ಮಹಾಸ್ವಂ ॥

ದನಮಂ ತಾನೇರ್ದ್ದಿರೆ ಸ |
ದ್ವಿನಯದೊಳಂ ಭರತನೆಸಗಿದಂ ಸೂತತೆಯಂ ॥ ೭ ॥
ಶ್ವೇತಾತಪತ್ರಮಂ ಸಂ |
ಪ್ರೀತಿಯೊಳಂ ಪಿಡಿದನೈದೆ ಶತ್ರುಘ್ನಂ ವಿ ॥
ಖ್ಯಾತಂ ಲಕ್ಷ್ಮಣನುಂ ಕಲ |
ಧೌತಾಂಚಿತತಾಳವೃಂತಮಂ ತಾಳ್ದಿಸೆದಂ ॥ ೮ ॥
ಇನಸುತಪವನಕುಮಾರಕ |
ರನುವಿಂ ರಾಮಾಜ್ಞೆಯಿಂದಮೆಸೆದರ್ ತೇರೊಳ್ ॥
ದನುಜಾಧಿಪನೇರ್ದ್ದಂ ಮಿಸು |
ಮಿಸುಗುವ ಭೂಷಣಂಗಳಿಂದಮೊಪ್ಪುವ ಗಜಮಂ ॥ ೯ ॥
ವಾನರಪತಿಗಳ್ ದನುಜರ್ |
ಭೂನಾಥನ ನೇಮದಿಂದೆ ಗಜತುರಗಮಹಾ ॥
ಯಾನಾರೋಹಿಗಳಾದರ್ |
ಮಾನಿನಿಯರ್ ಶಿಬಿಕೆಗೊಂಡು ನಡೆತಂದರಣಂ ॥ ೧೦ ॥
ಪದುಳದೆ ಪೊಗಳ್ದರ್ ವರಮಾ |
ಗಧವಂದಿಗಳರಸನೇಳ್ಗೆಯಂ ಸಂಭ್ರಮದೊ ॥
ಳ್ಮದದಿಂ ನರ್ತಕಿಯರ್ ಕ |
ಣ್ಗದಿರಂ ಸೂಸುತ್ತೆ ನಾಟ್ಯರಚನಂಗೆಯ್ವರ್ ॥ ೧೧ ॥
ಮುಂಗುಡಿಯೊಳ್ ಕಂಚುಕಿಗಳ |
ವಂಗಡಮುಂ ಜನದ ಸಬುದಮಂ ನಿಲಿಸುತ್ತಂ ॥
ಕಂಗೆಸೆದುದು ನಾನಾವಾ |
ದ್ಯಂಗಳ ರವಮೈದೆ ತೀವಿದುದು ದಿಕ್ತಟಮಂ ॥ ೧೨ ॥
ನಗರದ ಮಂಚುಳವೀಧಿಯೊ |
ಳೊಗುಮಿಗೆಯಾನಂದದಿಂದೆ ರಾಘವದೇವಂ ॥
ಖಗಕಾಂತಿಯೊಳೆಯ್ತರೆ ಸಾ |
ಧಗಳೊಳ್ ನೋಡುತ್ತುಮಿರ್ದ್ದುದಾ ಪೌರಜನಂ ॥ ೧೩ ॥
ಎರಡುಂ ಕಡೆಯೊಳ್ ಶೋಭಿಪ |
ಕರುಮಾಡದೆ ಜವ್ವನೆಯರ ಕಣ್ಬೆಳ್ಗದಿರುಂ ॥
ಕರಮೆಸೆದುದು ಸಂತಸದೊಳ್ |
ಸುರರುಂ ಚೆಲ್ಲಿದರೊ ಮೊಲ್ಲೆಯಲರ್ಗಳನೆಂಬೊಲ್ ॥ ೧೪ ॥

ಸೀತೆಯದೇಂ ಸಾಧ್ವಿಯೊ ರಘು ।
ನಾಥಂ ರಾಕ್ಷಸರನ್ನೈದೆ ಸಂಹರಿಸುತೆ ಸಂ ॥
ಪ್ರೀತಿಯೊಳಿರ್ಪ್ಪನೆನು ।
ತ್ತಾ ತರುಣಿಯರಾಡುತಿರ್ದ್ದರತಿಮೋದದೊಳಂ ॥ ೧೫ ॥

ಮುನಿವೇಷಮನಾಂತುಂ ಪಾ ।
ಲನಗೆಯ್ವಂ ಸಕಲಮುನಿಗಳಂ ಬರ್ಪ್ಪನೆನು ॥
ತ್ತ್ರಸುಎಂ ಮಂತ್ರಾಕ್ಷತೆಯಂ ।
ವನಜಾಕ್ಷನ ಮೇಲ್ಗೆ ಸೂಸುತಿರ್ದ್ದರ್ ವಿಪ್ರರ್ ॥ ೧೬ ॥

ಶರನಿಧಿಯಂ ಬಂಧಿಸಿ ದಶ ।
ಶಿರನಂ ಸಂಹರಿಸಿ ಬಂದನೀತಂಗೆಣೆಯಂ ॥
ನರವರರೊಳ್ ಕಾಣೆವೆನು ।
ತ್ತೊರೆದುಂ ನುತಿಗೆಯ್ವುದೈದೆ ಭೂಭುಜನಿಕರಂ ॥ ೧೭ ॥

ಪರಿಪರಿಯ ಸುರತ್ನಗಳಂ ।
ಪರಿಮಳಿಸುವ ಮಲಯಜಾತಕರ್ಪೂರಗಳಂ ॥
ಪರಿತೋಷದಿನಿರ್ಕ್ಕೆಲದೊಳ್ ।
ಪರಿತಂದರ್ಪಿಸುತುಮಿರ್ದ್ದುದಾ ವೈಶ್ಯಕುಲಂ ॥ ೧೮ ॥

ವಂದನಗೆಯ್ವುತ್ತಂ ಸಲ ।
ಎಂದುಂ ಪದಜಾತರೈದೆ ನುತಿಸುತ್ತಿರ್ದ್ದರ್ ॥
ಪೊಂದಳಿಗೆಯೊಳಾರತಿಯಂ ।
ತಂದುಂ ಸುಳಿಯುತ್ತುಮಿರ್ದ್ದರಬಲಾಜನಗಳ್ ॥ ೧೯ ॥

ಕುಶಿಕಸುತಾಧ್ವರಪಾಲಕ ।
ಶಶಿಧರವರಚಾಪಭಂಗ ಭಾರ್ಗವಗರ್ವ ॥
ಪ್ರಸರವಿದಾರಾ ರಾಘವ ।
ವಸುಧೇಶ್ವರ ಜಯವೆನುತ್ತೆ ಪೊಗಳ್ದರ್ ಸೂತರ್ ॥ ೨೦ ॥

ಗುರುವಚನೋದ್ಧಾರಕ ಮುನಿ ।
ವರಪಾಲಕ ದೈತ್ಯಭಂಗ ದಳಿತವಿರಾಧಾ ॥
ಖರಸಂಹಾರಾ ಪಕ್ಷೀ ।
ಶ್ವರಮೋಕ್ಷದ ಜಿತಕದಂಬ ಜಯಜಯವೆಂದರ್ ॥ ೨೧ ॥

ಸುರಪಕುಮಾರಕಮರ್ದನ ।
ಖರಕರಸುತಪೋಷ ವಿನತದೈತ್ಯಾನುಜ ಸಾ ॥

ಗರಬಂಧಕ ಖಳದಶಕಂ |
ಧರಸಂಹಾರಾ ಪರಾಕು ಜಯಜಯವೆಂದರ್ || ೨೨ ||

ಅಜಭವಶಕ್ರಾದ್ಯಮರ |
ವ್ರಜವಿನುತ ವಿಭೀಷಣೋದ್ಧರಣಚಣ ಜನಕಾ ||
ತ್ಮಜೆಯಧಿನಾಯಕ ನತಭೂ |
ಭುಜನೆ ಪರಾಕೆಂದು ಪೊಗಳ್ದರಾ ಮಾಗಧರುಂ || ೨೩ ||

ಕನಕಮಯಮಂದಿರಗಳೊಳ್ |
ಕನದನುಪಮರತ್ನಖಚಿತಸೌಧಾವಳಿಯೊಳ್ ||
ಜನಿತಮಹಾನಂದಾನ್ವಿತ |
ಜನಮಂ ನೋಡುತ್ತೆ ರಾಮನೆಳ್ತರುತಿರ್ದಂ || ೨೪ ||

ದನುಜಹರಂ ತಾಂ ಬಂದಂ |
ದಿನಕರಸದ್ವಂಶದಿವ್ಯರತ್ನಂ ಬಂದಂ ||
ಮುನಿಜನನಮಿತಂ ಬಂದಂ |
ಮನುಜೇಶಂ ಬಂದನೈದೆ ನಿಜಮಂದಿರಕಂ || ೨೫ ||

ಲಲನೆಯರುಂ ಸಂಭ್ರಮದೊಳ್ |
ಸುಳಿಸಿದರುಜ್ವಲಿಪ ರತ್ನದಾರತಿಗಳನುಂ ||
ನೆಲಕಿಳಿದರ್ ವಾಹನದಿಂ |
ಕಲಿಸುಗ್ರೀವಾದಿ ಸಕಲರತಿಮೋದದೊಳಂ || ೨೬ ||

ಧರಣೀಸುತೆವೆರಸುಂ ರಘು |
ವರನಿಳಿದುಂ ದಿವ್ಯರಥದಿನತಿಮುದದಿಂ ಮಂ ||
ದಿರಮಂ ಪೊಕ್ಕಂ ಪರವಿ |
ಷ್ಟರದೊಳ್ ಮಂಡಿಸಿದನಾ ಸಭಾಸ್ಥಾನದೊಳಂ || ೨೭ ||

ತರಣಿಕುಮಾರಕದನುಜೇ |
ಶ್ವರಮುಖ್ಯರ್ ನಮಿಸಿ ಭರದೊಳಂ ಬೀಡಿಕೆಗಂ ||
ಭರತನ ಮತದಿಂ ಬಂದರ್ |
ಹರಿಸದಿನೊಳವೊಕ್ಕನೈದೆ ರಾಘವದೇವಂ || ೨೮ ||

ತಾಯಂ ವಂದಿಸಿ ರಘುಜಂ |
ವಾಯುಜನಂ ಕರೆದು ಮನ್ನಿಸುತ್ತುಂ ಮುದದಿಂ ||
ಸಾಯಾಹ್ನಿಕಮಂ ಸಮೆದುಂ |
ಸ್ತ್ರೀಯುತನಾಗಿರ್ದನಧಿಕಮೋದದೊಳಂದುಂ || ೨೯ ||

ಮರುದೆವಸಂ ಗುರುಮುಖದಿಂ ।
ಭರತಂ ಪಟ್ಟಾಭಿಷೇಚನದ್ರವ್ಯಗಳಂ ॥
ಪರಿವಡಿಸುತೆ ನಾನಾಭೂ ।
ವರರಂ ಮುನಿಜನಮನ್ಸೈದೆ ಬರಿಸಿದನಾಗಳ್ ॥ ೩೦ ॥

ವಸನಿಧಿನಾಲ್ಕರ ಜಲಮಂ ।
ಹನುಮಾಂಗದಋಕ್ಷಪತಿಸುಷೇಣರ್ ಭರದಿಂ ॥
ದಿನಸುತನಾಜ್ಞೆಯೊಳಂ ಘನ ।
ಕನಕಸುಕಲಶಂಗಳಲ್ಲಿ ತಂದೊಪ್ಪಿಸಿದರ್ ॥ ೩೧ ॥

ಹರಿನೀಲಖಚಿತಕುಟ್ಟಿಮ ।
ದುರುರತ್ನಸ್ತಂಭದಮಲಪವಿಭಿತ್ತಿಯ ಬಂ ॥
ಧುರಮರಕತತೋರಣದ ಸು ।
ಕರಕನಕಾಗಾರಮೆಸೆದುದಾ ಮಂಡಪಮುಂ ॥ ೩೨ ॥

ಉರುಮಂಡಪಮಧ್ಯಸ್ಸ್ಥಿತ ।
ಸುರುಚಿರವರಪದ್ಮರಾಗರಾಗಾನ್ವಿತಭಾ ॥
ಸ್ಕರರುಚಿಸನ್ನಿಭನಿರುಪಮ ।
ಹರಿಪೀಠಂ ಶೋಭಿಸಿತ್ತು ಪೇಳ್ವೆನದೇನಂ ॥ ೩೩ ॥

ಬುಧರಿರ ಕೇಳ್ಗಂ ಮಧುಮಾ ।
ಸದ ಸಿತಪಕ್ಷದ ಸುಪುಷ್ಯನಕ್ಷತ್ರದೊಳಂ ॥
ವಿಧಿಸುತನನುಮತಿಯಿಂದಾ ।
ದುದು ವರಪಟ್ಟಾಭಿಷೇಚನಕೆ ಶುಭಲಗ್ನಂ ॥ ೩೪ ॥

ಆ ದಿನದೊಳ್ ನಡೆತಂದರ್ ।
ಭೂದಿವಿಜರ್ ವಾಮದೇವವಾಲ್ಮೀಕಿಮಹಾ ॥
ಗಾಧಿಸುತಾಗಸ್ತ್ಯಾಹ ।
ಲ್ಯಾಧವಜಾಬಾಲಿಕಾಶ್ಯಪಾತ್ರಿಮುನೀಶರ್ ॥ ೩೫ ॥

ವಿನುತಭರದ್ವಾಜಾಂಗಿರ ।
ಮುನಿಗಳ್ ಜಮದಗ್ನಿಕಣ್ವಮಾರ್ಕಂಡೇಯಾ ॥
ದ್ಯನಘಮಹಾತಾಪಸರುಂ ।
ವಿನಯದೊಳೆಯ್ತಂದರೈದೆ ರಾಜಾಲಯಕಂ ॥ ೩೬ ॥

ಜನಕಯುಧಾಜಿತ್ಕೇಕಯ ।
ಜನಪತಿಮಗಧಾವನೀಶಮುಖಬಾಹುಜಮೇ ॥

ದಿನಿಯಧಿನಾಥರ್ ಬಂದರ್ |
ವನಿತೆಯರಂ ಕೂಡಿ ಸೇಸೆವೆರಸಾ ಪುರಕಂ ॥ ೩೭ ॥

ಹರಕಮಲಜಶಕ್ರಾನಲ |
ತರಣಿಜನಕ್ತಂಚರೇಶವರುಣಾನಿಲಕಿ ॥
ನ್ನರನಾಯಕ ಗಂಧರ್ವಾ |
ಪ್ಸರರೆಯ್ತಂದರ್ ಸಬಂಧುವಾಹನರಾಗಳ್ ॥ ೩೮ ॥

ಸನಕ ಸನಂದನನಾರದ |
ಘನತುಂಬುರುಸೂರ್ಯಚಂದ್ರತಾರಾನೀಕಂ ॥
ಮುನಿವಸುಗಳ್ ಗರುಡೋರಗ |
ರನುವಿಂದೆಯ್ತಂದರಂದು ರಾಘವನೆಡೆಗಂ ॥ ೩೯ ॥

ಪ್ಲವಗೇಶ್ವರದನುಜಾಧಿಪ |
ರವಿರಳಸಂತೋಷದಿಂದೆ ಬಂದರ್ ಭರತಂ ॥
ಅವರವರನಿದಿರ್ಗೊಂಡುಂ |
ನವನವಪೀಠಗಳನಿತ್ತು ಮನ್ನಣೆಗೆಯ್ದಂ ॥ ೪೦ ॥

ವನರುಹಲೋಚನೆಯರ್ ಮ |
ಜ್ಜನವಂ ಮಾಡಿಸಿದರವನಿಜಾರಾಮರ್ಗಂ ॥
ದನುಪಮವಸ್ತ್ರಾಭರಣಮ |
ನನುವಿಂ ತುಡಿಸುತೆ ಲಲಾಮಮಂ ಪಣೆಗಿಟ್ಟರ್ ॥ ೪೧ ॥

ಮನುನೃಪನಿಂ ಕ್ರಮದಿಂ ಬಂ |
ದನುಪಮಮಣಿಖಚಿತಮುಕುಟಮಂ ಧರಿಸಲ್ಕಂ ॥
ವನಜಾಕ್ಷಂ ತನ್ಮುಕುಟಂ |
ದಿನಕರಸುಪ್ರಭೆಯನೇಳಿಪೊಲ್ ಕಣ್ಗೆಸೆಗುಂ ॥ ೪೨ ॥

ಮಂಗಳವಾದ್ಯಶ್ರುತಿ ಮಂ |
ತ್ರಂಗಳ ಸದ್ಘೋಷಮಬಲೆಯರ ಸುಸ್ವರಮುಂ ॥
ಸಂಗೀತದ ನಾದಂ ಗಗ |
ನಾಂಗಣದಿಕ್ತಟಮನೈದೆ ತೀವಿದುದಾಗಳ್ ॥ ೪೩ ॥

ಹನುಮಂ ಕಯ್ಗುಡೆ ರಘುಜಂ |
ವಿನಯದಿನೆಳ್ತಂದು ಸಿಂಹಪೀಠಮನೇರ್ದಂ ॥
ಬಿನದದಿನೇರ್ದಳ್ ಸೀತಾ |
ವನಿತೆಯುಮೆಡದೊಡೆಯನೈದೆ ಸೀತಾಪತಿಯಾ ॥ ೪೪ ॥

ಲಲಿತಕಿರೀಟಾಂಗದಕುಂ |
ಡಲಮುಖ್ಯಾಭರಣಭೂಷಿತಾಂಗಂ ಸೀತಾ ||
ಲಲನಾನ್ವಿತವಾಮಾಂಕಂ |
ಜಲಜಾಕ್ಷಂ ರಾಮನೊಪ್ಪಿದಂ ವಿಷ್ಟರದೊಳ್ || ೪೫ ||

ವಿಧಿಸುತಮುಖ್ಯರ್ ಜಾಂಬೂ |
ನದಕಲಶಗಳೊಳ್ ಚತುಸ್ಸಮುದ್ರಾಂಬುವನುಂ ||
ನದಿಗಳಜಲಮುಂ ತುಂಬಿಸಿ |
ಮುದದಿಂದರ್ಚಿಸಿದರ್ಕೈದೆ ತತ್ಕುಂಭಗಳಂ || ೪೬ ||

ಶ್ರುತಿಮಂತ್ರಗಳಿಂ ಕನ್ಯಾ |
ತತಿವೆರಸುಂ ವಿಮಲಕುಶಗಳಿಂ ಪ್ರೋಕ್ಷಿಸುತುಂ ||
ಪ್ರತಿಧಿಕ್ಷಿತಿಸುರರುಂ ರಘು |
ಪತಿಗಂ ಪಟ್ಟಾಭಿಷೇಕಮಂ ವಿರಚಿಸಿದರ್ || ೪೭ ||

ಮಿಸುನಿಯ ಕಾಂಚನದಂಡದ |
ಶಶಿಬಿಂಬಮನ್ನೆದೆ ಪಳಿವ ಬೆಳ್ಗೊಡೆಗಳನುಂ ||
ಬಿಸಜಾಕ್ಷನ ಮುಕುಟದ ಮೇ |
ಲ್ಗೆಸೆವೊಲ್ ಸಲೆ ಪಿಡಿದು ನಿಂದನಾ ಶತ್ರುಘ್ನಂ || ೪೮ ||

ಚಾರುತರಚಾಮರಗಳಂ |
ಸೂರಾತ್ಮಜದನುಜನಾಥರಿರ್ವರ್ ಪಿಡಿದರ್ ||
ಮಾರುತಿಯನುಪಮಕಾಂಚನ |
ಹಾರಮನಪ್ಪಿಸಿದನಬ್ಜಪತ್ರಾಂಬಕಗಂ || ೪೯ ||

ನವಮಣಿಮಯಮಾಲಿಕೆಯಂ |
ದಿವಿಜೇಶಂ ರಾಘವಂಗೆ ತಾನೊಪ್ಪಿಸಿದಂ ||
ಭವವಿಧಿದಿಕ್ಪತಿಮುಖಸುರ |
ನಿವಹಂ ನುತಿಸುತ್ತುಮಿರ್ದುದದನೇವೇಳ್ವೆಂ || ೫೦ ||

ದುಂದುಭಿ ಮೊಳಗಿದುದಮರರ |
ವೃಂದಂ ಕರೆದತ್ತು ಪುಷ್ಪವೃಷ್ಟಿಯನಾಗಳ್ ||
ಗಂಧರ್ವರ್ ಪಾಡಿದರಾ |
ನಂದದೆ ನರ್ತಿಸಿದರಮರವಾರಾಂಗನೆಯರ್ || ೫೧ ||

ಸುಲಲಿತರತ್ನಾಭರಣಂ |
ಗಳನಿತ್ತರ್ ದಿಗಧಿನಾಥರವನೀಶರ್ ಮುಂ ||

ಜುಳವಾಲಾಪಲಯಂಗಳ |
ನೊಲವಿಂದಂ ಕಾಣ್ಕೆಗೊಟ್ಟು ನಮಿಸಿದರಾಗಳ್ || ೫೨ ||

ಗಿರಿಜಾರುಂಧತಿಭಾರತಿ |
ಸುರಪತಿಸತಿಮುಖ್ಯನಾರಿಯರ್ ಪಾಡುತ್ತುಂ ||
ವರಮಂಗಲದಾರತಿಯಂ |
ಧರಣೀಸುತೆರಾಘವರ್ಗೆ ಬೆಳಗಿದರಾಗಳ್ || ೫೩ ||

ಸಂದಣಿಸುತಮರಮುನುಜರ |
ವೃಂದಂ ರಾಘವನ ದರ್ಶನಾಪೇಕ್ಷೆಯೊಳಂ ||
ಬಂದರ್ ಭೂಷಣಮಣಿರುಚಿ |
ಯಿಂದಂ ಶೋಭಿಸಿತು ರಘುಜರಾಜಾಸ್ಥಾನಂ || ೫೪ ||

ಆ ಸಮಯದೊಳಂ ಗಿರಿಜಾ |
ಧೀಶಂ ತಾನೆಳ್ದು ಭಕ್ತಿಯಿಂ ನುತಿಗೆಯ್ವಂ ||
ಕೇಶವಶಂಕರತಾಮರ |
ಸಾಸನರೂಪಕನೆ ಜಯತು ವಿಶ್ವಾತ್ಮಕನೇ || ೫೫ ||

ಮಾಯಾತೀತ ಪರೇಶ ರ |
ಮಾಯುವತೀನಾಥ ನಳಿನಸಂಭವಜನಕಾ ||
ಮ್ನಾಯಸ್ತುತಿಗೋಚರ ಪ |
ದ್ಮಾಯತಲೋಚನ ಮಹೇಶ ಜಯಜಯ ಎಂದಂ || ೫೬ ||

ಮೀನಾದ್ಯವತಾರಗಳಿಂ |
ದಾನವರಂ ವಧಿಸಿ ಲೋಕಮಂ ಕೃಪೆಯಿಂ ಸ ||
ನ್ಮಾನಿಸಿ ಸಲಹಿದೆ ಮುನಿಜನ |
ಮಾನಸಸತ್ಪದ್ಮಸದ್ಮ ಜಯಜಯ ಎಂದಂ || ೫೭ ||

ತ್ರಿಗುಣಾತ್ಮಕ ಗುಣವಿರಹಿತ |
ಜಗದಂತಸ್ಸ್ಥಿತ ನಿರಂತರಾಯುಪ್ರದ ಸಂ ||
ಯುಗಜಿತರಾವಣ ಜಯ ಎಂ |
ದಗಜಾಪತಿ ನುತಿಸಲೈದೆ ವಿಧಿ ತುಳಿಲ್ಗೆಯ್ವಂ || ೫೮ ||

ನತಸುರರತ್ನಕಿರೀಟ |
ಪ್ರತತಿವಿರಾಜಿತಸುಪಾದಸರಸಿಜ ಕರುಣಾ ||
ಮೃತಸಾಗರ ಸೀತಾವರ |
ನತಜನಮಂದಾರರೂಪ ಜಯಜಯ ಎಂದಂ || ೫೯ ||

ಮುಂಗಾಣದೆ ತಾನಸುರರ |
ವಂಗಡಕಂ ವರವನಿತ್ತೆನದರಿಂ ಕರುಣಾ ||
ಪಾಂಗನೆ ಮುನಿಯದೆ ಖಳರಂ |
ಭಂಗಿಸಿ ರಕ್ಷಿಸಿದೆ ಜಗಮನೆಂದಂ ಬೊಮ್ಮಂ || ೬೦ ||

ಭೂಮಿಬುಧರ್ ಗೆಯ್ದಪ ಹ |
ವ್ಯಾವಳಿಗೆ ನಿರಂತರಾಯಮಾದುದು ಸತತಂ ||
ದೇವರ್ಕಳ್ಗಾಯ್ತು ಸುಖಂ |
ಭಾವಿತಜನರಕ್ಷ ಜಯತು ಎಂದಂ ಸುರಪಂ || ೬೧ ||

ವಿಲಸಿತಗಯೆಯೊಳ್ ನೀಡುವ |
ತಿಲಪಿಂಡಗಳಂ ಸರಾಗದಿಂ ರಾಕ್ಷಸರುಂ ||
ಸೆಳೆದುಯ್ವುದನುಂ ನಿಲಿಸಿದೆ |
ಸಲಹಿದೆ ನೀನೆಂದುದ್ಯೈದೆ ಪಿತೃಗಣಮಾಗಳ್ || ೬೨ ||

ತನ್ನಂ ಪಾಡುಗುಮೆಂದುಂ |
ಬನ್ನಂ ಬಡಿಸುತ್ತುಮಿರ್ದ್ದ ಖಳನಂ ಕೊಂದುಂ ||
ಚೆನ್ನೆಸಗಿದೆ ತಮಗೆನುತಂ |
ಸನ್ನುತಿಸುತೆ ಮಣಿದು ಪಾಡಿದರ್ ಗಂಧರ್ವರ್ || ೬೩ ||

ಶ್ರೀಕಾಮಿನಿಯರಸಾ ಕರು |
ಣಾಕರ ಕಮನೀಯಕಾಯ ಜಯಜಯ ಎಂದುಂ ||
ಲೋಕಾಧಿಪಮುಖದಿವಿಜಾ |
ನೀಕಂ ತುಳಿಲ್ಗೆಯ್ದು ನುತಿಸಿದುದು ಭಕ್ತಿಯೊಳಂ || ೬೪ ||

ಇಂತುಂ ನುತಿಸುವ ಗೌರೀ |
ಕಾಂತವಿಧಾತ್ರೇಂದ್ರಮುಖ್ಯರಂ ಶ್ರೀರಾಮಂ ||
ಸಂತಯ್ಸುತೆ ಬೀಳ್ಕುಡೆ ಕಡು |
ಸಂತಸದಿಂ ನಿಜನಿವಾಸಮಂ ಸಲೆ ಸಾರ್ದ್ದರ್ || ೬೫ ||

ಉತ್ತಮತುರಂಗಲಕ್ಷಮ |
ನುತ್ತಮಗೋಲಕ್ಷವೃಷಭಶತಗಳನುಂ ಮೂ ||
ವತ್ತುಂ ಕೋಟಿ ಸುವರ್ಣಮ |
ನಿತ್ತಂ ವಿಪ್ರೋತ್ತಮರ್ಗ್ಗೆ ರಾಘವದೇವಂ || ೬೬ ||

ವರವಸ್ತ್ರಾಭರಣಗಳಿಂ |
ಧರಣೀಸುರರಂ ಸಮಂತು ಸತ್ಕರಿಸುತೆ ಭಾ ||

ಸ್ಫರನಿಭಮಣಿಮಾಲಿಕೆಯಂ |
ತರಣೀಸುತಗಿತ್ತನಧಿಕಮುದದಿಂ ರಾಮಂ || ೭೭ ||

ಅಂಗದಗಂ ಮಣಿಮಯದಿ |
ವ್ಯಾಂಗದಗಳನಿತ್ತು ಚಂದ್ರರುಚಿಯೊಲ್ಮಿರುಪು ||
ತ್ತುಂಗಸುಮೌಕ್ತಿಕಹಾರಮು |
ಸಂಗನೆಗೊಲ್ದಿತ್ತನೈದೆ ಸೀತಾನಾಥಂ || ೭೮ ||

ಆ ಮಾಲಿಕೆಯಂ ಸೀತಾ |
ಭಾಮಿನಿ ಕರತಳದೊಳಾಂತು ಹರಿನಾಯಕರಂ ||
ಪ್ರೇಮದಿನೀಕ್ಷಿಸುತಿರೆ ರಘು |
ರಾಮಂ ತಾಂ ಕಂಡು ತಿಳಿದನವಳಿಂಗಿತಮಂ || ೭೯ ||

ಸೀನಾವನನೀಕ್ಷಿಪೆ ತವ |
ಮಾನಸಕಂ ಮುದಮನಿತ್ತ ಸೇವಕಗೀಯೆಂ ||
ದಾ ನಳಿನಾಕ್ಷಂ ಪೇಳಲ್ |
ಜಾನಕಿ ಕೃಪೆಯಿಂದೆ ಕೊಟ್ಟಳನಿಲಾತ್ಮಜಗಂ || ೮೦ ||

ಹಾರಮನಾಂತುಂ ಪವನಕು |
ಮಾರಂ ರಾಘವಗೆ ಸೀತೆಗಂ ಮಣಿದುಂ ಸ ||
ದ್ಗೌರವಗೊಂಡು ವಿರಾಜಿಸ |
ಲಾ ರಾಮಂ ವಾನರೇಂದ್ರರಂ ಮನ್ನಿಸಿದಂ || ೮೧ ||

ಅವರವರಂ ಕರೆಕರೆದುಂ |
ನವಮಣಿಕೇಯೂರಹಾರಮುಕುಟಾದಿಗಳಂ ||
ವಿವಿಧಸುವಸ್ತುಗಳಂ ರಾ |
ಘವನತಿಮುದದಿಂದಮಿತ್ತು ಮನ್ನಣೆಗೆಯ್ದಂ || ೮೨ ||

ಅನುಪಮಮಣಿಭೂಷಣಮಂ |
ಕನಕಾಂಕಿತದಿವ್ಯಚೇಲಮಂ ಸಂತಸದಿಂ ||
ದನುಜೇಶಂಗಿತ್ತುಂ ಮೇ |
ದಿನಿವರ್ಗಿತ್ತಂ ಪಸಾಯಗಳನಾ ರಾಮಂ || ೮೩ ||

ಮುದದಿಂ ಗುಹನಂ ಕರೆದುಂ |
ಪದುಮಾಕ್ಷಂ ವಿನಯದಿಂದಮಾಲಿಂಗಿಸುತುಂ ||
ಅಧಿಕಧರಾಭೂಷಣಸಂ |
ಪದಗಳನೊಲ್ದಿತ್ತನವನೊಳತಿಸತ್ಕೃಪೆಯಿಂ || ೮೪ ||

ಕಲಿರವಿಜಾದಿವಲೀಮುಖ |
ಬಲಮಂ ಗುಹದನುಜನಾಥಮುಖ್ಯಾಸುರರಂ ||
ನಲವಿಂ ರಾಮಂ ಷಡ್ರಸ |
ಕಲಿತೋದನದಿಂದೆ ತುಷ್ಟಿಗೊಳಿಸಿದನಾಗಳ್ || ೭೫ ||

ಉಡುಗೊರೆವೀಳಯಗಳನಿ |
ತ್ತೊಡನವರಂ ರಘುಜನ್ಮೈದೆ ಬೀಳ್ಕುಡಲಾಗಳ್ ||
ಪೊಡಮಟ್ಟುಂ ಮಿಗೆ ತತ್ಪದ |
ಜಡಜಕ್ಕಂ ಸಾರ್ದ್ದರ್ರೈದೆ ನಿಜನಗರಗಳಂ || ೭೬ ||

ಭರತನ ಮತದಿಂ ಲಕ್ಷ್ಮಣ |
ಗುರುತರಯುವರಾಜಪಟ್ಟಮಂ ಕರುಣಿಸುತುಂ ||
ಹರಿಸದೊಳಂ ರಾಮಂ ಸ |
ದ್ಗುರುವಂ ಸತ್ಕರಿಸಿ ಮನ್ನಿಸಿದನನುಜರನುಂ || ೭೭ ||

ಸರಸಿಜಭವಾಂಡಕೋಟಿಗೆ |
ದೊರೆಯೆನಿಸಿದ ದೇವದೇವನವನೀತಳದೊಳ್ ||
ನರರೂಪಂದಳೆದುಂ ನಿಜ |
ಶರಣರನುರೆ ಪೊರೆವುತಿರ್ದ್ದನದನೇವೇಳ್ವೆಂ || ೭೮ ||

ಮಾರುತಿಯಂ ಕರೆದುಂ ರಘು |
ವೀರಂ ಸಂತೋಷದಿಂದೆ ತಾನಿಂತೆಂದಂ ||
ವೀರಾಗ್ರಣಿ ನೀನೆಮಗುಪ |
ಕಾರಂಗೆಯ್ದುದಕದೇನನೀವೆಂ ಪಡಿಯಂ || ೭೯ ||

ತನುಭೇದಮದಲ್ಲದೆ ನಿನ |
ಗೆನಗುಂ ಭಿನ್ನತೆಯದಿಲ್ಲಮೆಲ್ಲಂ ಬಗೆಯೊಳ್ ||
ಅನಿಶಂ ನಿನ್ನಂ ಪೂಜಿಸಿ |
ನೆನೆವ ಜನರ್ಗ್ಗಪ್ಪುದಮಿತ ಸಂಪತ್ಸೌಖ್ಯಂ || ೮೦ ||

ಈ ರಾಮಾಯಣಕಥೆಯುಂ |
ತಾರಾಪತಿದಿವಸನಾಥರುಳ್ಳನ್ನೆಬರಂ ||
ಧಾರಿಣಿಯೊಳ್ಸೊಗಮಿರ್ದ್ದಪ್ಪಂ |
ಸಾರಸಭವಪದವಿಯಿಂದೆ ರಾಜಿಸೆವೇಳ್ಕುಂ || ೮೧ ||

ಗ್ರಾಮಾನುಗ್ರಾಮದೊಳಂ |
ಪ್ರೇಮದೊಳಂ ಪೂಜೆಗೊಂಡು ತತ್ತಜ್ಜನಕಂ ||

ಕಾಮಿತಮಂ ಕುಡುತುಂ ಮ |
ನ್ನಾಮಮನುಚ್ಚರಿಪರೆಡೆಯೊಳಿರ್ಪ್ಪುದು ಸತತಂ || ೮೨ ||

ನಿನ್ನೆಡೆಯೊಳ್ ನಾನಿರ್ಪ್ಪೆಂ |
ನಿನ್ನಂ ಜಾನಿಸುವ ಲೋಗರಂ ಪಾಲಿಸುವೆಂ ||
ಸನ್ನಿಯಿದೀ ನುಡಿಯೆನುತಂ |
ಮನ್ನಿಸಿ ತಳ್ಕೆಯ್ಸಿ ರಾಮನನಿಲಜಗೆಂದಂ || ೮೩ ||

ನಿಲದೊಲ್ ನಿಚ್ಚಂ ರಾಮಂ |
ಕಲಿತಸ್ನಾನಾಹ್ನಿಕಂ ಸುಭೂಷಾಂಗಂ ಪು ||
ಷ್ಕಳಧನಕನಕವಿಭೂಷಣ |
ಗಳನವನೀಸುರರ್ಗೆವೀವುತಿರ್ದ್ದಂ ಮುದದಿಂ || ೮೪ ||

ಮಾತೆಯರುಂ ಭೂಮಿಜೆ ಸಹ |
ಜಾತರ್ ಹನುಮಂ ಸಮೇತಮಾರೋಗಣೆಯಂ ||
ಪ್ರೀತಿಯೊಳಂ ವಿರಚಿಸುತಂ |
ಭೂತಳದೊಳ್ ಸೌಖ್ಯದಿಂದಮಿರ್ದ್ದಂ ರಾಮಂ || ೮೫ ||

ತುರಗಾಧ್ವರಗಳನಾಗಿಸಿ |
ಧರಣೀಸುರತತಿಗೆ ಕಾಮಿತಾರ್ಥಮನಿತ್ತುಂ ||
ಧರೆಯಂ ಪಾಲಿಸುತಿರ್ದ್ದಂ |
ಪರಮಾನಂದದೊಳೆ ಸೀತೆವೆರಸುಂ ರಾಮಂ || ೮೬ ||

ತರುಲತೆಗಳ್ ಸುಮಸತ್ಫಲ |
ಭರಿತಮುಮಾಗಿರ್ದ್ದುವನಿಲನುಂ ಮಂದತೆಯಿಂ ||
ಪರಿಚಲಿಸುತುಮಿರ್ದ್ದಂ ಮೇಣ್ |
ಕರಮೆಸೆದುದು ಧರ್ಮಮೈದೆ ರಾಮನ ಧರೆಯೊಳ್ || ೮೭ ||

ಬರಡುಂ ಪಯನೆನಿಸಿರ್ದ್ದುದು |
ತರುಣರನುಂ ಪಡೆದರೈದೆ ವಂಧ್ಯಾಂಗನೆಯರ್ ||
ಗುರುಭೂಸುರಪದಪೂಜಾ |
ಪರರೆನಿಸಿದರಖಿಳಮನುಜರಾ ಧಾತ್ರಿಯೊಳಂ || ೮೮ ||

ನಿರ್ವೈರದೊಳಿರ್ದ್ದುವು ಮೃಗ |
ದರ್ವೀಕರಪಕ್ಷಿಜೀವಜಂತುಗಳಾಗಳ್ ||
ಪಾರ್ವರ್ ಮೊದಲಾಗಿರೆ ಚಾ |
ತುರ್ವರ್ಣಿಗಳೆಸೆದರೈದೆ ನಿಜಧರ್ಮದೊಳಂ || ೮೯ ||

ಪುಸಿಡೊಳ್ಳಾಸಂ ಪಾದರ |
ಮುಸುರಭಯಂ ಕಳವು ಪಳಿವು ಕಾರ್ಪಣ್ಯಂ ಕ ||
ರ್ಕಶಮಂಜುಗೆಯನ್ಯಾಯಂ |
ನುಸುಳ್ಗಳಿವುಂ ರಾಮನಾಳ್ವ ದೇಶದೊಳಿಲ್ಲಂ || ೯೦ ||

ಪೆಸರಿಲ್ಲಂ ದುರ್ಭಿಕ್ಷದ |
ನಸಿದುದು ದಾರಿದ್ರ್ಯದುಃಖಮಪಮೃತ್ಯುಭಯಂ ||
ಕುಸಿದುದು ಕಷ್ಟಂ ಸತತಂ |
ಪಸರಿಸಿತತಿಮೋದಮೈದೆ ತದ್ರಾಜ್ಯದೊಳಂ || ೯೧ ||

ಪತಿಭಕ್ತಿಯೊಳಂ ಸತಿಯರ್ |
ಪಿತೃಸೇವೆಯೊಳಖಿಳತನುಜರುಂ ಮೇಣ್ ದೈತ್ಯಾ ||
ಹಿತಶಂಕರಪೂಜೆಯೊಳಂ |
ಕ್ಷಿತಿಸುರಬಾಹುಜರುಮೊಪ್ಪಿದರ್ ಸಂಭ್ರಮದಿಂ || ೯೨ ||

ಧನಧಾನ್ಯಸಮೃದ್ಧಿಯೊಳಂ |
ಜನಮೆಲ್ಲಂ ಸೌಖ್ಯದಿಂದಮಿರ್ದ್ದುದು ಧರಣೀ ||
ವನಿತೆಗೆ ಮಂಗಳಮಾದುದು |
ವನಜಾಕ್ಷಂ ಪೊರೆವುತಿರ್ದ್ದ ರಾಜ್ಯದೊಳನಿಶಂ || ೯೩ ||

ಸುರಲೋಕಕೆ ಮಿಗಿಲಾದುದು |
ಧರಣೀಸುರಮುಖ್ಯಸತ್ರಜಾವಳಿ ರಾಮ ||
ಸ್ಮರಣೆಯೊಳಿರ್ದ್ದುದು ನಿಚ್ಚಂ |
ಪರಿತೋಷದೆ ಪುತ್ರಮಿತ್ರಪೌತ್ರರ್ಬೆರಸುಂ || ೯೪ ||

ಶ್ರೀಲಲನಾನಾಥಂ ನರ |
ಲೀಲೆಯೊಳಂ ರಾಮನಾಮದಿಂದಂ ಭೂಮಿಾ ||
ಪಾಲನೆಗೆಯ್ದ ಚರಿತ್ರಮ |
ನಾಲಿಸಿ ಬರೆಮೋದಿದರ್ಗ್ಗೆ ಮಂಗಳಮಕ್ಕುಂ || ೯೫ ||

ನಿರತಂ ಭಕ್ತಿಯೊಳಂ ಶುಭ |
ಕರಹನುಮದ್ರಾಮವಿಜಯಮಂ ಕೇಳ್ದರ್ಗಂ ||
ದುರಿತಂ ಪರಿಹರಮಕ್ಕುಂ |
ಕರುಣಿಸುವಂ ನಿತ್ಯಸಂಪದಗಳಂ ರಾಮಂ || ೯೬ ||

ಓತುಂ ಸತತಂ ವಾಚಿಸು |
ವಾತಂಗಂ ಸಾಗ್ಗ್ರಮೈದೆ ಮನಸೋಽದ್ದಿಷ್ಟಂ ||

ಣೀ ನರರೂಪಮನೀಕ್ಷಿಸೆ ।
ಮಾನಸಕಂ ಚೋದ್ಯಮಾದುದೆಂದಂ ಹನುಮಂ ॥ ೩೯೨ ॥

ನಿನಗೇತಕ್ಕೆಲವೋ ಮ ।
ಜ್ಜನಸದ ಸಂಗತಿ ಸರಾಗದಿಂ ನಿನ್ನಸುವಂ ॥
ಇನಜನ ಪೊರೆಗಂ ಕಳಿಪುವೆ ।
ನೆಸುತಂ ಕಡುಗಿನಿಸಿನಿಂದೆ ಗರ್ಜಿಸಿ ನಿಂದಂ ॥ ೩೯೩ ॥

ಕೊಂದಪೆನೆಂದೊಡೆ ಕಯ್ಗಳ್ ।
ಮುಂದಕ್ಕಂ ಬರ್ಪುದಿಲ್ಲಮಿನ್ನೀ ಚಿತ್ತಂ ॥
ಪೊಂದರೆ ದಯೆಯಂ ಗಮಿಸುವೊ ।
ಡಂ ದಾರಿಯನೀಯೆವೇಳ್ಕುಮೆನಗಂ ಭರದಿಂ ॥ ೩೯೪ ॥

ಪ್ರತಿಭಟರಾಮಲ್ಲಂ ನೀಂ ।
ಖತಿಗೊಳದೆನ್ನೊಡನೆ ಪೇಳ ಜನ್ಮಸ್ಥಿತಿಯಂ ॥
ಅತಿಸಂತೋಷಂಬಡುವೆಂ ।
ಮತಿ ನೇಹಮನಾಶಿಸುವುದದೆಂದಂ ಹನುಮಂ ॥ ೩೯೫ ॥

ಆಲಿಪುದಾದೊಡೆ ಬಲ್ಲಯ್ ।
ಕಾಲೋಪಮಪವನಪುತ್ರನಂ ಪೂರ್ವದೊಳಂ ॥
ಬಾಲತ್ವದೊಳರ್ಕನ ಸುವಿ ।
ಶಾಲಂ ಮಂಡಲಮನೈದೆ ತುಡುಕಿದ ಭಟನಂ ॥ ೩೯೬ ॥

ಅವನ ಸುತಂ ತಾನೆಂತೆನೆ ।
ವಿವರಿಸುವೆಂ ಋಷ್ಯಮೂಕಗಿರಿಶಿಖರದೊಳಂ ॥
ರವಿಸಂಭವನಿರಲಲ್ಲಿಗೆ ।
ಜವದಿಂ ಶ್ರೀರಾಮನೈದೆ ಬಂದಂ ಗಡ ಕೇಳ್ ॥ ೩೯೭ ॥

ಆತನೆ ಹರಿ ಗಡ ತತ್ಸತಿ ।
ಸೀತೆಯೆ ರಮೆ ಗಡ ನಿಶಾಚರಾವಳಿಯಂ ಸಂ ॥
ಘಾತಿಪೊಡಂ ಬಂದಂ ಗಡ ।
ಭೂತಳಪತಿ ಪಂಕ್ತಿರಥನ ತನುಜಂ ಗಡ ಕೇಳ್ ॥ ೩೯೮ ॥

ಆ ನರನಾಥನ ಸತಿಯಂ ।
ದಾನವಪತಿ ಲಂಕೆಗುಯ್ದನೆಂಬುದನರಿದುಂ ॥
ಭಾನುಸುತಂ ಕಳಿಪಲ್ ಪವ ।
ಮಾನಾತ್ಮಜನಂಬುರಾಶಿಯಂ ನೆಗೆದನಣಂ ॥ ೩೯೯ ॥

ಚುಕ್ಕಿಗುವರರಧಿನಾಯಕ |
ನಿಕ್ಕೆಯನೆಲರ್ಗೆಳೆಯಗಿತ್ತು ಮರ್ಬ್ಬಿಗರಸುವಂ ||
ತಿಕ್ಕಿ ಪ್ರೀತಿನಿಗಳ್ಗಣ |
ಲಿಕ್ಕಿದ ರಣಧೀರನೀಗೆ ನಿಚ್ಚಂ ಸೊಗಮಂ || ೧೦೫ ||

ಪುನರಪಿ ಸೀತೆಗೆ ಮಣಿದುಂ |
ವನನಿಧಿಯಂ ದಾಂಟಿ ವಾರ್ತೆವೆರಸುಂ ಶ್ರೀರಾ ||
ಮನ ಪದಕರ್ಪಿಸಿ ಮಣಿಯಂ |
ಘನಯಶಮಂ ತಾಳ್ದ ವಾಯುಜಂ ಪೊರೆಗೊಲ್ದಂ || ೧೦೬ ||

ಪಾವನತರಚರಿತಂ ಸತ |
ದೇವಕುಲಂ ಕಾಲನೇಮಿಸಂಹಾರಂ ಸಂ ||
ಜೀವನದಾತಂ ಖಳಮುಹಿ |
ರಾವಣನಕ್ತಂಚರಾಂತಕಂ ಪೊರೆಗೆಮ್ಮಂ || ೧೦೭ ||

ಕುಂಭೀನಸಸದೃಶಬಲನುರು |
ಕುಂಭೀನಸಭೂಷಣಾವತಾರಂ ಶುಭದಂ ||
ಜಂಭಾಸುರರಿಪುವಿನುತನ |
ಜಂ ಭಾಸುರವಜ್ರಕಾಯನೋವುಗೆ ಜಗಮಂ || ೧೦೮ ||

ಈ ಕತೆಯಂ ಭಯಭಕ್ತಿವಿ |
ವೇಕದೊಳಂ ಬರೆದು ವಾಚಿಸುತೆ ಕೇಳ್ವರನುಂ ||
ಕೋಕನದಾಂಬಕನುಂ ಮೇಣ್ |
ಮೂಕಾಂಬಿಕೆಯುಂ ಸಮಂತು ಪೊರೆವರ್ ಸತತಂ || ೧೦೯ ||

ಸಂಪೂರ್ಣ.

PRINTED BY U. NARASIMHA MALLYA
at the SADANANDA Printing Works Co., Ltd., Udipi.

# ಶುದ್ಧಾಶುದ್ಧಪತ್ರ.

| ಪುಟ. | ಪದ್ಯ. | ಪಙ್ಕ್ತಿ. | ಅಶುದ್ಧ | ಶುದ್ಧ. |
|---|---|---|---|---|
| 1. | ೧. | 2. | ವಾರಾಸಿ | ವಾರಾಶಿ |
| ,, | ೨. | 3. | ಕೈಗೊಳಿಸಿದ | ಕಯ್ಕೊಳಿಸಿದ |
| ,, | ೩. | 2. | ಮಣಿದುಕುಕವಿ | ಮಣಿದು ಕುಕವಿ |
| ,, | ,, | 4. | ವಿಜಯವಂ ವಿರಚಿಸುವೇಂ | ವಿಜಯಮಂ ವಿರಚಿಸುವೆಂ |
| ,, | ೪. | 2. | ರಿಸಿ | ಋಷಿ |
| ,, | ,, | 4. | ಪೀಠವನಿತ್ತುವೈದೆಸತ್ಕರಿಯಿಸಿದರ್ | ಪೀಠಮನಿತ್ತು ಸತ್ಕರಿಸಿದರ್ ನಲವಿಂ |
| ,, | ೫. | 1. | ಯಿಂದು ಸುದಿನವಾದುದುಭವ | ಇಂದು ಸುದಿನಮಾದುದು ಭವ |
| ,, | ,, | 3. | ಎಂದಾವಿರ್ಪೆವು | ಎಂದಾಮಿರ್ಪೆವು |
| ,, | ೬. | 1. | ಈಶಾವತಾರಮೆಂಬ | ಈಶಾವತಾರನೆನ್ಬ |
| ,, | ,, | 2-3. | ಮತ್ತಾ॥ ಸುಗ | ಮ॥ ತ್ತಾಶುಗ |
| ,, | ,, | 4. | ವಿವರಿಸವೇಳ್ಕುಂ | ವಿವರಿಸೆವೇಳ್ಕುಂ |
| 2. | ೭. | 1. | ಹೀರಾಂಗನಾದುದಂಸೀ | ಹೀರಾಂಗನಾದುದಂ ಸೀ |
| ,, | ೮. | 2. | ಗೇಶನಸತಿ | ಗೇಶನ ಸತಿ |
| ,, | ,, | 3. | ನುತಿಸೆವು | ನುತಿಸೆ ಮು |
| ,, | ೯. | 1. | ಹರನೊಲ್ದುಡದೇಂ | ಹರನೊಲ್ದೊಡದೇಂ |
| ,, | ೧೦. | 4. | ಜೈಸಿದಪರಿಯೊಳವಳಚೆಲ್ವಿತ್ತವೊಗಂ | ಜಯಿಸಿದ ಪರಿಯೊಳವಳ ಚೆಲ್ವಿತ್ತ ಮೊಗಂ |
| ,, | ೧೧. | 1. | ಎಳೆನೇಸರ | ಎಳನೇಸರ |
| ,, | ,, | 2. | ಹೊರಬಿರ್ದು | ಪೊರಬಿಳ್ದು |
| ,, | ,, | 4. | ಕಾಂತಿವೆತ್ತಚೂಚಕವೆಸೆಗುಂ | ಕಾಂತಿವೆತ್ತ ಚೂಚುಕಮೆಸೆಗುಂ |
| ,, | ೧೨. | 4. | ಚರ್ವಣಂ ಗೈಯ್ಯಲಣಂ | ಚರ್ವಣಂಗೆಯ್ಯಲಣಂ |
| ,, | ೧೩. | 1. | ಮುಡಿವೊಲೆಗಳ | ಮುಡಿ ಮೊಲೆಗಳ |
| ,, | ,, | 2 | ಜಗನ | ಜಘನ |
| ,, | ,, | 4. | ವೈದೋರ್ಪುದೆಂದು | ಮೆಯ್ದೋರ್ಪುದೆಂದು |
| 3. | ೧೪. | 4. | ಲರ್ಬಕನಂ | ಲರ್ಭಕನಂ |
| ,, | ೧೫. | 2. | ಭೂರ್ವಿಭುಧರಿಗಾದುದಮಿತ | ಭೂವಿಬುಧರ್ಗ್ಗಾದುದಮಿತ |
| ,, | ,, | ,, | ಆವಿಭುಧಾರಿ | ಆ ವಿಬುಧಾರಿ |

| ಪುಟ. | ಪದ್ಯ. | ಪಙ್ಕ್ತಿ. | ಅಶುದ್ಧ. | ಶುದ್ಧ. |
|---|---|---|---|---|
| 3 | ೧೬. | 4. | ಹೋಂಪುಳಿಯೋದಳ್ | ಪೊಂಪುಳಿಪೋದಳ್ |
| ,, | ೧೭. | 1. | ಕೋಮಣವಂತಾ | ಕೋವಣವಂ ತಾ |
| ,, | ,, | 2. | ಶೋಭಿಪಸುತನಂ | ಶೋಭಿಪ ಸುತನಂ |
| ,, | ,, | 4 | ಬಿಸವಂದಂ ಬಟ್ಟ | ಬಿಸವಂದಂಬಟ್ಟ |
| ,, | ೧೮. | 1. | ‖ | \| |
| ,, | ,, | 2. | ಪದಕೆರಗಿನಿಂದು ತಾಂಪಸಿದಿರ್ಪೆಂ | ಪದಕೆರಗಿ ನಿಂದು ತಾಂ ಪಸಿದಿರ್ಪ್ಪೆಂ |
| ,, | ೧೯ | 3 | ಭುಂಜಿಸಲ್ಕೈದಿದ | ಭುಂಜಿಸಲೆಯ್ದಿದ |
| ,, | ೨೦ | 1. | ರವಿತಾಂ ಭಯಗೊಳೆಶಕ್ರಂ | ರವಿ ತಾಂ ಭಯಗೊಳೆ ಶಕ್ರಂ |
| ,, | ,, | 2. | ಪೊಡೆಯೆಕಂಡು ಸುತವೋಹಕದಿಂ | ಪೊಡೆಯೆ ಕಂಡು ಸುತವೋಹದಿನಾ |
| ,, | ೨೧. | 1. | ಮಾರುತನೆಲ್ಲಿರ್ಪಂತಾ | ಮಾರುತನೆಲ್ಲಿರ್ಪ್ಪಂ ತಾ |
| ,, | ,, | 3. | ಮಾರಾಂತಕ ಮಾಧವ | ಮಾರಾಂತಕಮಾಧವ |
| 4 | ೨೨. | 3. | ಅವಿರಳ ವಜ್ರ | ಸುವಿಷದವಜ್ರ |
| ,, | ೨೩. | 1 | ಹನುಮಾನೆಂಬಭಿಧಾನಮಿ | ಹನುಮಾನೆಂಬಭಿಧಾನದಿ |
| ,, | ,, | 2. | ದನುಮತತದ್ಭುಜಕರೆಲ್ಲಸುಖಮಿರ್ಪರುಮೆಂ | ನನುಮಿತತದ್ಭುಜಕರೈವೆ ಸೊಗಮಿರ್ದ್ದಪರೆಂ |
| ,, | ,, | 4 | ದನಿಲನಕ್ಕೈಗಿತ್ತು | ದನಿಲನ ಕಯ್ಗಿತ್ತು |
| ,, | ೨೪. | 1. | ಮೈದಡವಿ | ಮೆಯ್ದಡವಿ |
| ,, | ೨೫ | 1. | ತರಣಿಯುಸಮ್ಮುಖದೊಳ್ | ತರಣಿಯು ಸಮ್ಮುಖವೊಳ್ |
| ,, | ,, | 3. | ಸಿರವೇವವನೋದಿಶಚೀ | ಸಿರವೇದಮನೋದಿ ಶಚೀ |
| ,, | ೨೬. | 2 | ಸಾಹಾಯಗಳಂ | ಸಾಹಾಯ್ಯಗಳಂ |
| ,, | ,, | 4. | ತರಣಿ ಮತವೆತತ್ಸುತನೆಡೆಗಂ | ತರಣಿಮತದೆ ತತ್ಸುತನೆಡೆಗಂ |
| ,, | ೨೭ | 1. | ಬರಲನಿಲನಮಗನವನಂ | ಬರಲನಿಲನ ಮಗನವನಂ |
| ,, | ,, | 2. | ಬರಸೆಳದಮರ್ದಪ್ಪಿ | ಬರಸೆಳೆದಮರ್ದಪ್ಪಿ |
| ,, | ೨೮. | 2. | ಪತಿತನ್ನೊಡಹುಟ್ಟಿ | ಪತಿ ತನ್ನೊಡವುಟ್ಟಿ |
| ,, | ೨೯. | 1. | ಕಡುಬಳಲಿನೀರ್ಗುಡಿದುಮರ | ಕಡುಬಳಲೆ ನೀರ್ಗ್ಗುಡಿದು ಮರ |
| ,, | ,, | 2. | ನಡಿಯೋಳ್ಕ್ಕಳ್ದಿರ್ದರಘುಜರಂ | ನಡಿಯೊಳ್ಕುಳಿತಿರ್ದ್ದ ರಘುಜರಂ |
| 5. | ೩೦. | 3. | ಕರಸಿರ್ಪನೊ | ಕರೆಸಿರ್ಪ್ಪನೊ |
| ,, | ೩೧. | 3. | ನರರಲ್ಲಿವರೀ | ನರರಲ್ತಿವರೀ |
| ,, | ,, | 4. | ೨೧ | ೩೧ |
| ,, | ೩೨. | 2. | ಮೊದಲವರಿರವಂ | ಮೊದಲವರಿರವುಂ |
| ,, | ,, | 3. | ಮದ್ವೃತ್ತವನುರೆ | ಮದ್ವೃತ್ತಮನುರೆ |

| ಪುಟ. | ಪದ್ಯ. | ಪಙ್ಕ್ತಿ. | ಅಶುದ್ಧ. | ಶುದ್ಧ. |
|---|---|---|---|---|
| 5. | ೩೩. | 4. | ತಳುವದೆ | ತಳ್ವದೆ |
| ,, | ೩೪. | 1. | ದೈವವಲಾ | ದೇವನಲಾ |
| ,, | ೩೫. | 1. | ದಿಟವಾದುದು | ದಿಡಮಾದುದು |
| ,, | ,, | 2. | ದರುಶನ | ದರ್ಶನ |
| ,, | ೩೬. | 3. | ತ್ರಿದಶಾರ್ಚಿತ | ವಿಬುಧಾರ್ಚಿತ |
| 6. | ೩೭. | 3. | ನಿನ್ನಭಿಧಾನವ | ನಿನ್ನಭಿಧಾನವು |
| ,, | ೩೮. | 2. | ವಾಪೂರಿಂ...ದೆಲ್ಲಿಹ | ಮಾಪೂರಿಂ...ದೆತ್ತಲ್ |
| ,, | ,, | 4. | ಭಾವಮುನಾಂ | ಬಾವಮುನಾಂ |
| ,, | ೩೯. | 2. | ಪಾಂಗೆನಿಪರೋರ್ವರನುಂ | ಪಾಂಗೆನಿಪರೊರ್ವ್ವರನುಂ |
| ,, | ,, | 4. | ದಾಣಂ ಪೇಳೆಂದು | ದಾಣಮನುಸಿರೆಂದು |
| ,, | ೪೦. | 3. | ಕೇಳ್ಕೈ | ಕೇಳಯ್ |
| 7. | ೪೫. | 1. | ಜನಿಸಿದೆವಾಬಳಿಕಂ | ಜನಿಸಿದೆಮಾ ಬಳಿಯೊಳ್ |
| ,, | ,, | 3. | ತನಯರ್ತಾವಿರ್ವರ್ಕೆಃ | ತನಯರ್ತಾಮಿರ್ವರ್ ಕೇಃ |
| ,, | ೪೬. | 4 | ಕರದುಯ್ಯು | ಕರೆದುಯ್ಯು |
| ,, | ೪೭ | 4. | ಶಿರವನೀ | ಶಿರಮನೀ |
| ,, | ೪೯. | 3. | ಸ್ವಯುಂವರ | ಸೊಯುಂವರ |
| ,, | ೫೧. | 1. | ಮುಂದೈತರೆ | ಮುಂದೆಯ್ತರೆ |
| ,, | ,, | 2. | ಮಿಧಿಲೇಶನಾಳ್ಪ್ರತಿರ್ಪಾ | ಮಿಧಿಲೇಶನಾಳುತಿರ್ಪ್ಪಾ |
| 8. | ೫೪. | 2. | ನಂದನವಿಹ...ತಂದಲಿಕ್ಕೆಯೊ | ನಂದನಮಿಹ...ತಂದಲಿರ್ಕ್ಕೆಯೊ |
| ,, | ೫೫. | 1. | ನೋಡುತ್ತಂಬರ | ನೋಡುತ್ತಂ ಬರ |
| ,, | ೫೮. | 1. | ...ಳಾವೆಳ್ತಂದ | ...ಳಾಮೆಳ್ತಂದ |
| ,, | ,, | 2. | ದನಕೇಳ್ದುಂ | ದನಗೇಳ್ದುಂ |
| 9. | ೬೩. | 2. | ಚಾಪವನಾಗಳ್ | ಚಾಪಮನಾಗಳ್ |
| ,, | ೬೪. | 2. | ಪುರವ... | ಪುರಮ... |
| ,, | ೬೬. | 4. | ಗರ್ವಪರ್ವತವನುರೆ | ಗರ್ವಪರ್ವತಮನುರೆ |
| 10. | ೬೭. | 2. | ಕಿರಿದಾಯಿ | ಕಿರುದಾಯಿ |
| 11. | ೭೪. | 3 | ಮಾನಿಸರೂಪಂದಳೆದಿಹ | ಮಾನಿಸರೂಪಂ ತಳೆದಾ |
| ,, | ೭೫. | 3. | ನೀವನಕೆಳ್ತಂದಿಹೆ | ನೀ ವನಕೆಳ್ತಂದಯ್ |
| ,, | ೭೯. | 3. | ಹರ ಹಂಸಶೋಭಿ | .ಹರಹಂಸಶೋಭಿ |
| 12. | ೮೨ | 2. | ಸಾತಿಶಯುದ | ಸಾತಿಶಯಂ |
| ,, | ,, | 4. | ...ವಾವಿರ್ಪೆಡೆಗಂ | ...ಮಾಮಿರ್ಪ್ಪೆಡೆಗಂ |

| ಪುಟ. | ಪದ್ಯ. | ಪಙ್ಕ್ತಿ. | ಅಶುದ್ಧ. | ಶುದ್ಧ. |
|---|---|---|---|---|
| 12. | ೮೩. | 2. | ...ಲವರೀರ್ವ್ವರನುಂ | ...ಲವರಿಬ್ಬರ್ವ್ವರನುಂ |
| ,, | ೮೫. | 1. | ನೀವಿತ್ತಲ್ | ನೀಮಿತ್ತಲ್ |
| ,, | ೮೬ | 2-3. | ನಿಜಪುರಕಂದುಂ ‖ ಮಾನದೆ | ನಿಜಪುರಕಂ ದು ‖ ಮ್ಮಾನದೆ |
| ,, | ೮೭ | 1. | ಪಿತನೆಲ್ಲಿಹಂ | ಪಿತನೆಲ್ಲಿದಂ |
| ,, | ೮೯. | 2. | ಪೋಗಲಿತ್ತವನೀನಾಥಂ | ಪೋಗಲಿತ್ತಲವನೀನಾಥಂ |
| 13 | ೯೪ | 4. | ಸ್ವಾಮಿತ್ವವಸ್ಸೈದೆ | ಸ್ವಾಮಿತ್ವಮನೆಯ್ದೆ |
| 14 | ೯೯. | 4. | ಕೇಳಿಬಲ್ಲೆ | ಕೇಳ್ದು ಬಲ್ಲೆ |
| ,, | ೧೦೨. | 1 | ಈರೇಳು | ಈರೇಳ |
| 15. | ೧೦೫. | 2. | ಮರುಗುತಿಹೆ | ಮರುಗುವೌ |
| ,, | ,, | 4 | ಕಳುಹಿದನವಳಂ | ಕಳಿಪಿದನವಳಂ |
| ,, | ೧೦೮. | 4. | ...ವಂದೆವಾವತಿ. . | ..ವಂದೆಮಾವುತಿ .. |
| 16 | ೧೧೨ | 2-3 | ವಿದ್ಯಾ \| ಧರರೂಪಂ ಧರಿಯಿಸಿ | ಬಿಜ್ಜೋ ‖ ದರರೂಪಂ ಧರಿಸುತೆ |
| ,, | ೧೧೩ | 1 | ಮುಂದಾವುಂ | ಮುಂದಾಮುಂ |
| ,, | ,, | 3-4. | ...ಸುತಿಗೋಸಗ \| ಳಿಂದಂ | ...ಶ್ರುತಿಸ್ವರ \| ದಿಂದಂ |
| ,, | ೧೧೫. | 2. | ಮನುಜರೂಪಿನಚ್ಯುತ | ಮನುಜರೂಪದಚ್ಯುತ |
| ,, | ೧೧೮. | 2. | ಜಿಜ್ಞಾಸಗಳಿಂ | ಜಿಜ್ಞಾಸೆಗಳಿಂ |
| ,, | ೧೧೯. | 2 | ಸಾ ಪಿಸಿ | ಸ್ಥಾಪಿಸಿ |
| 17. | ೧೨೧ | 2. | ಬಂದಿಹನೆನುತಂ | ಬಂದನೆನುತ್ತುಂ |
| ,, | ೧೨೪ | 3. | ಪೂತ ಫಲಂಗಳನೊಪ್ಪಿಸಿ | ಪೂತಫಲಂಗಳನಿತ್ತುಂ |
| 18 | ೧೨೭. | 2. | ತಾನೊಲಿದೀಯು | ತಾನೊಲ್ದೀಯು |
| ,, | ೧೩೨. | 2. | ದಿವಿಜರ್ನೀವು | ದಿವಿಜರ್ನೀಮೆ |
| ,, | ,, | 4 | ಧರಿಯಿಸಿ | ಧರಿಸುತೆ |
| ,, | ೧೩೩ | 2. | ...ತರಿಯಿಸಿ | ...ತರಿಸುತೆ |
| 19. | ೧೩೬. | 1. | ವಂದಿಸಿ | ಮಣಿದುಂ |
| ,, | ,, | 4 | ಕ್ಷೇಮಂ | ನೇಮಂ |
| ,, | ೧೩೭ | 2 | ತೋಡುವಾಗಿಹ | ತೋಡುವಾಗಿರೆ |
| ,, | ೧೩೮ | 2 | ವಾಸ್ತುರಕ್ಷೋಘ್ನಗಳಂ | ವಾಸ್ತುರಾಕ್ಷೋಘ್ನಗಳಂ |
| ,, | ೧೩೯ | 4 | ಮಾತಳಿರೆಲೆ.. ಕಾಯುತಮಿರ್ದೆಂ | ಮಾ ತಳಿರೆಲೆ...ಕಾವುತುಮಿರ್ದ್ದೆಂ |
| 20 | (heading) | | ದ್ವಿತಿಯಾಶ್ವಾಸ | ದ್ವಿತೀಯಾಶ್ವಾಸ |
| ,, | ೧. | 3 | ಭಕ್ತಾಳಿ ಸಂರಕ್ಷಕಂ | ಭಕ್ತಾಳಿಸಂರಕ್ಷಕಂ |
| ,, | ೨ (ಮೊದಲು)— | | | ಕಂದ ‖ |

| ಪುಟ. | ಪದ್ಯ. | ಪಙ್ಕ್ತಿ. | ಅಶುದ್ಧ. | ಶುದ್ಧ. |
|---|---|---|---|---|
| 20. | ೩. | 3. | ಮೋಲ್ಗಡೆಯಂ | ಮೋಲ್ಗತೆಯಂ |
| ,, | ೪. | 2. | ಸೌಖ್ಯದಿಂದಿರಲು | ಸೌಖ್ಯದಿನಿರಲ್ಕೆ |
| ,, | ,, | 3. | ...ನೇಳ್ತಂದಳ್ಸರ | ...ನೆಳ್ತಂದಳ್ಸರ |
| ,, | ೫. | 2. | ರವಿಸ | ರವಿಸೆ |
| ,, | ೬. | 1. | ತನಗೋರ್ವರ್ಗಳ್ಸತಿ | ತನಗೊರ್ವ್ವರ್ಗಳ್ಸತಿ... |
| ,, | ,, | 2. | ನಿನಗೊಪ್ಪುವ ಕಾಂತ. | ನಿನಗಂ ತಕ್ಕಾತ... |
| ,, | ,, | 3. | ವಿನಯದಿ | ವಿನಯದೆ |
| ,, | ,, | 4. | ...ನಿಳುಹಿದೆನಾಗಳ್ | ...ನಿಳಿಪಿದೆನಾಗಳ್ |
| 21. | ೮. | 2. | ತೊಡಿಸಿ | ತುಡಿಸಿ |
| ,, | ೯. | 1. | ಪಲವು ದಿನವಾದ | ಪಲವೆವಸವಾದ |
| ,, | ೧೪. | 2. | ದು.ಖವನಾಂ | ದು.ಖಮನಾಂ |
| ,, | ೧೫. | 2. | ...ನಲ್ಲವೆ | ...ನಲ್ಲಮೆ |
| 22. | ೧೬. | 2. | ನೋಡ... | ನೋಡೆ... |
| ,, | ೧೯. | 2. | ಮೆನ್ನಸುವಿರಲೆಂದು | ಮೆನ್ನಸುವಿರಲೆಂದು |
| 23. | ೨೩. | 1. | ನೀನೆಂಬುದ | ನೀನೆಂದುಂ |
| ,, | ೨೬. | 4. | ಸತ್ಕರಿಯಿಸಿದಳ್ | ಸತ್ಕರಿಸಿದಳಯ್ |
| ,, | ೨೮. | 2 | ಳುರಿಪಿಸಿ | ಳುರಿಯಿಸಿ |
| ,, | ೨೯. | 1. | ನಡೆತಂದೆವಾ | ನಡೆತಂದೆಮಾ |
| 24. | ೩೫. | 2. | ವ್ಯೋಮವನುರೆ | ವ್ಯೋಮಮನುರೆ |
| 25. | ೩೯. | 3. | ಷ್ರ್ಯಂಗಳ | ಷ್ಟ್ಯಂಗಳ |
| ,, | ೪೦. | 2. | ವೀರಶಾಂತ ರುಣಾದ್ಭುತದಿಂ | ವೀರಶಾಂತಕರುಣಾದ್ಭುತದಿಂ |
| 27. | ೫೩. | 2. | ಬಂದೆವ್ರೈದೆ | ಬಂದೆವ್ರೈವೆ |
| ,, | ,, | 3. | ನೀಗಿದನಯರ್ವಮು | ನೀಗಿದೆನಯರ್ವಮು |
| ,, | ೫೯. | 3-4. | ಸೆರಗಿನೊಳಂ ¦ ಕಟ್ಟೀ | ನೆರಗಿನೊಳಂ ಕ \| ಟ್ಟೀ |
| 28. | ೬೦. | 4. | ನಂತವಿಟ್ಟು | ಸಂತಮಿಟ್ಟು |
| 30. | ೭೭. | 1. | ...ಗಾಗಳ್ | ...ಗಾಗಲ್ |
| ,, | ೭೯. | 4. | ಗಾಧದ | ಗಾಧಂ |
| ,, | ೮೦. | 1. | ಕೆಲವು ದಿನ. . | ಕೆಲವೆವಸ... |
| 32. | ೯೨. | 2. | ಧಧಿಪತಿಯಂ ನಂತವಿಟ್ಟು | ರಧಿಪತಿಯಂ ಸಂತಮಿಟ್ಟು |
| ,, | ೯೪. | 4. | ಹುತಿಗೊಳಿಯಿಸಿದಂ | ಮುತಿಗೊಳಿಸಿದನಯ್ |
| 35. | ೧೨೦. | 2. | ಕಾಣದಿರಲ್ಕಾನೇಸರವಂ | ಕಾಣದಿರ್ಪ್ಪರಾನೇಸರವಂ |

| ಪುಟ. | ಪದ್ಯ. | ಪಙ್ಕ್ತಿ. | ಅಶುದ್ಧ. | ಶುದ್ಧ. |
|---|---|---|---|---|
| 36. | ೧೨೫. | 2. | ನಡುಗುತ್ತಲಿಪ್ಪರ್... | ನಡುಗುತ್ತಮಿಪ್ಪರ್... |
| 37. | ೧೩೨. | 1. | ಮೊಲನರಿತಾಂ | ಮೊಲವರಿ ತಾಂ |
| ,, | ೧೩೫. | 2. | ಕರೆಯ... | ಕಲಿಯ... |
| 38. | ೧೪೧. | 4. | ತ್ತಮನೆನುತಂ | ತ್ತವನೆನುತಂ |
| 40. | ೧೫೭. | 4. | ...ತಾರ್ಭಟಿಸುತ್ತಂ | ...ತಾರ್ಬಟಿಸುತ್ತುಂ |
| 41. | ೧೫೮. | 4. | ಮುಷ್ಟಿಯಿಂದ | ಮುಷ್ಟಿಯಿಂದೆ |
| ,, | ೧೬೩. | 2. | ...ಳತಿಸಂಕಟದಿಂ | ...ಳುರೆ ಸಂಕಟದಿಂ |
| 43. | ೧೭೪. | 2. | ಲೀಕ್ಷಿಸುತಂ | ವೀಕ್ಷಿಸುತಂ |
| ,, | ೧೭೫. | 2. | ರ್ಕಳಲ್ಪುದು | ರ್ಕಳಲ್ಪೆ |
| ,, | ೧೮೦. | 2. | ಕಾಯ್ಪುದೆನೆ | ಕಾವುದೆನೆ |
| 45. | ೫. | 4. | ಬೆನಗೊಂಡೊಡ್ಡೈದೆ | ಬೆಸಗೊಂಡೊಡೆಯ್ದು |
| ,, | ೬ | 1. | ಮುನಿಗಳಿರ ಕೇಳಿ | ಮುನಿಗಳೆ ಕೇಳಿಂ |
| 46. | ೧೨. | 2. | ದನುಜ... | ಸದೆದನುಜ... |
| 47. | ೧೮. | 1-2. | ಗೆಯ್ಯುತ್ತತಿ \| ಭಕ್ತಿ | ಗೆಯ್ಯು \| ತ್ತತಿಭಕ್ತಿ |
| 51. | ೪೯. | 1-2. | ದಾರುಣಕಾಲದೊಳೆನ್ನೊಃ \| ಮಾರ್ರರನ | ದಾರುಣಕಾಲವೊಳೆನ್ನೊ \| ಳ್ಮಾರರನ |
| 52. | ೫೬ | 2. | ರಾಮಭಕ್ತನಗಗಿರಿಕುಲಿಶಂ | ರಾಮಭಕ್ತನಘಗಿರಿಕುಲಿಶಂ |
| 53. | ೬೭. | 2. | ನೀನೆಂದುದೆಲ್ಲಮದುಮಲ್ಲದೆ | ನೀನೆಂದುದೆಲ್ಲಮುಂ ಮಗುಳ್ದುಂ |
| 55. | ೭೫. | 2. | ಯುಗದಂತ್ಯದ | ಯುಗದಂತದ |
| 56. | ೮೫. | 1. | ಯತಿಗಳಿರ ಕೇಳಿ | ಯತಿಗಳೆ ಕೇಳಿಂ |
| 57. | ೯೪ | 4. | ಸನಕ್ಕುಮಾರಕಂ | ಸನತ್ಕುಮಾರಕಂ |
| 59. | ೧೦೫. | 3. | ಶರದಿರವಂ | ಶರದಿರಮುಂ |
| ,, | ೧೦೭. | 3. | ಶಶಿಧರವಿಧಿ... | ಶಶಿಧರವಿಧಿ.. |
| 60. | ೧೧೭. | 2. | ಮುಳಿದಿಪ್ಪರ್ದುವೊಂದೆ | ಮುಳಿದಿಪ್ಪರ್ದು |
| 61. | ೧೨೨. | 1. | ನೀಂ | ನೀನೌ |
| ,, | ೧೨೭. | 2. | ಬಾಯೂರಿ | ಬಾಯಾರ್ದು |
| 70. | ೫೮. | 3. | ಪರ್ವಮಾನವೇಗಿಗಳ್ | ಪರ್ವವಮಾನವೇಗಿಗಳ್ |
| 71. | ೬೪. | 2. | ಭೂಪ್ರಾಂತದಿರವನುರೆ | ಭೂಪ್ರಾಂತದಿರಮುನುರೆ |
| 72. | ೭೦,೭೪. | 4,3. | ಘಳಿಲನೆ | ಗಳಿಲೆನೆ |
| 73. | ೭೨, | 2. | ಚೋದ್ಯವಟ್ಟು | ಬೆರಗುವಟ್ಟು |
| ,, | ,, | 4. | ರೊಳಪೊಕ್ಕ. . | ರೊಳಪೊಕ್ಕ... |
| 75. | ೯೧. | 2. | ದಾರ್ನಂದಂ ಬಡುವೆ... | ದಾರ್ನಂದಂಬಡುವೆ... |

| ಪುಟ. | ಪದ್ಯ. | ಪಙ್ಕ್ತಿ. | ಅಶುದ್ಧ. | ಶುದ್ಧ. |
|---|---|---|---|---|
| 75. | ೯೨. | 1. | ನೀಮೆಲ್ಲ... | ನೀವೆಲ್ಲ... |
| 76. | ೧೦೧. | 4. | ಕ್ಷೇಮಂ | ಕೇಮಂ |
| 82. | (Heading.) | | ಹಮಮದ್ರಾಮಾಯಣ. | ಹನುಮದ್ರಾಮಾಯಣ |
| ,, | ೧೪೬. | 2. | ಮಕುಟಮಾಡುದು | ಮುಕುಟಮಾಡುದು |
| 85. | ೧೬ | 1. | ರಾಮಕಾರ್ಯದಿರವಂ | ರಾಮಕಾರ್ಯದಿರಮಂ |
| 90. | ೫೫. | 3. | ಧರನರಕಿನ್ನರಗಂದ | ಧರನರಕಿನ್ನರಗಂಧ |
| 92. | ೬೯. | 3. | ನೊರೆಯೊಟ್ಟಿಲೋ | ನೊರೆಯೊಟ್ಟಿಲೋ |
| ,, | ೭೪. | 4. | ರಾವಣನುಪಮನ್ಯೈದೆ | ರಾವಣನುಪವನಮನೆಯ್ದು |
| 97. | ೧೦೭. | 4. | ಮ್ಮಾನವೆ | ಮ್ಮಾನಮೆ |
| ,, | ೧೧೦. | 3. | ಕಂಡೆ | ಕಂಡೆಂ |
| 98. | ೧೧೪. | 4. | ಪೊಳಲ್ಗಂ | ಪೊಳಲ್ಗೆ |
| ,, | ೧೧೬. | 2. | ಜೀವಿಸಿದ್ದೊಡೇಂ | ಜೀವಿಸಿರ್ದ್ದೊಡೇಂ |
| 102. | ೧೪೬. | 3. | ಸನಿಹಕ್ಕ | ಸನಿಹಕ್ಕಂ |
| 103. | ೧೫೧. | 4. | ರಾಮಲಕ್ಷ್ಮಣರಿರವಂ | ರಾಮಲಕ್ಷ್ಮಣರಿರಮಂ |
| 104. | ೧೫೯. | 1. | ರಕ್ತಿಮದಿಂದಂ | ರಕ್ತಿಮೆಯಿಂದ |
| 105. | ೧೬೫. | 2. | ವುದು ನೀನೆನ್ನ | ವುದು ನೆರೆ ನೀನೆನ್ನ |
| 108. | ೧೦. | 1. | ಪರಿದುದು | ಪರೆದುದು |
| 109. | ೧೯. | 4. | ...ನೀಕ್ಷಿಸುತಿರ್ದ್ದ | ...ನೀಕ್ಷಿಸುತಿರ್ದ್ದಂ |
| 110. | ೨೪, ೨೬. | 4. | ನಿಂದನಾರ್ಭಟಿಸುತ್ತಂ | ನಿಂದನಾರ್ಬಿಟಿಸುತ್ತಂ |
| 112. | ೪೦. | 2. | ತತ್ಕಣದೊಳ್ | ತತ್ಕ್ಷಣದೊಳ್ |
| 114. | ೫೯. | 2 | ಘನ ಮೋ | ಘನಮೋ |
| 116. | ೬೯. | 4. | ಬವಣೆಗಳಂ | ಬವಣೆಗಳಿಂ |
| 118. | ೮೭. | 1. | ‖ | । |
| 121. | ೧೦೬. | 2. | ...ಕಪಿಗಳ್ರ್ಭರದಿಂ | ಕಪಿಗಳ್ ಭರದಿಂ |
| 125. | ೧೩೫. | 2. | ನಮಿಸಲಬ್ಬದಳಾಕ್ಷಂ | ನಮಿಸಲಬ್ಜದಳಾಕ್ಷಂ |
| 128. | ೧೮. | 3. | ಕೀಶಬಲಂವೆರಸು ಸೆರೆ | ಕೀಶಬಲಂ ಸಹಿತಂ |
| 130. | ೩೫. | 2. | ಪವಣೇನಾಯ್ತು | ಪವಣೇನಾದುದು |
| 132. | ೪೭. | 3. | ಮಾನವರೂಪಿಂದಿರ್ಪ್ಪಂ | ಮಾನವರೂಪದೊಳಿರ್ಪ್ಪಂ |
| 135. | ೬೮. | 4. | ...ಳಬ್ಬನೇತ್ರನಂ | . ಳಬ್ಜನೇತ್ರನಂ |
| ,, | ೬೯. | 3-4. | ...ಲ್ಕಾತಂ । ತೀವ್ರ | ...ಲ್ಕಾತನ । ತೀವ |
| 137. | ೮೭. | 4. | ಕರೆದಂದಂ | ಕರೆದೆಂದಂ |

| ಪುಟ. | ಪದ್ಯ. | ಪಙ್ಕ್ತಿ. | ಅಶುದ್ಧ. | ಶುದ್ಧ. |
|---|---|---|---|---|
| 146. | ೧೫೫. | 4. | ಬಂದನಾರ್ಭಟಿಸುತ್ತಂ | ಬಂದನಾರ್ಬಟಿಸುತ್ತುಂ |
| 147. | ೧೬೦. | 2. | ಕೈಕೆಯಿಯಿಂದಂ | ಕೈಕಯಿಯಿಂದಂ |
| 148. | ೧೬೯ | 4. | ಕಪಿವರ್ಗದಾರ್ಭಟಿ | ಕಪಿವರ್ಗದಾರ್ಬಟಿ |
| 152. | ೨೬. | 4. | ಮಕುಟಗಳಂ | ಮುಕುಟಗಳಂ |
| 156. | ೫೮. | 2. | ಸತ್ವಮದಿಪ್ಪುದೆಂದು | ಸತ್ವಮದಿಪ್ಪುರ್ದೆಂದು |
| 159. | ೮೧. | 4. | ಚರರಾರ್ಭಟಿಸುತ್ತೆ | ಚರರಾರ್ಬಟಿಸುತ್ತೆ |
| 160. | ೮೩. | 2. | ಕುಂತಾವಳಿಯುಂ | ಕುಂತಾವಳಿಯಿಂ |
| 162. | ೧೦೧. | 1. | ...ಧೀಶನತನು | ...ಧೀಶನ ತನು |
| 165. | ೧೨೪. | 2. | ಪನ್ನತಿಕೆಯನ್ನೃದೆ | ಪನ್ನತಿಕೆಯನ್ನೈದೆ |
| ,, | ೧೨೫. | 3. | ಮುಳ್ತಿ | ಮುತ್ತಿ |
| 166. | ೧೩೧. | 2. | ವಾರಣವಾಜಿಕುಳಮಂ | ವಾಜಿವಾರಣಕುಳಮುಂ |
| ,, | ೧೩೨. | 1. | ಮುಂಬರೆದುಂ | ಮುಂಬರಿದುಂ |
| 167. | ೧೩೬. | 1. | ವಾನರರಾರ್ಭಟಿಸುತ್ತುಂ | ವಾನರರಾರ್ಬಟಿಸುತ್ತುಂ |
| 168. | ೧೪೩. | 3. | ಶೂರಾದ್ಯಾಯುಧ | ಶೂಲಾದ್ಯಾಯುಧ |
| ,, | ೧೪೪. | 1. | ಕಡಿದಿರಿದಾರ್ಭಟಿಸುತೆ | ಕಡಿದಿರಿದಾರ್ಬಟಿನುತೆ |
| ,, | ,, | 3. | ಬಪ್ಪಸುರರ | ಬಪ್ಪರ್ಸುರರ |
| ,, | ೧೪೮. | 4. | ಪರಿಯೊಳ್ಷೊಡೆದವನ | ಪರಿಯೊಳ್ಪೊಡೆದವನ |
| 170. | ೧೬೧. | 3. | ಮೋಲಂಬಿನ | ಮೋಲ್ಗಂಬಿನ |
| 172. | ೪. | 2. | ಚ್ಚರಿವಟ್ಟ ಸುರೇಂದ್ರ ನಧಿಕ | ಚ್ಚರಿವಟ್ಟಸುರೇಂದ್ರನಧಿಕ |
| 175. | ೨೩. | 3. | ತನಗಪ್ಪಣೆಗುಡವೇಳ್ಕುಂ | ತನಗಪ್ಪಣೆಗುಡೆವೇಳ್ಕುಂ |
| 176. | ೩೬. | 2. | ರಾವಣ | ರಾವಣಂ |
| 177. | ೪೪. | 3. | ದಶಕಂಠರಸು | ದಶಕಂಧರ |
| 178. | ೪೫. | 2. | ಯೋಗ್ಯಮುಪುದಾದೊಡಮುಂ | ಯೋಗ್ಯಮುಪ್ಪುದಾದೊಡಮುಂ |
| ,, | ೫೧. | 2. | ಬಿಲ್ಗೋಲ್ಗಗಳಾಂತು | ಬಿಲ್ಗೋಲ್ಗಳಾಂತು |
| 179. | ೫೪. | 4. | ಗುಡುಗುಡಿಸುತ್ತ ಸುರನಾಥನಂ | ಗುಡುಗುಡಿಸುತ್ತಸುರನಾಥನಂ |
| 180. | ೬೬. | 1. | ...ನುಗಿವೊಡೆ | ...ನೀವೊಡೆ |
| 182. | ೭೬. | 4. | ಪರಾಸನದೊಳಾ | ವರಾಸನದೊಳಾ |
| 183. | ೮೫. | 3. | ಧರಿಸಿಪ್ಪುದೊ | ಧರಿಸಿಪ್ಪುರ್ದೊ |
| 184. | ೯೬. | 3. | ರಣಹತಿಯಿ | ರಣಹತಿಯಿಂ |
| 185. | ೯೯. | 2. | ಬರಿಗೆಯ್ದು | ಬರಿಕೆಯ್ದು |
| 186. | ೧೧೯. | 4. | ಟ್ಟಕಟೆನುತ್ತೃದೆ | ಟ್ಟಕಟಕಟೆನುತೆಯ್ದೆ |

| ಪುಟ. | ಪದ್ಯ. | ಪಙ್ತಿ. | ಅಶುದ್ಧ. | ಶುದ್ಧ. |
|---|---|---|---|---|
| 186. | ೧೧೧. | 1. | ಘಟದಂತೊಪುವ | ಘಟದಂತೊಪ್ಪುವ |
| 187. | ೧೧೩. | 1. | ಮಕುಟಂ | ಮುಕುಟಂ |
| 191. | ೧೪೬. | 2. | ತಾಂ ಸ \|\| | ತಾಂ ಸಲೆ ಸ \|\| |
| 192. | ೧೫೨. | 3. | ಖಣಿಖಟಿಲುಬ್ಬುಟೆ | ಖಣಿಖಟಿಲುಬ್ಬಟೆ |
| 196. | ೫. | 1. | ತುಳಿಲ್ಗೆಯ್ದುಯ್ಯಗೆ | ತುಳಿಲಂ ಗೆಯ್ವುಯ್ಯಗೆ |
| 197. | ೧೧. | 3. | ತಿಸದಿರೆಯುವ್ಮಂ | ತಿಸದಿರೆಯೆವ್ಮಂ |
| 199. | ೨೪. | 3. | ಚಂದ್ರದ್ರೋಣ ಮನಿ | ಚಂದ್ರದ್ರೋಣಮನಿ |
| ,, | ೨೭. | 2. | ಮಹಾನತ್ವದಿಂದ ಮುಸಿರಂ | ಮಹಾಸತ್ವದಿಂದಮುಸಿರಂ |
| ,, | ೨೯. | 1. | ಲವಣೇಕ್ಷುಸುರಾ | ಲವಣೇಕ್ಷುಸುರಾ |
| ,, | ,, | 3. | ತತ್ತ ದ್ವೀಪಂ | ತತ್ತದ್ವೀಪಂ |
| 201. | ೪೦. | 3. | ಪೂವಳಿಗೆರೆದರ್ | ಪೂವಳಿಗೆರೆದರ್ |
| 202. | ೫೨. | 2. | ಪೆರ್ವಟ್ಟುಗಳಿಂ | ಪೆರ್ವಟ್ಟಿಂ |
| 203. | ೫೩. | 3. | ದ್ವಿವಿದಕಪೀಂದ್ರ | ದ್ವಿವಿದಕಪೀಂದ್ರಂ |
| 204. | ೬೩. | 2. | ದಶಕಂಠ | ದಶಕಂಠಂ |
| 206. | ೭೮. | 2. | ಕ್ರಾವ್ಯರಕ್ಕಂ | ಗ್ರಾವ್ಯರಕ್ಕಂ |
| ,, | ೭೯. | 4. | ಮುಡಿಪಿಡಿದು | ಮುಡಿವಿಡಿದು |
| 209. | ೧೦೧. | 4. | ವಿಭೀಷಣನೀಕ್ಷಿಸು | ವಿಭೀಷಣನನೀಕ್ಷಿಸು |
| 210. | ೧೦೯. | 4. | ಗೆಯ್ಯೆವೇಡಿಮೆಂದಂ | ಗೆಯ್ಯೆವೇಡಿಮೆಂದಂ |
| 211. | ೧೧೯. | 4. | ಶಾದೂರ್ಲನಾದೆಯಲೆ | ಶಾದೂರ್ಲನಾದೆಯೆಲೆ |
| 214. | ೧೩೭. | 1. | ಹನುಮಾಂಗದರೊಂದೆಸೆಯೊಳ್ \|\| | ಹನುಮಾಂಗದರೊದ್ದೆಸೆಯೊಳ್ \| |
| 216. | ೧೫೨. | 4. | ಘನರಥಶೂತಾಶ್ವ | ಘನರಥಸೂತಾಶ್ವ |
| 219. | ೧೧. | 1. | ನೀವಿಂ | ನೀವಿಮಂ |
| 221. | (Heading.) | | ಏಕಾದಶಶ್ವಾಸ | ಏಕಾದಶಾಶ್ವಾಸ |
| 225. | ೫೬. | 3. | ಬನ್ನಮಿವಗಿಲ್ಲ | ಬನ್ನಮಿವಗುಂಟೆ |
| ,, | ೫೭. | 1. | ಬಾರಯ್ ಮತ್ರಾಣಸ | ಬಾರಯ್ ನೀಂ ಮತ್ರಾಣ ಸ |
| ,, | ,, | 2. | ನೀನುಂ | ನೀಡುಂ |
| ,, | ೫೮. | 4. | ೫೮ | ೫೯ |
| 226. | ೬೦. | 4. | ವಿರೋಧವಮಂ | ನಿರೋಧವಮಂ |
| ,, | ೬೩. | 4. | ಮಾಣಾ | ಮಾಣ್ |
| ,, | ೬೫. | 2. | ಬಂದು | ಬಂದುಂ |
| ,, | ೬೬. | 2. | ಕಿತ್ತಡಿಯೊಳ್ಸಂ | ಕಿತ್ತಡಿಯೊಲ್ ಸಂ |

| ಪುಟ. | ಪದ್ಯ. | ಪಙ್ಕ್ತಿ. | ಅಶುದ್ಧ. | ಶುದ್ಧ. |
|---|---|---|---|---|
| 226. | ೬೭. | 2. | ಬೆಚ್ಚರದಿಂದಂ | ಚೆಚ್ಚರದಿಂದಂ |
| 229. | ೮೬. | 2. | ಸ್ಯೈ ರಿಭ | ಸ್ಯೈರಿಭ |
| ,, | ,, | 4. | ಸೆಳೆದಸಿ ಬಡಿದಂ | ಸೆಳೆದಸಿಬಡಿದಂ |
| 234. | ೨೧. | 2. | ಬಡುವಾವಾಯೆಯ | ಬಡುವಾ ವಾಯೆಯ |
| 236. | ೩೧. | 3. | ವ್ಯೊಮನದೊಳಂ ಬರೆ | ವ್ಯೊಮನದೊಳಂ ಮುಂಬರೆ |
| ,, | ೩೩. | 2. | ಜಾಂಬವಂತಗೆಂದಾ | ಜಾಂಬವಂತಂಗೆಂದಂ |
| 237. | ೪೨. | 3. | ಧರಿಸಲ್ಬಲ್ಲಿವು | ಧರಿಸಲ್ಬಲ್ಲೆಂ |
| 238. | ೫೨. | 2. | ವಾನರ ನಿನಗೇಕತದಿನಾದುದೀ | ವಾನರನೇಕತದಿನಾದುದೀ |
| 240. | ೬೫. | 3. | ಬಿಡು ಬಿಡು | ಬಿಡು |
| 244. | ೯೦. | 3. | ಕಡುಪಿ | ಕಡುಪಿಂ |
| 246. | ೧೦೬. | 4. | ವಾನವನುಂ | ವಾನವುನುಂ |
| ,, | ೧೦೮. | 4. | ಮೂದಲೆ ನುಡಿದಂ | ಮೂದಲೆನುಡಿದಂ |
| 247. | ೧೧೫. | 4. | ಕೊಂದು | ಕೊಂದಂ |
| 250. | ೧೧. | 2. | ಗುಹಾಂತರಾಳದೊಳಿಳಿದುಂ | ಗುಹಾಂತರಾಳದೊಳಂ |
| 251. | ೨೨. | 1. | ನಿಮ್ಮಟಳದಿಂ | ನಿಮ್ಮುಪಟಳದಿಂ |
| 253. | ೩೦. | 2-3. | ನೀಡುತಭಯಮುದಾಗಳ್ ‖ ಶರಚಾಪಂಗಳಂ | ನೀಡುತಭಯಮುನಾಗಳ್ ‖ ಶರಚಾಪಗಳಂ |
| 254. | ೩೮. | 4. | ಖಲನಾಥ | ಖಲನಾಥಂ |
| ,, | ೪೧. | 4. | ತಾಮರಸಾಂಬಕನೀಕ್ಷಿಸುತ | ತಾಮರಸಾಂಬಕನನೀಕ್ಷಿಸುತ |
| ,, | ೪೩. | 3. | ಳ್ಗನಲಾಸ್ತ | ಳ್ಗನಲಾಸ್ತ್ರ |
| 257. | ೬೧. | 3. | ...ನುಚ್ಚ | ...ನುಚ್ಚರ್ |
| ,, | ೬೩. | 4. | ಸಿಂಧುರ ಕಿಟಿ | ಸಿಂಧುರಕಿಟಿ |
| ,, | ೬೬. | 4. | ೬೯ | ೬೬ |
| 258. | ೭೧. | 2. | ಗೆಯ್ಯುತ್ತು ಮಿಪ್ಪರ್ದಂ | ಗೆಯ್ಯುತ್ತುಮಿಪ್ಪರ್ದಂ |
| 259. | ೭೮. | 2. | ಭೇದಿಸುತ್ತಿರಲುಂ | ಭೇದಿಸುತಿರಲುಂ |
| 260. | ೮೬. | 4. | ಭೊಂಕನೆ | ಭೋಂಕನೆ |
| ,, | ೮೮. | 2. | ಶೋಷಿಶಿ | ಶೋಷಿಸಿ |
| 261. | ೯೪.. | 3 | ಪರಿದುದು | ಪರೆದುದು |
| 263. | ೧೦೯. | 1. | ಪರಿದಿಡುತಂ | ಪರಿದಿಡುತುಂ |
| ,, | ೧೧೧. | 3. | ಕುಳಿತಿಪ್ಪರ್ | ಕುಳಿತಿಪ್ಪರ್ಂ |
| 266. | ೧೩೧. | 4. | ರಾವಣನುಳಿದಂ | ರಾವಣನಳಿದಂ |

| ಪುಟ. | ಪದ್ಯ. | ಪಙ್ಕ್ತಿ. | ಅಶುದ್ಧ. | ಶುದ್ಧ. |
|---|---|---|---|---|
| 267. | ೧೩೯. | 2. | ಮಹಾನಂದ ಬಾಷ್ಪ | ಮಹಾನಂದಬಾಷ್ಪ |
| 269. | ೩. | 3. | ಧರಿಣಿಜೆಯಂ | ಧರಣಿಜೆಯಂ |
| 270. | ೮. | 2. | ವ್ಮೊಡೆಗಂ | ವ್ಮೆಡೆಗಂ |
| ,, | ೯. | 2. | ಭರಣಂಗಳಂ...ತ್ರಿಜಟೆ. . | ಭರಣಗಳಂ.. ತಿಜಟೆ... |
| ,, | ,, | 4 | ಮಜ್ಜನಂಗೆಯ್ಸಿದರ್ | ಮಜ್ಜನಂಗೆಯ್ಯಿಸಿದರ್ |
| 272. | ೨೮ | 2. | ತರಿಸುತೆ ಭರದಿಂ | ತರಿಸುತೆ ನೀಂ |
| 274. | ೩೮. | 3. | ‖ | \| |
| 275. | ೪೭ | 4. | ಮಿನ್ನೆನಗೆನುತಲಸ್ಸೈದೆ | ಮಿನ್ನೆನಗೆನುತನಲನೆಯ್ದು |
| ,, | ೪೯. | 2. | ಶಶಲಾಂಭನ | ಶಶಲಾಂಛನ |
| 276. | ೫೩ | 3. | ದಶಕಂಧರನುಂ | ದಶಕಂಧರನಂ |
| 281. | ೯೧. | 4. | ಜಾಕ್ಷಿಯಿನಶ್ರುವರ್ಷಮುಂ | ಜಾಕ್ಷಿಯಿನಮಿತಾಶ್ರುವರ್ಷಮಂ |
| 283. | ೧೦೫. | 2. | ಪಂಚಮಿಗಿಂದುಂ | ಪಂಚಮಿಗೀಗಳ್ |
| ,, | ೧೦೬. | 2. | ಸನಿಹಕ್ಕೆ | ಸನಿಹಕೆ |
| ,, | ೧೧೦. | 1. | ರಾಮನಕುಶಲಗಳಂ | ರಾಮನ ಕುಶಲಗಳಂ |
| ,, | ೧೧೧. | 2. | ಭರದಿಂ | ಭರತಂ |
| 285. | ೧೨೩. | 2. | ವರಸುತನಪ್ಪ | ವರಸುತನೆನಿಸಿಪ್ಪರ್ |
| ,, | ೧೨೭. | 2. | ಕನ್ಯಕಾದಾನ ಮನಂ | ಕನ್ಯಕಾದಾನಮನಂ |
| 286. | ೧೩೪. | 4. | ಋಕ್ಷ | ಋಕ್ಷಂ |
| 287. | ೧೩೫. | 4. | ನೊಡಾ | ನೋಡಾ |
| 293. | ೯. | 4. | ಭೋಷಂಗಳಂ | ಭೂಷಂಗಳಿಂ |
| 298. | ೪೭. | 3. | ಪ್ರತಿಧಿಕ್ಷಿತಿಸುರರುಂ | ಪ್ರಥಿತಕ್ಷಿತಿಸುರರುಂ |
| 299. | ೫೭. | 4. | ಮಾನಸಸತ್ಪದ್ಮಸದ್ಮ | ಮಾನಸಹೃತ್ಪದ್ಮಸದ್ಮ |
| 300. | ೬೦. | 2. | ವರವನಿತ್ತೆ | ವರಮನಿತ್ತೆ |
| ,, | ೬೧. | 1. | ಭೂಮಿಬುಧರ್ | ಭೂವಿಬುಧರ್ |
| ,, | ೬೩. | 2. | ಬನ್ನಂ ಬಡಿಸುತ್ತುಮಿರ್ದರ್ | ಬನ್ನಂಬಡಿಸುತ್ತುಮಿರ್ದರ್ |
| 1. | ೬. | 3-4. | ನೆಂಬ \| ಮಿರ್ಗಸಂದೆಗ | ನೆನ್ನ \| ಲ್ಕೀಸಂದೆಗ |

ಕೆಲವೆಡೆಗಳಲ್ಲಿ "ಪೊ" ಎಂಬುದನ್ನು, ಸಂದರ್ಭಾನುಸಾರವಾಗಿ "ಫೊ" ಎಂದು ಓದಿಕೊಳ್ಳಬೇಕು.